ದಿವ್ಯ ಮಾತೆಯ ಪೂಜೆ

[ಸಾಧಕರಿಗೆ ನೀಡಿದ ಪ್ರವಚನ ಸಂಗ್ರಹ]

ಪ್ರವಚನಕಾರರು:
ಲಿಂ. ಡಾ. ಚಂದ್ರಶೇಖರ ಸ್ವಾಮೀಜಿ
ಎಂ.ಎ.ಪಿಎಚ್.ಡಿ.

ಅನುವಾದಕರು:
ಶ್ರೀ ಎಸ್. ಆರ್. ಪಾಟೀಲ ಬಿ.ಈ.

ಪ್ರಕಾಶಕರು:
ಶ್ರೀಮತಿ ಎಸ್. ಜಿ. ಹಳ್ಳೀಕೇರಿಮಠ ಎಂ.ಎಸ್ಸಿ.
ಳಟ್ಟಿ, 'ಮಾತೃ ಛಾಯಾ'
ನೆಹರೂ ವೈದ್ಯಕೀಯ ಮಹಾ ವಿದ್ಯಾಲಯದೆದುರು,
ಬೆಳಗಾವಿ. ಕರ್ನಾಟಕ (ಇಂಡಿಯಾ)

ಪ್ರಥಮ ಮುದ್ರಣ: ಡಿಸೆಂಬರ, ೧೯೮೪
ಕ್ರಯ: ರೂ. ೨೦–೦೦

ಗ್ರಂಥದಾನ

ಡಾ. ಚನ್ನಯ್ಯ ಸ್ವಾಮಿ ಅ. ಪುರಾಣಿಕ
ಎಮ್. ಬಿ. ಬಿ. ಎಸ್., ಡಿ. ಪಿ. (ಲಂಡನ್)
ಡಾ. ಶ್ರೀಮತಿ ಜಯಶ್ರೀ ಚ. ಪುರಾಣಿಕ
ಎಮ್. ಬಿ. ಬಿ. ಎಸ್., ಡಿ. ಆರ್. ಸಿ. ಓ. ಜಿ. (ಲಂಡನ್)
ಹುಬ್ಬಳ್ಳಿ

(ಎಲ್ಲ ಹಕ್ಕುಗಳು ಪ್ರಕಾಶಕರ ಸ್ವಾಧೀನ)

ಮುದ್ರಣ:
ಫ. ಶಿ. ಭಾಂಡಗೆ
ತ್ವರಿತ ಮುದ್ರಣಾಲಯ,
ಗಂಗಾಪೂರಪೇಟ, ಗದಗ.

ಅನುವಾದಕರ ಮಾತು

ವೀರಶೈವ ಸಂಸ್ಕೃತಿಯ ಮಡಿಲಲ್ಲಿ ಮೂಡಿ, ತಂತ್ರದ ಸಿದ್ಧಮಾರ್ಗದಲ್ಲಿ ಮಹತ್ವದ ಸಾಧನೆ ಮಾಡಿ, ಕೊನೆಗೆ ಅಖಂಡ ಮಹಾಯೋಗದ ಪೂರ್ಣತ್ವ ಸಾಧನೆಯ ಕೃಷಿ ಮಾಡುತ್ತ, ಇಹವನ್ನು ತ್ಯಜಿಸಿದ ಮಹಂತರಾದ ಲಿಂ. ಡಾ. ಚಂದ್ರಶೇಖರ ಸ್ವಾಮಿಗಳ ಸಂಪರ್ಕ ಭಾಗ್ಯ ನನಗಾದುದು ನನ್ನ ಜೀವನದ ವಿಶೇಷ ಪ್ರಸಂಗವೇ ಸರಿ. ಆ ಅಲ್ಪಾವಧಿಯು ಒಂದೆರಡು ವರುಷಗಳನ್ನು ವ್ಯಾಪಿಸಿದ್ದರೂ, ಒಡನಾಟದ, ಸಂತ್ಸಂಗದ ಅವಧಿಯು ಕೇವಲ ಹತ್ತಿಪ್ಪತ್ತು ದಿನಗಳು ಮಾತ್ರ. ಆದರೆ, ೧೯೮೧ರಲ್ಲಿ ಆತ್ಮೀಯತೆಯಿಂದ ಹಾವೇರಿಗೆ ನನ್ನನ್ನು ಕರೆದೊಯ್ದು, ಮಧ್ಯರಾತ್ರಿಯೆಲ್ಲ ಮಾತನಾಡಿ, ನಸುಕಿನ ಕಾಲಕ್ಕೆ ಹಸ್ತಮಸ್ತಕ ಸಂಯೋಗದ ಮೂಲಕ ಕೃಪೆ ಸುರಿಸಿದ ಸಮುಹೂರ್ತವನ್ನು ನಾನು ಮರೆಯಲಾರೆ. ಆ ಕೃಪಾ ಧಾರೆಯ ಋಣವೇ ನನ್ನನ್ನು ಅವರ 'Worship of Divine-Mother' ಆಂಗ್ಲ ಭಾಷೆಯ ಪ್ರವಚನ ಸಂಗ್ರಹವನ್ನು ಕನ್ನಡದ ಭಟ್ಟಿಗಿಳಿಸಲು ಪ್ರೇರೇಪಿಸಿದೆ. ಈ ಮೂಲಕ ನಾನು ಅವರಿಗೆ ಗುರು ದಕ್ಷಿಣೆಯನ್ನು ಸಲ್ಲಿಸಿ ಧನ್ಯನಾಗಬಯಸಿದ್ದೇನೆ.

ಪೂಜ್ಯ ಸ್ವಾಮೀಜಿ ತಮ್ಮ ಶಿಷ್ಯರಿಗೆ ನೀಡಿದ ಪ್ರವಚನಗಳ ಸಂಗ್ರಹವೇ 'ದಿವ್ಯ ಮಾತೆಯ ಪೂಜೆ'ಯಾಗಿ ಪ್ರಕಟವಾಗುತ್ತಿದೆ. ನಾನೊಬ್ಬ ಸಾಹಿತಿಯಲ್ಲ. ಲಲಿತ ಸಾಹಿತ್ಯದಲ್ಲಾಗಲಿ, ಸ್ವಂತದ ಅನುಭವದ ಅಭಿವ್ಯಕ್ತಿಯಲ್ಲಾಗಲಿ, ನಾನು ಖ್ಯಾತ ನಾಮನೂ ಅಲ್ಲ; ಕೈ ಹಾಕಿದವನೂ ಅಲ್ಲ. ಅನುವಾದ ಸಾಹಿತ್ಯದಲ್ಲಿ ಸ್ವಲ್ಪ ಪರಿಶ್ರಮಿಸಿದ್ದೇನೆ. ನಲವತ್ತರಷ್ಟು ಸಂಖ್ಯೆಯ ಪುಸ್ತಕಗಳನ್ನು ಹಿಂದಿ ಮತ್ತು ಆಂಗ್ಲ ಭಾಷೆಯಿಂದ ಭಾಷಾಂತರಿಸಿದ್ದೇನೆ. ಮಹಾಯೋಗಿ ವೇಮನರ ಪದ್ಯಗಳನ್ನೂ ಕನ್ನಡಿಸಿದ್ದೇನೆ. ಸಾಮಾಜಿಕ, ಸಾಂಸ್ಕೃತಿಕ ಮತ್ತು ದಾರ್ಶನಿಕ ಗ್ರಂಥಗಳ ಭಾಷಾಂತರದಲ್ಲಿ ಪಳಗಿದವನೆಂದು ಹೇಳಿಕೊಳ್ಳುವ ಧಾರ್ಷ್ಟ್ಯ ನನ

ಗಿಲ್ಲವಾದರೂ, ಅಳಿಲು ಸೇವೆ ಸಲ್ಲಿಸಿದ್ದೇನೆಂದು ಹೇಳಲು ಹೆಮ್ಮೆ ಪಡುವೆ. ಆ ಅಳಿಲು ಸೇವೆಗೆ ಪ್ರಸ್ತುತ ಪುಸ್ತಕವು ಮುಕುಟಮಣಿಯಾಗಿ ಶೋಭಿಸಲೆಂಬ ನಮ್ರ ಹಾರೈಕೆ ನನ್ನದು.

ಪ್ರವಚನಕಾರರು ಮೂಲತಃ ಕನ್ನಡಿಗರು. ತಮ್ಮ ವಿಚಾರ ಸಂಯೋಜನೆಯನ್ನು ಕನ್ನಡದಲ್ಲಿ ರೂಪಿಸಿ, ತಮ್ಮ ವಿದೇಶಿ ಶಿಷ್ಯರಿಗಾಗಿ ಆಂಗ್ಲ ಭಾಷೆಯಲ್ಲಿ, ಮಾರ್ನುಡಿದಿದ್ದಾರೆಂಬ ಭಾವನೆ ತರುವಂತಿದೆ, ಅವರ ಶೈಲಿ. ಅತಿ ಗುಹ್ಯವೂ, ಕ್ಲಿಷ್ಟವೂ, ಸಾಮಾನ್ಯ ಬುದ್ಧಿಗೆ ಎಟುಕಲಾರದುದೂ ಆದ, ವಿಷಯವನ್ನು ತಿಳಿ ಹೇಳುವ ಈ ಗ್ರಂಥದ ಅನುವಾದವು,ಆ ದೃಷ್ಟಿಯಿಂದ ಕಷ್ಟಸಾಧ್ಯವೇನೋ ಸರಿ. ಆದರೆ, ವಿಚಾರ ದೋಹವು ಕನ್ನಡದ ಮೂಲವನ್ನು ಹೊಂದಿರುವುದರಿಂದ, ಕನ್ನಡದ ಭಾಷಾಂತರವು ಒಣ ಭಾಷಾಂತರವೆನಿಸದೆ,ಮೂಲ ವಿಚಾರದ ಸುಂದರ ಅಭಿವ್ಯಕ್ತಿಯ ಸುಸಂಬದ್ಧ ಭಾವ ಜೋಡಣೆಯೆನಿಸುತ್ತದೆ. ಅದೇನೇ ಇರಲಿ ಭಾಷಾಂತರವು ಭಾಷಾಂತರವೇ; ಎಂದು ಮೂಗು–ಮುರಿಯುವ ವಿಮರ್ಶಕರೊಂದಿಗೆ ನನ್ನ ವಾದವಿಲ್ಲ. ಆದರೆ, ಪೂಜ್ಯ ಸ್ವಾಮಿಗಳ ವಿಚಾರದೋಹವನ್ನು, ನನ್ನ ಅಳಿವಿಗೊಳಪಟ್ಟು, ಚೊಕ್ಕಟ ರೀತಿಯಿಂದ ಕನ್ನಡದ ಆಧ್ಯಾತ್ಮಿಕ ಸಾರಸ್ವತ ಲೋಕಕ್ಕೆ ನಿವೇದಿಸುವಲ್ಲಿ ನನಗಿನಿತು ಆತ್ಮ ತೃಪ್ತಿ ಇದೆ. ಸಹೃದಯ ಓದುಗರು ಇದರ ಲಾಭ ಪಡೆಯಲೆಂದು ನನ್ನ ಹಾರೈಕೆ.

ಈ ಗ್ರಂಥದ ಹಸ್ತಪ್ರತಿ ಸಿದ್ಧ ಪಡಿಸುವಲ್ಲಿ ಪ್ರಾಧ್ಯಾಪಕಿ ಉಮಾ ಚ. ಹಿರೇಮಠ ಹುಬ್ಬಳ್ಳಿ ಅವರ ಸೇವೆ ಸಹಕಾರಗಳನ್ನು ನೆನೆಯದಿರಲಾರೆ. ಗ್ರಂಥ ಪ್ರಕಾಶನದ ಹೊಣೆ ಹೊತ್ತ, ನಿವೃತ್ತ ಉಪ ಪ್ರಾಚಾರ್ಯೆ ಸಾವಿತ್ರಿದೇವಿ ಹಳ್ಳಿಕೇರಿಮಠ ಅವರಿಗೆ ಚಿರಋಣಿ.

ಧಾರವಾಡ
೨೮–೧೧–೮೪

ತಮ್ಮ ಆತ್ಮೀಯ,
ಎಸ್. ಆರ್. ಪಾಟೀಲ

ಪ್ರಕಾಶಕರ ಮಾತು

ಭಾರತದ ಆಧ್ಯಾತ್ಮಿಕ ಜಗತ್ತಿನ ವಿರಳ ವ್ಯಕ್ತಿಗಳಲ್ಲೊಬ್ಬರಾದ ಲಿಂ. ಡಾ. ಚಂದ್ರಶೇಖರ ಸ್ವಾಮೀಜಿ. ಎಂ.ಎ.ಪಿಎಚ್.ಡಿ. ಇವರು, ದೇಶ-ವಿದೇಶಗಳ ತಮ್ಮ ಹಲವು ನಿಕಟ ಶಿಷ್ಯರ ಮಾರ್ಗದರ್ಶನಕ್ಕಾಗಿ ಆಂಗ್ಲ ಭಾಷೆಯಲ್ಲಿ ನೀಡಿದ ಉಪದೇಶಪರ ಮಾತುಗಳನ್ನೇ ಸಂಗ್ರಹಿಸಿ, ಸಾಧಕ ಮಿತ್ರರ ಸದುಪಯೋಗಕ್ಕಾಗಿ 'Worship of Divine Mother' ಎಂಬ ಗ್ರಂಥವನ್ನು ಗುರುಗಳ ಆದೇಶಾನುಸಾರವೇ ಮುದ್ರಿಸಿದ ಮಸಿ ಆರುವಷ್ಟರಲ್ಲಿ ಸಾಧನಾ ಲೋಕದ ಸನಿಹದ ಪರಿಚಿತರಾದ ಶ್ರೀ ಎಸ್. ಆರ್. ಪಾಟೀಲರು, ಕನ್ನಡ ಸಾರಸ್ವತ ಲೋಕಕ್ಕೂ, ವಿಶೇಷವಾಗಿ ಜಿಜ್ಞಾಸು ಸಾಧಕರಿಗೂ, ಸ್ವಾಮೀಜಿಯ ಹಿತನುಡಿಗಳು ತಲುಪಲೆಂಬ ನಮ್ಮೆಲ್ಲರ ಆಗ್ರಹದ ಆಶಯಕ್ಕನುಗುಣವಾಗಿ, ಆಂಗ್ಲ ಗ್ರಂಥವನ್ನು ಒಂದೆರಡು ವಾರಗಳಲ್ಲಿ ಕನ್ನಡ ಭಟ್ಟಿಗಿಳಿಸಿಯೇ ಬಿಟ್ಟರು. ಆ ಕೃತಿಯೇ ಈಗ 'ದಿವ್ಯ ಮಾತೆಯ ಪೂಜೆ' ಎಂಬ ಅಭಿದಾನದಿಂದ ಓದುಗರ ಕೈ ಸೇರುತ್ತಿದೆ.

ಬಹು ಭಾಷೆಗಳಿಂದ, ಬಹು ಸಂಖ್ಯೆಯಲ್ಲಿ, ದಾರ್ಶನಿಕ ಗ್ರಂಥಗಳನ್ನು ಕನ್ನಡದಲ್ಲಿ ಅನುವಾದಿಸಿದ ಶ್ರೀ ಪಾಟೀಲರು, 'ಸ್ಪಂದ ವಿಜ್ಞಾನ' ಎಂಬ ಪ್ರಥಮ ಅಧ್ಯಾಯದ ಅನುವಾದ ಭಾಗವನ್ನು, ಧಾರವಾಡದಲ್ಲಿ ಅಕ್ಟೋಬರ ತಿಂಗಳ ಎರಡನೆಯ ವಾರ ನಮಗೆಲ್ಲ ಓದಿ ತೋರಿಸಿದಾಗ, ಆ ಭಾಷೆಯ ಪ್ರೌಢಿಮೆಗೆ, ಸುಭಗತೆಗೆ, ಲಾಲಿತ್ಯಕ್ಕೆ ಮಾರುಹೋಗಿದ್ದೆವು. ಮುಂದೊಂದು ತಿಂಗಳ ನಂತರ ನಾವು ಧಾರವಾಡಕ್ಕೆ ಬರುವಷ್ಟರಲ್ಲಿ ಗ್ರಂಥದ ಹಸ್ತಪ್ರತಿ ಮತ್ತು ಹೊದಿಕೆಯ ವಿನ್ಯಾಸ, ಒಳಗಿನ ಛಾಯಾಚಿತ್ರ ಬ್ಲಾಕುಗಳೆಲ್ಲ ಆಚ್ಚಿನ ಮನೆ ಸೇರಿದ್ದವು. ಮುಂದೆರಡು ವಾರಗಳಲ್ಲಿ, ಅಂದರೆ ನವ್ಹೆಂಬರ ಅಂತ್ಯದಲ್ಲಿ ಪುಸ್ತಕವು ನಮ್ಮ ಕೈ ಸೇರಿತು. ನಂಬಿದರೆ ನಂಬಿ ಬಿಟ್ಟರೆ ಬಿಡಿ; ಇದು ಶ್ರೀ ಪಾಟೀಲರ ಕಾರ್ಯ ನಿಷ್ಠೆ; ಕಾಲ ಪ್ರಜ್ಞೆ ಮತ್ತು ಸೇವಾ ತತ್ಪರತೆಗಳಿಗೊಂದು ನಿದರ್ಶನವಷ್ಟೇ.ಈ ಗ್ರಂಥದ

ಸಮರ್ಥ ಅನುವಾದ– ಮುದ್ರಣಗಳ ಭಾರ ಹೊತ್ತ ಶ್ರೀ ಪಾಟೀಲರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ.

ಲಿಂ. ಚಂದ್ರಶೇಖರ ಸ್ವಾಮೀಜಿ ನನ್ನ ಆಧ್ಯಾತ್ಮಿಕ ಗುರುಗಳು. ಆಧ್ಯಾತ್ಮಿಕ ಹಸಿವನ್ನು ತಣಿಸಬಲ್ಲ ಸಮರ್ಥ ಗುರುವಿಗಾಗಿ ನಾನು ಚಿಕ್ಕಂದಿನಿಂದಲೂ ಕಾತರಿಸುತ್ತಿದ್ದೆ. ನಿಪ್ಪಾಣಿಯ ಬಾಗೇವಾಡಿ ಕಾಲೇಜಿನ ಉಪಪ್ರಾಚಾರ್ಯಿಯಾಗಿ ನಿವೃತ್ತಿ ಪಡೆದ ಮೇಲಂತೂ ದಿವ್ಯ ಮಾತೆಯ ಸಾಕ್ಷಾತ್ಕಾರದ ಹಂಬಲವು ಮತ್ತಷ್ಟು ವೃದ್ಧಿಸಿತು. ಇಂಥ ಸಂಧಿ ಕಾಲದಲ್ಲಿ ಕ್ರಿ. ಶ. ೧೯೭೨ರಲ್ಲಿ ಡಾ. ಚಂದ್ರಶೇಖರ ಸ್ವಾಮೀಜಿಯವರು, ಹೃದಯದ ಕೋರಿಕೆಗನುಗುಣವಾಗಿ, ಗುರುವಾಗಿ ಬಂದರು. ಅವರ ಸಮರ್ಥ ಮಾರ್ಗ ದರ್ಶನದಲ್ಲಿ ಸಾಧನೆಯಲ್ಲಿ ವಸ್ತು–ಲಾಭದ ಮಿಂಚು ನೋಟ ಮಿನುಗುವಷ್ಟರಲ್ಲಿ, ಸ್ವಾಮೀಜಿ ೧೯೮೧ರಲ್ಲಿ ದೇಹತ್ಯಾಗ ಮಾಡಿದ ದುಃಖದ ವಾರ್ತೆ ಬರಸಿಡಿಲೆರಗಿದಂತೆ ನಮಗೆ ಬಂದಿತು. ಭೌತಿಕ ದೇಹ ಮೂಲಕ ಮಾರ್ಗ ದರ್ಶನವು ಇನ್ನಿಲ್ಲವಾಯಿತು. ಏತನ್ಮಧ್ಯೆ, ಸ್ವಾಮೀಜಿ ನಮ್ಮ ಕೈಗಿತ್ತ ಪ್ರವಚನಗಳ ಬೆರಳಚ್ಚಿನ ಪ್ರತಿಗಳಲ್ಲಿ ಅವರ ಮಾರ್ಗ ದರ್ಶನದ ಸುಳುಹು–ಹೊಳಹುಗಳನ್ನು ನಾವು ಕಂಡುಕೊಂಡುದಲ್ಲದೆ, ಇತರರಿಗೂ ಅದರ ಲಾಭ ಸಿಗಲೆಂಬ ಸದುದ್ದೇಶದಿಂದ, ಅವುಗಳನ್ನು ಅಚ್ಚು ಹಾಕಿಸಿ, ಗ್ರಂಥ ರೂಪದಲ್ಲಿ ತಂದಿದ್ದೇವೆ. ಕನ್ನಡದ ಅನುವಾದದ ಮುಂದಿನ ಹೆಜ್ಜೆಯಾಗಿ, ಮರಾಠಿಯಲ್ಲಿಯೂ ಅನುವಾದಿಸಿ ಪ್ರಸಿದ್ಧಿಸುವ,ಬಲವಾದ ಆಶೆಯು ನಮಗಿರುವುದನ್ನು ಇಲ್ಲಿ ತಿಳಿಸುವುದು ಅಪ್ರಸ್ತುತವಾಗಲಿಕ್ಕಿಲ್ಲವಷ್ಟೇ?

ನಮ್ಮೀ ಪ್ರಕಟಣೆಯ ಕಾರ್ಯದಲ್ಲಿ ನೆರವಾದ ಮತ್ತು ಪ್ರೋತ್ಸಾಹಿಸಿದ ಪ್ರೊ. ಸಿ. ಆರ್. ಹಿರೇಮಠ ಅವರಿಗೂ ಮತ್ತು ಸ್ವಾಮೀಜಿಯ ನೆಚ್ಚಿನ ಶಿಷ್ಯರಾದ ಬನಾರಸದ ಶ್ರೀ ಜ್ಯೋತಿಯವರಿಗೂ ನಾವು ಕೃತಜ್ಞರಾಗಿದ್ದೇವೆ. ಇದಲ್ಲದೆ ನನ್ನ ಕಿರಿಯ ಸೋದರ, ಶ್ರೀ ಬಿ. ಜಿ. ಹಳ್ಳಿಕೇರಿಮಠ, ನಿವೃತ್ತ ಅಧೀಕ್ಷಕ ಅಭಿಯಂತರು, ಇವರ ಪ್ರೋತ್ಸಾಹ, ಸಮರ್ಥನೆಗಳಿಲ್ಲದೆ, ಈ ಗ್ರಂಥ ಪ್ರಕಟಣೆಯ ಗುರುತರ ಭಾರವನ್ನು ಹೊರುವುದು ದುಸ್ತರವಾಗುತ್ತಿತ್ತು. ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸದಿರಲಾರೆ.

ಹೊದಿಕೆಯ ವಿನ್ಯಾಸ ನೀಡಿದ ಪ್ರಸಿದ್ಧ ಕಲಾವಿದ ಶ್ರೀ ಮೂರ್ತಿ, ಧಾರವಾಡ ಇವರಿಗೂ ಮತ್ತು ಅದನ್ನು ಅಚ್ಚು ಮಾಡಿದ ಮೆ. ಭಾರತ ಆಫ್‌ಸೆಟ್ ವರ್ಕ್ಸ್, ಧಾರವಾಡದ ಒಡೆಯರಾದ ಶ್ರೀ ಹಣಮಂತರಾವ ಹುದ್ದಾರರಿಗೂ ಕೃತಜ್ಞತೆಗಳನ್ನು ಸಲ್ಲಿಸಬಯಸುವೆ.

ಇನ್ನು ಕೊನೆಯದಾಗಿ, ಅತಿ ತ್ವರಿತವಾಗಿ ಮತ್ತು ಅಷ್ಟೇ ಅಂದವಾಗಿ ಹಾಗೂ ಶುದ್ಧವಾಗಿ ಮುದ್ರಿಸಿಕೊಟ್ಟ ಗದುಗಿನ ತ್ವರಿತ ಮುದ್ರಣಾಲಯದ ಒಡೆಯರಾದ ಶ್ರೀ ಫ. ಶಿ. ಭಾಂಡಗೆಯವರಿಗೆ ವಿಶೇಷ ಕೃತಜ್ಞತೆಗಳು ಸಲ್ಲಲೇಬೇಕು.

ಈ ದಾರ್ಶನಿಕ ಸಾಹಿತ್ಯವು ಕನ್ನಡದ ಸಾಧಕ–ಶರಣ–ಸಾಧು ಜನರಿಗೆ ಸಹಾಯಕವಾಗಲೆಂದು ಹಾರೈಸುವೆವು.

೨೮–೧೪–೮೪ —ಪ್ರಕಾಶಕರು



ಬಾಲಕ ಚಂದ್ರಶೇಖರರ ಪ್ರಾಥಮಿಕ ಶಿಕ್ಷಣವು ಐದನೆಯ ಈಯತ್ತೆಯ ವರೆಗೆ, ಮರಾಠಿಯಲ್ಲಿ ಜಮಖಿಂಡಿಯಲ್ಲಿಯೇ ಆಯಿತು. ಅಲ್ಲಿಂದ ಮುಂದೆ ಬಾಲಕ ಚಂದ್ರಶೇಖರರು ಧಾರವಾಡದ ಮುರುಘಾ ಮಠಕ್ಕೆ ಸಂಸ್ಕೃತ ಕಲಿಯಲು ಬಂದು ದಿವ್ಯ ಪುರುಷರಾದ ಮೃತ್ಯುಂಜಯಪ್ಪಗಳ ಕೃಪಾ ಕಟಾಕ್ಷಕ್ಕೆ ಒಳಗಾದರು. ಬಾಲ್ಯದಿಂದಲೂ ಲೌಕಿಕ ಶಿಕ್ಷಣವು ಇವರಿಗೆ ಆಕರ್ಷಣೆಯಾಗಲೇ ಇಲ್ಲ. ೧೯೪೩ರ ವರೆಗೆ ಧಾರವಾಡದಲ್ಲಿಯೇ ನೆಲೆಸಿದರು. ಸಂಸ್ಕೃತದ ವಿದ್ಯಾಭ್ಯಾಸ ದೊಂದಿಗೆ, ಮಹಂತರಾದ ಮೃತ್ಯುಂಜಯಪ್ಪಗಳ ಆದೇಶಾನುಸಾರ, ಕಾಯಕ ಸೇವೆಯನ್ನು ಸಲ್ಲಿಸಿ ಗುರು ಕೃಪೆಗೆ ಪಾತ್ರರಾದರು. ಉಚ್ಚ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಬಂದ ಚಂದ್ರಶೇಖರರು ಸರ್ಪಭೂಷಣ ಮಠದಲ್ಲಿ ನೆಲೆ ನಿಂತರು. ವಾಸವು ಸರ್ಪಭೂಷಣ ಮಠದ ಪುಣ್ಯ ಪರಿಸರದಲ್ಲಿ, ಪೂಜ್ಯ ಮಹದೇವ ಸ್ವಾಮಿಗಳ ಕೃಪಾ ಛತ್ರದಲ್ಲಿ.ವೀರಶೈವ ಸಾಧನೆಯಲ್ಲಿ ಮಾಗಿ, ಲಿಂಗಪೂಜೆಯಲ್ಲಿ ಸಿದ್ಧಿಯ ಪರಾಕಾಷ್ಠೆ ತಲುಪಿದ ಪಕ್ವಹೃದಯಿಗಳಾದ ಮಠಾಧಿಪತಿಗಳ ಮಾರ್ಗದರ್ಶನದಲ್ಲಿ ಲಿಂಗಪೂಜೆಯ ಸಾಧನೆ, ಶಿವಾನುಭವದ ಬೋಧೆ, ಸತ್ಸಂಗದ ಲಾಭ ಪಡೆಯುವ ಸದವಕಾಶವನ್ನು ತಮ್ಮ ಪೂರ್ವ ಸುಕೃತದಿಂದಲೇ ಚಂದ್ರಶೇಖರರು ಪಡೆದರು. ಬೆಂಗಳೂರಿನಲ್ಲಿ ಎಸ್.ಎಸ್.ಸಿ. ವರೆಗೆ ಲೌಕಿಕ ವಿದ್ಯಾಭ್ಯಾಸ ಮುಗಿಸಿದರಲ್ಲದೆ, ಸಂಸ್ಕೃತದಲ್ಲಿ ವೇದಾಂತ ವಿದ್ವಾನ ಪರೀಕ್ಷೆಯಲ್ಲಿ ಉಚ್ಚ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ಕ್ರಿ.ಶ. ೧೯೫೧ರ ವರೆಗೆ ಬೆಂಗಳೂರಲ್ಲಿಯೇ ಉಳಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದಂತೆಯೇ,ಪ್ರಾರಂಭಿಕ ಸಾಧನೆಯ ಕಾಲದ ಗುರುವರ್ಯರಿಗೆ ತುಂಬಾ ನಿಕಟ, ಸೇವಾ ತತ್ಪರ, ಜಿಜ್ಞಾಸು ಶಿಷ್ಯರಾಗಿದ್ದರವರು. ಮರದ ಗುಣವನ್ನು ಮೊಳಕೆಯಲ್ಲಿಯೇ ಮುಂಗಂಡರು, ಗುರುವರ್ಯರು.

ತರುಣ ಚಂದ್ರಶೇಖರರು ಅಧ್ಯಾತ್ಮ ಭಾರತದ ಹೃದಯವಾದ ಕಾಶಿಗೆ ಇನ್ನೂ ಹೆಚ್ಚಿನ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ೧೯೫೧ರಲ್ಲಿ ಹೊರಟರು. ಅಲ್ಲಿ ಅವರು ತಾತ್ತ್ವಿಕ ಅಧ್ಯಯನದೊಂದಿಗೆ, ಆಧ್ಯಾತ್ಮಿಕ ಸಾಧನೆಯ ಮುಂದಿನ ಸ್ತರಗಳಲ್ಲಿಯೂ ನಾಗಾಲೋಟದಿಂದ ಪ್ರಗತಿ ಸಾಧಿಸಿದರು. ಕಾಶಿಯಲ್ಲಿ ಚಿತ್ರದುರ್ಗ ಮುರುಘಾ ಮಠದ ಸ್ವಾಮಿಗಳು ನಡೆಸುತ್ತಿದ್ದ,ಜಯದೇವ ವಸತಿ ಗೃಹದ ಮೇಲ್ವಿಚಾರಕರಾಗಿ ಕಾರ್ಯ ವಹಿಸಿಕೊಂಡರು. ಇಲ್ಲಿಯೇ ಅವರು ಸಂಸ್ಕೃತದಲ್ಲಿ ಎಂ.ಎ. ಪದವಿ ಪಡೆದುಕೊಂಡರು.

ಯಾರ ಸಂಸ್ಕಾರಗಳು ಯಾವ ರೀತಿ ಇರುವವೋ ಯಾರು ಬಲ್ಲರು? ಸಂಸ್ಕೃತದ ಉಚ್ಚತರ ಅಧ್ಯಯನಕ್ಕಾಗಿ ಮಹಾಮಹೋಪಾಧ್ಯಾಯ ಗೋಪಿ

ನಾಥ ಕವಿರಾಜರಲ್ಲಿ ಸೇರಿಕೊಂಡ ಚಂದ್ರಶೇಖರರಿಗೆ ಇಲ್ಲಿಯೂ ಗುರುಸೇವೆಯೇ ಕಾದಿತ್ತು. "ಓದು ಒಕ್ಕಾಲು; ಗುರುಸೇವೆ ಮುಕ್ಕಾಲು". ಅವರ ಜೀವನದ ರಹಸ್ಯ ಮಂತ್ರವಾಯಿತು. ಕವಿರಾಜ ಮಹಾರಾಜರ ಕೈಂಕರ್ಯದ ಮೂಲಕವೇ ಅವರ ಕೃಪಾ ಧಾರೆಗೆ ಪಾತ್ರರಾದ ಚಂದ್ರಶೇಖರರಿಗೆ, ಪಿ.ಎಚ್.ಡಿ. (ವಿದ್ಯಾವಾರಿಧಿ) ಪದವಿಯನ್ನು ವಾರಾಣಶಿಯ ಕಾಶಿ ವಿದ್ಯಾಪೀಠದಿಂದ ಪಡೆಯುವ ದೆಂದರೆ, ಕೇವಲ ಲೀಲೆಯಂತೆಯೇ ಪರಿಣಮಿಸಿತು. ಈ ಗುರು ಶಿಷ್ಯರ ಸಂಬಂಧವು ಯೋಗ ತಂತ್ರದ ಸಾಧನೆಯಿಂದ ಪ್ರಾರಂಭಿಸಿ, ಮ. ಗೋಪಿನಾಥ ಕವಿರಾಜ ಮಹಾರಾಜರು ಆವಿಷ್ಕರಿಸಿದ (ಅರವಿಂದರ ಪೂರ್ಣಯೋಗದೊಂದಿಗೆ ಸರಿ ಹೊಂದುವ) ಅಖಿಂಡ ಮಹಾ ಯೋಗದ ಅನುಷ್ಠಾನದಲ್ಲಿ ತಮ್ಮ, ಇಡೀ ಜೀವಿತವನ್ನು ಅರ್ಪಿಸುವಲ್ಲಿ ಪರಿಸಮಾಪ್ತಿ ಕಂಡಿತು.

ಅಖಿಂಡ ಮಹಾಯೋಗದ ಸಮರ್ಥ ಪ್ರತಿಪಾದಕರಾದ ಡಾ. ಚಂದ್ರ ಶೇಖರ ಸ್ವಾಮೀಜಿಯವರು ಜೀವನೋಪಾಯಕ್ಕಾಗಿ ವಾರಾಣಶಿಯ ಕಾಶಿ ವಿದ್ಯಾಪೀಠದಲ್ಲಿ ಪ್ರಾಧ್ಯಾಪಕ ವೃತ್ತಿಯನ್ನು ವಹಿಸಿದ್ದರೂ ಸಹ, ಆಧ್ಯಾತ್ಮಿಕ ಸೇವೆಯಲ್ಲಿಯೇ ನಿರತರಾಗಿದ್ದರು. ಲೋಕದ ಸಕಲ ಜೀವಾತ್ಮರಿಗೆಲ್ಲ ಲೇಸನೇ ಬಯಸುವ ಸಾಮೂಹಿಕ ಕಲ್ಯಾಣ ಸಾಧನೆಯನ್ನು, ಸಮಷ್ಟಿ ರೂಪದಲ್ಲಿಯೇ ಸಾಧಿಸುವ ಅಖಿಂಡ ಮಹಾಯೋಗವು ಸ್ವಂತ ಮುಕ್ತಿಯಲ್ಲಿ ಕೊನೆಗೊಳ್ಳದು. ಕಾಯವನ್ನೇ ಅಮೃತಗೊಳಿಸುವ ಅದ್ಭುತ ಗುರಿಯು ಅಲ್ಲಿದೆ. ಆ ದಿಶೆಯಲ್ಲಿ ಧೈರ್ಯದಿಂದ ಮುಂದುವರಿದ ಡಾ. ಚಂದ್ರಶೇಖರ ಸ್ವಾಮೀಜಿ, ಇಂದಿನ ಜನಾಂಗಕ್ಕೆ ಅತ್ಯಂತ ಅನಿವಾರ್ಯ ಅಗತ್ಯವೆನಿಸದ ಕಾಲದಲ್ಲಿಯೇ ದೇಹತ್ಯಾಗ (೧೯೮೧) ಮಾಡಿದುದು, ವಿಧಿಯ ವಿಲಾಸ. ಮಾತನಾಡುತ್ತ, ಅವರ ಆರೈಕೆ ನೋಡಿಕೊಳ್ಳುತ್ತಿದ್ದ, ಶಕುಂತಲಾ ದೀದಿಯವರು, ಹೊರಬರುತ್ತಿದ್ದಂತೆಯೇ ಅವರು ತಮ್ಮ, ಅಸು ನೀಗಿದುದೂ ಒಂದು ಚಮತ್ಕಾರವೇ! ಜೀವನದಲ್ಲಿ ಆನಂದದ ಸುರಿಮಳೆ ಸುರಿಸಿ, ಹಿರಿಕಿರಿಯರನ್ನೆಲ್ಲ ಹಿಗ್ಗಿಸಿದ ಚಮತ್ಕಾರ ತೋರಿದ ಸ್ವಾಮೀಜಿಯವರು, ಈ ದೇಹದ ಸಂಗ ತೊರೆಯುವಲ್ಲಿಯೇ ಒಂದು ಚಮತ್ಕಾರವನ್ನೇ ತೋರಿದ್ದಾರೆ.

ಅವರು ನಮ್ಮೊಂದಿಗೆ, ಇರಬೇಕಾಗಿತ್ತು. ಸೂಕ್ಷ್ಮ ದೇಹದಲ್ಲಂತೂ ಇದ್ದೇ ಇರುವರು. ಮಾರ್ಗದರ್ಶನವನ್ನು ಮಾಡುವರೆಂಬ ಸಾಧಕರ ಆಶಯವೇ ಅವರ ಸಾಹಿತ್ಯ ಪ್ರಕಟಣೆಯ ಹಿಂದಿನ ಪ್ರೇರಣೆ. ಅವರ ಬೋಧೆಯನ್ನು ಕೃತಿಕೃತ್ಯಗೊಳಿಸಲು ಸಂಘಟಿತ ಪ್ರಯತ್ನ ಬೇಕು. ಆ ದಿಶೆಯಲ್ಲಿ ಪ್ರಯತ್ನವೂ ಸಾಗಿದೆ. ಅದು ಮೂರ್ತ ರೂಪ ತಾಳಲೆಂದು ಹಾರೈಸುವೆ.

ಪರಿವಿಡಿ

ಕ್ರಮಸಂಖ್ಯೆ	ವಿಷಯ	ಪುಟ
೧.	ಸ್ಪಂದ ವಿಜ್ಞಾನ	೧
೨.	ಲೋಕಗಳು	೩೩
೩.	ದಿವ್ಯ ಸಾಮ್ರಾಜ್ಯ ಅಥವಾ ಪ್ರೇಮ ಕಮಲ	೪೦
೪.	ಸಾಧನೆ: ಆಂತರಿಕ ಭಾವ	೫೦
೫.	ಸಿದ್ಧಿ ಮತ್ತು ಪವಾಡ	೬೭
೬.	ಸಾಧನೆ	೭೫
೭.	ಶಕ್ತಿ–ಪೂಜೆ	೮೦
೮.	ದಿವ್ಯ ಮಾತೆಯ ಪೂಜೆ ಅಥವಾ ಶಕ್ತಿ–ಪೂಜೆ	೯೫
೯.	ಆದೃಶ್ಯ ಸಿದ್ಧರ ಸಾಮ್ರಾಜ್ಯ	೧೧೯
೧೦.	ಸಾಧನೆ ಮತ್ತು ಚೈತನ್ಯ	೧೩೯
೧೧.	ದಿವ್ಯ ಮಾತೆಯ ಪೂಜೆ	೧೫೭
೧೨.	ಉಪಾಸನೆಯ ತತ್ವಗಳು	೧೬೮

೧
ಸ್ಪಂದ ವಿಜ್ಞಾನ

ಸ್ಪಂದವು ಪರಮ-ಆಧ್ಯಾತ್ಮಿಕ ತರಂಗ; ದೇಶ ಮತ್ತು ಕಾಲಗಳಿಗೆ ಅತೀತವಾದ, ಅಸೀಮ ತರಂಗ. ಅದು ಸರ್ವ ವಸ್ತುಗಳ ಕೇಂದ್ರ.

ಸ್ಪಂದವು ದ್ವಿವಿಧವಿದೆ: ಸಾಮಾನ್ಯ ಸ್ಪಂದ ಮತ್ತು ವಿಶೇಷ ಸ್ಪಂದ. ಇದಲ್ಲದೆ ಸ್ಪಂದದಲ್ಲಿಯೇ ಎರಡು ರೂಪಭೇದಗಳಿವೆ: ಸಂಕೋಚ-ವಿಕಾಸಾತ್ಮಕ ಮತ್ತು ನಿಮೇಷ-ಉನ್ಮೇಷಾತ್ಮಕ. ಅರ್ಥಾತ್, ಕೇಂದ್ರೀಯ ಸ್ಪಂದವು ಎರಡಾಗುತ್ತದೆ; ಏಕವಾದ ಬಿಂದುವೇ ಅನೇಕವಾಗಲು ಎರಡಾಗುತ್ತದೆ.

ಈಗ ಸ್ವಾಭಾವಿಕವಾಗಿ ಒಂದು ಪ್ರಶ್ನೆ ಏಳುತ್ತದೆ. ಅದೆಂದರೆ, ಈ ಅನೇಕಗಳ ನಡುವಿನ ಸಂಬಂಧವು ಯಾವುದು? ನಾವು ಅವುಗಳನ್ನು ಸಾಪೇಕ್ಷಿಕವೆಂದು ಕರೆದಾಗ, ಅದು ವಿಶೇಷ ಸ್ಪಂದವೆನಿಸುತ್ತದೆ. ಸಂಬಂಧವು ವೈಶಿಷ್ಟ್ಯಗಳನ್ನು, ಗುಣಗಳನ್ನು ಮತ್ತು ಪ್ರಕಾರಗಳನ್ನು ಸೂಚಿಸುತ್ತದೆ. ವಿಶೇಷ ಸ್ಪಂದವು ತಾನೇ ವಿಶ್ವದಲ್ಲಿ ಪ್ರಕಟಪಡುತ್ತಿದೆ.

ಹೀಗೆ, ಸಾಮಾನ್ಯ ಸ್ಪಂದವು ಉತ್ಸವಾಗಿದೆ ಮತ್ತು ಅಲ್ಲಿಂದ ವಿಶೇಷ ಸ್ಪಂದವು ಕ್ರಿಯಾನ್ವಿತವಾಗುತ್ತದೆ.

ಈಗ ಸಾಧಕನು ಉತ್ಸವನ್ನು ತಲುಪಬಯಸುತ್ತಾನೆ. ಮತ್ತು ಅರಿವಿನ ಈ ಅವಸ್ಥೆಗೆ ಸುಪ್ರಬುದ್ಧತಾ ಅವಸ್ಥೆ ಎನ್ನುತ್ತಾರೆ.

ಈ ಸಾಮಾನ್ಯ ಸ್ಪಂದದ ಸ್ವರೂಪವನ್ನು ಬಣ್ಣಿಸುವುದಾದರೆ, ಹೀಗೆ ಹೇಳಬಹುದು: ಅದು ತನ್ನೊಳಗೆ ಅಜಸ್ರ ವಿಶೇಷತೆಗಳನ್ನೂ ಮತ್ತು ಪ್ರಕಾರಗಳನ್ನೂ ಅಭಿವ್ಯಕ್ತ ಪಡಿಸುವ ಗತಿಶೀಲ ಸಮಷ್ಟಿ; ಮತ್ತು ಅದಕ್ಕಾವ ಸೀಮಾರೇಖೆಗಳಿಲ್ಲ. ವಿಶೇಷ-ಸ್ಪಂದದ ಪ್ರಕಾರಗಳಲ್ಲಿಯ ನಿರಂತರ ಸರಪಳಿಯೇ ಸಾಮಾನ್ಯ ಸ್ಪಂದವಾಗಿದೆ. ಅರ್ಥಾತ್ ಸಾಮಾನ್ಯ ಸ್ಪಂದವು ವಿಶೇಷ ಸ್ಪಂದದ

ಸಕಲ ಪ್ರಕಾರಗಳಲ್ಲಿಯ ಗತಿಶೀಲ ಪ್ರಾಣಶಕ್ತಿಯಾಗಿದೆ. ಅದು ನಿರ್ದಿಷ್ಟ ತರಂಗಗಳ ವಿಶೇಷತೆಗಳನ್ನು ಮೇಳವಿಸುತ್ತದೆ. ಆದರೂ ಸಹ, ಅವೆಲ್ಲವುಗಳನ್ನು ಅತಿಶಯಿಸುತ್ತದೆ. ಉದಾಹರಣೆಗಾಗಿ– ಒಂದು ವಸ್ತುವನ್ನು ವಿಷಯ–ವಿಷಯೀ ಸಂಬಂಧವಿಲ್ಲದೆ ಪ್ರೇಮಿಸುವುದು ಸಾಮಾನ್ಯ ಸ್ಪಂದವಾಗಿದೆ. ಇನ್ನು, ವಿಷಯ–ವಿಷಯೀ ಸಂಬಂಧವಿರಿಸಿ ಪ್ರೇಮಿಸುವುದು ವಿಶೇಷ ಸ್ಪಂದವಾಗಿದೆ.

ವಿಷಯ–ವಿಷಯೀ ಸಂಬಂಧವಿಲ್ಲದೆ, ಒಂದು ವಸ್ತುವನ್ನು ಪ್ರೇಮಿಸುವುದೆಂದರೆ, ಪ್ರೇಮ ಸ್ಪಂದನದಲ್ಲಿಯೇ ನಾವು ಜೀವಿಸಬೇಕು ಎಂದು ಅರ್ಥ.

ಪ್ರೇಮವೆಂದರೆ, ಪ್ರಾಣ ಕೇಂದ್ರದತ್ತ, ಉತ್ಸದತ್ತ ಇರುವ ಗತಿಶೀಲ ಆಕರ್ಷಣೆ; ಕ್ರಮ–ಮುದ್ರೆಯತ್ತ ಹೊರಳಿ ವಿಕಾಗ್ರವಾಗುವುದು. ಅಂದರೆ ಪರಾ ಪ್ರಮಿತಿಯತ್ತಣ ಆಕರ್ಷಣೆಯೇ ಪ್ರೇಮ.

ಇನ್ನು ಸಾಮಾನ್ಯ ಸ್ಪಂದವು ಪೂರ್ಣ ರೂಪದಲ್ಲಿ, ಸ್ಥಿತಿ ವಿಜ್ಞಾನ (ಶಿವ) ಮತ್ತು ಗತಿ ವಿಜ್ಞಾನ (ಶಕ್ತಿ)ಗಳನ್ನು ಒಳಗೊಂಡಿದೆ. ಮೇಲಾಗಿ, ಸಾಮಾನ್ಯ ಸ್ಪಂದದಲ್ಲಿ ಪರಾ ಪ್ರಮಿತಿಯೂ ಕ್ರಿಯಾನ್ವಿತವಾಗಿರುತ್ತದೆಂದು ಹೇಳಬಹುದು. ವಿಶೇಷ ಸ್ಪಂದದಲ್ಲಿ ಅಪರಾ ಪ್ರಮಿತಿ ಅಥವಾ ಸಂಕುಚಿತ ಪ್ರಮಾತಾವೇ, ಸಕಲ ವಿಶೇಷತೆಗಳಲ್ಲಿ ಕ್ರಿಯಾನ್ವಿತವಾಗಿರುತ್ತದೆ.

ಪಶು ದೆಶೆಯಲ್ಲಿ ಸಕಲ ತರಂಗಗಳು ವಿಕಲ್ಪವಾಗಿರುತ್ತವೆ. ಆದರೆ, ಪತಿ ದೆಶೆಯಲ್ಲಿ ಅವುಗಳೆಲ್ಲ ಸಮನ್ವಿತವಾಗಿ ಅಭೇದ್ಯ ದಿವ್ಯ ಶಕ್ತಿಯಾಗಿರುತ್ತವೆ. (ಅಭಿಕಾತ್ಮಿಕ ಚಿತ ಶಕ್ತಿರೇವ.)

ಪುನಃ, ಸಾಮಾನ್ಯ ಸ್ಪಂದದಲ್ಲಿ, ಪ್ರಾಣ ಕೇಂದ್ರದಲ್ಲಿ ಅಭಿವ್ಯಕ್ತವಾಗದ, ಅಜಸ್ರ ಕಂಪನಗಳಿದ್ದರೆ, ಆ ಅವಸ್ಥೆಗೆ 'ಶಾಂತ ಅವಸ್ಥೆ' ಎನ್ನುತ್ತಾರೆ; ಅಭಿವ್ಯಕ್ತವಾದರೆ, 'ಉದಿತ ಅವಸ್ಥೆ' ಎನ್ನುತ್ತಾರೆ.

ಯಾವಾಗ ಸ್ವಾತ್ಮ ಸ್ವರೂಪ ಸ್ಪಂದವು ಇರುವುದೋ, ಆಗ ಸಮಷ್ಟಿ ಪ್ರಜ್ಞೆಯು ಬೋಧಾತೀತ ಮತ್ತು ಬೋಧಾತ್ಮಿಕವಾಗಿರುತ್ತದೆ. ಯಾವಾಗ ಬೋಧಾತೀತವು ಬೋಧಾತ್ಮಕವಾಗುವುದೋ, ಆಗ ಅನುಭೂತಿಯ ಪ್ರಥಮ ಹಂತವು ಸಾಮಾನ್ಯ ಸ್ಪಂದವಾಗಿದೆ. ಯಾವಾಗ ಅದು ಸಾಮಗ್ರಿಕವಾಗಿ ತೀವ್ರಗೊಳ್ಳುವುದೋ, ಮತ್ತು ಸರ್ವ ವ್ಯಾಪ್ತಿಯಾಗುವುದೋ, ಆಗ ಅದು ಸ್ವಾತ್ಮ ಸ್ವರೂಪ ಸ್ಪಂದದ ರೂಪವನ್ನು ಹೊಂದುತ್ತದೆ, ಅರ್ಥಾತ್ ಸಮಷ್ಟಿ ಜೈತನ್ಯದ ಅರಿವಿನ ಅನಿಸಿಕೆಯಾಗುತ್ತದೆ. ಆಗ ಅದು ಪ್ರಾಣ ಕೇಂದ್ರದಲ್ಲಿ ಇರುತ್ತದೆ.

ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ವಿಕವು ಅನೇಕವಾಗುತ್ತದೆ. ಆದರೆ ಅನೇಕತ್ವವು ವಿಕತ್ವವೇ ಸರಿ. ಅಂದರೆ, ಅದು ಪರಮ ಸ್ವಾತ್ಮದ ಅಭಿವ್ಯಕ್ತಿಯಲ್ಲದೆ ಬೇರೇನಲ್ಲ. ಇನ್ನು, ಆ ಆತ್ಮವು ಅಸೀಮವಿದೆ; ಮತ್ತು ಗತಿಶೀಲವಿದೆ. ಈ ಅವಸ್ಥೆಯಲ್ಲಿಯ ಸ್ಪಂದವು ಉದಿತ ಸ್ಪಂದವಾಗಿದೆ. ಈ ಅವಸ್ಥೆಯಲ್ಲಿ ಸಕಲವೂ ದರ್ಪಣದಲ್ಲಿ ಪ್ರತಿಫಲಿತವಾದ ದೃಶ್ಯದಂತೆ ತೋರುತ್ತದೆ. (ವಿಶ್ವ ದರ್ಪಣ ದೃಶ್ಯಮಾನ ನಗರಿ ತುಲ್ಯಂ ವಿಜಾಂತಗತಮಾ.)

ಸಾಂಕೇತಿಕವಾಗಿ ಹೇಳುವುದಾದರೆ, ಅರಿವಿನ ಅತ್ಯಂತ ಸೂಕ್ಷ್ಮ ಮತ್ತು ಸರಿಯಾದ ಅನುಭೂತಿಯು, ಪೂರ್ಣ ಬಿಂದುವನ್ನು ಸೂಚಿಸುತ್ತದೆ. ಇದು ಸ್ಥಿತವಲ್ಲ: ಆದರೆ ಗತಿಶೀಲವೂ ಮತ್ತು ಸೃಜನಾತ್ಮಕ ಕೇಂದ್ರವೂ ಆಗಿದೆ. ಅದು ಭಾರ ಸಾಮ್ಯ ಗುಣ ಹೊಂದಿದೆ. ಅದರಲ್ಲಿ ಪ್ರಕ್ಷೇಪಣೆಯ ಗುಣವೂ ಇದೆ; ವಿಕ್ಷೇಪಣೆಯ ಗುಣವೂ ಇದೆ. ಸಾಮಾನ್ಯ ಸ್ಪಂದಕ್ಕೆ ಕೇಂದ್ರೀಯ ಕಂಪನವೆಂದೂ ಹೆಸರು. ಅದು ನಾದ; ಅದು ಅನಂತ ಕಂಪನ, ಸಕ್ರಿಯವಾದ ಹರಿಯುವ ಪ್ರವಾಹ; ಸರ್ವ ವ್ಯಾಪ್ತ ಧಾರೆ. ಅದರಲ್ಲಿ ವಿಶೇಷ ಸ್ಪಂದದ ಸಕಲ ವಿಶೇಷತೆಗಳೂ ಇವೆ.

ಆಧ್ಯಾತ್ಮಿಕವಾಗಿ ಸುಪ್ತ ವ್ಯಕ್ತಿಯು ಅರ್ಥಾತ್ ಅಪ್ರಬುದ್ಧನು ತನ್ನನ್ನೇ ತಾನು ಮರೆತಿದ್ದಾನೆ, ಮತ್ತು ಒಂದು ವಿಶೇಷ ಕಂಪನದಲ್ಲಿ ಸಾಗಿದ್ದಾನೆ. ಮತ್ತು ತನ್ನ ನೈಜ ಗುರುತನ್ನು ಅರ್ಥಾತ್ ಪರಮ ಸತ್ಯವನ್ನು ಮರೆತಿದ್ದಾನೆ. ಮೇಲಾಗಿ, ಸೀಮಿತ ಕಂಪನದಲ್ಲಿ ಅರ್ಥಾತ್ ವಿಶೇಷ ಸ್ಪಂದದಲ್ಲಿ ನಡೆಯುತ್ತಿದ್ದಾನೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅವನನ್ನು ತಾಂತ್ರಿಕವಾಗಿ ಮಿತ-ಪ್ರಮಾತಾ ಎಂದು ಕರೆಯಬಹುದು. ಹೀಗೆ ವಿಭಿನ್ನ ವ್ಯಕ್ತಿಗಳುಂಟು. ಉದಾಹರಣೆಗೆ– ಪ್ರಾಣ ಪ್ರಮಾತಾ ಇದ್ದಾನೆ. ಇವನು ಪ್ರಾಣ ಕ್ರಿಯೆಯಲ್ಲಿ ಸೀಮಿತನಾಗಿದ್ದಾನೆ. ಪ್ರಾಣಾಯಾಮವನ್ನು ಮಾಡುತ್ತಾನೆ; ಶಕ್ತಿ ಪಡೆದಿದ್ದಾನೆ, ಆದರೆ ಅವನು ಸೀಮಿತ ರೇಖೆಯೊಳಗೇ ಇದ್ದಾನೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಇದು ಪಶು ದೆಶೆಯಷ್ಟೇ.

ಅದೇ ಮೇರೆಗೆ, ಬುದ್ಧಿ ಪ್ರಮಾತಾ ಉಂಟು. ಇವನು ಬುದ್ಧಿಯ ಮಟ್ಟದಲ್ಲಿ ಸೀಮಿತನಾಗಿದ್ದಾನೆ. ಅವನಿಗೆ ತೀಕ್ಷ್ಣ ಬುದ್ಧಿ ಇರಬಹುದು. ಅದೇಕೆ? ಅವನು ಬುದ್ಧಿಯ ಕೇಂದ್ರದಲ್ಲಿಯೇ ಇರಬಹುದು. ಅವನನ್ನು ಜ್ಞಾನಿ ಎನ್ನಲೂ ಬಹುದು. ಆದರೆ, ಅದೆಲ್ಲ ಸೀಮೆಗೊಳಪಟ್ಟು ಮಾತ್ರ.

ಇನ್ನು ಸಾಧಾರಣ ಮಾನವರೆಂದು ಕರೆಯಲ್ಪಡುವವರೂ ಇದ್ದಾರೆ.

ಇವರು ದೇಹಾತ್ಮ ಬುದ್ಧಿಯುಳ್ಳವರು. ಅವರು ಪೂರ್ಣವಾಗಿ, ಯಾಂತ್ರಿಕ ಸ್ಥಿತಿಯಲ್ಲಿರುವ, ಆಧ್ಯಾತ್ಮಿಕವಾಗಿ ಸುಪ್ತ ವ್ಯಕ್ತಿಗಳಾಗಿದ್ದಾರೆ. ಅವರು ಶ್ರೇಣಿಬದ್ಧ ಗೋಷ್ಠಿಗಳಿಗೆ ಇಲ್ಲವೆ ವಂಶಗಳಿಗೆ ಸಂಬಂಧಿಸಿದವರಾಗಿರುತ್ತಾರೆ. ಆದರೆ ಎಲ್ಲರೂ ಅಪ್ರಬುದ್ಧರೇ.

ಆ ಮೇಲೆ, ಒಂದು ಪ್ರಾಣಪ್ರಾಯವಾದ ಪ್ರಶ್ನೆ ಏಳುತ್ತದೆ; ಅದೆಂದರೆ, ಸಾಮಾನ್ಯ ಸ್ಪಂದವು ಏಕೆ ಮತ್ತು ಹೇಗೆ ವಿಶೇಷ ಸ್ಪಂದವಾಗುತ್ತದೆ? ಸಾಮಾನ್ಯ ಸ್ಪಂದದ ಹೇತು ರೂಪವು ಇಚ್ಛಾ ಶಕ್ತಿಯಾಗಿದೆ. ಸಾಮಾನ್ಯ ಸ್ಪಂದದ ಅರಿವಿನ ರೂಪವು ಜ್ಞಾನ ಶಕ್ತಿಯಾಗಿದೆ. ಸಾಮಾನ್ಯ ಸ್ಪಂದದ ಸೃಜನಾತ್ಮಕ ರೂಪವು ಕ್ರಿಯಾ ಶಕ್ತಿಯಾಗಿದೆ. ಉಕ್ತ ಪ್ರಶ್ನೆಗೆ ಎರಡು ರೀತಿಯಿಂದ ಉತ್ತರ ನೀಡಬಹುದು. ಆದರೆ, ಉತ್ತರವು ಮಾತ್ರಾ ಭೇದಕ್ಕನುಸರಿಸಿ ಇರುತ್ತದೆ. ಕೇಂದ್ರದಿಂದ ನೋಡಿದಾಗ, ಕೇಂದ್ರವೇ ತನ್ನ ಗತಿಶೀಲ ಇಚ್ಛೆ, ಜ್ಞಾನ ಮತ್ತು ಕ್ರಿಯಶೀಲ ದೃಷ್ಟಿಯಿಂದ ಅನುಕ್ರಮವಾಗಿ ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾ ಶಕ್ತಿಗಳಾಗುತ್ತದೆ. ಆದರೆ ಅವುಗಳೇನೂ ಕೇಂದ್ರದಿಂದ ಭಿನ್ನವಲ್ಲ. ಆ ಕೇಂದ್ರವೇ ಗತಿಶೀಲ ಜ್ಞಾನವಾಗಿದೆ. ಮತ್ತು ಗತಿಶೀಲ ಕ್ರಿಯಾ ಶಕ್ತಿಯಾಗಿದೆ.

ಈಗ ಒಂದು ಜ್ಞಾನದ ಅವಸ್ಥೆ ಇದೆ; ಅಥವಾ ವ್ಯಕ್ತಿಯ ಚರಮ ಅವಸ್ಥೆ ಎಂದೂ ನಾವು ಅದನ್ನು ಕರೆಯಬಹುದು. ಅದುವೇ ಪ್ರಬುದ್ಧ ಅವಸ್ಥೆ. ಇದರ ಭಾವಾರೂಢ ಅರ್ಥವೆಂದರೆ, 'ಪ್ರಕರ್ಷೇಯ ಬುದ್ಧಃ ಪ್ರಬುದ್ಧ'. ಅರ್ಥಾತ್ ಸದಾ ಜಾಗೃತ. ಅವನಿಗೆ ಜ್ಞಾನದಲ್ಲಿ ಶ್ರೇಣಿಗಳಿಲ್ಲ. ಜ್ಞಾನದಲ್ಲಿ ಭಿನ್ನತೆಗಳಿಲ್ಲ. ಏಕೆಂದರೆ, ಅವನ ಜಾಗೃತಿಯು ಒಂದೇ ರೀತಿ ಇರುತ್ತದೆ. ಅರ್ಥಾತ್ ಅವನಿಗೆ ಸಾಪೇಕ್ಷಿಕ ಅವಸ್ಥೆಗಳಿಲ್ಲ. ಉದಾಹರಣೆಗೆ, ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರೂ ಅವಸ್ಥೆಗಳಲ್ಲಿಯ ಅನುಭವಗಳಲ್ಲಿ ಭೇದವಿಲ್ಲ. ಅವನ ಜ್ಞಾನವು ಅವಸ್ಥಾಂತರದಲ್ಲಿ ಸಮಗ್ರವಾಗಿಯೇ ಇರುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಸಾಮಾನ್ಯ ಸ್ಪಂದದಲ್ಲಿ, ಚರಮ ಮತ್ತು ಶಾಶ್ವತ ಪದವನ್ನು ಕಾಪಾಡಿಕೊಳ್ಳುವುದೇ ಪ್ರಬುದ್ಧ ಅವಸ್ಥೆಯಾಗಿದೆ. ಪ್ರಬುದ್ಧನು ಎಲ್ಲ ದೃಷ್ಟಿಯಿಂದಲೂ ಜಾಗ್ರತನಾಗಿರುತ್ತಾನೆ. ಅರ್ಥಾತ್ ಅವನಿಗೆ ಇತಿಮಿತಿಗಳೇ ಇಲ್ಲ. ಎಲ್ಲವೂ ಅವನ ಮಧುರ ಇಚ್ಛೆಯನ್ನವಲಂಬಿಸಿದೆ.

ನಾವು ಈಗಾಗಲೇ ಪ್ರಬುದ್ಧ ಮತ್ತು ಅಪ್ರಬುದ್ಧ ಅವಸ್ಥೆಗಳ ಸ್ವರೂಪವನ್ನು ಚರ್ಚಿಸಿದ್ದೇವೆ. ಪ್ರಬುದ್ಧನು ಯಾವಾಗಲೂ ಸಾಮಾನ್ಯ ಸ್ಪಂದದಲ್ಲಿ

ಇರುತ್ತಾನೆ. ತನ್ನ ವಿಶೇಷ ಸ್ಪಂದಗಳೆಲ್ಲ ಅಖಿಂಡ ಸಾಮಾನ್ಯ ಸ್ಪಂದದ ಕಂಪನಗಳೇ ಎಂಬುದನ್ನು ಅವನು ಸದಾ ಭಾವಿಸುತ್ತಾನೆ. ಅಲ್ಲಿ ಸಾಮಗ್ರಿಕ ಪ್ರತ್ಯಕ್ಷ ಜ್ಞಾನ, ಇಚ್ಛೆ ಮತ್ತು ಕ್ರಿಯೆಗಳಿರುತ್ತವೆ. ಈ ಅವಸ್ಥೆಯು ಗತಿಶೀಲವಾಗಿರುತ್ತದೆ, ಮತ್ತು ಸೀಮಾತೀತವಾಗಿರುತ್ತದೆ.

ಇನ್ನು ಪ್ರಬುದ್ಧ ಮತ್ತು ಅಪ್ರಬುದ್ಧರ ನಡುವೆ ಮಧ್ಯಂತರ ಅವಸ್ಥೆಯೊಂದಿದೆ. ಇದು ಸಾಮಾನ್ಯ ಮತ್ತು ವಿಶೇಷ ಸ್ಪಂದಗಳನ್ನು ಜೋಡಿಸುವ ಕೊಂಡಿಯಾಗಿದೆ. ಈ ಕೊಂಡಿಯೂ ಸಹ, ಸುಸ್ಪಷ್ಟವಾಗಿ ವಿಶೇಷ ಸ್ಪಂದವೇ ಆಗಿದೆ. ಆದರೆ ಅದು ತನ್ನ ಗರ್ಭದಲ್ಲಿ, ಪ್ರತಿಷ್ಠಿತವಾದ ಸಾಮಾನ್ಯ ಸ್ಪಂದವನ್ನೂ ಒಳಗೊಂಡಿರುತ್ತದೆ. ಹೀಗಾಗಿ, ಈ ಅವಸ್ಥೆಯು ಸಾಮಾನ್ಯ–ವಿಶೇಷ ಸ್ಪಂದವೆನಿಸಿದೆ.

ನಾವು ಈಗಾಗಲೇ ಹೇಳಿದಂತೆ ಸಾಮಾನ್ಯ ಸ್ಪಂದವು ಜೊತೆ ಜೊತೆಗೇ. ನಿರೋಧ ಮತ್ತು ಪ್ರಸರಣ ಶಕ್ತಿಗಳ ಸೀಮಿತ ಮತ್ತು ಅಸೀಮಿತ ಶಕ್ತಿದ್ವಯಗಳನ್ನು ಹೊಂದಿದೆ.

ಯಾವಾಗ ಅಪ್ರಬುದ್ಧನು ಸದ್ಗುರುವಿನ ಕೃಪೆಯಿಂದ ಸಾಮಾನ್ಯ ಸ್ಪಂದದ ಹಠಾತ್ ಪ್ರವಾಹವನ್ನು ಪಡೆಯುವನೋ, ಆಗ ಸದ್ಗುರುವು ಅವನಿಗೆ ಆರೆ ಕ್ಷಣ ಸಾಮಾನ್ಯ ಸ್ಪಂದದ ಇಣುಕು ನೋಟವನ್ನು ತೋರಿಸುತ್ತಾನೆ. ಇದನ್ನೇ ಜಾಗೃತ ಎನ್ನುತ್ತಾರೆ. ಈ ಜ್ಞಾನದ ಜಾಗೃತ ಅವಸ್ಥೆಯು ಮತ್ತು ಅವನ ಪೂರ್ವಾವಸ್ಥೆಯು, ಒಂದುಕ್ಕೊಂದು ಸಮಾಂತರದಲ್ಲಿ ಪ್ರವಹಿಸುತ್ತವೆ. ಈ ಜ್ಞಾನದ ವಿಶೇಷ ಭಾವನೆಯು ಅವನನ್ನು ಜಾಗ್ರತಗೊಳಿಸುತ್ತದೆ. ಮತ್ತು ತತ್‌ಕ್ಷಣವೇ ಇಲ್ಲಿ ಸಾಧನೆಯು ಪ್ರಾರಂಭವಾಗುತ್ತದೆ. ಇದನ್ನು 'ಶುದ್ಧ ವಿದ್ಯಾ ಉದಯ'ವೆನ್ನುತ್ತಾರೆ.

ಹೀಗೆ, ಈ ಉದಯಕ್ಕಾಗಿ, ಇನ್ನಿತರ ಪದ್ಧತಿಗಳಿರಬಹುದಾದರೂ, ಸದ್ಗುರುವಿನ ಕೃಪೆಯು ತುಂಬಾ ಮಹತ್ವದ ಮತ್ತು ಪ್ರಮುಖ ಅಂಶವಾಗಿದೆ. ಸದ್ಗುರುವಿನ ಕೃಪೆಯು ಅನುಭಾವಿಗಳ ಸಂಪ್ರದಾಯಕ್ಕೆ ಜೋಡಿಸುವ ಕೊಂಡಿಯಾಗಿದೆ ಮತ್ತು ಅದು ಸಾಧಕನನ್ನು ಸಾಮಾನ್ಯ ಸ್ಪಂದದ ಮಟ್ಟಕ್ಕೆಯ್ಯುವ ಈ ಸ್ಪಂದನಗಳ ಮೂಲಕ ಹರಸುತ್ತದೆ. ಹೀಗೆ, ಇಲ್ಲಿ ಅಹಂಕಾರದ ಹುಚ್ಚು ಆಶೆಯಿಂದಾಗಿ, ಸಾಧಕನ ಸಂಭವನೀಯ ಪತನದ ಸಂಭವವೇ ಇರದು.

ಈ ಶುದ್ಧ ವಿದ್ಯಾ ಉದಯದ ಹಠಾತ್ ಜಾಗೃತಿಯು ಸಾಧನೆಯಲ್ಲಿ ಅತ್ಯಂತ ಮಹತ್ವದ ಅಂಶವಾಗಿದೆ. ಆಧ್ಯಾತ್ಮಿಕ ಸ್ಪಂದನದ ಅನುಭೂತಿಯು,

ದಿವ್ಯ ಮಾತೆಯ ಕೃಪೆಯಲ್ಲದೆ ಬೇರೇನೂ ಅಲ್ಲ. ಸಾಮಾನ್ಯ ಸ್ಪಂದವು ಸರ್ವ ಪ್ರಧಾನ ಅಂಶಗಳನ್ನೊಳಗೊಂಡಿದೆ ಮತ್ತು ಕೇಂದ್ರದಲ್ಲಿದೆ. ಹಠಾತ್ ದರ್ಶನಾನುಭೂತಿ ಇಲ್ಲವೆ ಸ್ಪಂದನಗಳ ನಿರಂತರ ಉಪಸ್ಥಿತಿಯ ಸಂವೇದನೆಯು, ಸುಸ್ಪಷ್ಟವಾಗಿ ಜಾಗೃತಿಯೇ ಸರಿ. ಆದರೆ, ಇದು ದಿವ್ಯ ಮಾತೆಯ ಸಾನ್ನಿಧ್ಯವನ್ನು ತೆರೆದು ತೋರಿಸದು. ಅದನ್ನು ಕೇವಲ ಕೆಲವೇ ಕೆಲವು ಭಾಗ್ಯವಂತ ಸಾಧಕರು ಮಾತ್ರ ಉಪಲಬ್ಧ ಮಾಡಿಕೊಳ್ಳಬಲ್ಲರು. ಏಕೆಂದರೆ, ಕೇವಲ ಸಾಮಾನ್ಯ ಸ್ಪಂದವು ಅವರನ್ನು ಊರ್ಧ್ವ ಸ್ತರಕ್ಕೆ ಒಯ್ಯುವುದೇನೋ ನಿಜ. ಆದರೆ, ಭಾವಾನುಭವವು ಘಟಿಸದು. ಆದ್ದರಿಂದ, ಅವರು ರಸ ಮತ್ತು ಲೀಲೆಗಳ ಪೂರ್ಣ ಆನಂದಾನುಭೂತಿಯನ್ನು ಪಡೆಯುವುದಿಲ್ಲ. ಆದರೆ, ಈ ಅನುಭೂತಿಯು ವೇದಾಂತದ ಏಕಾಂತಿಕ ಬ್ರಹ್ಮಾನುಭೂತಿಗಿಂತ ಬೇರೆಯೇ ಇದೆ.

ಸಾಮಾನ್ಯ ಸ್ಪಂದವು ಪೂರ್ಣ ಜ್ಞಾನದ ಸಮಗ್ರ ಶಕ್ತಿಯಾಗಿದೆ. ಇದು ಜಾಗೃತ ಮತ್ತು ಸ್ವಪ್ನಗಳೆ ಉಭಯ ಮಟ್ಟದಲ್ಲಿ, ಅಳದಲ್ಲಿ ಪ್ರವಹಿಸುವ ಧಾರೆಯಾಗಿದೆ. ಅದು ಜ್ಞಾನದ ಕೇಂದ್ರ ಮಟ್ಟವಾಗಿದೆ. ಸಮಷ್ಟಿ ಭಾವನೆ ಮತ್ತು ಸಾಮಾನ್ಯ ಸ್ಪಂದನದ ಅನುಭೂತಿಯು ಪೂರ್ಣ ಸ್ಪಂದನ, ಅಖಂಡ ಗತಿಗಳ ಶಕ್ತಿಯ ಅನುಭೂತಿಯಾಗಿದೆ.

ಸಾಮಾನ್ಯ ಸ್ಪಂದದ ಕಂಪನದ ಅಸ್ತಿತ್ವದ ಆದ್ಯಂತಗಳು ಹೇಗೆ ಮತ್ತು ಯಾವಾಗ? ಎಂಬ ಪ್ರಶ್ನೆಯನ್ನು ಉತ್ತರಿಸುವುದು ತುಂಬಾ ಕಠಿಣವಿದೆ. ವಾಸ್ತವದಲ್ಲಿ, ಸಾಮಾನ್ಯ ಸ್ಪಂದವು ದೇಶ ಮತ್ತು ಕಾಲ ಬೋಧೆಗಳಿಗೆ ಅತೀತವಾಗಿದೆ. ಆದ್ದರಿಂದ, ಸಾಮಾನ್ಯ ಸ್ಪಂದದ ಏಕಮೇವ ಸಂಭವನೀಯ ಅಭಿವ್ಯಕ್ತಿಯೆಂದರೆ, ಸ್ಪಂದನದ ನಿತ್ಯ ವಿಪುಲತೆಯಷ್ಟೇ. ಇದುವೇ ಚರಮ ಸತ್ಯವಾಗಿದೆ.

ಅದರ ಸ್ವಭಾವವನ್ನು ಬಣ್ಣಿಸುವಾಗ, ಅದು ತನ್ನ ಸ್ಪಂದನಗಳಲ್ಲಿ ಅನಂತವಾಗಿದೆಯೆಂದು ಮತ್ತು ಅನಂತ ಹಾಗೂ ಗತಿಶೀಲ ಅತಿ-ಪ್ರಾಣಿಕ ಶಕ್ತಿ ಮತ್ತು ಅದರ ಸ್ಥಿತಿ ಅವಸ್ಥೆಗಳ ನಡುವೆ ಸಂಬಂಧವಿದೆಯೆಂದು ನಾವು ಹೇಳಬಲ್ಲೆವು.

ತಾತ್ತ್ವಿಕ ಚರ್ಚೆಗೆ ಒಳಪಡಬಹುದಾದ ಸಾಮಾನ್ಯ ಸ್ಪಂದದ ಎರಡು ಮುಖಗಳಿವೆ. ಒಂದು ಸ್ಥಿತಿಶೀಲ ಸ್ಥಾನ; ಎರಡನೆಯದು ಗತಿಶೀಲ ಸ್ಥಾನ. ಆತ್ಯಂತಿಕ ಗತಿಶೀಲತೆಯು ನಿಜವಾಗಿ ಸ್ಥಿತಿಯೇ ಆಗಿದೆ. ಬರೀ ಶಕ್ತಿವಿಹೀನ ಸ್ಥಿತಿಯಲ್ಲ. ಆದರೆ, ಶಾಂತ ಅವಸ್ಥೆಯಲ್ಲಿಯ ಅತಿ ಪ್ರಾಣಿಕ ಶಕ್ತಿಯಾಗಿದೆ.

ಪ್ರಬುದ್ಧನ ಚರಮ ಅನುಭೂತಿಯು ಸ್ಥಿತಿಶೀಲ ಮತ್ತು ಗತಿಶೀಲ

ಅವಸ್ಥೆಗಳ ತಾತ್ತ್ವಿಕ ದ್ವಂದ್ವದ ಆಚೆಗಿದೆ. ಏಕೆಂದರೆ, ತಾತ್ತ್ವಿಕತೆಯಲ್ಲಿಯ ವ್ಯತ್ಯಾಸ ಮತ್ತು ಸಂದಿಗ್ಧತೆಗಳೇ ಯಾವುದೊಂದು ಅನುಭೂತಿಯನ್ನು ಸರಿಯಾಗಿ ಬಿಂಬಿಸಲಾರವು. ಬೋಧದ ತೀವ್ರತೆ ಮತ್ತು ಸಾಮಾನ್ಯ ಸ್ಪಂದದ ಅನುಭವಗಳು ಸಂಬಂಧ ಹೊಂದಿವೆ. ನಿದರ್ಶನವಾಗಿ ಸ್ಪಂದನಗಳ ಅನಂತ ಅನುಭೂತಿ ಇದೆಯೆಂದು ನಾವು ಹೇಳಬಲ್ಲೆವು.

ಆನಂತರ, ಎರಡು ವಿಷಯಗಳನ್ನು ಕುರಿತು ಚರ್ಚಿಸಬೇಕಾಗುತ್ತದೆ. ಅವುಗಳೆಂದರೆ, ಸ್ಪಂದನ ಮತ್ತು ಸ್ಪಂದನಗಳ ಸಾನ್ನಿಧ್ಯದ ಸಂವೇದನೆ. ಇದನ್ನೇ ಬೋಧೆ ಇಲ್ಲವೆ ಅನುಭೂತಿ ಎನ್ನುತ್ತಾರೆ. ಈ ಎರಡೂ ವಸ್ತುಗಳ ನಡುವೆ ಸೂಕ್ಷ್ಮ ಮತ್ತು ಅನಂತ ಸಂಬಂಧವಿದೆ. ಸ್ಪಂದನದ ತೀವ್ರತೆಯನ್ನು ಕುರಿತು ಹೇಳುವುದಾದರೆ, ಅದು ಬೋಧೆಯ ತೀವ್ರತೆಯ ಮೇಲೆ ಅವಲಂಬಿಸಿರುತ್ತದೆ. ಈ ಬೋಧೆಯು ಮತ್ತೆ ಸ್ಪಂದನಗಳ ತೀವ್ರತೆಯನ್ನು ಅವಲಂಬಿಸಿರುತ್ತದೆ. ಉಭಯ ವಸ್ತುಗಳ ತೀವ್ರತೆಯನ್ನು ಅರಿಯಲು ಮಧ್ಯಮ ಮಾರ್ಗವೊಂದಿದೆ.

ಸಾಮಾನ್ಯ ಸ್ಪಂದವು ತನ್ನದೇ ಆದ ನಿಯತಿಯನ್ನು ಹೊಂದಿದೆ. ಇದನ್ನು 'ದಿವ್ಯ ನಿಯಮ' ಎನ್ನುತ್ತಾರೆ. 'ಸರ್ವಂ ಸರ್ವಾತ್ಮಿಕಂ' ಅಂದರೆ, ಎಲ್ಲವೂ ಎಲ್ಲವನ್ನು ಒಳಗೊಂಡಿದೆ; ಎಂಬುದೇ ಆ ನಿಯತಿ. ಆದ್ದರಿಂದ, ಸ್ಪಂದ ತತ್ತ್ವದ ಮೇರೆಗೆ, ಸಾಮಾನ್ಯ ಸ್ಪಂದವೇ ವಿಶೇಷ ಸ್ಪಂದವಾಗುತ್ತದೆ. ಇದು ಮರಳಿ ನಾಮ, ರೂಪ, ಕ್ರಿಯೆಗಳಲ್ಲಿ ತೋರಿಸಿಕೊಳ್ಳುತ್ತದೆ. ನಿಯಮದ ಸಮಸ್ತ ಶ್ರೇಣಿಗತ ಸಂಘಟನೆಗಳು ಇಲ್ಲವೆ, ಬಳ್ಳುವಳಿಗಳು, ಸೀಮಿತ ದೃಷ್ಟಿಕೋಣಗಳು, ವಿಭಿನ್ನ ಪರಿಮಾಣಗಳು ವಿಶೇಷ ಸ್ಪಂದದಲ್ಲಿಯೇ ಘಟಿಸುತ್ತವೆ. ಅರ್ಥಾತ್ ದಿವ್ಯ ಸ್ಪಂದನವು ವಿಶ್ವದಲ್ಲಿ ಅಭಿವ್ಯಕ್ತವಾಗುತ್ತದೆ. ಆ ಅಭಿವ್ಯಕ್ತಿಗೇ ವಿಶೇಷ ಸ್ಪಂದವೆನ್ನುತ್ತಾರೆ.

ದೃಷ್ಟಾಂತಕ್ಕಾಗಿ, ನೋಡಿರಿ: ಗಣಿತದ ಸಂಕೇತಗಳನ್ನು ವಿವರಿಸಲೋಸುಗ, ಸಾಮಾನ್ಯ ಸ್ಪಂದವು ಪೂರ್ಣ ಬಿಂದುವೆಂದೂ ಮತ್ತು ಅದು ಸಾಪೇಕ್ಷ ಹಾಗೂ ನಿರಪೇಕ್ಷ ಹೀಗೆ ಉಭಯ ಸ್ಥಾನಗಳಲ್ಲಿದೆಯೆಂದೂ ನಾವು ಹೇಳಬಲ್ಲೆವು. ಯಾವಾಗ ಬಿಂದುವು 'ವಿಸರ್ಗ'ದ ಎರಡು ಬಿಂದುಗಳಲ್ಲಿ ಅಭಿವ್ಯಕ್ತವಾಗುವುದೋ, ಆಗ ಅದು ಸಾಪೇಕ್ಷಿಕ ಸ್ಥಾನದಲ್ಲಿರುತ್ತದೆ. ಮತ್ತು ಅದೇ ಕಾಲಕ್ಕೆ ಅದು ಸಂಬಂಧದ ಆಚೆಗೆ ನಿರಪೇಕ್ಷವಾಗಿಯೂ ಇರುತ್ತದೆ.

ಪ್ರಾಯೋಗಿಕವಾಗಿ ತಿಳಿಸುವುದಾದರೆ, ನಾವು ಒಂದು ಹೂವನ್ನು ನೋಡುತ್ತಿರುವೆವೆಂದು ತಿಳಿಯಿರಿ. ಹೂವಿನ ಈ ಕ್ಷಣವು ವಿಭಿನ್ನ ಅನುಭವ

ಗಳನ್ನೊಳಗೊಂಡಿರುತ್ತದೆ. ಈಗ ಒಬ್ಬನು ಒಂದು ವಿಶೇಷ ತೋಟದಲ್ಲಿ ಹೂವಿನ ಅನುಭೂತಿಯನ್ನು ಪಡೆಯುತ್ತಿರುವಾಗ, ದ್ರಷ್ಟಾರನು ಮಾನಸಿಕ ಮಟ್ಟದಲ್ಲಿ ಇರುವನೆಂದು ತಿಳಿಯಿರಿ. ಆಗ ಅವನು ಹೂವಿನ ಬಣ್ಣವನ್ನೂ ಮತ್ತು ಲಕ್ಷಣವನ್ನೂ ತನ್ನಿಂದ ಭಿನ್ನವಾಗಿ ಕಾಣುತ್ತಾನೆ. ಮತ್ತು ಹೂವಿನೊಂದಿಗೆ ಗಿಡವನ್ನೂ ಮತ್ತು ಎಲೆಗಳನ್ನೂ ಕಾಣುತ್ತಾನೆ. ಇದು ವಿಶೇಷ ಸ್ಪಂದದ ಈ ಬಗೆಗಿನ ಅನುಭೂತಿಯಿಂದಾದ ಜೀವನದ ಸಾಧಾರಣ ಅನುಭವವಷ್ಟೇ. ಇದು ಕಾಲ, ದೇಶ ಮತ್ತು ಪ್ರಜ್ಞೆ ಇಲ್ಲವೆ ಪ್ರಾಪಂಚಿಕ ಜ್ಞಾನಕ್ಕೆ ಸಂಬಂಧಿಸಿದ ಸಕಲ ವಸ್ತುಗಳಿಗೂ ಅನ್ವಯಿಸುತ್ತದೆ. ಆದರೆ, ಈ ಅನುಭೂತಿಯ ಅಂತರಾಳದಲ್ಲಿರುವ, ಮತ್ತು ಆಧಾರಭೂತವಾಗಿರುವ, ಸಾಮಾನ್ಯ ಸ್ಪಂದವನ್ನು ಮರೆಯಕೂಡದು. ಆದರೆ, ಶಾಂತ ವೀಕ್ಷಣೆಯಿಂದ, ಹೂವಿನ ಅನುಭೂತಿಯು ಬೇರೆಯೇ ಆಗುತ್ತದೆ.

ಶಾಂತ ವೀಕ್ಷಣೆ (Silent observation) ಎಂದರೆ, ಮನವು ಕ್ರಿಯಾಶೀಲವಾಗುವ ಮುನ್ನವೇ ಆ ವಸ್ತುವನ್ನು ಹಠಾತ್ ನೋಡುವುದು ಎಂದು ಅರ್ಥ. ಅರ್ಥಾತ್ ಮನವನ್ನು ನಿರ್ಲಕ್ಷಿಸುವುದು. ಮನವನ್ನು ನಿರ್ಲಕ್ಷಿಸುವುದೇನೂ ಕ್ರಿಯೆಯಲ್ಲ. ಆದರೆ, ಅದು ಶಾಂತ ವೀಕ್ಷಣೆಯ ಫಲವಾಗಿದೆಯಷ್ಟೇ.

ಶಾಂತ ವೀಕ್ಷಣೆಯ ಸರಿಯಾದ ಅನುಭೂತಿಯೆಂದರೆ, ಸಮಷ್ಟಿಯ ಭಾವನೆಯೇ ಆಗಿದೆ. ಅಲ್ಲಿ ದ್ರಷ್ಟಾ ಮತ್ತು ದೃಶ್ಯಗಳಿಲ್ಲ. ವಿಷಯೀ ಮತ್ತು ವಿಷಯಗಳಲ್ಲಿ ಯಾವುದೇ ಭೇದವಿರದು. ವಿಷಯೀಯೇ ವಿಷಯವಾಗುತ್ತದೆ. ಉಕ್ತ ದೃಷ್ಟಾಂತವನ್ನೇ ಇನ್ನಷ್ಟು ವಿಶದೀಕರಿಸುವುದಾದರೆ, ಅಭಿಜ್ಞತೆಯ (cognition) ಕ್ರಮದಲ್ಲಿ, (ನಾವೀಗಾಗಲೇ ಆ ಕ್ರಮದಲ್ಲಿರುವ ಭೇದಗಳನ್ನು ಕುರಿತು ಚರ್ಚಿಸಿದ್ದೇವೆ.) ನಾವು 'ಶಾಂತ ವೀಕ್ಷಣೆ' ಎಂಬ ಪದವನ್ನು ಬಳಸಿದ್ದೇವೆ. ಇದುವೇ ಸಾಮಾನ್ಯ ಸ್ಪಂದದ ಅನುಭೂತಿಗೆ ಕರೆದೊಯ್ಯುತ್ತದೆ. ಎಲ್ಲಿ ಒಂದು ಸೂಕ್ಷ್ಮ ಬಿಂದುವನ್ನು ಅಂಕಿತಪಡಿಸಬೇಕಾಗಿಯೋ, ಅಲ್ಲಿ ಶಾಂತ ವೀಕ್ಷಣೆ ಇರಲೇಬೇಕು. ಇದಲ್ಲದೆ, ಇನ್ನೂ ವಿಭಿನ್ನ ಪ್ರಕಾರಗಳಿವೆ. ಹೂವಿನ ಅನುಭೂತಿಯಲ್ಲಿನ ಉಕ್ತ ಅಭಿಜ್ಞತೆಯಲ್ಲಿ ನಾವು ಕೇವಲ ತನ್ಮಾತ್ರೆಯ ಬೋಧೆಯನ್ನು ಅಥವಾ ಕೇವಲ ಸಮಷ್ಟಿಯ ಅಸ್ತಿತ್ವದ ಅನುಭೂತಿಯನ್ನು ಸಂವೇದಿಸಿದೆವು. ಈ ಅನುಭೂತಿಯು ಶಾಂತ ವೀಕ್ಷಣೆಯಿಂದ ಬಂದಿದೆಯೆಂಬುದೇನೋ

ಸರಿ. ಆದರೆ ಇದು ವ್ಯಕ್ತ ಮತ್ತು ಶಾಂತದ ಅರ್ಥಾತ್ ಸಮಷ್ಟಿಯ ಅಸ್ತಿತ್ವದ ಅನುಭೂತಿಯಾಗಿದೆ.

ಈ ಪ್ರಕಾರದ ಶಾಂತ ವೀಕ್ಷಣೆಯು, ಬಹು ಪ್ರಕಾರಗಳಿಲ್ಲದ, ಅಥವಾ ಅನೇಕತ್ವವಿಲ್ಲದ, ಏಕಾಂತಿಕ ಅಸ್ತಿತ್ವದ ಅನುಭೂತಿಯಾಗಿದೆ; ಸತ್ ಬ್ರಹ್ಮದ ಸರ್ವಾನುಸ್ಯೂತ ಅಸ್ತಿತ್ವದ ಅನುಭೂತಿಯಾಗಿದೆ.

ಆದ್ದರಿಂದ, ಈ ಪ್ರಕಾರದ ಸಮಷ್ಟಿಯ ಅನುಭೂತಿಯು ಶಕ್ತಿವರ್ಜಿತ ಸ್ಥಿರಾನುಭೂತಿಯಾಗಿದೆ. ಈ ವಿಷಯದಲ್ಲಿ, ದ್ರಷ್ಟಾನು, ತನ್ನನ್ನೇ ತಾನು, ವಿಶೇಷ ಸ್ಪಂದದ ಯಾವುದೇ ವಿಶೇಷತೆಗಳಿಲ್ಲದೆ ದರ್ಶಿಸುತ್ತಾನೆ. ಒಂದು ವೇಳೆ, ಅವನು ವೀಕ್ಷಿಸುತ್ತಿದ್ದರೆ, ಸರ್ವಾನುಸ್ಯೂತ ಅಸ್ತಿತ್ವವನ್ನು ಅಥವಾ ಸಾಮಾನ್ಯ ಸ್ಪಂದವನ್ನು ವೀಕ್ಷಿಸುತ್ತಾನೆ. ಈ ಪ್ರಸಂಗದಲ್ಲಿ ದ್ರಷ್ಟಾನು ತನ್ನನ್ನೇ ತಾನು ವೀಕ್ಷಿಸುತ್ತಾನೆ. ಆದ್ದರಿಂದ, ಅವನ ಆನಂದಾನುಭೂತಿಯು ವ್ಯಾಪಕ ಶಾಂತದ ಅನುಭೂತಿಯೇ ಆಗಿದೆ.

ಆದರೆ, ಈ ಪ್ರಕಾರದ ಶಾಂತ ವೀಕ್ಷಣೆಯು, ನಿಸ್ಸಂದೇಹವಾಗಿ ಸಮಷ್ಟಿಯ ಅನುಭೂತಿಯೇ ಆಗಿದೆ. ಇಲ್ಲಿ ಯಾವುದೇ ಸ್ಪಂದನದ ಗುಪ್ತ ಪ್ರವಾಹಗಳಿಲ್ಲ. ಅವುಗಳನ್ನೆಲ್ಲ ಅವನು ಮಾಯೆಯೆಂದು, ಮತ್ತು ಬರೀ ತೋರಿಕೆಯೆಂದು ಅಲ್ಲಗಳೆದಿರುತ್ತಾನೆ. ಆದರೆ, ಅದು ನಿಜವಾಗಿಯೂ ಗತಿಶೀಲವಾದ ಜ್ಞಾನದ ಅತಿಪ್ರಾಣಿಕವಾದ, ಅಂತರ್ಗತವಾದ, ಸಾಮಾನ್ಯ ಸ್ಪಂದವೇ ಆಗಿದೆ.

ಆದರೆ, ಇದಕ್ಕೆ ಪ್ರತಿಯಾಗಿ, ಸಾಮಾನ್ಯ ಸ್ಪಂದದ ಶಾಂತ ವೀಕ್ಷಣೆಯು, ಅಥವಾ ಸಾಮಾನ್ಯ ಸ್ಪಂದದ ವೀಕ್ಷಣೆಯ ಅನುಭೂತಿಯು, ಸತ್, ಚಿತ್, ಆನಂದಗಳು ಏಕೀಭವಿಸಿದ, ಸಮಷ್ಟಿಯ ಅನುಭೂತಿಯ ಸಂಭಾವ್ಯತೆಯನ್ನೊಳಗೊಂಡಿದೆ. ಆದ್ದರಿಂದ ಸಮಷ್ಟಿ ಅರ್ಥಾತ್ ಪೂರ್ಣ ಸತ್ಯವು, ಪೂರ್ವ ಏಕತೆಯಾಗಿದೆ ಅಥವಾ ಅನೇಕತ್ವದೊಂದಿಗಿನ ಏಕತ್ವವಾಗಿದೆ. ಆದರೂ ಅದು ಪೂರ್ಣವೇ ಆಗಿದೆ.

ಪೂರ್ಣವಾದ 'ಅದ್ವೈತ'ದ ಅನುಭೂತಿಯು ನಿಜವಾಗಿ ಶಾಂತ ವೀಕ್ಷಣೆಯ ಸಮಷ್ಟಿಯನ್ನು ಒಳಗೊಳ್ಳುತ್ತದೆ. ಈ ಅನುಭೂತಿಯು ನಿರ್ವ್ಯಕ್ತಿಕ ಅಭಿಜ್ಞತೆಯೂ ಅಲ್ಲ; ಸಾಪೇಕ್ಷಿಕವೂ ಅಲ್ಲ. ಆದ್ದರಿಂದ, ಅದು ನೆನಹಿನ ಜಂಜಡದ ಸೀಮೆಯಾಚೆಗಿದೆ. ಇದು ಪೂರ್ವಭಾವಿಯಾಗಿ ನಿಲ್ಲುತ್ತದೆ ಮತ್ತು ಮಾನಸಿಕ ಸಂಸ್ಕಾರಗಳನ್ನು ಮತ್ತು ಸೂಕ್ಷ್ಮ ಸಹಯೋಗದ ಸಾದೃಶ್ಯಗಳನ್ನು

ಗಳನ್ನೊಳಗೊಂಡಿರುತ್ತದೆ. ಈಗ ಒಬ್ಬನು ಒಂದು ವಿಶೇಷ ತೋಟದಲ್ಲಿ ಹೂವಿನ ಅನುಭೂತಿಯನ್ನು ಪಡೆಯುತ್ತಿರುವಾಗ, ದ್ರಷ್ಟಾರನು ಮಾನಸಿಕ ಮಟ್ಟದಲ್ಲಿ ಇರುವನೆಂದು ತಿಳಿಯಿರಿ. ಆಗ ಅವನು ಹೂವಿನ ಬಣ್ಣವನ್ನೂ ಮತ್ತು ಲಕ್ಷಣವನ್ನೂ ತನ್ನಿಂದ ಭಿನ್ನವಾಗಿ ಕಾಣುತ್ತಾನೆ. ಮತ್ತು ಹೂವಿನೊಂದಿಗೆ ಗಿಡವನ್ನೂ ಮತ್ತು ಎಲೆಗಳನ್ನೂ ಕಾಣುತ್ತಾನೆ. ಇದು ವಿಶೇಷ ಸ್ಪಂದದ ಈ ಬಗೆಗಿನ ಅನುಭೂತಿಯಿಂದಾದ ಜೀವನದ ಸಾಧಾರಣ ಅನುಭವವಷ್ಟೇ. ಇದು ಕಾಲ, ದೇಶ ಮತ್ತು ಪ್ರಜ್ಞೆ ಇಲ್ಲವೆ ಪ್ರಾಪಂಚಿಕ ಜ್ಞಾನಕ್ಕೆ ಸಂಬಂಧಿಸಿದ ಸಕಲ ವಸ್ತುಗಳಿಗೂ ಅನ್ವಯಿಸುತ್ತದೆ. ಆದರೆ, ಈ ಅನುಭೂತಿಯ ಅಂತರಾಳದಲ್ಲಿರುವ, ಮತ್ತು ಆಧಾರಭೂತವಾಗಿರುವ, ಸಾಮಾನ್ಯ ಸ್ಪಂದವನ್ನು ಮರೆಯಕೂಡದು. ಆದರೆ, ಶಾಂತ ವೀಕ್ಷಣೆಯಿಂದ, ಹೂವಿನ ಅನುಭೂತಿಯು ಬೇರೆಯೇ ಆಗುತ್ತದೆ.

ಶಾಂತ ವೀಕ್ಷಣೆ (Silent observation) ಎಂದರೆ, ಮನವು ಕ್ರಿಯಾಶೀಲವಾಗುವ ಮುನ್ನವೇ ಆ ವಸ್ತುವನ್ನು ಹಠಾತ್ ನೋಡುವುದು ಎಂದು ಅರ್ಥ. ಅರ್ಥಾತ್ ಮನವನ್ನು ನಿರ್ಲಕ್ಷಿಸುವುದು. ಮನವನ್ನು ನಿರ್ಲಕ್ಷಿಸುವುದೇನೂ ಕ್ರಿಯೆಯಲ್ಲ. ಆದರೆ, ಅದು ಶಾಂತ ವೀಕ್ಷಣೆಯ ಫಲವಾಗಿದೆಯಷ್ಟೇ.

ಶಾಂತ ವೀಕ್ಷಣೆಯ ಸರಿಯಾದ ಅನುಭೂತಿಯೆಂದರೆ, ಸಮಷ್ಟಿಯ ಭಾವನೆಯೇ ಆಗಿದೆ. ಅಲ್ಲಿ ದ್ರಷ್ಟಾ ಮತ್ತು ದೃಶ್ಯಗಳಿಲ್ಲ. ವಿಷಯೀ ಮತ್ತು ವಿಷಯಗಳಲ್ಲಿ ಯಾವುದೇ ಭೇದವಿರದು. ವಿಷಯೀಯೇ ವಿಷಯವಾಗುತ್ತದೆ. ಉಕ್ತ ದೃಷ್ಟಾಂತವನ್ನೇ ಇನ್ನಷ್ಟು ವಿಶದೀಕರಿಸುವುದಾದರೆ, ಅಭಿಜ್ಞತೆಯ (cognition) ಕ್ರಮದಲ್ಲಿ, (ನಾವೀಗಾಗಲೇ ಆ ಕ್ರಮದಲ್ಲಿರುವ ಭೇದಗಳನ್ನು ಕುರಿತು ಚರ್ಚಿಸಿದ್ದೇವೆ.) ನಾವು 'ಶಾಂತ ವೀಕ್ಷಣೆ' ಎಂಬ ಪದವನ್ನು ಬಳಸಿದ್ದೇವೆ. ಇದುವೇ ಸಾಮಾನ್ಯ ಸ್ಪಂದದ ಅನುಭೂತಿಗೆ ಕರೆದೊಯ್ಯುತ್ತದೆ. ಎಲ್ಲಿ ಒಂದು ಸೂಕ್ಷ್ಮ ಬಿಂದುವನ್ನು ಅಂಕಿತಪಡಿಸಬೇಕಾಗಿಯೋ, ಅಲ್ಲಿ ಶಾಂತ ವೀಕ್ಷಣೆ ಇರಲೇಬೇಕು. ಇದಲ್ಲದೆ, ಇನ್ನೂ ವಿಭಿನ್ನ ಪ್ರಕಾರಗಳಿವೆ. ಹೂವಿನ ಅನುಭೂತಿಯಲ್ಲಿನ ಉಕ್ತ ಅಭಿಜ್ಞತೆಯಲ್ಲಿ ನಾವು ಕೇವಲ ತನ್ಮಾತ್ರೆಯ ಬೋಧೆಯನ್ನು ಅಥವಾ ಕೇವಲ ಸಮಷ್ಟಿಯ ಅಸ್ತಿತ್ವದ ಅನುಭೂತಿಯನ್ನು ಸಂವೇದಿಸಿದೆವು. ಈ ಅನುಭೂತಿಯು ಶಾಂತ ವೀಕ್ಷಣೆಯಿಂದ ಬಂದಿದೆಯೆಂಬುದೇನೋ

ಸರಿ. ಆದರೆ ಇದು ವ್ಯಕ್ತ ಮತ್ತು ಶಾಂತದ ಅರ್ಥಾತ್ ಸಮಷ್ಟಿಯ ಅಸ್ತಿತ್ವದ ಅನುಭೂತಿಯಾಗಿದೆ.

ಈ ಪ್ರಕಾರದ ಶಾಂತ ವೀಕ್ಷಣೆಯು, ಬಹು ಪ್ರಕಾರಗಳಿಲ್ಲದ, ಅಥವಾ ಅನೇಕತ್ವವಿಲ್ಲದ, ಏಕಾಂತಿಕ ಅಸ್ತಿತ್ವದ ಅನುಭೂತಿಯಾಗಿದೆ; ಸತ್ ಬ್ರಹ್ಮದ ಸರ್ವಾನುಸ್ಯೂತ ಅಸ್ತಿತ್ವದ ಅನುಭೂತಿಯಾಗಿದೆ.

ಆದ್ದರಿಂದ, ಈ ಪ್ರಕಾರದ ಸಮಷ್ಟಿಯ ಅನುಭೂತಿಯು ಶಕ್ತಿವರ್ಜಿತ ಸ್ಥಿರಾನುಭೂತಿಯಾಗಿದೆ. ಈ ವಿಷಯದಲ್ಲಿ, ದ್ರಷ್ಟಾನು, ತನ್ನನ್ನೇ ತಾನು, ವಿಶೇಷ ಸ್ಪಂದದ ಯಾವುದೇ ವಿಶೇಷತೆಗಳಿಲ್ಲದೆ ದರ್ಶಿಸುತ್ತಾನೆ. ಒಂದು ವೇಳೆ, ಅವನು ವೀಕ್ಷಿಸುತ್ತಿದ್ದರೆ, ಸರ್ವಾನುಸ್ಯೂತ ಅಸ್ತಿತ್ವವನ್ನು ಅಥವಾ ಸಾಮಾನ್ಯ ಸ್ಪಂದವನ್ನು ವೀಕ್ಷಿಸುತ್ತಾನೆ. ಈ ಪ್ರಸಂಗದಲ್ಲಿ ದ್ರಷ್ಟಾನು ತನ್ನನ್ನೇ ತಾನು ವೀಕ್ಷಿಸುತ್ತಾನೆ. ಆದ್ದರಿಂದ, ಅವನ ಆನಂದಾನುಭೂತಿಯು ವ್ಯಾಪಕ ಶಾಂತದ ಅನುಭೂತಿಯೇ ಆಗಿದೆ.

ಆದರೆ, ಈ ಪ್ರಕಾರದ ಶಾಂತ ವೀಕ್ಷಣೆಯು, ನಿಸ್ಸಂದೇಹವಾಗಿ ಸಮಷ್ಟಿಯ ಅನುಭೂತಿಯೇ ಆಗಿದೆ. ಇಲ್ಲಿ ಯಾವುದೇ ಸ್ಪಂದನದ ಗುಪ್ತ ಪ್ರವಾಹಗಳಿಲ್ಲ. ಅವುಗಳನ್ನೆಲ್ಲ ಅವನು ಮಾಯೆಯೆಂದು, ಮತ್ತು ಬರೀ ತೋರಿಕೆಯೆಂದು ಅಲ್ಲಗಳೆದಿರುತ್ತಾನೆ. ಆದರೆ, ಅದು ನಿಜವಾಗಿಯೂ ಗತಿಶೀಲವಾದ ಜ್ಞಾನದ ಅತಿಪ್ರಾಣಿಕವಾದ, ಅಂತರ್ಗತವಾದ, ಸಾಮಾನ್ಯ ಸ್ಪಂದವೇ ಆಗಿದೆ.

ಆದರೆ, ಇದಕ್ಕೆ ಪ್ರತಿಯಾಗಿ, ಸಾಮಾನ್ಯ ಸ್ಪಂದದ ಶಾಂತ ವೀಕ್ಷಣೆಯು, ಅಥವಾ ಸಾಮಾನ್ಯ ಸ್ಪಂದದ ವೀಕ್ಷಣೆಯ ಅನುಭೂತಿಯು, ಸತ್, ಚಿತ್, ಆನಂದಗಳು ಏಕೀಭವಿಸಿದ, ಸಮಷ್ಟಿಯ ಅನುಭೂತಿಯ ಸಂಭಾವ್ಯತೆಯನ್ನೊಳಗೊಂಡಿದೆ. ಆದ್ದರಿಂದ ಸಮಷ್ಟಿ ಅರ್ಥಾತ್ ಪೂರ್ಣ ಸತ್ಯವು, ಪೂರ್ವ ಏಕತೆಯಾಗಿದೆ ಅಥವಾ ಅನೇಕತ್ವದೊಂದಿಗಿನ ಏಕತ್ವವಾಗಿದೆ. ಆದರೂ ಅದು ಪೂರ್ಣವೇ ಆಗಿದೆ.

ಪೂರ್ಣವಾದ 'ಅದ್ವೈತ'ದ ಅನುಭೂತಿಯು ನಿಜವಾಗಿ ಶಾಂತ ವೀಕ್ಷಣೆಯ ಸಮಷ್ಟಿಯನ್ನು ಒಳಗೊಳ್ಳುತ್ತದೆ. ಈ ಅನುಭೂತಿಯು ನಿರ್ವ್ಯಕ್ತಿಕ ಅಭಿಜ್ಞತೆಯೂ ಅಲ್ಲ; ಸಾಪೇಕ್ಷಿಕವೂ ಅಲ್ಲ. ಆದ್ದರಿಂದ, ಅದು ನೆನಹಿನ ಜಂಜಡದ ಸೀಮೆಯಾಚೆಗಿದೆ. ಇದು ಪೂರ್ವಭಾವಿಯಾಗಿ ನಿಲ್ಲುತ್ತದೆ ಮತ್ತು ಮಾನಸಿಕ ಸಂಸ್ಕಾರಗಳನ್ನು ಮತ್ತು ಸೂಕ್ಷ್ಮ ಸಹಯೋಗದ ಸಾದೃಶ್ಯಗಳನ್ನು

ಕೊಂಡೊಯ್ಯುತ್ತದೆ. ಇದಕ್ಕೆ ಪ್ರತಿಯಾಗಿ, ಶಾಂತ ವೀಕ್ಷಣೆಯು ಈ ಎಲ್ಲ ವಸ್ತುವನ್ನು ಚಿಮ್ಮಿ ಬಿಡುತ್ತದೆ. ನೆನಹು ಸದಾ ಸಂಸ್ಕಾರಗಳನ್ನು ಹೊತ್ತು ತರುತ್ತದೆ. ಮತ್ತು ನೆನಹಿನಲ್ಲಿ ವಿಚಾರ ಸರಣಿಯು ಮುಂದರಿಯುತ್ತದೆ. ಏಕೆಂದರೆ, ಅದು 'ಅಶುದ್ಧ ವಿಕಲ್ಪ'ವೆಂಬ ಚಿಂತನ ಕ್ರಮದೊಂದಿಗೇ ಇದೆ. ಮತ್ತು ಪ್ರಪಂಚದ ರೂಪದಲ್ಲಿರುವ ವಿಕಲ್ಪಗಳನ್ನು ಬಹುಗುಣಿಸುವುದೇ ಅದರ ಸ್ವಭಾವವಾಗಿದೆ. ಸುಖ-ದುಃಖ, ಬೇಕು-ಬೇಡ ಮುಂತಾದವುಗಳಿಂದಾಗಿ, ಸಮಸ್ತ ಸಾಪೇಕ್ಷಿಕ ಭಾವನೆಗಳು ಉತ್ಕರ್ಷಿಸುತ್ತವೆ.

ಶಾಂತ ವೀಕ್ಷಣೆಯು ವಿರೋಧಾಭಾಸಗಳಿಲ್ಲದ ಅಭಿಜ್ಞತೆಯಾಗಿದೆ. ಸಾಧಾರಣ ಐಂದ್ರಿಯಿಕ ಗ್ರಹಣದಲ್ಲಿ, ವಿಷಯಗಳು, ಇಂದ್ರಿಯಗಳು ಮತ್ತು ಅವುಗಳ ಸಂಬಂಧಗಳು ತೀರ ಅನಿವಾರ್ಯ. ಆದ್ದರಿಂದ, ಸಾಧಾರಣ ಅಭಿಜ್ಞತೆಯಲ್ಲಿ ಸಾಮಾನ್ಯವಾಗಿ, ವಿಭಿನ್ನ ದೇಶ, ಕಾಲಗಳಲ್ಲಿಯ ಗ್ರಹಿಕೆಗಳಲ್ಲಿ ವಿರೋಧಾಭಾಸಗಳಿರುತ್ತವೆ. ಮತ್ತು ಸೀಮಿತ ಅಂಶಗಳೇ ಅವುಗಳಲ್ಲಿ ವಿರೋಧಾಭಾಸವನ್ನುಂಟು ಮಾಡುತ್ತವೆ. ಬರೀ ಸೀಮಿತ ದೇಶ, ಕಾಲಗೆಳಷ್ಟೇ ಏಕೆ? ಇದು ಇನ್ನೂ ಅನೇಕ ಪ್ರಕಾರದ ಆಯಾಮಗಳಿಂದ ಸಹ ಆಗಿರಬಹುದು.

ಬೇರೆ ಬೇರೆ ವೈಯಕ್ತಿಕ ದ್ರಷ್ಟಾರು ವಸ್ತುಗಳನ್ನು ಅವುಗಳಲ್ಲಿ ಸಮಾನ ಅಂಶವಿದ್ದರೂ ಸಹ, ಬೇರೆ ಬೇರೆ ರೀತಿಯಿಂದ ಭಾವಿಸುತ್ತಾರೆ. ಹೀಗಾಗಿ ಇನ್ನಷ್ಟು ಅಂತರವುಂಟಾಗುತ್ತದೆ. ನಿಜವಾಗಿ, ಬೇರೆ ಬೇರೆ ವ್ಯಕ್ತಿಗಳಲ್ಲಿ ಸಂಸ್ಕಾರಗಳು ಹೇಗೆ ಉಂಟಾಗುತ್ತವೆ? ಎಂಬುದನ್ನು ಉತ್ತರಿಸುವುದು, ತುಂಬಾ ಕಠಿಣವಾಗಿದೆ.

ಆದ್ದರಿಂದ, ವಸ್ತುಗಳ ಸಂಸ್ಕಾರಗಳು ವಸ್ತುಗಳಲ್ಲಿಯೇ ಇಲ್ಲವೆಂದೂ ಆದರೆ, ನಾವು ವ್ಯಕ್ತಿಗಳಲ್ಲಿಯೇ ಸಹಜಾತವಾಗಿ ನೆಲೆಗೊಂಡಿವೆಯೆಂದೂ ನಾವು ಹೇಳಬಲ್ಲೆವು. ಅಭಿಜ್ಞತೆಯಲ್ಲಿ ಮನದ ಪಾತ್ರವು ತುಂಬಾ ಪ್ರಧಾನವಾಗಿದೆ ಮತ್ತು ಅದು ವಿರೋಧಾಭಾಸಗಳನ್ನು ಸೃಜಿಸುತ್ತಿದೆ. ಹೀಗೋ ಹಾಗೋ ವಿಚಾರ ಮಾಡಿ, ಸಂದೇಹಗಳನ್ನೂ, ತಪ್ಪು ಗ್ರಹಿಕೆಗಳನ್ನೂ ಉಂಟು ಮಾಡುವುದೇ ಮನದ ಸ್ವಭಾವವಾಗಿದೆ. ಸೂಕ್ಷ್ಮ ದೃಷ್ಟಿಯಿಂದ ಹೇಳುವುದಾದರೆ, ಗಡಿಗೆಯ ಅಭಿಜ್ಞತೆಯು ಅತ್ಯಂತ ಸರಳ ಗ್ರಹಿಕೆಯಾಗಿದೆ. ಮತ್ತು ಅಲ್ಲಿ ಗ್ರಹಿಕೆಯ ವಿಷಯದಲ್ಲಾವ ಭಿನ್ನತೆಯೂ ಇಲ್ಲ. ಆದರೆ, ಯಾವ ಗ್ರಹಿಕೆಯು ಸಾಪೇಕ್ಷಿಕವಾಗಿದೆಯೋ ಮತ್ತು ಯಾವುದು ವಿರೋಧಾಭಾಸವಿರದ ಅಭಿಜ್ಞತೆಯನ್ನು ಹೊಂದಿರುವುದಿಲ್ಲವೋ, ಆ ಗ್ರಹಿಕೆಯಲ್ಲಿಯೇ ಎಲ್ಲ ಸಮಸ್ಯೆ ಎದುರಾಗುತ್ತದೆ. ಏಕೆಂದರೆ, ಅದು ಒಂದು ಅರ್ಥದಲ್ಲಿ ತೋರಿಕೆಯಾಗಿರುತ್ತದೆ.

ಮತ್ತೊಂದು ಅರ್ಥದಲ್ಲಿ ವಾಸ್ತವಿಕತೆಯಾಗಿದೆ. ಈ ಸಂಬಂಧವು ಯಾವಾಗಲೂ ಇದೆ. ಏಕೆಂದರೆ, ಅದು ಮನದ ಕ್ರಿಯೆಯಾಗಿದೆ.

ವಿಷಯಭೂತ ಮನದ ಸ್ವಭಾವವು ವಿರೋಧಾಭಾಸಗಳನ್ನೂ ಮತ್ತು ಸಂದೇಹಗಳನ್ನೂ ಎತ್ತುವುದೇ ಆಗಿದೆ. ಆದ್ದರಿಂದ, ಎಲ್ಲಿ ಸಂದೇಹ ಮತ್ತು ದ್ವಂದ್ವಗಳಿವೆಯೋ. ಅಲ್ಲಿ ಮನವು ವಿಶೇಷ ಸ್ಪಂದದ ಕೇಂದ್ರವಾಗಿರುತ್ತದೆಂದು ನಾವು ಹೇಳಬಹುದಾಗಿದೆ. ಆದರೂ ಸಹ, ನಾವು ಯಾವುದನ್ನು ವಿಶೇಷ ಸ್ಪಂದವೆಂದು ಕರೆಯುವೆವೋ, ಅದೂ ಸಹ, ದ್ವಂದ್ವಗಳನ್ನು ಹುಟ್ಟಿಸದೆಂಬುದನ್ನು ನಾವು ಮರೆಯುವಂತಿಲ್ಲ. ಅವು ಅನೇಕವುಂಟು; ಮತ್ತು ಅವೆಲ್ಲವೂ ವಿಕೀಭೂತವಾಗಿಯೂ ಉಂಟು. ದ್ವಂದ್ವಗಳು ಮನಸ್ಸಿನಿಂದಾಗಿಯೇ ಇವೆ.

ನಾವು ಈಗಾಗಲೇ ಚರ್ಚಿಸಿದಂತೆ, ಯಾವಾಗ ಶಾಂತ ವೀಕ್ಷಣೆಯ ಅವಸ್ಥೆಯನ್ನು ತಲುಪುವೆವೋ, ಆಗ ಸಂದೇಹ, ದ್ವಂದ್ವಗಳಿಗೆ ಯಾವ ಇಂಬೂ ಇರದು. ಇಲ್ಲಿ, ಈ ವೀಕ್ಷಣೆಯಲ್ಲಿ, ಯಾವುದೇ ಸಂಸ್ಕಾರಗಳ ಇಲ್ಲವೆ ಸಂದೇಹಗಳ ಪ್ರಶ್ನೆಯೇ ಇಲ್ಲ. ಏಕೆಂದರೆ, ನಾವು ಸೀಮಿತ ಕ್ರಿಯಾ ಕಲಾಪಗಳನ್ನೂ ಬದಿಗಿರಿಸಿರುತ್ತೇವೆ. ಹೀಗಾಗಿ, ಎಲ್ಲಿ ನಾವು ಅನೇಕತ್ವವನ್ನು ವೀಕ್ಷಿಸದೆ, ಅನೇಕದಲ್ಲಿ ವಿಕವನ್ನು ವೀಕ್ಷಿಸುವೆವೋ, ಆ ಸಮಷ್ಟಿ ಭಾವವನ್ನು ತರುವ ಅಭಿಜ್ಞತೆಯು ಅಲ್ಲಿ ಘಟಿಸುತ್ತದೆ. ಈ ಪ್ರಕಾರದ ಅಭಿಜ್ಞತೆಯು ಸೀಮಿತ ದೇಶ ಮತ್ತು ಕಾಲ ನಿಮಿತ್ತ ಆಗುವ ಅಭಿಜ್ಞತೆಗಿಂತ ಭಿನ್ನವಾಗಿದೆ.

ಈ ಪ್ರಕಾರದ ಅಭಿಜ್ಞತೆಯನ್ನು ದ್ವಂದ್ವಾತೀತ ದಿವ್ಯ ಗ್ರಹಣವೆಂದು ಕರೆಯಬಹುದು. ಇದು ಸಮಷ್ಟಿಯ ಅತ್ಯಂತ ಪೂರ್ಣ ದೃಷ್ಟಿಯಾಗಿದೆ. ಇದನ್ನು ಶಬ್ದದಲ್ಲಿ ಬಣ್ಣಿಸುವುದು ತುಂಬಾ ಕಷ್ಟಸಾಧ್ಯ. ಇದು ಪರಮ ಸೃಜನಾತ್ಮಕ ಮತ್ತು ಪರಮ ರಚನಾತ್ಮಕ ಶಕ್ತಿಯಾದ, ಗತಿಶೀಲ ಅನುಭೂತಿಯಾಗಿದೆ. ಇದು ಸರ್ವ ಸತ್ತೆಗಳ ಕೇಂದ್ರವಾಗಿದೆ. ಇದು ಭಾರಿ ಶಕ್ತಿಯಾಗಿದೆ.

ಈ ದಿವ್ಯಾನುಭೂತಿಯು, ನೆನಪು ಅಲ್ಲವೆಂಬುದು ಗಮನಿಸಬೇಕಾದ ಮಹತ್ವದ ಅಂಶವಾಗಿದೆ. ಆದರೆ, ಇದು ಪೂರ್ಣ ಪ್ರತ್ಯಭಿಜ್ಞತೆಯಾಗಿದೆ. ಆರ್ಥಾತ್ ಅದು ಸಾಪೇಕ್ಷಿಕ ಮಾನಸಿಕ ಭಾವನೆಯಲ್ಲ. ಸಾಧಾರಣ ನೆನಪಿನಲ್ಲಿ ವಿಷಯಗತ ಸಂಸ್ಕಾರವು ಮಸ್ತಿಷ್ಕ ತರಂಗಗಳಿಂದ ವಹಿಸಲ್ಪಡುತ್ತದೆ. ಆದ್ದರಿಂದ, ಕಾಲಿಕ ಮತ್ತು ದೈಶಿಕ ಅಂಶಗಳಿಂದಾಗಿ ಸಾಮ್ಯ-ವೈಷಮ್ಯಗಳಿರುತ್ತವೆ. ಉದಾಹರಣಾರ್ಥ ನಾವು ಓರ್ವ ವ್ಯಕ್ತಿಯನ್ನು ಒಂದೆಡೆ ನೋಡುತ್ತೇವೆಂದು

ತಿಳಿಯಿರಿ. ಮತ್ತು ಆಗ ಮನವು ಕೆಲವು ಸಂಸ್ಕಾರಗಳನ್ನು ಪಡೆಯುತ್ತದೆ. ಮುಂದೆ ಕೆಲವು ಕಾಲ ಗತಿಸಿದ ನಂತರ, ನಾವು ಅದೇ ಸದ್ಗೃಹಸ್ಥನನ್ನು ಕಂಡರೆ, ಅವನ ವ್ಯಕ್ತಿತ್ವದ ಸಧ್ಯದ ಭಾವನೆಯು ನಮ್ಮಲ್ಲಿ ಬರುತ್ತದೆ. ಆ ಬಳಿಕ, ನಾವು ನಮ್ಮ ಅನುಭವಗಳನ್ನು, ಘಟನೆಗಳನ್ನು ಬೇಕು-ಬೇಡಗಳನ್ನು ಕುರಿತು ನೆನಪಿಸುತ್ತೇವೆ. ಏಕೆಂದರೆ, ವ್ಯಕ್ತಿತ್ವವನ್ನು ನೋಡುವ ದೃಷ್ಟಿಯು ಪೂರ್ವ ಘಟನೆಗಳೊಂದಿಗೆ ಸಾಪೇಕ್ಷಿಕವಾಗಿದೆ. ಅವನ ಕೀರ್ತಿ ವಾರ್ತೆಗಳೊಂದಿಗೇನೇ, ಅವನ ವ್ಯಕ್ತಿತ್ವವು ಕಾಲ ಮತ್ತು ದೇಶಗಳ ಬೆಳಕಿನಲ್ಲಿ ಪೂರ್ಣವಾಗಿ ವಿಕಸಿಸಿರುವುದನ್ನು ನಾವು ವೀಕ್ಷಿಸಿಲ್ಲ. ಈ ಎಲ್ಲ ವಸ್ತುಗಳನ್ನು ವಿಕಾಸಗೊಳಿಸುವುದು, ಮನದ ಸ್ವಭಾವದಲ್ಲಿಯೇ ಇದೆ. ಇದು ವೀಕ್ಷಣೆಯೇನೂ ಅಲ್ಲ; ಆದರೆ ನೆನಪಿನ ಪರಿಣಾಮವಷ್ಟೇ.

ಆದ್ದರಿಂದ, ಚರಮ ಸತ್ಯವು ಸಾಪೇಕ್ಷಿಕ ಅಭಿಜ್ಞತೆಯೂ ಅಲ್ಲ; ಪ್ರತ್ಯಭಿಜ್ಞತೆಯೂ ಅಲ್ಲ; ಸ್ಮೃತಿಯೂ ಅಲ್ಲ. ಇವೆಲ್ಲವೂ ಮನದ ಹುಟ್ಟು ವಳಿಗಳಷ್ಟೇ. ಈ ಎಲ್ಲ ವಸ್ತುಗಳಲ್ಲಿ ಚರಮ ಸತ್ಯವು ಅರ್ಥಾತ್ ಸಾಮಾನ್ಯ ಸ್ಪಂದವು, ಅಂತರ್ಗತ ಪ್ರವಾಹವಾಗಿದೆ. ಆದರೂ ಸಹ, ಅದು ಇವೆಲ್ಲವುಗಳಿಗಿಂತ ವಿಶಿಷ್ಟವಾಗಿದೆ. ಸಂಕ್ಷೇಪಿಸಿ ಹೇಳುವುದಾದರೆ, ಶಾಂತ ವೀಕ್ಷಣೆಯು ಸಾರಸತ್ವದ ವೀಕ್ಷಣೆಯಾಗಿದೆಯೇ ಹೊರತು, ವ್ಯಕ್ತಿತ್ವದ ವೀಕ್ಷಣೆಯೇನಲ್ಲ. ಹೀಗೆ ಸ್ಮೃತಿ ಇಲ್ಲವೆ ಮಾನಸಿಕ ಕ್ರಿಯೆಗಳ ಪ್ರಶ್ನೆಯೇ ಇಲ್ಲಿ ಇಲ್ಲ.

ಇನ್ನು, ಸಾಮಾನ್ಯ ಸ್ಪಂದವು, ಕ್ಷಣದ ಪರಮ ಮುಹೂರ್ತದಲ್ಲಿನ. ದಿಶೆಯಿರದ ಬಾಹ್ಯಿಕ ಗತಿಪ್ರವಾಹವಾಗಿದೆಯೆಂದು ನಾವು ಹೇಳಬಹುದು. ಕ್ಷಣದ ಪರಮ ಮುಹೂರ್ತದ ಭಾವನೆಯು ತುಂಬಾ ಅಸ್ಪಷ್ಟ ಮತ್ತು ಸಂದಿಗ್ಧವಾಗಿದೆ. ಆದರೆ, ನಾವು ಚರ್ಚಿಸಿದ ಸಮಷ್ಟಿಯು ಪರಮ ಮುಹೂರ್ತದಲ್ಲಿ ಬಾಹ್ಯಿಕವಾಗಿ ಅಸ್ತಿತ್ವದಲ್ಲಿದೆ. ನಿಜ ಹೇಳುವುದಾದರೆ, ಈ ಪರಮ ಮುಹೂರ್ತದ ಏಕೀಭೂತ ಸಮಷ್ಟಿಯ ಸಮಸ್ತ ಅನೇಕತ್ವವು ಏಕದಲ್ಲಿಯೇ ಒಂದಾಗಿರುವುದನ್ನು ಒಳಗೊಳ್ಳುತ್ತದೆ. ಮತ್ತು ಅದು ಸಮಸ್ತ ಪರಿಣಾಮಗಳಾಚೆಗಿದೆ ಅಥವಾ ಮಾಯೆ, ಮಲ, ಮತ್ತು ಕರ್ಮಗಳ ಪರಿಣಾಮದಾಚೆಗಿದೆ.

ಪ್ರಬುದ್ಧನು, ನಿಜವಾಗಿಯೂ, ದೈವೀ ಶಕ್ತಿಯ ಪ್ರಪಾತದಿಂದ ಈ ಪರಮ ಮುಹೂರ್ತದ ಮಿಂಚು ನೋಟವನ್ನು ಕಾಣುತ್ತಾನೆ. ಯಾವಾಗ ಅವನು ತನ್ನ ಜ್ಞಾನದ ನಿಜವಾದ ಅವಸ್ಥೆಯನ್ನು ಇಲ್ಲಿ ನೆಲೆಗೊಳಿಸುವನೋ, ಆಗ ಎಲ್ಲ ಗೊಂದಲಗಳಿಂದ ಪಾರಾಗುತ್ತಾನೆ.

ಶುದ್ಧ ಜಗತ್ ಅರ್ಥಾತ್ ಸತ್ಯ ಆದರ್ಶ-ಭೂತ ವಿಶ್ವವು ಸೃಷ್ಟಿ ಬೀಜ ರೂಪದಲ್ಲಿ, ಕ್ಷಣದ ಪರಮ ಮುಹೂರ್ತದಲ್ಲಿ ನೆಲೆಸಿರುತ್ತದೆ. ಈ ಶುದ್ಧ ಜಗತ್ತು, ದಿವ್ಯ ಮಾತೆಯ ಇಚ್ಛಾನುಸಾರ, ನಮ್ಮೆದುರಿಗಿರುವ ಆನಂದ ಸೃಷ್ಟಿಯಾಗಿ 'ಸ್ಫುರಿತ ವಿಶ್ವ'ದ ಅಭಿವ್ಯಕ್ತ ರೂಪದಲ್ಲಿ ಪ್ರಕಟವಾಗುತ್ತದೆ. ಸುಖ-ದುಃಖ, ಒಳಿತು-ಕೇಡು, ಸಂಧಿ ವಿಗ್ರಹ, ಬೇಕು ಬೇಡಗಳು ಮತ್ತಿತರ ಸಂಬಂಧಿತ ಅನುಭವಗಳು ಸೀಮಿತವಾಗಿವೆ. ಸಮಷ್ಟಿಯ ನೈಜ ಸಂವೇದನೆಯಾವ, ಸಮಷ್ಟಿ ಸ್ವಾತ್ಮ ಸ್ವರೂಪ ಬೋಧೆಯು, ಉಕ್ತ ಚರ್ಚೆಯಲ್ಲಿಯ ಪರಮ ಮುಹೂರ್ತದಲ್ಲಿ ಉಪಸ್ಥಿತವಿರುತ್ತದೆ. ಮತ್ತು ಅದು ಭಿನ್ನತೆಗಳನ್ನು ಸೃಷ್ಟಿಸುವ ಮತ್ತು ಅವುಗಳನ್ನು ವಿಶ್ವದೊಂದಿಗೆ ಹೊಂದಿಸುವ, ಕಾಲದ ನಾಭಿ ಕೇಂದ್ರದಲ್ಲಿರುವ ಸಮಷ್ಟಿ ಮನದಲ್ಲಿ ಪ್ರತಿಫಲಿಸುತ್ತದೆ. ನಿಜವಾಗಿಯೂ, ಈ ಪ್ರತಿಫಲನವು ಒಳಬಾಗಿದ (concave) ಕನ್ನಡಿಯಲ್ಲಿಯ ಪತಿಫಲನದಂತಿದೆ. ಮತ್ತು ಅದು ಮನವ ಮಾಧ್ಯಮದಿಂದ ಹಾಗಾಗಿದೆ. ಆದ್ದರಿಂದ, ವಿಶೇಷ ಸ್ಪಂದವಾಗುವಾಗ, ಸಾಮಾನ್ಯ ಸ್ಪಂದವು, ತನ್ನ ಸ್ವಭಾವವನ್ನು ಪರಿವರ್ತಿಸುತ್ತದೆ ಮತ್ತು ವರ್ತುಲಾಕಾರದಲ್ಲಿ, ಸುರುಳಿಯಂತೆ ಚಲಿಸುತ್ತದೆ. ಇಂಥ ಅಜಸ್ರ ಗತಿಗಳಿಂದಾಗಿ, ಕಾಲ ದೇಶಗಳು ಹೊರಹೊಮ್ಮುತ್ತಿವೆ. ಹಾಗೆ ನೋಡಿದರೆ, ದೇಶ ಮತ್ತು ಕಾಲಗಳು ಇಂಥ ಗತಿಗಳ ಪರಿಣಾಮಗಳಲ್ಲದೆ ಬೇರೇನಲ್ಲ. ಅಂತಿಮವಾಗಿ, ಸಾಮಾನ್ಯ ಸ್ಪಂದವೇ ಪ್ರಮಾತಾ, ಪ್ರಮೇಯ ಮತ್ತು ಪ್ರಮಾಣವಾಗುತ್ತದೆ.

ಕ್ಷಣದ ಪರಮ ಮೂಹೂರ್ತವು ದ್ವಿಮುಖವಾಗಿದೆ: ಒಂದು ಸ್ಥಿತಿಶೀಲ; ಎರಡನೆಯದು ಗತಿಶೀಲ. ಕ್ಷಣದ, ಪರಮ ಮೂಹೂರ್ತವನ್ನು ಶಬ್ದಗಳಲ್ಲಿ ಬಣ್ಣಿಸುವುದು ತುಂಬಾ ಕಷ್ಟ. ಏಕೆಂದರೆ, ಅದು ಹಠಾತ್ತಾಗಿ ಮತ್ತು ಏಕಕಾಲಕ್ಕೆ ಸ್ಥಿತಿಶೀಲ ಮತ್ತು ಗತಿಶೀಲ ಎಂಬ ಉಭಯ ಅವಸ್ಥೆಗಳನ್ನು ಹೊಂದುವ ಶಕ್ತಿ ಪ್ರವಾಹವಾಗಿದೆ.

ಅನುಭೂತಿಯಲ್ಲಿಯ ವ್ಯಸ್ತತೆಯಿಂದಾಗಿ ನಮ್ಮ ಅಭಿವ್ಯಕ್ತಿಗಳು, ಕಾಲದಲ್ಲಿ ಸಂಬಂಧಿತವಾದ ಬೌದ್ಧಿಕ ಇಲ್ಲವೆ ಭಾವನಾತ್ಮಕ ಅಭಿವ್ಯಕ್ತಿಗಳಾಗಿರುತ್ತವೆ. ಅಲ್ಲಿ, ಕ್ಷಣದ ಪರಮ ಮೂಹೂರ್ತದ ಸ್ಪಷ್ಟ ಕಲ್ಪನೆಯನ್ನು ಹೊಂದುವುದು ತುಂಬಾ ಕಷ್ಟ. ಈ ಕ್ಷಣದ ಪರಮ ಮೂಹೂರ್ತವು, ತನ್ನೊಳಗೇ ತನ್ನ ಕಂಪನವನ್ನು ಪ್ರತಿಫಲಿಸುತ್ತದೆ. ಈ ವಿಶ್ವದ ಪ್ರತಿಫಲನಕ್ಕೆ ತಂತ್ರದಲ್ಲಿ 'ಮಹಾ

ಸೃಷ್ಟಿ' ಎನ್ನುತ್ತಾರೆ (ಶ್ರೀ ಅಭಿನವಗುಪ್ತಾಚಾರ್ಯರ 'ತಂತ್ರಲೋಕ' ನೋಡಿರಿ.)

ಭಾರತದ ಅನುಭಾವಿಗಳೆಲ್ಲರೂ ತಮ್ಮ ತಮ್ಮ ಸ್ವಂತದ ಅನುಭೂತಿಗಳಿಗನುಸರಿಸಿ ಮಹಾಸೃಷ್ಟಿಯನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಆದರೆ, ಅವರು ಸೂಚಿಸುವ ಆ ಜಗತ್ತು ದೇಶ ಮತ್ತು ಕಾಲಗಳ ಮಲಗಳಿಂದಾಚೆ ಇದೆಯೆಂಬ ಸಂಗತಿಯ ಬಗೆಗೆ ಮಾತ್ರ ಎಲ್ಲರಲ್ಲಿಯೂ ಒಮ್ಮತವಿದೆ. ಅದೇನೇ ಇರಲಿ; ಅನುಭಾವಿಗಳು ನೀಡಿದ ಸಾಕ್ಷ್ಯಾಧಾರಗಳು, ಶುದ್ಧ ಜಗತ್ತಿನ ಸ್ವಲ್ಪ ಇಣುಕು ನೋಟವನ್ನು ನೀಡುತ್ತವೆ. ಇದನ್ನೇ ಅವರು ವಿಭಿನ್ನ ಹೆಸರುಗಳಿಂದ ಕರೆಯುತ್ತಾರೆ.

ಈ ಶುದ್ಧ ಜಗತ್ತು ಸಾಮಾನ್ಯ ಸ್ಪಂದವಾಗಿದೆ. ಇದನ್ನೇ ನಾವು ಸಾಮಾನ್ಯ ವಿಶೇಷ ಎಂದೂ ಕರೆಯಬಹುದು. ಅದು ಕಾಲ ಮತ್ತು ದೇಶದ ಸೀಮೆಯ ಪ್ರಶ್ನೆಯೇ ಇಲ್ಲದ ತಾಣವಾಗಿದೆ. ಆದ್ದರಿಂದಲೇ ಅದಕ್ಕೆ ದಿವ್ಯ ಧಾಮ ಎಂದು ಹೆಸರು. ಅದು ಅನಂತವೂ ಆಗಿದೆ; ಅನಾವಿಷ್ಕೃತವೂ ಆಗಿದೆ. ಅಲ್ಲಿ ದಿವ್ಯ ನಿಯತಿಯು ಕ್ರಿಯಾನ್ವಿತವಾಗಿದೆ. ಪುನಃ ಈ ಜಗತ್ತಿನ ಚರ್ಚೆಯೂ ಸಹ ತುಂಬಾ ಕಠಿಣ. ಏಕೆಂದರೆ, ಇಂಥ ಪರಮ-ಮುಹೂರ್ತದ ಅನುಭೂತಿಯಾಗುವ ವರೆಗೆ, ತಾರ್ಕಿಕ ಮನ-ಬುದ್ಧಿಗಳು ಇಂಥ ಗತಿಶೀಲ ಕಲ್ಪನೆಯನ್ನು ಗ್ರಹಿಸಲಾರವು. ಇಂಥ ವಿಚಾರವನ್ನು ಪ್ರಕಟಿಸಬಲ್ಲ, ಒಂದರೆ ಕ್ಷಣದ ಮಿಂಚು ನೋಟವಾದರೂ ಸಾಕು. ಯಾರನ್ನಾದರೂ ಮನಗಾಣಿಸಬಲ್ಲದು.

ಕಾಲದ ಪ್ರವಾಹವು ನಿಜವಾಗಿಯೂ ಭಯಂಕರ ಶಕ್ತಿಯಾಗಿದೆ. ಅದುವೇ ಅನಂತ ಜ್ಞಾನವನ್ನು ವಿಭಿನ್ನ ದಿಶೆಗಳಲ್ಲಿ ಹರಿಯುವಂತೆ ಮಾಡುತ್ತದೆ. ಉದಾಹರಣೆಗೆ ನೋಡಿರಿ: ಇನ್ನೊಂದು ಬಿಂದುವನ್ನು ಸ್ಪರ್ಶಿಸದೆ ಒಂದು ಬಿಂದುವಿಗೆ ಗತಿಯಿದೆ. ಈ ಅನಂತ ಗತಿಯು, ಸುಸ್ಪಷ್ಟವಾಗಿ ಪ್ರಕ್ಷೇಪಿತ ಬಿಂದುವೇ ಆಗಿದ್ದು, ಕೇಂದ್ರ ಬಿಂದುವಿನ ಸುತ್ತಲೂ ಚಲಿಸುತ್ತಿದೆ. ಈ ಅನಂತ ಗತಿಯೇ ಸಮಷ್ಟಿ ಜ್ಞಾನವನ್ನು ಅನೇಕ ಜ್ಞಾನಗಳಲ್ಲಿ ರೂಪಿಸಿದೆ.

ಇಲ್ಲಿ ನಾವು ಚರ್ಚಿಸುತ್ತಿರುವ ವಿಷಯವೆಂದರೆ, ವಿಶೇಷ ಸ್ಪಂದಕ್ಕೆ ಸಂಬಂಧಿಸಿದ ಕಾಲದ ಸ್ವಭಾವವನ್ನು ಕುರಿತು ಇದೆ. ಕಾಲದ ಸೂಕ್ಷ್ಮತಮ ಭಾವನೆಯು ಕಾಲದ ಮಾನಸಿಕ ಗ್ರಹಿಕೆಯಾಚೆಗಿದೆ. ಮತ್ತು ಅದು ತನ್ನನ್ನು ಸಂಕುಚಿತ ಮನವನ್ನಾಗಿ ರೂಪಿಸಿಕೊಳ್ಳುತ್ತಿದೆಯೆಂದು ನಾವು ಹೇಳಬಹುದಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅದು ತನ್ನಲ್ಲಿಯೇ ತನ್ನನ್ನು ಪ್ರತ್ಯೇಕಿಸು

ತ್ತಿದೆ. ಇದನ್ನು ನಾವು ಸಮಷ್ಟಿ ಮನ ಎಂದು ಕರೆಯಬಲ್ಲೆವು. ಏಕೆಂದರೆ, ಅದು ಎಲ್ಲ ಶಕ್ತಿಗಳನ್ನೂ ಹೊಂದಿದೆ. ಅವು ಅನೇಕವಾಗಿದ್ದರೂ ಸಹ, ಎಲ್ಲವೂ ಕೇಂದ್ರ ಪ್ರಜ್ಞೆಯಿಂದ ಕೂಡಿವೆ. ಮತ್ತು ಕೇಂದ್ರದಲ್ಲಿ ವಿಶೇಷ ಸ್ಪಂದವಿದೆ. ಇದನ್ನು ಅನುಭಾವಿಗಳು ಸೂರ್ಯ ಎಂದು ಕರೆದಿದ್ದಾರೆ. ಅವನಿಗೆ ವಿಭಿನ್ನ ರಶ್ಮಿಗಳಿವೆ. ಇನ್ನು, ಅನುಭಾವಿಯು ತನ್ನ ಅಗತ್ಯಗಳಿಗೆ ತಕ್ಕಂತೆ ನಡೆಸುತ್ತಾನೆ. ಈ ಸಮಷ್ಟಿ ಮನವೂ, ಅರ್ಥಾತ್ ಮಾನಸಿಕ ಗ್ರಹಿಕೆಯಾಚೆಗಿನ ಕಾಲದ ಗ್ರಹಿಕೆಯು, ವಿಶೇಷ ಸ್ಪಂದದ ಪ್ರವಾಹವಾಗಿದೆ. ಈ ವಿಶೇಷ ಸ್ಪಂದವು, ಒಂದಾದ ಮೇಲೊಂದರಂತೆ ಪುಟಿಯುವ, ಕಂಪನಗಳನ್ನು ಹೊಂದಿದೆ. ಆದರೆ, ಈ ಪುಟಿಯುವ ಸ್ವಭಾವವು ಪ್ರಗತಿಪರವಿಲ್ಲದಿರಬಹುದು. ಈ ಕುರಿತು ತಾಂತ್ರಿಕ ಯೋಗಿಗಳು ನೀಡಿದ ವಿಶೇಷ ಬಣ್ಣನೆ ಮತ್ತು ಸಾಕ್ಷ್ಯಾಧಾರಗಳಿವೆ. ಅವುಗಳನ್ನಿಲ್ಲಿ ಚರ್ಚಿಸುವ ಅವಶ್ಯಕತೆ ಏನಿಲ್ಲ.

ಎಂದೆಂದಿಗೂ ಅಸ್ತಿತ್ವದಲ್ಲಿರುವ ಮತ್ತು ಎಲ್ಲವನ್ನೂ ಜೋಡಿಸುವ ಸಮಸ್ತ ಮನಗಳ ಕೇಂದ್ರವಾಗಿ, ಕಾಲದೊಂದಿಗೆ ಸಂಬಂಧಿಸಿದ ಸಮಷ್ಟಿ ಮನದ ಮಹತ್ವದ ವಿಷಯದತ್ತ ನಾವು ನಿಮ್ಮ ಲಕ್ಷ್ಯವನ್ನು ಸೆಳೆಯಬಯಸುತ್ತೇವೆ. ಕೇಂದ್ರ ಪ್ರಜ್ಞೆಯ ಮರೆವಿನಿಂದಾಗಿ, ಕಾಲವು ವಿಭಿನ್ನ ಮನಗಳಲ್ಲಿ ಕ್ರಿಯಾಶೀಲವಾಗುತ್ತದೆ. ಆದರೂ ಸಹ, ಅಲ್ಲಿ ಸಮಷ್ಟಿ ಮನದ ಅಂತರ್ಗತ ಪ್ರವಾಹವು ಇದ್ದೇ ಇದೆಯೆಂಬುದನ್ನು ನಾವು ಮರೆಯಕೂಡದು. ನಾವು ಸಾಮಾನ್ಯ ಸ್ಪಂದವೆಂದು ಕರೆಯುವ, ಮತ್ತು ಕ್ಷಣದ ಪರಮ ಮುಹೂರ್ತದಲ್ಲಿಯ ದರ್ಶನಾನುಭೂತಿಯು, ಸಾಮಾನ್ಯ-ವಿಶೇಷ ಸ್ಪಂದವನ್ನು ಹೊಂದಿದೆ.

ಸಮಷ್ಟಿಯೊಂದಿಗೆ ಏಕತ್ವವನ್ನು ಪರಿಭಾವಿಸಲು, ಸಮಷ್ಟಿಯನ್ನು ವಿಶದೀಕರಿಸಲು, ಈ ಸಮಷ್ಟಿಯು ಅಹಮ್-ಇದಮ್ ಆಗಿದೆಯೆಂದು ನಾವು ಹೇಳಬಹುದಾಗಿದೆ. ಅಂದರೆ, ಏಕವು ತನ್ನ ವೈವಿಧ್ಯತೆಯೊಂದಿಗೆ ಪೂರ್ಣವಾಗಿ ತನ್ನಲ್ಲಿಯೇ ಅಭಿವ್ಯಕ್ತವಾಗಿದೆ. ನಾವು ಸಾಮಾನ್ಯ ಸ್ಪಂದವೆಂದು ಕರೆಯುವ ಆ ಒಂದು, ಅಲ್ಲಿ ವಿಶ್ವವಿದ್ದರೂ ಸಹ, ಒಂದರ ಪ್ರಜ್ಞೆಯೇ ಆಗಿದೆ. ಆದರೆ, ಅದು, ತತ್ ಇಲ್ಲವೆ ಇದಂ ಆಗಿರದೆ ತಾನೇ ತಾನಾಗಿದೆ. ಜ್ಞಾನಾನುಭೂತಿಯು ಈ ಅವಸ್ಥೆಯು ತನ್ನಲ್ಲೀಯೇ ತಾನು ಪರಮ-ಮುಹೂರ್ತವಾಗಿದೆ, ಎಂದು ನಾವು ಹೇಳಬಹುದು. ಆದರೆ, ನಾವು ಇಲ್ಲಿಯ ವರೆಗೆ, ಪರಮ ಮುಹೂರ್ತದಲ್ಲಿರುವ ಯಾವ ಶುದ್ಧ ಜಗತ್ತನ್ನು ಕುರಿತು ಚಚಿಕೆಸಿದೆವೋ, ಅದು ಮತ್ತೆ ಕಾಲದಲ್ಲಿಯ ವ್ಯಕ್ತ ಜಗತ್ತಿನ ಹಿನ್ನೆಲೆಯಲ್ಲಿದ್ದು, 'ಇದಮಹಮಾತ್ಮಕ ಜಗತ್' ಎಂದು

ಕರೆಯಲ್ಪಡುತ್ತದೆ.

ಶಾಂತ ವೀಕ್ಷಣೆಯಿಂದ ನಾವು ನಿತ್ಯ-ಗತಿಯ ಪ್ರವಾಹವನ್ನು ಪಡೆಯ ಬಲ್ಲೆವು. ಅದು ಸರ್ವ ದಿಶೆಗಳಲ್ಲಿ ಚಲಿಸುತ್ತದೆ. ಆದರೆ, ಯಾವಾಗ ಸಾಧಕನು ತನ್ನ ಲೌಕಿಕ ಪ್ರಜ್ಞೆಯಿಂದ ನಿತ್ಯ ಪ್ರವಹಿಸುವ ಈ ಪ್ರವಾಹವನ್ನು ಒಮ್ಮೆಲೇ ಪಡೆಯುವನೋ, ಆಗ ಅವನು ಊರ್ಧ್ವಮುಖೀ ಪ್ರವಾಹವನ್ನು ಅನುಭವಿಸುತ್ತಾನೆ. ಏಕೆಂದರೆ, ಹಠಾತ್ ಜಾಗ್ರತಿಯು, ಗತಿಗೆ ದಾರಿ ಮಾಡಿ ಕೊಡುತ್ತದೆ.

ನಿಜ ಹೇಳುವುದಾದರೆ, ದಿಕ್-ದರ್ಶಿತ ಗತಿ ಇಲ್ಲವೆ ಸ್ಪಂದನವು, ಕೇಂದ್ರೀಯ ಬಿಂದುವನ್ನು ತಲುಪುವ ವರೆಗೆ, ಅರ್ಥಾತ್ ಪಾರ್ಥಿವ ಪ್ರಜ್ಞೆಯು ಪರಮ ಪ್ರಜ್ಞೆಯಾಗಿ ರೂಪಾಂತರಗೊಳ್ಳುವ ವರೆಗೆ ಮುಂದುವರಿಯುತ್ತದೆ. ಗಣಿತದ ಸಂಕೇತದ ಮೂಲಕ ವಿಶದೀಕರಿಸುವುದಾದರೆ, ಈ ಊರ್ಧ್ವಗಾಮೀ ಗತಿಯು, ಸರಳ ರೇಖಾತ್ಮಕವಾಗಿದೆ. ಆ ಬಳಿಕ, ಒಂದು ವೇಳೆ, ಸಾಧಕನು ದಿವ್ಯ ಶಕ್ತಿಯಿಂದ, ಮಹಾ ಸೃಷ್ಟಿಯಿಂದ, ಅಖಿಂಡ ಮಹಾಯೋಗಿಯಿಂದ, ಹರಿ ಸಲ್ಪಟ್ಟರೆ, ಅವನು ಸಾಧಕನನ್ನು ಒಂದರೆ ಕ್ಷಣ ಹಠಾತ್ತಾಗಿ ಅಪ್ಪಿಕೊಂಡರೆ, (ಸಾಧಕನ ಸ್ವಭಾವದಿಂದ ಅವನು ಪಾರ್ಥಿವ ಪ್ರಜ್ಞೆಗಳಿಯುತ್ತಾನೆ) ಆಗ ಈ ಭಾಗ್ಯವಂತ ಸಾಧಕನು ಅವತರಣದ ಹಾದಿ ಹೊಂದುತ್ತಾನೆ. ಇದು ಸ್ಪಂದದ ಅತಿ ಮಹತ್ವದ ಅಂಶವಾಗಿದೆ. ಇದು ತತ್ಕಾಲಕ್ಕೆ ಅಸ್ಪಂದವೂ ಆಗಿದೆ. ಇದನ್ನೇ ಅಖಿಂಡ ಮಹಾಯೋಗಿಗಳು ಮಹಾಶಕ್ತಿಯೆಂದು ಕರೆಯುತ್ತಾರೆ.

ಹೀಗೆ, ಸಮಷ್ಟಿಯ ಕೇಂದ್ರವನ್ನು ತಲುಪುವ ಪ್ರಶ್ನೆಯಿಲ್ಲ. ಆದರೆ, ಸಮಷ್ಟಿ ಕೇಂದ್ರವೇ ಪೂರ್ಣ ರೂಪದಲ್ಲಿ ಪಾರ್ಥಿವ ಪ್ರಜ್ಞೆಯಲ್ಲಿ ಅವತರಿಸುತ್ತದೆ. ಏಕೆಂದರೆ, ಅಖಿಂಡ ಮಹಾಯೋಗಿಗಳ ಮಾರ್ಗದಲ್ಲಿ, ಸಾಧಕನು ಸೀಮಿತ ಜ್ಞಾನದ ವ್ಯಷ್ಟಿಗತ ಆತ್ಮನಲ್ಲ. ಆದರೆ, ಅವನು 'ಮನಸಿ ಜೀವ ಸ್ವರೂಪ'ನಾದ ಸಮಷ್ಟಿ ಆತ್ಮನಾಗಿದ್ದಾನೆ. ಇದೊಂದು ವಿರಳ ಸಾಧನ ಪದ್ಧತಿ. ಆದರೆ, ಸ್ಪಂದನಗಳ ಸ್ವರೂಪದಲ್ಲಿ ಅದರ ಪಾತ್ರವು ತುಂಬಾ ಮಹತ್ವ ಪೂರ್ಣವಾಗಿದೆ.

ಅದು ತತ್ಕಾಲಕ್ಕೆ ಸ್ಪಂದವೂ ಆಗಿದೆ, ಅಸ್ಪಂದವೂ ಆಗಿದೆ. ಅಷ್ಟೇಕೆ? ಅವುಗಳಾಚೆಗೂ ಇದೆ. ಇಲ್ಲಿ ಅಖಿಂಡ ಮಹಾಯೋಗ ಇಲ್ಲವೆ ಪೂರ್ಣ ಸ್ಪಂದನದ ಪರಮ–ಸಾಧಾರಣ ಗ್ರಹಿಕೆಯನ್ನು ಕುರಿತು ಚರ್ಚಿಸಬೇಕಾಗಿಲ್ಲ. ಅದು ಸ್ಪಂದನದ ಸರ್ವವನ್ನೂ ಆವರಿಸುತ್ತದೆ. ಮತ್ತು ಕಾಲದ ನಿಯತಿಗೆ ಹಠಾತ್

ಕಂಪನ ನೀಡುವ ಲಕ್ಷಣವನ್ನು ಅದು ಹೊಂದಿದೆ. ಮತ್ತು ಕ್ಷಣದ ಪರಮ ಮುಹೂರ್ತದೊಂದಿಗೆ ಪ್ರಾರಂಭಿಸುತ್ತದೆ. ಮತ್ತು ಅದರೊಂದಿಗೆ ವಿಸ್ತರಿಸುತ್ತದೆ. ಹಾಗೂ ಕಾಲ ಪ್ರಜ್ಞೆಯ ಕಂಪನಗಳ ಸ್ವಭಾವವನ್ನು ಗ್ರಹಿಸುವ, ಅಳವಡಿಸಿಕೊಳ್ಳುವ, ಲಯಿಸಿಕೊಳ್ಳುವ ಲಕ್ಷಣವನ್ನು ಹೊಂದಿದೆ.

ನಾವು ಇದುವರೆಗೆ ಸಾಮಾನ್ಯ ಸ್ಪಂದದ ಹಲವು ಪಾರ್ಶ್ವಗಳನ್ನು ಕುರಿತು ಚರ್ಚಿಸಿದ್ದೇವೆ. ನಿಜವಾಗಿ, ಸಾಮಾನ್ಯ ಸ್ಪಂದವು, ಏಕೀಭೂತ ಪೂರ್ಣವಲ್ಲದೆ ಬೇರೇನೂ ಅಲ್ಲದ ಪ್ರತಿಫಲಿತ ಬಿಂದುವನ್ನು ಹೊಂದಿದೆ. ಸಾಮಾನ್ಯ ಸ್ಪಂದದಲ್ಲಿ ಬಹು ಆಯಾಮಗಳಿವೆ. ಅನಂತ ಶಕ್ತಿಯಿದೆ. ಅನಂತ ಜ್ಞಾನವಿದೆ. ಅನಂತ ವಿಶ್ವಗಳಿವೆ. ಇವುಗಳೆಲ್ಲವೂ ಆ ಒಂದು ಪರಿಪೂರ್ಣದಲ್ಲಿವೆ. ಕಂಪನಗಳಿಗೆ ಯಾವುದೇ ನಿರ್ದಿಷ್ಟ ದಿಶೆ ಇಲ್ಲದಾಗ, ಆದರೆ ದಿಶೆಗಳಿರುವಾಗ, ಸಾಮಾನ್ಯ ಸ್ಪಂದದ ಒಂದು ಮುಖವಿರುವ ಸಂಭವವಿದೆ. ಏಕೆಂದರೆ, ಈ ಸೂಚಿತ ದಿಶೆಗಳು ಸಮಷ್ಟಿ ಇಂಗಿತದ ನಿಯಂತ್ರಣದಲ್ಲಿರುತ್ತವೆ. ಅಥವಾ ಅದು ಚರಮ ತಥ್ಯದ ಅನಂತ ಸ್ವಾತಂತ್ರ್ಯವೇ ಆಗಿದೆ. ಇನ್ನು, ಸಾಮಾನ್ಯ ಸ್ಪಂದವು ವಿಶೇಷ ಸ್ಪಂದದ ಅಡಿಯಲ್ಲಿಯ ಪ್ರವಾಹವೇ ಆಗಿದೆ. ಇದು ಅಜಸ್ರ ವಿಶೇಷತಯ ಬಿಂದುಗಳನ್ನೊಳಗೊಂಡ, ಸರಳ ರೇಖೆಯಂತಿದೆ. ಇಲ್ಲಿ ಪ್ರತಿಯೊಂದು ಬಿಂದುವು, ಹಲವು ವಿಶೇಷತೆಗಳನ್ನು, ಸಂಭಾವ್ಯ ಶಕ್ತಿಯನ್ನು ಮತ್ತು ಜ್ಞಾನವನ್ನು ಹೊಂದಿದೆ. ಅದು ಏಕಕಾಲಕ್ಕೆ ಪ್ರತಿಯೊಂದರಲ್ಲಿ ಪೂರ್ಣ ಪ್ರಜ್ಞೆಯನ್ನೂ ಹೊಂದಿದೆ. ಪ್ರತ್ಯೇಕ ವಿಶೇಷ ಪ್ರಜ್ಞೆಯನ್ನೂ ಹೊಂದಿದೆ. ಈಗ ಸಾಂಕೇತಿಕವಾಗಿ ಹೇಳುವುದಾದರೆ, ಸರ್ವವ್ಯಾಪ್ತ ಕೇಂದ್ರವು, ಸಮತ್ವದ ಗತಿಯಲ್ಲಿ ವಿಸ್ತರಿಸಿ, ಸ್ವಾಭಾವಿಕವಾಗಿ ವರ್ತುಲವನ್ನು ನಿರ್ಮಿಸುತ್ತದೆ. ಇದು ಸರ್ವಾತ್ಮಕವಾದ ಸಾಮಾನ್ಯ ಸ್ಪಂದದಂತಿದೆ. ಇಲ್ಲಿ ತಿಳಿದುಕೊಳ್ಳಬೇಕಾದ ಅತ್ಯಂತ ಮಹತ್ವದ ಸಂಗತಿಯೆಂದರೆ, ಪೂರ್ಣ ವರ್ತುಲದ ಭಾವನೆ ಅಥವಾ ಸಮಷ್ಟಿ–ಭಾವನೆಯೆಂದರೆ, ಏಕೀಭೂತವಾದ ಸಮಷ್ಟಿ–ಪ್ರಜ್ಞೆಯೇ ಆಗಿದೆ.

ಇಲ್ಲಿ ನಾವು ವರ್ತುಲ ಎಂದು ಯಾವುದನ್ನು ಕರೆಯುವೆವೋ, ಅದರ ಪೂರ್ಣ ಪರೀಘದ ಮೇಲೆ, ಅನೇಕ ಗ್ರಹೀತ ಬಿಂದುಗಳುಂಟು. ಇವು ವರ್ತುಲದೊಂದಿಗೇ ಇವೆ. ಆದರೆ, ಒಂದು ವೇಳೆ, ಬಿಂದುವು ವರ್ತುಲದಿಂದ ಬೇರೆಯಾಗಿದ್ದರೆ, ಅದು ವರ್ತುಲದಿಂದ ವಿಶಿಷ್ಟವಾಗಿಯೇ ಇರುತ್ತಿತ್ತು. ಮತ್ತು ಪ್ರತಿಯೊಂದು ಬಿಂದುವು ವೃತ್ತಾಕಾರವಾಗಿ ಮತ್ತು ಸುರುಳಿ ಸುರುಳಿಯಾಗಿ ಚಲಿಸುತ್ತದೆ. ವೃತ್ತಾಕಾರದ ಗತಿಯ ಸ್ವಭಾವವು. ಅದು ಯಾವ

ಬಿಂದುವಿನಿಂದ ಬಂದಿದೆಯೋ ಅದರ ಪ್ರಜ್ಞೆಯಾಗಿದೆ. ಇನ್ನು ಅದು ಅದೇ ಬಿಂದುವನ್ನು ತಲುಪುವುದಾದರೂ, ಸುರುಳಿಯ ಗತಿಯಿಂದ ತಲುಪುತ್ತದೆ. ಆಗ ಅಗಲಿದ ಬಿಂದುವಿನ ಪ್ರಜ್ಞೆ ಇರುವುದಿಲ್ಲ. ಆದಾಗ್ಯೂ, ಸಮಷ್ಟಿ ಪ್ರಜ್ಞೆಯು ವೃತ್ತಾಕಾರದ ಗತಿಯನ್ನು ಸೀಮಿತಗೊಳಿಸುತ್ತದೆ. ಆದರೆ, ಅದಕ್ಕಿನ್ನೂ ಅದರ ಸ್ವಂತ ಜ್ಞಾನ ಬೋಧೆಯಿರುತ್ತದೆ.

ನಾವೀಗ ವೃತ್ತದ ಪರಿಧಿಯಲ್ಲಿರುವ, ಪ್ರತ್ಯೇಕ ಬಿಂದುಗಳನ್ನು ಕುರಿತು ಚರ್ಚಿಸಬೇಕಾಗಿದೆ. ಉದಾಹರಣೆಗೆ ನೋಡಿರಿ, ಅ, ಬ, ಕ, ಡ ಮತ್ತು ಈ ಇವು ಉಕ್ತ ಬಿಂದುಗಳೆಂದು ತಿಳಿಯಿರಿ. ನಾವು ಅವುಗಳಲ್ಲಿ ಎರಡು ಪ್ರಕಾರದ ಪ್ರಜ್ಞೆಯನ್ನು ಕಾಣುವೆವು. ಒಂದು ಪ್ರಕಾರವು ಕೇಂದ್ರಾಭಿಮುಖೀ ಆಕರ್ಷಣೆಯನ್ನು ಹೊಂದಿದೆ. ಇನ್ನೊಂದು ಪ್ರಕಾರವು, ತನ್ನ ಸ್ವಂತ ಗುರುತನ್ನು ಅರಸುವ ಸ್ವಭಾವ ಹೊಂದಿದ್ದು, ಅದು ತನ್ನ ನಿಜವಾದ ಅಸ್ತಿತ್ವವನ್ನು ಮರೆತಿದೆ. ಈ ವಿಷಯವನ್ನು ದಾರ್ಶನಿಕವಾಗಿ ವಿಶದೀಕರಿಸುವುದಾದರೆ, ನಾವು ಈ ಅರಸುವಿಕೆಯ ಸೃಷ್ಟ ದೃಷ್ಟಿಯನ್ನು ಜೀವ ಅವಸ್ಥೆ ಎನ್ನಬಹುದು. ಏಕೆಂದರೆ, ಅದು ಕಾಲ ಮತ್ತು ಕರ್ಮ ಚಕ್ರದ ಅಡಿಯಲ್ಲಿ ಬರುತ್ತದೆ. ಮೇಲಾಗಿ ಅದು ವಿಶ್ವದ ನಿಯತಿ ಮತ್ತು ಕ್ರಮದಿಂದ ನಿಯಂತ್ರಿಸಲ್ಪಡುತ್ತದೆ. ಮತ್ತು ಈ ನಿಯತಿಗಳಿಂದ, ಅದು ಜನನ ಮತ್ತು ಮರಣಗಳನ್ನು ಹಾಗೆಯೇ ಪಡೆಯುತ್ತ ಸಾಗುತ್ತದೆ.

ಅತ್ಯಂತ ಮಹತ್ವವುಳ್ಳ ಇನ್ನೊಂದು ಪ್ರಕಾರವೆಂದರೆ, ಕೇಂದ್ರಾಭಿಮುಖಿಯಾಗುವುದು; ಸಮ್ಮುಖ್ಯಾವಸ್ಥೆ. ಇದನ್ನು 'ಶುದ್ಧ ವಿದ್ಯಾ ಉದಯ'ದ ಅವಸ್ಥೆ ಎನ್ನುತ್ತಾರೆ. ಇದನ್ನು 'ಪ್ರಬುದ್ಧ ಕಲ್ಪಾವಸ್ಥೆ' ಎಂದೂ ಕರೆಯುತ್ತಾರೆ. ಏಕೆಂದರೆ, ಅದು ಸುರುಳಿಯಂತೆ ಚಲಿಸುವ ಅಥವಾ ತನ್ನ ಅಹಂ–ಬೋಧೆಯನ್ನು ಮತ್ತು ತಾನೇ ಸತ್ಯವೆಂದು ಬಗೆಯುವ, ಕರ್ತೃವೇ ಸರ್ವವೆಂದು ಬಗೆಯುವ ಗುಣ ಹೊಂದಿದೆ.

ಮೇಲೆ ಹೇಳಿದ ಹಠಾತ್ ಜಾಗೃತಿಯಿಂದ ಪ್ರಜ್ಞೆಯು ಸಾಮಾನ್ಯ ಸ್ಪಂದದ ಸಮಷ್ಟಿಯ ಝಳಕನ್ನು ತಲುಪುತ್ತದೆ ಅರ್ಥಾತ್ ಹೊಂದುತ್ತದೆ. ಆದರೆ,ಕ್ಲಿಷ್ಟತೆಗಳಾಗಲಿ ಇಲ್ಲವೆ ಸಂದೇಹಗಳಾಗಲಿ ಉಳಿದೇ ಇರುತ್ತವೆ. ಅದು ಎಲ್ಲಿ ತನ್ನ ಮೂಲ ಗುರುತನ್ನು ಸಂವೇದಿಸಬಹುದೋ, ಅಲ್ಲಿಯ ಒಂದು ಸಮಷ್ಟಿ ಪ್ರಜ್ಞೆಯಲ್ಲಿ ಜೀವನವನ್ನು ಪಡೆಯುತ್ತದೆ. ಆದರೆ, ಆ ಝಳಕಿನ ಭಾವವು ಸಂತತವಾಗಿ ಅದರೊಂದಿಗಿದ್ದರೂ ಸಹ, ಆ ಸಂವೇದನೆಯು ಸ್ಥಾಯಿ

ಯಾಗಿರುವುದಿಲ್ಲ. ಈ ತಥ್ಯವು, ಆ ಪ್ರಜ್ಞೆಯ ಆಣವಿಕ ವ್ಯಕ್ತಿ ಮತ್ತೆಯಲ್ಲಿ, ಅದರ ದೃಷ್ಟಿ ಕೋನದಲ್ಲಿ ಇಲ್ಲವೆ ವಿಚಾರ ಪದ್ಧತಿಯಲ್ಲಿ ಅದೇಕೆ, ಎಲ್ಲದರಲ್ಲಿಯೂ ಪರಿವರ್ತನೆಯನ್ನು ಉಂಟು ಮಾಡಿ, ಒಂದು ಹೊಸ ಜಾಗೃತ ವ್ಯಕ್ತಿತ್ವವನ್ನು ರೂಪಿಸುತ್ತದೆ. ಆದರೆ ಈ ಹೊಸ ದೃಷ್ಟಿಕೋನವು ಶಾಶ್ವತ ವೇನಲ್ಲ. ಆಗಲೂ ಸಹ, ಎರಡು ಒಲವುಗಳುಂಟು: ಕೆಲವೊಮ್ಮೆ ಅಂತರ್ಮುಖಿ ಮತ್ತೆ ಕೆಲವೊಮ್ಮೆ ಬಹಿರ್ಮುಖಿ. ಇನ್ನು ಅಂತರ್ಮುಖೀ ಗತಿಯು, ಅರ್ಥಾತ್ ತಾನೇ ತಾನಾಗುವ, ಇನ್ನೊಂದು ಹೊಸ ಗುಣವೂ ಅಳವಡುತ್ತದೆ.

ಈ ಎರಡೂ ಪ್ರಕಾರದ ಕ್ರಿಯೆಗಳು ಪರಸ್ಪರ ಸಂಬಂಧ ಹೊಂದಿವೆ. ಪ್ರಬುದ್ಧ ಕಲ್ಪನು ಆಂತರಿಕವಾಗಿ ಭಾರಸಾಮ್ಯವನ್ನು ಕಾಪಾಡಿಕೊಳ್ಳುವನಾದರೂ, ಈ ಭಾರಸಾಮ್ಯವನ್ನು ಶಾಶ್ವತವಾಗಿಸಿಕೊಳ್ಳಲು ಅವನು ಪ್ರಯತ್ನಿಸಬೇಕೆಂಬುದು ಅತ್ಯಂತ ಮಹತ್ವದ್ದಾಗಿದೆ.

ಸಾಧಾರಣ ಜೀವನದಲ್ಲಿ ಮೇಲೆ ಬಣ್ಣಿಸಿದ ಸುಪ್ತ ವ್ಯಕ್ತಿಯೂ ಸಹ, ಆಂತರಿಕ ಝಳಕನ್ನು ಪಡೆಯಬಹುದಾದರೂ, ಅವನು ವಿರುದ್ಧ ದಿಶೆಯಲ್ಲಿ ನಿರ್ಣಯಿಸುತ್ತಾನೆ. ಅದೇ ಪ್ರಬದ್ಧ ಕಲ್ಪನು, ಇಂಥ ಅನುಭೂತಿಯ ಸಂದರ್ಭದಲ್ಲಿ ಸರಿಯಾದ ನಿರ್ಣಯಕ್ಕೆ ಬರುತ್ತಾನೆ. ಇಲ್ಲಿ ಪ್ರಬುದ್ಧ ಕಲ್ಪನು ಸ್ವಲ್ಪ ಅಧಿಕ ತಾಳ್ಮೆ ವಹಿಸಬೇಕು. ಇಲ್ಲವೆ ಅವನು ಸರ್ವಾರ್ಪಣ ಭಾವವನ್ನು ಹೊಂದತಕ್ಕದ್ದು. ಆಗ, ಅಲ್ಲಿ ಹೊಸ ಅಂತರ್ಮುಖೀ ದೃಷ್ಟಿಕೋನವಿರುತ್ತದೆ. ಇದು ಅವನನ್ನು ಪೀಡಿಸುತ್ತಿರುವ, ಸರ್ವ ತಾಪಗಳಿಂದ ಉದ್ಭೂತವಾದ, ಗೊಂದಲ ಮತ್ತು ಸಂದೇಹಗಳಿಂದ ಪಾರುಗಾಣಿಸುತ್ತದೆ.

ಇನ್ನು ಇದೂ ಸಹ, ಪೂರ್ಣ ಸಾಕ್ಷಾತ್ಕಾರವೇನಲ್ಲ. ಇಲ್ಲಿ ಸಾಧನೆಯ ವಿಭಿನ್ನ ಹಾದಿಗಳನ್ನು ವಿವರಿಸುವ ಅಗತ್ಯವೇನಿಲ್ಲ. ಏಕೆಂದರೆ, ಅತ್ಯಂತ ಮಹತ್ವದ ಸಂಗತಿಯೆಂದರೆ, ಕೇಂದ್ರಾಭಿಮುಖೀ ಆಂತರಿಕ ಗತಿಯ ಸ್ವಭಾವ. ನಿಜವಾಗಿ ಸಾಧನೆಯು ಪ್ರಾರಂಭವಾಗುವುದೇ ಇಲ್ಲಿಂದ. ಸಾಧನೆಯು ಯಾಂತ್ರಿಕ ಕ್ರಮವೇನಲ್ಲ. ಒಂದು ವೇಳೆ, ಕೇಂದ್ರದ ಹಠಾತ್ ಝಳಕು ಆಗದಿದ್ದರೆ, ಇಲ್ಲವೆ ಅಂತರ್ಮುಖೀ ಗತಿಯು ಇರದಿದ್ದರೆ, ಚರಮ ಸತ್ಯವನ್ನು ದರ್ಶಿಸುವುದು ತುಂಬಾ ಕಷ್ಟಸಾಧ್ಯ.

ಒಂದು ವೇಳೆ, ನಾವು ಅನುಭಾವಿಗಳ, ಆಧ್ಯಾತ್ಮಿಕ ಅನುಭೂತಿಗಳ ಇಲ್ಲವೆ ಅವರ ಸಾಹಿತ್ಯದ ಸಾಕ್ಷ್ಯಾಧಾರಗಳನ್ನು ಅಭ್ಯಸಿಸಿದರೆ, ಅವರ ಅನುಭೂತಿಗಳನ್ನು ಅಂತರಿಕ ಬಳುವಳಿಗಳಲ್ಲಿ, ಇಲ್ಲವೆ ಶ್ರೇಣಿಬದ್ಧ ಸ್ತರಗಳಲ್ಲಿ ಕಂಡುಕೊಳ್ಳುವೆವು.

ಯಾವಾಗ ನಾವು ಅನುಭೂತಿಯ ಸೂತ್ರವನ್ನು ಒಪ್ಪಿಕೊಳ್ಳುವೆವೋ ಆಗ, ಅಂತಿಮವಾಗಿ ಅನುಭೂತಿ ಧಾರೆಯು ಬಿಂದು ಇಲ್ಲವೆ ಕೇಂದ್ರವನ್ನು ತಲುಪುತ್ತಿರುವುದನ್ನು ಕಾಣುತ್ತೇವೆ. ಅರ್ಥಾತ್ ಎಲ್ಲಿ ಅವಶ್ಯವಾಗಿ ಸ್ಥಿತಿ ಇದೆಯೋ, ಮತ್ತು ಎಲ್ಲಿ ಅನಿವಾರ್ಯವಾಗಿ ಕ್ಷಣದ ಪರಮ ಮುಹೂರ್ತವು ಇರಲೇ ಬೇಕಾಗಿದೆಯೋ, ಅಂಥದೊಂದು ವಿಶೇಷ ಆಂತರಿಕ ಆಧ್ಯಾತ್ಮಿಕ ಗತಿಯಿದೆ.

ಆದರೆ, ಅಲ್ಲಿ ಅನೇಕ ಸ್ಥಿತಿಗಳಿದ್ದರೆ, ಅದು ಬೇರೆ ಪ್ರಶ್ನೆ. ನಾವು ಸ್ಥಿತಿಗಳನ್ನು ಇಲ್ಲವೆ ತಡೆಗಳನ್ನು ಕುರಿತು ಘರ್ಷಣೆಯನ್ನಾಗಲಿ, ಇಲ್ಲವೆ ವಿರೋಧಾಭಾಸಗಳನ್ನಾಗಲಿ, ಆಂತರಿಕ, ಆಧ್ಯಾತ್ಮಿಕ ಗತಿಯಲ್ಲಿ ನಿರ್ಮಿಸಕೂಡದು. ಇವುಗಳೆಲ್ಲವೂ ವೈಯಕ್ತಿಕ ಇಲ್ಲವೆ ಸಾಂಪ್ರದಾಯಿಕ ಅನುಭೂತಿ ಧಾರೆಗಳನ್ನು ಆಧರಿಸಿದ ತಥ್ಯಗಳೇ ಆಗಿವೆ.

ನಾವು "ಅನುಭೂತಿ" ಎಂದೊಡನೆ ಅನೇಕ ಸಾಪೇಕ್ಷಿಕ ಭಾವನೆಗಳು ಮೂಡಿ ಬರಬಹುದು. ನಾವಿಲ್ಲಿ ಚರ್ಚಿಸುತ್ತಿರುವ ಅನುಭೂತಿಯು ಸಮಷ್ಟಿ ಮನವನ್ನಾಗಲಿ, ವ್ಯಷ್ಟಿ ಮನವನ್ನಾಗಲಿ, ಆಧರಿಸಿದ ಸಾಧಾರಣ ಪ್ರಕಾರದ ಅನುಭೂತಿಯಲ್ಲ. ಆದರೆ, ಅದು ಪೂರ್ವದಲ್ಲಿರುವ ಕ್ಷಣದ ಪರಮ ಮುಹೂರ್ತದಲ್ಲಿ ಸಾಮಾನ್ಯವಾಗಿರುವ ಐಕ್ಯದ ಅನುಭೂತಿಯಾಗಿದೆ. ಅದೊಂದು ಅತಿ ಸೂಕ್ಷ್ಮ ಅನುಭೂತಿಯಾಗಿದ್ದು, ತಮ್ಮ ತಮ್ಮಲ್ಲಿ ಘರ್ಷಣೆ ಮತ್ತು ವಿರೋಧಾಭಾಸಗಳನ್ನು ಸೃಷ್ಟಿಸುವ ಎಲ್ಲ ಮಾನಸಿಕ ಅನುಭೂತಿಗಳಿಗೆ ಅತೀತವಾಗಿದೆ.

ಪರಮ ಮುಹೂರ್ತದ ಅನುಭೂತಿಯು ವಿರಾಟ್ ಶಕ್ತಿಯಾಗಿದೆ. ಮತ್ತು ವಿಶ್ವ ಕೇಂದ್ರದಲ್ಲಿರುವ ಸೃಜನಾತ್ಮಕ, ಪ್ರಾಣಾತೀತ ಶಕ್ತಿಯಾಗಿದೆ. ಈ ಶಕ್ತಿಯ ಅನುಭೂತಿಯು ವಿಶ್ವಮಾತೆಯ ಕೃಪೆಯಲ್ಲದೆ ಬೇರೇನೂ ಅಲ್ಲ. ಆದ್ದರಿಂದ, ಇಲ್ಲಿ ಮಾನಸಿಕ ವಸ್ತುಗಳ ಇಲ್ಲವೆ, ಯಾವುದೇ ಪೂರ್ವ ಆರೋಪಿತ, ಪೂರ್ವ ಗ್ರಹಿಕೆಗಳ, ಇಲ್ಲವೆ ಯಾವುದೇ ಪ್ರಕಾರದ ಸಂಸ್ಕಾರಗಳ ಪ್ರಶ್ನೆ ಇಲ್ಲ.

ಅದು ಚರಮ ಮಹಾ ಶಕ್ತಿಯ ಗತಿಯ ಶುದ್ಧ, ದಿವ್ಯ ಸಾನ್ನಿಧ್ಯವಾಗಿದೆ. ಈ ಅನುಭೂತಿಯು ಪೂರ್ಣಾನುಭೂತಿಯಾಗಿದೆ. ಏಕೆಂದರೆ, ಪೂರ್ಣದ ಸ್ವಭಾವವು ಗುಣಾತೀತವಿದೆ. ಅಥವಾ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಈ ಅನುಭೂತಿಯಲ್ಲಿ ಸಂಬಂಧದ ಇಲ್ಲವೆ ಸಂಬಂಧಗಳ ಪ್ರಶ್ನೆಯೇ ಇಲ್ಲ. ಇಲ್ಲಿ ಗುಣದ ಪ್ರಶ್ನೆಯೂ ಇಲ್ಲ. ಏಕೆಂದರೆ, ಮಹಾಶಕ್ತಿಯ ಅನುಭೂತಿಯು

ಸಂಪೂರ್ಣ ಒಂದಾಗುವಿಕೆಯ ಸ್ವಭಾವದ್ದಿದೆ. ಆದ್ದರಿಂದ, ಮಹಾ ಶಕ್ತಿಯ ಅನುಭೂತಿಯನ್ನು ಪಡೆಯುವುದೆಂದರೆ, ಅನುಭವಿಯ ಪಾತ್ರತೆಯನ್ನಾಧರಿಸಿದ. ಅನುಭೂತಿಯ ಸ್ವಭಾವವನ್ನು ವಿಸ್ತರಿಸುವುದೇ ಆಗಿದೆ. ಹೀಗೆ ಅದನ್ನು ಮಹಾ ಶಕ್ತಿಯೊಳಗಿನ ಅನುಭೂತಿಯೆಂದು ಕರೆಯಬಹುದು. ಅದೇನೇ ಇರಲಿ, ಮಹಾ ಶಕ್ತಿಯು ಏಕ ಕಾಲಕ್ಕೆ ಎರಡು ಕ್ರಿಯೆಗಳನ್ನು ಮಾಡುತ್ತದೆಯೆಂಬುದನ್ನು ನಾವು ಮರೆಯಕೂಡದು. ಒಂದೆಡೆಗೆ ಅದು ತನ್ನ ಶಕ್ತಿಯನ್ನು ಸೀಮಿತಗೊಳಿಸುತ್ತದೆ ಮತ್ತು ಚಕ್ರಾಕಾರ ತಾಳುತ್ತದೆ. ಮತ್ತೆ ಇನ್ನೊಂದೆಡೆಗೆ ಅದು ಚಕ್ರವನ್ನು ಶಕ್ತಿಯಲ್ಲಿ ವಿಸ್ತರಿಸುತ್ತದೆ. ಈ ಕ್ರಿಯೆಯು ನಿತ್ಯವಾಗಿ ಸಾಗುತ್ತಿರುತ್ತದೆ.

ಯಾವಾಗ, ಪ್ರಬುದ್ಧ ಕಲ್ಪನು ಭೂಚರಿ ಚಕ್ರದ ಪಾರ್ಥಿವ ಪ್ರಜ್ಞೆಯಿಂದ (ಯಾವುದು ಅವನನ್ನು ವಸ್ತುಗತ ಮಟ್ಟದಲ್ಲಿ ಸೀಮಿತಗೊಳಿಸುತ್ತಿದ್ದಿತೋ) ಊರ್ಧ್ವ ಪ್ರವಾಹದಲ್ಲಿ ತನ್ನ ಸಮತೂಕವನ್ನು ಕಾಯ್ದುಕೊಳ್ಳುತ್ತಿದ್ದನೋ, ಅವನೀಗ ಆಂತರಿಕವಾಗಿ ತನ್ನ ಸ್ವಂತದ ಅಭಿವ್ಯಕ್ತಿಯಲ್ಲಿ ಪೂರ್ಣ ವೈಷಯಿಕತೆಯನ್ನು ಭಾವಿಸತೊಡಗುತ್ತಾನೆ; ಇಲ್ಲವೆ, ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅವನು ತನಗೆ ಸಂಬಂಧಿಸಿದ ವಿಷಯಗಳ ಹಿಂದಿನ ಅನಂತ ಸ್ಪಂದನ ಧಾರೆಯನ್ನು ಸಂವೇದಿಸುತ್ತಾನೆ. (ಸ್ವಗಕ್ತ್ಲಪದ ಪ್ರಪ್ರಥಸಾರ ಪ್ರಮೇಯಕ್ತನ ಪ್ರತ್ಯಭಿಜ್ಞ ಹೃದಯಂ)

ಭೂಚರಿ ಶಕ್ತಿಯನ್ನು ಕುರಿತು ಹೇಳುವುದಾದರೆ, ಈ ಮಟ್ಟದಲ್ಲಿ ಸಾಧಕ ಅನೇಕತ್ವದಲ್ಲಿ ಏಕತ್ವವನ್ನು ಭಾವಿಸುತ್ತಾನೆ, ಎಂದು ಸಂಕ್ಷೇಪಿಸಿ ಹೇಳಬಹುದು. ಅಂದರೆ, ಅವನು ಎಲ್ಲ ವಿಷಯಗಳನ್ನು ವೀಕ್ಷಿಸುತ್ತಿರುವನಾದರೂ, ಬೇರೆ ಬೇರೆ ಸತ್ತೆಗಳ ರೂಪದಲ್ಲಿ ಅಲ್ಲ; ಎಂದು ಹೇಳಬಹುದು. ಜೀವನದ ಅವನ ಅನುಭೂತಿಗಳೆಲ್ಲೆಲ್ಲ ಈ ಒಂದು-ತನದ ಸಹಜಾತ ಭಾವನೆಯು ಪ್ರಧಾನವಾಗಿರುತ್ತದೆ. ಅವನ ಜೀವನದಲ್ಲಿಯು, ಈ ಪ್ರಕಾರದ, ಸರ್ವಾರ್ಪಿತ ಭಾವವು ಹಂತ ಹಂತವಾಗಿ ವಿಸ್ತರಿಸುತ್ತದೆ. ಇದು ಅವನಲ್ಲಿ ಈಗ ಅರಳಿದ ಮಹಾಶಕ್ತಿಯ ಪ್ರಚ್ಛನ್ನ ಲಕ್ಷಣವಾಗಿದೆ. ಇನ್ನು, ಈಗ ಅವನು ಜಗತ್ತು ತನ್ನ ಸ್ವಂತ ಆತ್ಮವೇ ಎಂದು ಭಾವಿಸುವನು. ಹೀಗಾಗಿ, ಅವನ ಆಯಾಮಗಳ ಭಾವನೆಯು ಸೀಮಿತ ದೃಷ್ಟಿಕೋನದ ಎಲ್ಲೆಯನ್ನು ಮೀರಿ ಹೋಗುತ್ತದೆ. ಅದು ನಿಜವಾಗಿ, ಪೂರ್ಣ ಐಕ್ಯದ ಗತಿಶೀಲ ಭಾವನೆಯನ್ನಾಧರಿಸಿದ, ಸಂಪೂರ್ಣವಾಗಿ ಬೇರೆಯಾದ ಒಂದು ಅನುಭೂತಿಯಾಗಿದೆ. ಇದನ್ನು ಇನ್ನಷ್ಟು ವಿಶದೀಕರಿಸುವುದಾದರೆ, ಅವನು ಎಲ್ಲ ವಸ್ತುಗಳನ್ನು ಇದ್ದಕ್ಕಿದ್ದಂತೆಯೇ ವೀಕ್ಷಿಸುತ್ತಾನೆ. ಆದರೆ, ವೈಷಯೀಕತೆಯ

ಭಾವವು ಇಡಿಯಾಗಿ ಪರಿವರ್ತನೆ ಹೊಂದುತ್ತದೆ; ಮತ್ತು ಅದರಿಂದ ಅವನು ಆ ಸಂಪೂರ್ಣ ಒಂದಾಗುವಿಕೆಯಲ್ಲಿ, ಮಹಾಶಕ್ತಿಯ ಕೃಪೆಯನ್ನು ಸಂವೇದಿಸುತ್ತಾನೆ. ನಿಶ್ಚಯವಾಗಿಯೂ ಇದು ಅವನಿಗೋಸ್ಕರ, ಆಯಾಮಗಳ ಹೊಸ ಕ್ಷಿತಿಜವನ್ನೇ ತೆರೆಯುತ್ತದೆ, ಮತ್ತು ಇದರಿಂದ ಅವನು ಜಗತ್ತಿನ ಸೀಮಿತತೆಯ ಕಷ್ಟಗಳಿಂದ ಬಿಡುಗಡೆ ಪಡೆಯುತ್ತಾನೆ.

ಪ್ರತಿಯಾಗಿ ಚಕ್ರದ ಅವಸ್ಥೆಯನ್ನು ಸೀಮಿತಗೊಳಿಸುವ ಕಾಲಕ್ಕೆ, ಇಂದ್ರಿಯ ಮತ್ತು ಮನಸ್ಸುಗಳಿಂದ ಶಕ್ತಿಯ ಬಲವು ಸೀಮಿತವಾಗುತ್ತದೆ. ಇದರಿಂದ ಕೇವಲ ತನ್ಮಾತ್ರೆಗಳಷ್ಟೇ ಉಳಿಯುತ್ತವೆ. ಮತ್ತು ತಿಳಿವಳಿಕೆಯು ಕೇವಲ ಸಾಪೇಕ್ಷಿಕ ಜ್ಞಾನವನ್ನಷ್ಟೇ ಅವಲಂಬಿಸಿರುತ್ತದೆ. ಮತ್ತು ಈ ಗುಣವೇ ಪ್ರಧಾನವಾಗುತ್ತದೆ. ನಮ್ಮ ಆಂತರಿಕ ಸಂಸ್ಕಾರಗಳಿಗೆ (ಅವು ಇದೇ ಜನ್ಮದ ಅನುಭವಗಳಾಗಿರಬಹುದು ಇಲ್ಲವೆ ಪೂರ್ವ ಜನ್ಮಗಳ ಅನುಭವಗಳಾಗಿರಬಹುದು) ಅನುಗುಣವಾಗಿ, ಭಿನ್ನತೆ ಮತ್ತು ಸಂಕ್ಲಿಷ್ಟತೆಗಳನ್ನು ಹೊಂದಿದ ಪ್ರತಿಕರ್ಮಗಳನ್ನುಳ್ಳ ಈ ಪ್ರಕಾರದ ಅನುಭೂತಿಯು, ನಿಜವಾಗಿಯೂ ಮಾನವ ಪ್ರಜ್ಞೆಯ ಸಾಧಾರಣ ಸ್ಥಿತಿ ಅರ್ಥಾತ್ ಜೀವ–ಅವಸ್ಥೆಯಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅದು ಪಾರ್ಥಿವ–ಪ್ರಜ್ಞೆಯಿಂದ ಉತ್ಸಾರಿತವಾಗುತ್ತದೆ; ಎಂದು ಹೇಳಬಹುದಾಗಿದೆ.

ಈ 'ಭೇದ ಪ್ರಥಾಕ್ತಕ ಜ್ಞಾನವು,' ಕೇಂದ್ರೀಯ ಪ್ರಜ್ಞಾ ರಹಿತ ಸ್ಪಂದನಗಳ ಸುರುಳಿ ಸುತ್ತುವ ಗತಿಯಿಂದಾಗುತ್ತದೆ. ಸುರುಳಿ ಸುತ್ತುವ ಸ್ವಭಾವವನ್ನೊಳಗೊಂಡ ಬಿಂದುವು, ಸಾಧಾರಣ ಮಟ್ಟದ ಜ್ಞಾನದ ಕೇಂದ್ರವಾಗುತ್ತದೆ. ಮತ್ತು ಅನೇಕತೆಯ ಅಸಂಖ್ಯಾತ ಬಿಂದುಗಳನ್ನು ಹೊರತರುತ್ತದೆ. ಈ ಅಜಸ್ರ ಬಿಂದುಗಳು ಚಕ್ರ–ಸ್ವಭಾವವನ್ನು ಹೊಂದಿದ್ದು, ಆ ಚಕ್ರವು ಅವುಗಳನ್ನು ಸೀಮಿತಗೊಳಿಸುತ್ತದೆ ಮತ್ತು ಭೇದಾತ್ಮಕ ಭಾವಯುತವಾಗಿಸುತ್ತದೆ.

ಇನ್ನಷ್ಟು ವಿಶದೀಕರಿಸುವುದಾದರೆ, ಹೀಗೂ ಹೇಳಬಹುದು: ಏನೆಂದರೆ, ಪ್ರತಿಯೊಂದು ಚಕ್ರವು ತನ್ನ ಗರ್ಭದಲ್ಲಿ ಅನೇಕ ಚಕ್ರಗಳನ್ನು ಹೊಂದಿರಬಹುದು. ಮತ್ತಿಷ್ಟು ವಿವರಿಸುವುದಾದರೆ, ಅದು ತನ್ನೊಳಗೇ ಏಕ ಕೇಂದ್ರೀಯವಾಗಿರುವ ಅನೇಕ ವರ್ತುಲಗಳನ್ನೊಳಗೊಂಡ ದೊಡ್ಡ ವರ್ತುಲದಂತಿದೆ, ಎಂದು ಹೇಳಬಹುದು. ಈ ಚಕ್ರಗಳ ಸ್ವಭಾವದಲ್ಲಿಯ ನ್ಯೂನತೆಗಳೆಂದರೆ, ಅವು ಸಂದೇಹ, ವೈಷಮ್ಯ ಮತ್ತು ಅನೇಕ ಪ್ರಕಾರದ ಸಾಪೇಕ್ಷಿಕ ಅಭಿಜ್ಞತೆ ಮತ್ತು ಊಹೆಗಳನ್ನು ಸೃಷ್ಟಿಸುತ್ತವೆ. ಹೀಗೆ, ಯಾವಾಗಲೂ ವೈಯಕ್ತಿಕ ದೇಹಾತ್ಮ-ಬೋಧೆಯ

ಮುಟ್ಟಿಗೆ ಸೀಮಿತಗೊಳಿಸುತ್ತವೆ ಮತ್ತು ದೇಹಕ್ಕೇ ಮರ್ಯಾದಿತ, ಆಸ್ತಿತ್ವದ ಸೀಮಿತ ಭಾವನೆಯನ್ನು ಉಂಟು ಮಾಡುತ್ತವೆ. ಇನ್ನು ಅದೇ ಕಾಲಕ್ಕೆ ವಿಷಯೀ ಮೂಲಕ ವಿಷಯಗತ ತಥ್ಯದಲ್ಲಿ ವಿಭಿನ್ನ ಭಾವನೆಗಳನ್ನು ಮೂಡಿಸುತ್ತದೆ. ಇದಲ್ಲದೆ, ಅನೇಕ ವಿಧವಾಗಿ ವ್ಯಕ್ತಿಗತ ಪ್ರಜ್ಞೆಯ ಅಕ್ಷಮತೆಯಲ್ಲಿ ಪರಿಣಮಿಸುತ್ತದೆ.

ಹೀಗೆ, ಚಕ್ರಗಳ ನಿಯಂತ್ರಣಕ್ಕೊಳಪಡುವ, ಸಮಷ್ಟಿ ಪ್ರಜ್ಞೆಯ ನಿಜವಾದ ಕ್ಷಮತೆಯು ಸುರುಳಿಯಗತಿಯ ಚಕ್ರಗಳ ಸೀಮಿತಗಳಿಗನುಗುಣವಾಗಿ ಚಲಿಸುತ್ತದೆ.

ಈ ಚಕ್ರಗಳ ತಿರುಗಣಿಯಿಂದ ಹೊರಬರಲು ವಿಭಿನ್ನ ಪದ್ಧತಿಗಳಿವೆ. ಇವುಗಳೊಳಗಿಂದ ನಾವು ದೈವೀ ಕೃಪೆಯನ್ನು ವಿಶೇಷವಾಗಿ ಹೆಸರಿಸಬಹುದು. ಈ ಕೃಪೆಯು ಪುನಃ ಮಾನವ ಗುರು ಇಲ್ಲವೆ ದಿವ್ಯ ಗುರುವಿನಿಂದ ಉತ್ಸಾರಿತವಾಗಬಹುದು. ಅದೇನೇ ಇರಲಿ; ಜಾಗ್ರತನಾಗುವುದೇ ಅತ್ಯಂತ ಮುಖ್ಯ ಸಂಗತಿ. ತಾಂತ್ರಿಕ ಶಬ್ದಗಳಲ್ಲಿ, ಇದಕ್ಕೆ 'ಕುಂಡಲಿನಿಯ ಜಾಗ್ರತಿ' ಎನ್ನುತ್ತಾರೆ.

ಸಾಧಕನು ಜಾಗ್ರತನಾದಾಗ, ಕುಂಡಲಿನಿಯು ಬಿಚ್ಚಿಕೊಳ್ಳುತ್ತದೆ. ಮತ್ತು ಉತ್ತೇಜಿತವಾಗುತ್ತದೆ. ಊರ್ಧ್ವಾಭಿಮುಖಿಯಾಗಿ ಚಲಿಸುತ್ತದೆ. ಈ ಅವಸ್ಥೆಯಲ್ಲಿ ಸಾಧಕನು ಸ್ವಾಭಾವಿಕವಾಗಿ, ತನ್ನೊಳಗೆ ವಾಸ್ತವಿಕ ಮಟ್ಟದಲ್ಲಿ ಐಕ್ಯದ ಇಣುಕ ನೋಟವನ್ನು ಪಡೆಯುತ್ತಾನೆ. ಅಥವಾ ಅವನ ಐಂದ್ರಿಯಿಕ ಅನುಭೂತಿಯು ವಸ್ತುಗತ ಸಮಷ್ಟಿಯನ್ನು ಪ್ರವೇಶಿಸುತ್ತದೆ; ಎಂದೂ ನಾವು ಹೇಳಬಹುದು. ಅವನು ಅನೇಕತೆಯನ್ನು ವೀಕ್ಷಿಸುವನಾದರೂ, ಹಿನ್ನೆಲೆಯಲ್ಲಿ ಏಕತೆಯ ಕುಡಿನೋಟವನ್ನೂ ಹೊಂದುತ್ತಾನೆ. ಇನ್ನು ಏಕತೆಯ ಈ ಬೀಜವು ಊರ್ಧ್ವಾಭಿಮುಖಿಯಾಗಿರುತ್ತದೆ ಮತ್ತು ಅವನು ಮನದಲ್ಲಿ ಏಕತೆಯ ಭದ್ರ ಭಾವನೆಯನ್ನು ಹೊಂದುತ್ತಾನೆ. ಅವನು ವಿಷಯಗಳಿಗೆ ಸಂಬಂಧಿಸಿದಂತೆ, ತನ್ನ ವೃಷ್ಟಿಸತ್ತೆಯನ್ನು ಸಮಷ್ಟಿ ಸತ್ತೆಯಾಗಿ ಭಾವಿಸುತ್ತಾನೆ.

ವಿಷಯಗಳ ಸಾರವಾಗಿರುವ, ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳು ನಿಜವಾಗಿ ಒಂದೇ ಆಗಿವೆ. ಅವನು ಇವೆಲ್ಲವುಗಳನ್ನೂ, ಏಕ ಕಾಲಕ್ಕೆ, ಅವುಗಳಲ್ಲಿರುವ ಗುಣಗತ ಭೇದದೊಂದಿಗೆ ಹಾಗೂ ಅವುಗಳೊಳಗಿನ ಏಕತೆಯೊಂದಿಗೆ ಅನುಭವಿಸುತ್ತಾನೆ. ಸಾಧಾರಣ ಅಭಿಜ್ಞತೆಗಳೊಳಗೆ ಈ ಪ್ರಜ್ಞೆಯ ಅವಸ್ಥೆಯು ಅಸಾಮಾನ್ಯವಾಗಿದೆ. ಏಕೆಂದರೆ, ಸಾಧಾರಣ ಮಟ್ಟದಲ್ಲಿ, ಒಬ್ಬನು ಬಹುತ್ವವನ್ನು ಗ್ರಹಿಸುತ್ತಾನೆ. ಈ ಬಹುತ್ವವು, ಸಂದೇಹ, ಮತ್ತಿತರ ಸಂಗತಿಗಳನ್ನು ಉಂಟು ಮಾಡುತ್ತದೆ. ಆದರೆ, ಈ ಪ್ರಕಾರದ ಅನುಭೂತಿಯು ಮಾತ್ರ,

ವಾಸ್ತವಿಕ ಮಟ್ಟದಲ್ಲಿಯೇ ಅನೇಕತ್ವದಲ್ಲಿ ಏಕತೆಯ ಹೊಸ ಭಾವವನ್ನು ತರುತ್ತದೆ. ಹೀಗಾಗಿ, ಆಗ ಸಕಲ ವಸ್ತುಗಳೂ ದೃಷ್ಟಾನ ಹೊರಗಿರದೆ, ಅವನ ನಿಯಂತ್ರಣದಲ್ಲಿಯೇ ಉಳಿಯುತ್ತವೆ. ಇನ್ನು ಕೊನೆಯದಾಗಿ, ದೃಷ್ಟಾ, ದರ್ಶನ ಮತ್ತು ದೃಶ್ಯಗಳು ಮತ್ತು ಅವುಗಳ ಸಂಬಂಧಗಳೆಲ್ಲವೂ ಸ್ಪಂದಮೂಲಕವಿದೆ. ವಿಶೇಷ ಸ್ಪಂದಗಳಿಗೆ ಒಂದು ಮೂಲವಿದೆ. ಮತ್ತು ಅದುವೇ ಸಾಮಾನ್ಯ ಸ್ಪಂದವಾಗಿದೆ.

ವಿಶೇಷ ಸ್ಪಂದವು ವಿಚಾರಗಳಿಗೆ ಸಂಬಂಧಿಸಿದೆ. ಮತ್ತು ವಿಚಾರಗಳು ಯಾವಾಗಲೂ ಸಾಪೇಕ್ಷಿಕವಾಗಿವೆ. ಅವು ವಿಷಯಗತ ಪ್ರಜ್ಞೆಯೊಂದಿಗೆ ಸಂಬಂಧಿಸಿವೆ. ಅರ್ಥಾತ್ ಅವು ಕಾಲಿಕ ಮತ್ತು ದೈಶಿಕ ಪ್ರಜ್ಞೆಯೊಂದಿಗೆ ಹೊಂದಿಕೊಂಡಿವೆ.

ನಾವು ಯಾಂತ್ರಿಕ ಕ್ರಿಯೆಯಿಲ್ಲದೆ, ಅಂತರ್ಮುಖಿಗಳಾಗಿ ವೀಕ್ಷಿಸಿದರೆ, ವಿಚಾರಗಳಿಗೆ ಒಂದು ಉತ್ಸ ಇಲ್ಲವೆ ಕೇಂದ್ರವಿದೆ. ಮತ್ತು ಅಲ್ಲಿಂದಲೇ ವಿಚಾರಗಳು ಇಲ್ಲವೆ ವಿಶೇಷ ಸ್ಪಂದವು ಪ್ರವಹಿಸುತ್ತವೆ; ಎಂಬುದನ್ನು ಕಾಣುತ್ತೇವೆ.

ನಾವು ಸಾಮಾನ್ಯ ಸ್ಪಂದವನ್ನು ಭಾಷೆಯ ಮೂಲಕ ವ್ಯಕ್ತಪಡಿಸಲಾರೆವು. ಏಕೆಂದರೆ, ಭಾಷೆಯು ಈ ಸಾಮರ್ಥ್ಯವನ್ನು ಹೊಂದಿಲ್ಲ. ಈ ಆನಂದಾವಸ್ಥೆಯಲ್ಲಿ ದೃಷ್ಟಾ ಮತ್ತು ದೃಶ್ಯಗಳು ಬೇರೆಯಾಗಿಲ್ಲ. ಅದು ಸರ್ವ ವ್ಯಾಪ್ತವಾದ ಒಂದೇ ಸಮಷ್ಟಿ ಜ್ಞಾನವಾಗಿದೆ. ನಾವು ಈ ಅವಸ್ಥೆಯ ಅನುಭೂತಿ ಪಡೆಯಬೇಕು. ಇದುವೇ ಸುಸ್ಪಷ್ಟ, ಸೃಜನಾತ್ಮಕ ವೈಚಾರಿಕತೆಯನ್ನು ನೀಡುತ್ತದೆ. ಮತ್ತು ಅದು ಅನುಭೂತಿ ಹೊಂದಿದ ವ್ಯಕ್ತಿಯನ್ನು ಇಡೀ ಮಾನವತೆಯೊಂದಿಗೆ ಸಂಪರ್ಕಿಸುತ್ತದೆ. ತನ್ನ ಹಿತಕ್ಕಾಗಿ ತಾನೇ ಸೃಜಿಸಿಕೊಳ್ಳುವ ಪ್ರತಿಮೆಗಳಲ್ಲಿ ಸಿಲುಕಿಕೊಂಡ, ಸಾಧಾರಣ ಮನುಷ್ಯನ ಸ್ವಭಾವಕ್ಕಿಂತಲೂ ಸಾಧಕನ ಸ್ವಭಾವವು ಭಿನ್ನವಾಗಿರುತ್ತದೆ. ಆದರೆ, ಸಾಮಾನ್ಯ ಸ್ಪಂದವನ್ನು ದರ್ಶಿಸುವುದು ಮತ್ತು ಅನುಭವಿಸುವುದು ಅಥವಾ ಅನಂತದೊಂದಿಗೆ ಮೇಳವಿಸಿದ ಸತ್ಯವನ್ನು ದರ್ಶಿಸುವುದು, ಸಾಕ್ಷಾತ್ಕಾರವೆಂದು ನಾನು ತಿಳಿದಿರುವೆ.

ಇಂಥ ಸಾಕ್ಷಾತ್ಕಾರವನ್ನು ಪಡೆದುಕೊಂಡ ವ್ಯಕ್ತಿಯು ಮಾನವತೆಯ ನೋವಿನ ಬಗೆಗೆ ಅಲೋಚಿಸುತ್ತಾನೆ. ಮತ್ತು ಅವನು ಸಮಷ್ಟಿ ಮಾನವ ಪ್ರಜ್ಞೆಯಲ್ಲಿ ಏಕೀಭವಿಸುತ್ತಾನೆ.

ಆಗ ಅವನಲ್ಲಿ ಅಮಿತ ಪ್ರೇಮವು ಪ್ರವಹಿಸುತ್ತದೆ. ಮತ್ತು ಅದು ನಿತ್ಯವೂ ಆಗಿರುತ್ತದೆ. ನಿಜವಾಗಿ, ಇದನ್ನೇ ಸಾಮಾನ್ಯ ಸ್ಪಂದವೆನ್ನುತ್ತಾರೆ.

೨
ಲೋಕಗಳು

ಮೂಲತಃ ಅಸಂಖ್ಯಾತ ಪ್ರಕಾರದ ಸಿದ್ಧರಿರುವರೆಂದು ಹೇಳಿದ್ದೇನೆ. ಇನ್ನು ಹಲವು ಮಾನವ ಜೀವಿಗಳು ಸಾಧನೆ ಮಾಡುತ್ತಾರೆ. ಮತ್ತು ಅದರಿಂದ ಸಿದ್ಧ ದೇಹವನ್ನು ಪಡೆಯುತ್ತಾರೆ. ಅದನ್ನೇ ಮಂತ್ರದೇಹವೆನ್ನುತ್ತಾರೆ. ಇಲ್ಲವೆ ಮತ್ತಾವುದೇ ದೇಹವೆನ್ನುತ್ತಾರೆ. ಅದನ್ನವರು ಪಡೆದಾಗ ಅದರಲ್ಲಿ ಪ್ರವೇಶಿಸುತ್ತಾರೆ. ಅವರು ಕಾರಣ ಶರೀರ, ಸೂಕ್ಷ್ಮ ಶರೀರ ಮತ್ತು ಸ್ಥೂಲ ಶರೀರಗಳಲ್ಲಿ ಬರುತ್ತಾರೆ. ಇನ್ನು, ಯಾವಾಗ ಇವುಗಳನ್ನು ಒಂದಾಗಿಸುವರೋ, ಆಗ ಅವರನ್ನು ಪೂರ್ಣ ಸಿದ್ಧರೆನ್ನುತ್ತಾರೆ. ಅವರು 'ಅದೃಶ್ಯ'ರಾಗಿರಲೂ ಬಹುದು. ಹೀಗೆ ಸಿದ್ಧರಲ್ಲಿ ಅನೇಕ ಪ್ರಕಾರಗಳುಂಟು.

ಎರಡು ಬಗೆಯ ಸಿದ್ಧರುಂಟು. ಯಾವಾಗಲೂ ಪರ್ಯಟನ ಮಾಡುತ್ತಿರುವ ವ್ಯಕ್ತಿಗತ ಸಿದ್ಧರು ಒಂದು ಬಗೆ. ಮತ್ತು ತಮ್ಮ ನೆಲೆ ಇಲ್ಲವೆ ಲೋಕಗಳನ್ನು ಅರ್ಥಾತ್ ಸಿದ್ಧ ಲೋಕಗಳನ್ನು ಹೊಂದಿದ ಸಿದ್ಧರು ಇನ್ನೊಂದು ಬಗೆ. (ಆಲೋಕ ಎಂದರೆ ಬೆಳಕು.) ಇನ್ನು, ವಿಶ್ವದ ಕೇಂದ್ರದಲ್ಲಿ, ಸಾಧಾರಣವಾಗಿ, ಜ್ಞಾನವಿರುತ್ತದೆ. ಮತ್ತು ಇದು ಸರ್ವ ವ್ಯಾಪ್ತವಾಗಿರುತ್ತದೆ. ಯಾವುದೇ ಸೃಷ್ಟಿಯಾಗುವ ಮುನ್ನ ಅಲ್ಲಿ ಶೂನ್ಯವುಂಟು. ಅದೊಂದು ತಾಂತ್ರಿಕ ಗ್ರಹಿಕೆ. ಶೂನ್ಯವೆಂದರೇನು?

ಶೂನ್ಯವೆಂದರೆ, ಜ್ಞಾನವು ವಿಶ್ವದ ಇನ್ನೊಂದು ಆಕಾರವನ್ನು ಇಲ್ಲವೆ ಮತ್ತೇನನ್ನಾದರೂ ಹೊಂದಿಲ್ಲವೆಂಬುದರ ಮಧ್ಯದಲ್ಲೊಂದು ನೆಲೆಯಿದೆ. ಅದಕ್ಕೆ ಶೂನ್ಯವೆನ್ನುತ್ತಾರೆ.

ಉದಾಹರಣೆಗೆ ನೋಡಿರಿ. ನಾನು ಸಾಧನೆಯನ್ನು ಮಾಡುತ್ತಿದ್ದೇನೆ. ನಾನು ನನ್ನ ವಿಚಾರಗಳನ್ನು ವೀಕ್ಷಿಸುತ್ತಿದ್ದೇನೆ. ನಾನು ಅವುಗಳನ್ನು ವೀಕ್ಷಿಸು

ವಾಗ, ಅವು ನನ್ನನ್ನು ಮರುಳು ಮಾಡುತ್ತವೆ. ಆ ಕಾಲಕ್ಕೆ, ನಾನು ನನ್ನ ಪ್ರಜ್ಞೆಯನ್ನು ಕುರಿತು ಜಾಗೃತನಿಲ್ಲದ ಒಂದು ಅವಸ್ಥೆ ಇರುತ್ತದೆ. ಮತ್ತು ಅಲ್ಲಿ ವಿಚಾರಗಳೂ ಇರುವುದಿಲ್ಲ. ಅದುವೇ ಶೂನ್ಯ. ಇನ್ನು ಅದು ಪ್ರವಾಹದ ಗತಿಯನ್ನು ಹೊಂದಿದೆ. ಬೌದ್ಧರು ಇಂಥ ಅವಸ್ಥೆಯನ್ನು ತಲುಪಿದ್ದರು. ಮತ್ತು ಅದನ್ನವರು ಶೂನ್ಯ ಎಂದು ಹೆಸರಿಸಿದರು. ಅವರು ಪ್ರವಾಹ(flux) ದಲ್ಲಿದ್ದರು. ಆದ್ದರಿಂದ, ಅದನ್ನು ಆವೇಗ (mementum) ಎಂದೂ ಕರೆದರು. ವಿಚಾರಗಳೇ ಇಲ್ಲದಾಗ, ಬೌದ್ಧರು ಈ ಅನುಭೂತಿಯನ್ನು ಪಡೆದರು. ಅವರು ತಮ್ಮ ಪ್ರಜ್ಞೆಯಿಂದ, ಅಲ್ಲಿ ಪ್ರವಾಹವಿರುವುದನ್ನು ಗುರುತಿಸದಾದರು. ಅವರು ಅದನ್ನು ಶೂನ್ಯವೆಂದುಬಿಟ್ಟರು. ಆದರೆ, ಅವರ ವಾದ ಹೀಗೆ. ಶೂನ್ಯವನ್ನು ದರ್ಶಿಸುವವರಾರು? ನೀವು ಹೇಗೆ ದರ್ಶಿಸುತ್ತೀರಿ? ಶೂನ್ಯದ ದೃಷ್ಟಾ ಓರ್ವನು ಬೇಕಲ್ಲವೇ? ಅರ್ಥಾತ್, ಅಲ್ಲಿ ಒಂದು ಪ್ರಜ್ಞೆ ಇರಬೇಕು. ಹೀಗೆ ಪ್ರಜ್ಞೆಯಂತೂ ಕ್ಷಣಿಕವಾಗಲಾರದು. ನಾವು ಬೌದ್ಧರೊಂದಿಗೆ ಸಹಮತ ಹೊಂದಿಲ್ಲ. ನಾವು ನಮ್ಮ ಅನುಭೂತಿಗಳ ಮೂಲಕ, ಈ ಅತ್ಯಾಸಕ್ತಿ ಕೆರಳಿಸುವ ನಿಲುಮೆಯನ್ನು ಅರಿಯಬಲ್ಲೆವು.

ಪ್ರವಾಹ ಇದೆ; ಎಂದ ಮೇಲೆ ಅದರ ಆಡಿಪಾಯವೊಂದಿರಲೇಬೇಕು. ಇಲ್ಲವೆಂದರೆ, ನಾವು ಅದನ್ನು ಅರಿಯುತ್ತಿರಲಿಲ್ಲ.

ಹೀಗೆ ವಿಭಿನ್ನ ಲೋಕಗಳಿವೆ. ವಿಭಿನ್ನ ಸ್ವಭಾವಗಳಿವೆ. ಆಧುನಿಕ ವಿಜ್ಞಾನದ ಮೇರೆಗೆ ಈ ಲೋಕವೆಂದರೆ, ಜನರು ಜೀವಿಸುತ್ತಿರುವ ಮತ್ತು ಎಲ್ಲೆಡೆಗೆ ಎಲೆಕ್ಟ್ರಾನ, ಪ್ರೋಟಾನ, ನ್ಯೂಟ್ರಾನಗಳಿರುವ, ಮತ್ತು ಬೇರೆ ಬೇರೆ ಗ್ರಹಗಳಲ್ಲಿಯೂ ಕ್ರಿಯಾಶೀಲವಾಗಿರುವ, ಈ ವಿಶ್ವವೆಂಬ ಗ್ರಹಿಕೆಯಿದೆ. ಇವುಗಳೆಲ್ಲ ಪರಿಭ್ರಮಿಸುತ್ತಿವೆ. ಸೂರ್ಯ, ಚಂದ್ರ ಮತ್ತಿತರ ಜೋತಿಷ್ಯಗಳು ಸಹ ಪರಿಭ್ರಮಿಸುತ್ತವೆ. ಇನ್ನು ಉದ್ಭಿಜ್ಜಗಳು, ಜೀವ-ಜಂತುಗಳು, ಪ್ರಾಣಿಗಳೇ ಮುಂತಾದ ಪ್ರಾಣಿಕ ಜೀವಿಗಳೆಲ್ಲ ಅಲ್ಲಿವೆ. ನಮಗೆ ಗೊತ್ತಿರುವ ಲೋಕವೆಂದರೆ ಇದಿಷ್ಟೇ. ಇದಕ್ಕಿಂತ ಉನ್ನತ ಜೀವಿಗಳಿಲ್ಲವೇ ಇಲ್ಲ; ಎಂದು ಭೌತಿಕ ವಿಜ್ಞಾನದ ಹೇಳಿಕೆ. ಇನ್ನು ವಾಸ್ತವವಾಗಿ, ಭೌತಿಕ ಮಟ್ಟದಲ್ಲಿ ಅದು ಸರಿಯೇ. ಏಕೆಂದರೆ, ನಾವು ಇದಕ್ಕಿಂತ ಹೆಚ್ಚಾಗಿ ಭೌತಿಕವಾಗಿ ಸಿದ್ಧಪಡಿಸಲಾರೆವು.

ಆದರೆ ವಿಭಿನ್ನ ಲೋಕಗಳಿವೆ. ಕೇವಲ ಭೌತಿಕ ಲೋಕಗಳಷ್ಟೇ ಅಲ್ಲ; ಮಾನಸಿಕ ಲೋಕಗಳೂ ಇವೆ. ಅನೇಕಾನೇಕ ಲೋಕಗಳಿವೆ. ಪೃಥ್ವಿ, ಅಪ್,

ತೇಜಸ್, ವಾಯು ಮತ್ತು ಆಕಾಶ ತತ್ತ್ವಗಳಿವೆಯೆಂದು ನಾವು ಹೇಳುತ್ತೇವಷ್ಟೇ. ಈ ಎಲ್ಲ ತತ್ತ್ವಗಳ ಕೇಂದ್ರದಲ್ಲಿ, ಲೋಕಗಳಿವೆ. ಅವುಗಳನ್ನು ನಾವು ಭುವನಗಳೆನ್ನುತ್ತೇವೆ. (ಅವು ಒಟ್ಟು ೨೦೮ ಇವೆ. ತಂತ್ರದಲ್ಲಿ ಇವುಗಳ ವಿವರಗಳನ್ನು ನೀಡಲಾಗಿದೆ.) ಅತ್ಯುನ್ನತ ನೆಲೆಯೆಂದರ, ಸದಾಶಿವ ಭುವನ. ನಿಮ್ಮ ತಮ ನೆಲೆಯೆಂದರೆ ಕಾಲ–ಅಗ್ನಿ–ರುದ್ರ. ಇವು ಕ್ರಿಯಾಶೀಲವಾಗಿರುವ ಇನ್ನೆರಡು ಲೋಕಗಳೂ ಉಂಟು.

ಹೀಗೆ ಇಲೆಕ್ಟ್ರಾನ, ಪ್ರೋಟಾನ, ನ್ಯೂಟ್ರಾನಗಳಾಗಲಿ, ಅವುಗಳ ಅಸ್ತಿತ್ವವಾಗಲಿ, ಅತಿ ಕ್ಷುದ್ರವಷ್ಟೇ. ನೀವು ಇನ್ನಷ್ಟು ಅಂತರ್ಮುಖಿಗಳಾಗಿ ಆಳಕ್ಕೆ ಹೋದರೆ, ಎಲೆಕ್ಟ್ರಾನ ಪ್ರೋಟಾನ ಮತ್ತು ನ್ಯೂಟ್ರಾನಗಳಿಲ್ಲದ ಆದರೆ, ಇನ್ನೂ ಜ್ಞಾನಾವಸ್ಥೆಯಲ್ಲಿರುವ ಜ್ಯೋತಿಯೊಂದಿದೆ. ಇಂಥ ಪ್ರಜ್ಞೆಯಲ್ಲಿಯೂ ಲೋಕಗಳಿವೆ. ಇವುಗಳನ್ನೇ ಭುವನಗಳೆನ್ನುತ್ತಾರೆ. 'ಭವತಿ ಇತಿ ಭುವನಮ್' ಎಂದು ತಂತ್ರದಲ್ಲಿ ಹೇಳಲಾಗಿದೆ. ಯಾವುದು ಇದೆಯೋ, ಅದು ಭುವನ. ಅವು ವಿಭಿನ್ನ ಕಾಲದಲ್ಲಿ ಇರುತ್ತವೆ.

ಹೀಗೆ ತಾಂತ್ರಿಕರು ಅನೇಕಾನೇಕ ಭುವನಗಳ ಅನುಭೂತಿ ಹೊಂದ ಬಲ್ಲರು. (ಕೆಲವೆಡೆ ಇಂಥ ತತ್ತ್ವಗಳು ಎಂಟು, ಕೆಲವೆಡೆ ಹನ್ನೊಂದು, ಕೆಲವೆಡೆ ಹದಿನೆಂಟು, ಹೀಗೆ ಒಂದು ಯಾದಿಯೇ ಇದೆ.) ನೀವು 'ಗಾರ್ಲಂಡ ಆಫ್ ಲೆಟರ್ಸ' ಗ್ರಂಥವನ್ನು ಅವಲೋಕಿಸಬಹುದು. ಅದರಲ್ಲಿ ಸದಾಶಿವ ನನ್ನು ಕುರಿತು ಒಂದು ಲೇಖನದಲ್ಲಿ ಈ ಎಲ್ಲ ಭುವನಗಳನ್ನು ಕುರಿತು ವಿವರಿಸಲಾಗಿದೆ. ಇವುಗಳೆಲ್ಲ ಹೇಗೆ ಕಾರ್ಯಶೀಲವಾಗುವದೆಂಬುದನ್ನು ನಾನು ವಿಶದೀಕರಿಸುತ್ತೇನೆ. ಅರ್ಥಾತ್, ಅಲ್ಲಿ ಒಂದು ಸಾಮಾನ್ಯ ಕ್ರಮವಿದೆ. ಭುವನಗಳೆಂದರೆ ಲೋಕಗಳು. ಇನ್ನು ಅವು ಎರಡು ವಿಧ. ಒಂದು ವಿಕರ್ಷಣಾತ್ಮಕ ಗತಿ; ಅದಕ್ಕೆ ಪ್ರತಿಧಾತ ಧರ್ಮವೆನ್ನುತ್ತಾರೆ. ಸ್ಪಂದನವು ಉತ್ಸಾರಿತವಾಗುತ್ತವೆ. ಆದರೆ ಅದಕ್ಕೊಂದು ಸೀಮೆಯುಂಟು. ಹೀಗಾಗಿ ಅದು ಮರಳುತ್ತದೆ. ಈ ವಿಶ್ವದಂಥ ಅನೇಕ ಲೋಕಗಳಿವೆ. ನಾನೀಗ ಮಾತನಾಡಿದಾಗ, ಅದು ಎಲ್ಲಿಗೋ ಹೋಗುತ್ತದೆ. ಅದು ಒಂದು ತಡೆಯನ್ನು ತಲುಪುತ್ತದೆ. ಮತ್ತು ಆ ಕೂಡಲೇ ಮರಳಿ ಬರುತ್ತದೆ. ನಾನು ಏನನ್ನಾದರೂ ಆಡಿದಾಗೆ, ಅದು ಹಿಂದಕ್ಕೆ ನೆಗೆಯುತ್ತದೆ. ನಾನು ಮೂಸಿದಾಗಲೂ ಮರಳಿ ಪುಟಿಯುತ್ತದೆ. ಇಲ್ಲಿ ನನ್ನ ಅನುಭವವು ಪ್ರತಿಧಾತ ಧರ್ಮ (Repulsive) ವಾಗಿದೆ. ಹೀಗೆ, ಅದು ಸೀಮಿತ ಲೋಕದ್ದಾಗಿದೆ. ಅದಕ್ಕೊಂದು ವಿಶೇಷ

ಸ್ಥಿತಿಸ್ಥಾಪಕತೆಯಿದೆ. ಅದು ಹೋಗುತ್ತದೆ ಮತ್ತೆ ಮರಳುತ್ತದೆ. ಆದರೆ ಕೆಲವು ಲೋಕಗಳಲ್ಲಿ ಈ ತರದ ಪ್ರತಿಧಾತ ಧರ್ಮವಿಲ್ಲ. ಆಗ ಸಂಪರ್ಕವೆಂತು ಸಂಭವಿಸುತ್ತದೆ? ಆ ಸಂಪರ್ಕವು ಪ್ರತಿಧಾತ ಧರ್ಮದಿಂದಂತೂ ಅಲ್ಲ. ನೀವು ವೀಕ್ಷಿಸುವುದಿದ್ದರೆ, ವೀಕ್ಷಿಸುತ್ತಿರುವಿರಷ್ಟೇ. ನಾವು ಬಳಸುವಂಥ ವೇದನೆಯೇನೂ ಅಲ್ಲಿ ಇಲ್ಲ. ಆರ್ಥಾತ್, ವಿಭಿನ್ನ ನೆಲೆಗಳಿವೆ. ವಿಭಿನ್ನ ಲೋಕಗಳಿವೆ. ಮತ್ತು ಆಯಾ ಲೋಕಗಳ ವಿಭಿನ್ನ ಸ್ವಭಾವಗಳಿವೆ. ಮತ್ತು ಜೀವಿಗಳ ವಿಭಿನ್ನ ಸ್ವಭಾವಗಳಿವೆ. ಇದಂತೂ ನಿಜ.

ಆದ್ದರಿಂದ, ನೀವು ನಿಮ್ಮ ಸ್ವಂತ ಸ್ವಭಾವಕ್ಕನುಗುಣವಾಗಿ ಸಕಲ ಲೋಕಗಳನ್ನು ಅಂದಾಜಿಸುವ ಪ್ರಯತ್ನ ಮಾಡಬೇಡಿರಿ. ಮೊದಲು ನೀವು ಚೆನ್ನಾಗಿ ಅಭ್ಯಾಸ ಮಾಡಬೇಕು. ಉದಾಹರಣೆಗೆ, ಅಗ್ನಿ ತತ್ತ್ವವನ್ನೇ ತೆಗೆದುಕೊಳ್ಳಿರಿ. ಅದು ಅಗ್ನಿಯು ಪ್ರಧಾನವಾಗಿರುವ ತತ್ತ್ವವಾಗಿದೆ. ಅಗ್ನಿಯು ಪ್ರಧಾನವಾಗಿದೆ; ಎಂದು ನಾವು ಹೇಳಿದಾಗ, ಎಲೆಕ್ಟ್ರಾನ, ಪ್ರೋಟೋನ, ನ್ಯೂಟ್ರಾನಗಳ ಈ ಭೌತಿಕ ಅಗ್ನಿಯೆಂದು ತಿಳಿಯಬೇಡಿರಿ. ಅದು ಇಂದ್ರಿಯ ವೇದ್ಯವಾದ ಭೌತಿಕ ಅಗ್ನಿಯಲ್ಲ. ನೀವು ಹಾಗೆ ತಿಳಿಯಕೂಡದು, ಅದೇಕೆ? ಕೆಲವರು ಮೂಲಭೂತತ್ತ್ವಗಳು ಐದು ಇಲ್ಲವೆನ್ನುತ್ತಾರೆ. ಆದರೆ ನಾವು ಅವುಗಳ ಲಕ್ಷಣಗಳನ್ನು ವಿವರಿಸುತ್ತೇವೆ. ಹಾಗಾದರೆ ಅಗ್ನಿತತ್ತ್ವದ ಲಕ್ಷಣಗಳೇನು? ತೇಜಸ್. ಹಳದಿ ಜ್ಯೋತಿಗಳ ಜ್ಯೋತಿಯು ಅದರ ಧರ್ಮ. ಅದು ಜ್ಯೋತಿಯಾಗಿದೆ ಮತ್ತು ಊರ್ಧ್ವಗತಿಶೀಲವಾಗಿದೆ. ಇವುಗಳೇ ಅಗ್ನಿಯ ಲಕ್ಷಣಗಳು. ಅದು ಸತ್ತ್ವಗುಣಿಯಾಗಿದೆ. ಅದಕ್ಕೆ ಗುರುತ್ವಾಕರ್ಷಣೆಯಿಲ್ಲ. ಮತ್ತು ಅದು ಊರ್ಧ್ವಗತಿಯುಳ್ಳದ್ದಾಗಿದೆ.

ಅಗ್ನಿಯಂತೆ ವರ್ಣವುಳ್ಳ ಕೆಲವು ಲೋಕಗಳಿವೆ. ಮತ್ತು ಅಗ್ನಿಯಂತೆಯೇ ಅವು ಬೆಳಕಾಗಿವೆ. ಇವುಗಳಿಗೆ ಜ್ಯೋತಿಯೆನ್ನುತ್ತಾರೆ. ನೀವು ಜ್ಯೋತಿಯನ್ನು ವೀಕ್ಷಿಸಿದರೆ, ಅದು ಊರ್ಧ್ವ ಮುಖವಾಗಿ ಸಾಗುತ್ತದೆ. ಮತ್ತು ಅಲ್ಲಿ ಜೀವಿಗಳಿವೆ. ಅವರಿಗೆ ಮುಖಗಳುಂಟು. ಅವರಿಗೆ ನೆಲೆಗಳುಂಟು; ಅವರಿಗೆ ಧಾಮಗಳುಂಟು. ಅಲ್ಲಿ ಸಂಪರ್ಕ ಸಾಧನವುಂಟು. ಗಿಡ ಮರಗಳುಂಟು; ವನ್ಯಾರಣ್ಯಗಳುಂಟು. ಸರ್ವವೂ ಅಂತರ್ಯದಲ್ಲಿಯೇ ಇದೆ. ಆದರೆ ನಿಮಗೆ ಅದು ಕೇವಲ ಅಗ್ನಿ. ಏಕೆಂದರೆ, ನೀವು ಪೃಥ್ವೀ ತತ್ತ್ವದಲ್ಲಿರುವಿರಿ. ಆದ್ದರಿಂದ ಅಂತರಾಳದಲ್ಲಿ ಪ್ರವೇಶಿಸಲಾರಿರಿ. ನೀವು ಅಲ್ಲಿ ಹೋದರೆ, ಅದು ಸುಡುತ್ತದೆ. ಏಕೆಂದರೆ, ನಿಮ್ಮ ಸ್ವಭಾವವೇ ಬೇರೆಯುಂಟು. ಮತ್ತು ನೀವು

ಅದರ ಸ್ವಭಾವ ಧರ್ಮವನ್ನೇ ಹೊಂದಿದ್ದರೆ, ಅದು ನಿಮ್ಮನ್ನು ಸುಡಲಾರದು. ಏಕೆಂದರೆ, ಆಗ ನಿಮ್ಮ ದೇಹವನ್ನು ಅದರಿಂದಲೇ ಮಾಡಿರುತ್ತದೆ. ಅಂದನೇಲೆ, ಅದು ಹೇಗೆ ಸುಡುತ್ತದೆ? ಈಗ ನಿಮ್ಮ ದೇಹವನ್ನು ಅಗ್ನಿಯಿಂದ ನಿರ್ಮಿಸಲಾಗಿದೆಯೆಂದು ತಿಳಿಯಿರಿ. ಇನ್ನು ಅಲ್ಲಿ ಇನ್ನೊಂದು ಅಗ್ನಿಯಿದ್ದರೆ, ಮತ್ತು ಅವೆರಡೂ ಅಗ್ನಿಗಳು ಒಂದೆಡೆ ಸೇರಿದರೆ, ಅವುಗಳ ಗುಣಧರ್ಮಗಳು ಸಮಾನವಿರುತ್ತವೆ. ಅಂದಮೇಲೆ, ಅವುಗಳಿಗಾವ ಸಮಸ್ಯೆಯೇ ಎದುರಾಗದು. ಅಥವಾ ನೀವು ಒಂದು ಮೇಣಬತ್ತಿಯನ್ನು ಉರಿಸಹಚ್ಚಿದಿರೆಂದು ತಿಳಿಯಿರಿ. ನೀವು ಇನ್ನೊಂದು ಮೇಣಬತ್ತಿಯನ್ನೂ ಹೊತ್ತಿಸಿ. ಅವೆರಡನ್ನೂ ಸೇರಿಸುವಿರೆಂದು ತಿಳಿಯಿರಿ. ಆಗ ಒಂದು ಮೇಣಬತ್ತಿಯ ಉರಿಯು, "ಅಯ್ಯೋ! ಏನು ಸಮಸ್ಯೆ ಬಂತಪ್ಪಾ. ನಾನು ಉರಿದು ಹೋಗುತ್ತೇನೆ!" ಎಂದು ಹೇಳುವುದೇ ಇಲ್ಲ. ಅದು ಹಾಗೆಂದೂ ಹೇಳಲಾರದು.

ಅಂದಮೇಲೆ, ಸಮಾನ ಸ್ವಭಾವ–ಧರ್ಮಗಳಿದ್ದರೆ, ಅಲ್ಲಿ ಸಂಪರ್ಕ–ಸಾಧನವಿರುತ್ತದೆ. ಅದನ್ನೇ ಲೋಕವೆನ್ನುತ್ತಾರೆ. ಅಲ್ಲವೇನು ಮತ್ತೆ? ನಾನು ಈ ತತ್ತ್ವ ಕುರಿತು ಹೇಳುವಾಗ, ಎಲ್ಲವನ್ನೂ ವಿವರವಾಗಿ ಸ್ಪಷ್ಟೀಕರಿಸುವೆ.

ಪೃಥ್ವಿ ತತ್ತ್ವ, ಅಪ್ ತತ್ತ್ವ, ಅಗ್ನಿ ತತ್ತ್ವ ಮತ್ತು ವಾಯು ತತ್ತ್ವಗಳಲ್ಲಿ ಲೋಕಗಳಿವೆ. ಪ್ರತಿಯೊಂದು ತತ್ತ್ವದಲ್ಲಿ ಭುವನಗಳಿವೆ. ಮತ್ತು ತತ್ತ್ವಗಳು ವಸ್ತುರೂಪಕ್ಕಿಳಿದರೆ, ಅವು ಭುವನಗಳಾಗುತ್ತವೆ. ಇನ್ನು ಭುವನಗಳು ರೂಪುಗೊಂಡರೆ, ಲೋಕಗಳಾಗುತ್ತವೆ. ಹೀಗೆ ಭೂಃಲೋಕ; ಭುವರ್ಲೋಕ, ಸ್ವಃಲೋಕ, ತಪರ್ಲೋಕ, ಜನರ್ಲೋಕ, ಮಹರ್ಲೋಕ, ಅಹರ್ಲೋಕಗಳಿವೆ. ಹೀಗೆಯೇ ವಿಭಿನ್ನ ಲೋಕಗಳ ಜ್ಯೋತಿಷ್ಕ ಪುಂಜಗಳಿವೆ. ಈ ಲೋಕಗಳು, ಪೂರ್ಣ ವಿಶ್ವದ ಅಭಿವ್ಯಕ್ತಿಯ ಕಾಲದಲ್ಲಿ ಸೃಷ್ಟವಾಗಿವೆ. ಮತ್ತು ಅವು ಕ್ರಿಯಾಶೀಲವಾಗಿವೆ. ಒಂದನ್ನೊಂದು ನಿಯಂತ್ರಿಸುವ ಕೆಲವು ಶಕ್ತಿಗಳೂ ಇವೆ. ಉದಾಹರಣೆಗೆ ೧, ೨, ೩ ಮತ್ತು ೪ ವಿಶ್ವಗಳನ್ನು ತೆಗೆದುಕೊಳ್ಳಿರಿ. ೨, ೧ರಿಂದ ನಿಯಂತ್ರಿಸಲ್ಪಡುತ್ತಿದೆ. ೩, ೨ರ ನಿಯಂತ್ರಣದಲ್ಲಿದೆ. ೪, ೩ರ ನಿಯಂತ್ರಣದಲ್ಲಿದೆ. ಹೀಗೆ ಯಾವಾಗಲೂ ಮೇಲಿನ ತತ್ತ್ವವು ಕೆಳಗಿನ ತತ್ತ್ವವನ್ನು ನಿಯಂತ್ರಿಸುತ್ತದೆ. ಆಕಾಶವು ವಾಯುವನ್ನು ನಿಯಂತ್ರಿಸುತ್ತದೆ. ವಾಯುವು ಅಗ್ನಿಯನ್ನು ನಿಯಂತ್ರಿಸುತ್ತದೆ. ಅಗ್ನಿಯು ಅಪ್ ತತ್ತ್ವವನ್ನು ನಿಯಂತ್ರಿಸುತ್ತದೆ. ಮತ್ತು ಅಪ್ ತತ್ತ್ವವು ಪೃಥ್ವಿ ತತ್ತ್ವವನ್ನು ನಿಯಂತ್ರಿಸುತ್ತದೆ. ಇನ್ನು ಉನ್ನತ ತತ್ತ್ವವು ನಿಮ್ನ ತತ್ತ್ವದ ಕೇಂದ್ರದಲ್ಲಿರುತ್ತದೆ. ಉದಾಹರಣೆಗೆ

ವರ್ತುಲಗಳನ್ನೇ ತೆಗೆದುಕೊಳ್ಳಿರಿ. ಒಂದು ಕೇಂದ್ರಬಿಂದುವಿದೆ. ಅದರ ಸುತ್ತ ಎರಡು ವರ್ತುಲಗಳಿದ್ದರೆ, ಹೊರಗಿನ ದೊಡ್ಡ ವರ್ತುಲವು ಒಳಗಿನ ಚಿಕ್ಕ ವರ್ತುಲವನ್ನು ನಿಯಂತ್ರಿಸುತ್ತದೆ. ಅದಕ್ಕೆ ಎರಡನೆಯ ವರ್ತುಲವನ್ನು ನಿಯಂತ್ರಿಸುವ ಅಧಿಕ ಶಕ್ತಿಯಿದೆ. ನಾವು ಒಂದನೆಯ ಮಜಲಿನಲ್ಲಿದ್ದೇವೆ. ಒಂದನೆಯ ಮಜಲು ಎರಡನೆಯ ಮಜಲನ್ನು ನಿಯಂತ್ರಿಸುತ್ತದೆ. ಮತ್ತು ಕೆಳಗಿನ ಮಜಲು ಮೇಲಿನ ಮಜಲನ್ನು ನಿಯಂತ್ರಿಸುತ್ತದೆ. ಅದೇ ಮೇರೆಗೆ, ಲೋಕಗಳಲ್ಲಿಯೂ ಸಹ, ಜ್ಯೋತಿಷ್ಕ ಪುಂಜಗಳಿವೆ. ಮತ್ತು ವಂಶಗಳಿವೆ. ಎಲ್ಲಿ ಶೂನ್ಯವಿದೆಯೋ ಅಲ್ಲಿ ಲೋಕಗಳು ಪ್ರತಿಷ್ಠಿಸಿವೆ. ಮತ್ತು ಶೂನ್ಯದಲ್ಲಿ ಇನ್ನೂ ಸಾಕಷ್ಟು ಇಂಬಿದೆ. ಶೂನ್ಯವು ಅನಂತವಾಗಿದೆ. ಉದಾಹರಣೆಗೆ, ಆಕಾಶ ತತ್ತ್ವದಲ್ಲಿ ಅನೇಕ ಲೋಕಗಳಿವೆ. ಆದರೂ ಸಹ, ಅಲ್ಲಿ ಶೂನ್ಯವಿದೆ. ಶೂನ್ಯದಲ್ಲಿ ಸಿದ್ಧನು ತನ್ನ ಶಕ್ತಿಯನ್ನು, ತನ್ನ ಲೋಕವನ್ನು ಪ್ರತಿಷ್ಠಾಪಿಸ ಬಲ್ಲನು. ಸಿದ್ಧನು ಪೃಥ್ವಿ ತತ್ತ್ವದಲ್ಲಿ ತನ್ನ ಲೋಕವನ್ನು ಪ್ರತಿಷ್ಠಾಪಿಸಬಲ್ಲನು. ಅವನು ಅಗ್ನಿ ತತ್ತ್ವದಲ್ಲಾಗಲಿ, ಇಲ್ಲವೆ ಅಪ್ ತತ್ತ್ವದಲ್ಲಾಗಲಿ ಇಲ್ಲವೆ ತನಗೆ ಇಚ್ಛೆ ಇರುವೆಡೆ, ತನ್ನ ಮಂಡಲ ಇಲ್ಲವೆ ಸಾಮ್ರಾಜ್ಯವನ್ನು ಪ್ರತಿಷ್ಠಾಪಿಸ ಬಲ್ಲನು. ಮತ್ತು 'ಜ್ಞಾನ-ಗಂಜ'ವನ್ನು ಪೃಥ್ವೀ-ತತ್ತ್ವ-ಶೂನ್ಯದಲ್ಲಿ ಪ್ರತಿ ಷ್ಠಾಪಿಸಲಾಗಿದೆ. ಹೀಗಾಗಿ ಅದು ಹೆಚ್ಚು ಸ್ಥೂಲವಾಗಿದೆ. ಹೆಚ್ಚು ಭೌತಿಕ ವಾಗಿದೆ. ಅರ್ಥಾತ್ ವಿಭಿನ್ನ ತತ್ತ್ವಗಳಿವೆ. ಮತ್ತು ಅವುಗಳ ಕೇಂದ್ರದಲ್ಲಿ ಶೂನ್ಯವಿದೆ. ಮತ್ತು ಆ ಶೂನ್ಯದಲ್ಲಿ ಆದಿಯಿಂದಲೂ ಭುವನಗಳಿವೆ; ಜೀವಿ ಗಳಿದ್ದಾರೆ. ಇದಲ್ಲದೆ, ವಿಭಿನ್ನ ಸಾಮ್ರಾಜ್ಯಗಳೂ ಉಂಟು. ಇವುಗಳಲ್ಲಿ ಸಿದ್ಧನು ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಬಲ್ಲನು. ಆದರೆ, ಅವನು ಭುವನ ಗಳನ್ನು ದರ್ಶಿಸಲಾರನು; ಹಾಗೆ ನೋಡಿದರೆ, ಭುವನಗಳೊಂದಿಗೆ ಸಂಪರ್ಕ ವಿರಿಸಿಕೊಳ್ಳುವ ಅಭಿಲಾಷೆಯೇ ಅವನಿಗಿರದು. ಏಕೆಂದರೆ, ಭುವನಗಳಲ್ಲಿ ಯಾರೇ ಆಗಲಿ, ತಮ್ಮ ವಸತಿಗೆ ಬಂದು ನೆಲೆಸುವುದನ್ನು ಆ ಜನರು ಬಯಸುವುದಿಲ್ಲ. ಹೀಗಾಗಿ ಅವರು ಯಾರನ್ನೂ ಬರಗೊಡುವುದಿಲ್ಲ. ಆದರೆ ನಿಮಗೆ ಅಧಿಕ ಶಕ್ತಿ ಯಿದ್ದರೆ ಮಾತ್ರ, ನೀವು ಪ್ರವೇಶಿಸಬಹುದು ಮತ್ತು ಆಗ ಅವರೂ ಸಮ್ಮತಿ ಸುತ್ತಾರೆ.

ಈಗ ಸಿದ್ಧರ ಚಟುವಟಿಕೆಗಳನ್ನೂ ಮತ್ತು ಅವರ ಕಾರ್ಯಗಳನ್ನೂ ನೋಡುವಾ;

ಉದಾಹರಣೆಗಾಗಿ, ಆಡಳಿತೆಯನ್ನೇ ತೆಗೆದುಕೊಳ್ಳಿರಿ. ರಾಜ್ಯಪಾಲ

ನೊಬ್ಬನು ರಾಜ್ಯವನ್ನು ನಿಯಂತ್ರಿಸುತ್ತಾನೆ. ವಿಭಾಗಾಧಿಕಾರಿಯು ಮೂರು-ನಾಲ್ಕು ಜಿಲ್ಲೆಗಳನ್ನು ನಿಯಂತ್ರಿಸುತ್ತಾನೆ. ಜಿಲ್ಲಾಧಿಕಾರಿಯು ಒಂದು ಜಿಲ್ಲೆಯನ್ನು ನಿಯಂತ್ರಿಸುತ್ತಾನೆ. ಅದೇ ರೀತಿ, ಈ ಉನ್ನತ ಲೋಕಗಳು ನಿಮ್ಮ ಲೋಕಗಳನ್ನು ನಿಯಂತ್ರಿಸುತ್ತವೆ ಮತ್ತು ಅಲ್ಲಿ ಜೀವಿಗಳೂ ಇದ್ದಾರೆ.

ಉದಾಹರಣಾರ್ಥ: ಆಕಾಶ ತತ್ತ್ವದಲ್ಲಿ ಭುವನವಿದೆ. ಸಿದ್ಧರ ಸಂಪ್ರದಾಯವೊಂದು ಆಕಾಶ ತತ್ತ್ವದಲ್ಲಿ ತನ್ನ ನೆಲೆಯನ್ನು ಪ್ರತಿಷ್ಠಾಪಿಸುತ್ತದೆ. ಅದು ಅಲ್ಲಿ ಏಕೆ ಪ್ರತಿಷ್ಠಾಪಿಸುತ್ತದೆ? ಏಕೆಂದರೆ ಅದು ಜನತೆಗೆ, ಜೀವಿಗಳಿಗೆ ಸಹಾಯ ನೀಡಬಯಸುತ್ತದೆ. ಸಿದ್ಧನ ಉದ್ದೇಶ್ಯವು ಯಾವಾಗಲೂ, ತನ್ನ ಗಣದೊಂದಿಗೆ ಕೂಡಿ, ಜೀವಿಗಳಿಗೆ ಸಹಾಯ ಸಲ್ಲಿಸುವುದೇ ಆಗಿದೆ. ಏಕೆ? ಸಿದ್ಧನ ಗುರಿಯಾದರೂ ಏನು? ಶಕ್ತಿ ಸಂಪಾದಿಸಿ, ತಾನು ನೆಲೆಯೂರುವುದಲ್ಲ. ಆದರೆ, ತಾವು ಲೋಕಗಳನ್ನು ಪ್ರತಿಷ್ಠಿಸಿದಾಗಲೆಲ್ಲ ಇತರರಿಗೆ ಸಹಾಯ ಸಲ್ಲಿಸ ಬಹುದು; ಎಂಬುದೇ ಅವರ ಉದ್ದೇಶ್ಯವಾಗಿದೆ. ವೈಯಕ್ತಿಕ ಮೋಕ್ಷ ದಿಂದೇನು ಪ್ರಯೋಜನ? ಅದು ಒಳ್ಳೆಯದಲ್ಲ. ಶಕ್ತಿಯನ್ನು ಪಡೆದ ಬಳಿಕ, ನಾವು ಯಾವುದೊಂದು ತತ್ತ್ವದಲ್ಲಿ ಪ್ರತಿಷ್ಠೆಗೊಳ್ಳುವಂಥ ದೇಹವನ್ನು ಪಡೆಯ ಬೇಕು. ಮತ್ತು ಇತರರಿಗೆ ಸಹಾಯ ಸಲ್ಲಿಸಬೇಕು. ಇದು ಸಿದ್ಧರ ವಿಚಾರ.

ಈಗ ಒಬ್ಬ ವಿಶೇಷ ಸಿದ್ಧನು ಪೃಥ್ವಿ-ತತ್ತ್ವದಲ್ಲಿ ಇರುವನೆಂದೂ, ಇನ್ನೊಬ್ಬ ಸಿದ್ಧನು ಅಪ್ ತತ್ತ್ವದಲ್ಲಿ ಇರುವನೆಂದೂ, ಮತ್ತು ಮೂರನೆಯ ಸಿದ್ಧನು ಅಗ್ನಿ ತತ್ತ್ವದಲ್ಲಿಯೂ ಹಾಗೂ ನಾಲ್ಕನೆಯವನು ಆಕಾಶ ತತ್ತ್ವದಲ್ಲಿ ಇರುವನೆಂದೂ ತಿಳಿಯಿರಿ. ಹೀಗೆ ನಾಲ್ಕು ಸಿದ್ಧ ಮಂಡಲ ಗಳುಂಟಾದವು. ಅವರು ಜನರಿಗೆ ಸಹಾಯ ಸಲ್ಲಿಸಬಯಸುತ್ತಾರೆ. ಆಕಾಶ ತತ್ತ್ವದಲ್ಲಿರುವವನು ಸರ್ವರಿಗೂ ಸಹಾಯ ಸಲ್ಲಿಸಬಲ್ಲನು. ಅಗ್ನಿ ತತ್ತ್ವದಲ್ಲಿ ಇರುವವನು ಆಕಾಶ ತತ್ತ್ವದಲ್ಲಿರುವವನಿಗೆ ಸಹಾಯ ಸಲ್ಲಿಸಲಾರನು. ಅವನು ಪೃಥ್ವಿ ತತ್ತ್ವದಲ್ಲಿರುವವನಿಗೆ, ಮತ್ತು ಅಪ್ ತತ್ತ್ವದಲ್ಲಿರುವವನಿಗೆ ಸಹಾಯ ಸಲ್ಲಿಸಬಲ್ಲನು. ಇನ್ನು: ಅಪ್ ತತ್ತ್ವದಲ್ಲಿರುವವನು ಪೃಥ್ವಿ ತತ್ತ್ವದಲ್ಲಿರುವವನಿಗೆ ಸಹಾಯ ಸಲ್ಲಿಸಬಲ್ಲನು. ಪೃಥ್ವಿ ತತ್ತ್ವದಲ್ಲಿರುವವನು ಪೃಥ್ವಿ ತತ್ತ್ವದ ಜೀವಿಗಳಿಗೆ ಸಹಾಯ ಸಲ್ಲಿಸಬಲ್ಲನು. ಅವರು ತತ್ತ್ವಗಳನ್ನು ಅತಿಕ್ರಮಿಸಿದಾಗ, ಕೃಪೆ ಸುರಿಸಬಲ್ಲರು; ಸಹಾಯ ನೀಡಬಲ್ಲರು. ಸಿದ್ಧರು ಎಷ್ಟು ತತ್ತ್ವಗಳನ್ನು ಅತಿಕ್ರಮಿಸುವರೋ, ಜನರಿಗೆ ಅಷ್ಟು ಸಹಾಯ ಸಲ್ಲಿಸಬಲ್ಲರು. ಅವರು ತತ್ತ್ವ

ಗಳನ್ನು ಅತಿಕ್ರಮಿಸುವುದರ ಮೇಲೆ ಅವರ ಕಾರ್ಯಕ್ಷೇತ್ರವು ಅವಲಂಬಿಸಿದೆ.

ಪ್ರಶ್ನೆ : ತತ್ತ್ವಗಳನ್ನು ಅತಿಕ್ರಮಿಸುವುದೆಂದರೇನು?

ಉತ್ತರ : ಉದಾಹರಣಾರ್ಥ, ಒಬ್ಬ ಸಿದ್ಧನು ತನ್ನ ದೇಹವನ್ನು ಸಿದ್ಧ ಶರೀರವಾಗಿ ಮಾಡಿಕೊಂಡಿರುವನೆಂದು ತಿಳಿಯಿರಿ. ಅವನು ಸಿದ್ಧ–ಶರೀರವನ್ನು ಪಡೆದಾಗ ಪೃಥ್ವಿ–ತತ್ತ್ವದಲ್ಲಿರುತ್ತಾನೆ. ಅವನು ಮಾನವ–ಜೀವಿಯಾಗಿರುತ್ತಾನೆ. ಆಗ ಅವನಿಗೆ, ಇದು ಪೃಥ್ವಿ ತತ್ತ್ವವಾಗಿದೆಯೆಂದೂ ಮತ್ತು ತಾನು ತನ್ನ ಶರೀರವನ್ನು ಇದರಿಂದ ಮುಕ್ತಗೊಳಿಸಬೇಕೆಂದೂ ಮತ್ತು ಹಾಗೆ ನಿರ್ಮಿಸಬೇಕೆಂದೂ ಹೊಳೆಯುತ್ತದೆ. ಅವನು ಅದನ್ನು ಕೇಂದ್ರದಲ್ಲಿ ನಿರ್ಮಿಸಬಲ್ಲನು. ಅವನ ದೇಹದ ಕಣಗಳು ಪೃಥ್ವಿ–ತತ್ತ್ವದ ಅಮರ ಮೂಲಭೂತಗಳಾಗಿರುತ್ತವೆ. ಇನ್ನು, ಯಾವಾಗ ಪೃಥ್ವಿ ತತ್ತ್ವದ ಅಮರ ಮೂಲಭೂತಗಳನ್ನು ಪಡೆಯುವನೋ, ಆಗ ಅವನು ಆ ಕಣಗಳಿಂದ ಪೃಥ್ವಿ–ತತ್ತ್ವದಲ್ಲಿ ಮಾತ್ರ ತನ್ನ ಮಂಡಲವನ್ನು ಪ್ರತಿಷ್ಠಾಪಿಸಬಲ್ಲನು. ಒಂದು ವೇಳೆ, ಅವನು ಅಮರ ಕಣಗಳನ್ನು ಪಡೆದಿದ್ದರೆ, ಮತ್ತು ಅವನು ಊರ್ಧ್ವದತ್ತ ಹೋಗಬಯಸಿದರೆ, ಅವನು ಆಪ್ ತತ್ತ್ವಕ್ಕೆ ಹೋಗುತ್ತಾನೆ. ಯಾವಾಗ ಅವನು ಆಪ್ ತತ್ತ್ವದಲ್ಲಿ ಇರುವನೋ, ಮತ್ತು ಎಲ್ಲ ಕಣಗಳನ್ನು ಪಡೆಯಬಲ್ಲನೋ ಮತ್ತು ಆಪ್ ತತ್ತ್ವದ ಸಿದ್ಧ ದೇಹವನ್ನು ನಿರ್ಮಿಸಬಲ್ಲನೋ, ಆದರೂ ಅವನು ಅಷ್ಟರಿಂದಲೇ ತೃಪ್ತನಾಗದೆ ಮೇಲಿನ ಅಗ್ನಿ ತತ್ತ್ವಕ್ಕೆ ಹೋಗಬಯಸುವನೋ, ಆಗ ಹಾಗೆ ಮಾಡಬಲ್ಲನು. ಹೀಗೆ, ಅವನು ತತ್ತ್ವಗಳ ಗುಣಧರ್ಮಗಳನ್ನು ತನ್ನಲ್ಲಿಯೇ ಅಳವಡಿಸಿಕೊಳ್ಳುತ್ತಾನೆ. ಮತ್ತು ಅವುಗಳನ್ನು ದೇಹದಲ್ಲಿ ಕೂಡಿಸುತ್ತಾನೆ. ಮತ್ತು ಊರ್ಧ್ವದಿಂದ ಊರ್ಧ್ವತರದತ್ತ ಹೋಗುತ್ತಾನೆ. ಅರ್ಥಾತ್ ಒಂದು ದೇಹವನ್ನು ಕೇವಲ ಮೂಲ ಭೂತಗಳಿಂದ ನಿರ್ಮಿಸಬಹುದು ಇನ್ನೊಂದು ದೇಹವನ್ನು ಅ ಮತ್ತು ಬ-ಗಳಿಂದ ನಿರ್ಮಿಸಬಹುದು. ಮೂರನೆಯದನ್ನು ಅ, ಬ, ಕ ಮತ್ತು ಡ–ಗಳಿಂದ ನಿರ್ಮಿಸಬಹುದು. ಒಂದು ಸಿದ್ಧ ದೇಹದಲ್ಲಿ ಪೃಥ್ವಿ ತತ್ತ್ವದ ಕೇವಲ ಅಮರ ಕಣಗಳಷ್ಟೇ ಇರಬಹುದು. ಇನ್ನೊಂದು ದೇಹದಲ್ಲಿ ಪೃಥ್ವಿ ತತ್ತ್ವದ ಮತ್ತು ಆಪ್ ತತ್ತ್ವದ ಅಮರ ಕಣಗಳಿರಬಹುದು. ಮೂರನೆಯದರಲ್ಲಿ, ಪೃಥ್ವಿ, ಆಪ್ ಮತ್ತು ಅಗ್ನಿ ಕಣಗಳಿರಬಹುದು. ನಾಲ್ಕನೆಯದರಲ್ಲಿ ಪೃಥ್ವಿ, ಆಪ್, ಅಗ್ನಿ, ವಾಯು ಕಣಗಳಿರಬಹುದು. ಅವನು ತನ್ನ ದೇಹದೊಂದಿಗಿನ ಎಲ್ಲ ಕಣಗಳನ್ನೂ ಅಮರಗೊಳಿಸಿದ್ದಾನೆ. ಹೀಗೆ, ಅವನು ಅಲ್ಲಿ ತನ್ನ ದೇಹವನ್ನು ಬಳಸಬಲ್ಲನು. ಅರ್ಥಾತ್, ಸಿದ್ಧನ ಶರೀರವು

ಮಂತ್ರ-ಸೃಷ್ಟವಾಗಿ ತತ್ತ್ವಾತೀತವಾಗಿದ್ದರೂ ಸಹ, ಅಲ್ಲಿ ತತ್ತ್ವಗಳನ್ನು ನೆಲೆಗೊಳಿಸಲೇಬೇಕು. ಇಲ್ಲವಾದರೆ ಕೆಲಸ ನಡೆಯದು. ಏಕೆಂದರೆ, ಶೂನ್ಯದಲ್ಲಿ ನೀವು ತತ್ತ್ವಗಳೊಂದಿಗೆ ಇರಬೇಕಾಗುತ್ತದೆ. ಆದ್ದರಿಂದ, ನೀವು ಅವುಗಳನ್ನು ಮೀರಬೇಕಾಗುತ್ತದೆ.

ಸಾಧಾರಣವಾಗಿ, ಸಿದ್ಧನ ಪ್ರಜ್ಞೆಯ ಕೇಂದ್ರವು, ಶುದ್ಧ, ಅಮರ, ತತ್ತ್ವಾತೀತವಾಗಿರುತ್ತದೆ. ಮತ್ತು ಅದು ಗತಿಶೀಲ ಶಕ್ತಿಯಾಗಿದೆ. ಆದರೆ, ಅದನ್ನು ಈ ತತ್ತ್ವಗಳ ಕ್ಷೇತ್ರದಲ್ಲಿ ಬಳಸಲು, ಅವನು ತತ್ತ್ವಗಳನ್ನು ತನ್ನೊಳಗೆ ಅಮರವಾಗಿಸುತ್ತಾನೆ. ಮತ್ತು ಅವುಗಳನ್ನು ಬಳಸುತ್ತಾನೆ.

ಹೀಗೆ ಸಿದ್ಧರು ಬೇರೆ ಬೇರೆ ಮಟ್ಟದವರಿರುತ್ತಾರೆ. ಮತ್ತು ಬೇರೆ ಬೇರೆ ತತ್ತ್ವಗಳವರಿರುತ್ತಾರೆ. ಎಲ್ಲ ಸಿದ್ಧರೂ ಒಂದೇ ಪ್ರಕಾರದವರಿರುವರೆಂದು ನಾವೇನೂ ಹೇಳುತ್ತಿಲ್ಲ. ಅವರು ಎಷ್ಟು ತತ್ತ್ವಗಳನ್ನು ಸಾಧಿಸಿರುವರೆಂಬುದನ್ನು ಅನುಸರಿಸಿ, ಅವರ ಮಟ್ಟವು ನಿರ್ಧಾರಿತವಾಗುತ್ತದೆ. ಅವರು ಅದಕ್ಕನುಗುಣವಾಗಿ ಮಾನವತೆಗೆ ಸಹಾಯ ಸಲ್ಲಿಸಬಲ್ಲರು.

ಹೀಗೆ, ಕೃಪೆಯ ಕಾರ್ಯ ಕ್ಷೇತ್ರವು, ಆ ಸಿದ್ಧರು ಎಷ್ಟು ತತ್ತ್ವಗಳನ್ನು ಅತಿಶಯಿಸಿರುವರೆಂಬುದನ್ನು ಅವಲಂಬಿಸಿದೆ. ಮತ್ತು ಎಷ್ಟು ಮಟ್ಟಿಗೆ ಅವರು ಸಹಾಯ ಸಲ್ಲಿಸಬಲ್ಲರು ಮತ್ತು ಕಾರ್ಯ ಮಾಡಬಲ್ಲರು.


ಈಗ, ಪ್ರತಿಯೊಂದು ತತ್ತ್ವದಲ್ಲಿ ನಾಲ್ಕು ಸಿದ್ಧ ಮಂಡಲಗಳಿವೆಯೆಂದೂ ಆದರೆ ಅವರು ಒಬ್ಬರೊಬ್ಬರಿಗೆ ಪರಿಚಿತರಾಗಿಲ್ಲವೆಂದೂ ತಿಳಿಯಿರಿ. ಅವರು ಶೂನ್ಯದಲ್ಲಿರುವುದರಿಂದ, ಪರಸ್ಪರರು ಸಂಪರ್ಕಿಸಲಾರರು. ಏಕೆಂದರೆ, ಶೂನ್ಯದಲ್ಲಿ ಒಬ್ಬರೊಬ್ಬರ ಮಧ್ಯೆ ಸಂಪರ್ಕವು ಉಂಟಾಗದು. ಒಬ್ಬರು ಇನ್ನೊಬ್ಬರನ್ನು ನೋಡಲಾರರು. ಅವರು ಆಂತರ್ಯದಲ್ಲಿಯೇ ಇರುತ್ತಾರೆ. ಕಾರ್ಯ ಮಾಡುತ್ತಾರೆ. 'ನಾನು ಅಲ್ಲಿ ಇದ್ದೇನೆ', ಎಂದು ಅವರು ವಿಚಾರ ಮಾಡುತ್ತಾರೆ. ಮತ್ತೊಬ್ಬನು 'ನಾನು ಅಲ್ಲಿ ಇದ್ದೇನೆ' ಎಂದು ವಿಚಾರ ಮಾಡುತ್ತಾನೆ. ಆದರೆ ಅವರು ಒಬ್ಬರೊಡನೊಬ್ಬರು ಸಂಪರ್ಕಿಸರು. ಹೀಗೆ ಅವರು ಸ್ವತಂತ್ರರಾಗಿದ್ದಾರೆ. ಅವರ ಕಾರ್ಯವೂ ಸ್ವತಂತ್ರವಾಗಿರುತ್ತದೆ. ಅವರೆಂದೂ ಭೇಟ್ಟಿಯಾಗರು. ಹೀಗೆ ನೂರಾರು, ಅಷ್ಟೇಕೆ, ಸಾವಿರಾರು ಸಿದ್ಧ ಮಂಡಲಗಳಿರಬಹುದು. ಅವರು ಒಬ್ಬರು ಇನ್ನೊಬ್ಬರ ಬಳಿ ಎಂದೂ ಬರರು. ಒಬ್ಬನನ್ನು ಇನ್ನೊಬ್ಬರು ಭೇಟ್ಟಿಯಾಗರು. ಅವರು ಒಬ್ಬರನ್ನೊಬ್ಬರು ಅರಿತುಕೊಳ್ಳರು. ಅವರು ಓಡುವ ರೈಲು ಬಂಡಿಗಳಂತಿದ್ದಾರೆ. ಒಂದು ಗಾಡಿ ಇನ್ನೊಂದನ್ನು ದಾಟಿ ಹೋಗುತ್ತದೆ. ಆದರೆ ಆ ಇನ್ನೊಂದರಲ್ಲಿ

ಯಾರಿರುವರೆಂಬುದನ್ನು ಯಾರೂ ಅರಿಯರು. ಅಲ್ಲಿ ನೆಲೆಯಿಲ್ಲ. ಹೀಗೆಯೇ ಸಿದ್ಧರೂ ವೇಗದ ಗತಿಯಲ್ಲಿ ಇದ್ದಾರೆ. ಅವರು ಸಂಪರ್ಕ ಹೊಂದುವುದಿಲ್ಲ. ಅವರು ಕೇವಲ ಪೃಥ್ವಿ ತತ್ತ್ವದೊಂದಿಗೆ, ಇಲ್ಲವೆ ಮಾನವ ಜೀವಿಗಳೊಂದಿಗೆ ಸಂಪರ್ಕಿಸಬಲ್ಲರು. ಯಾವುದೇ ತತ್ತ್ವದ ಸಿದ್ಧ ಮಂಡಲವಿರಲಿ; ಅವರು ಮಾನವನೊಂದಿಗೆ ಸಂಪರ್ಕಿಸಬಲ್ಲರು. ಅವನಿಗೆ ಸಹಾಯ ಸಲ್ಲಿಸಬಲ್ಲರು; ಬೋಧೆ ನೀಡಬಲ್ಲರು. ನಮ್ಮ ಮೇಲೆ ಕೃಪೆ ಬೀರಬಲ್ಲರು. ಅವರು ನಿಮಗೇನನ್ನಾದರೂ ನೀಡಬಯಸಿದರೆ, ನೀವು ವಿಧೇಯರಾಗಿರಬೇಕು ಮತ್ತು ನಿಯಮ-ನಿಬಂಧನೆಗಳಿಗೊಳಗಾಗಿರಬೇಕು.

ಮೇಲಾಗಿ, ನಾನು ನಿಮಗೆ ಹೇಳಿದಂತೆ, ಮಾನವ ದೇಹ-ಧಾರಿಗಳಾದ ಸಿದ್ಧರು ಮಾತ್ರ, ಮಾನವತೆಯನ್ನು ಪ್ರೀತಿಸುತ್ತಾರೆ. ಅವರು ಮಾನವನನ್ನು ಪ್ರೀತಿಸುತ್ತಾರೆ. ಆದರೆ, ಅವನನ್ನು ಒತ್ತಾಯಿಸಲು ಮಾತ್ರ ಸಿದ್ಧರಿಲ್ಲ. ಹಲವು ಸಂಪ್ರದಾಯಗಳು ಮಾನವರೊಂದಿಗೆ ಮೇಳವಿಸಿರುತ್ತವೆ. ಬೇರೆ ಕೆಲವು ಸಂಪ್ರದಾಯಗಳು ಮೇಳವಿಸಿರುವುದಿಲ್ಲ. ಅವರು ಅಲ್ಲಿ ಇದ್ದಾರೆ; ಸಂತೋಷ ಭರಿತರಾಗಿಯೇ ಇದ್ದಾರೆ. ಕೆಲವೊಮ್ಮೆ ಅವರು ಬರುತ್ತಾರೆ. ಆದರೆ, ತಮ್ಮ ಸಂಪ್ರದಾಯಗಳನ್ನು ಸ್ಥಾಪಿಸಿ ನಡೆಸುವದಿಲ್ಲ. ಕೆಲವರು ಮಾನವತೆಯಲ್ಲಿ ತಮ್ಮ ಸಂಪ್ರದಾಯಗಳನ್ನು ನಡೆಸುತ್ತಾರೆ. ಜ್ಞಾನ ಗಂಜದ ಸಿದ್ಧರು ಕೆಲವೊಮ್ಮೆ ಸಂಪ್ರದಾಯಗಳನ್ನು ನಡೆಸುತ್ತಾರೆ. ಕೆಲವೊಮ್ಮೆ ನಡೆಸುವದಿಲ್ಲ. ಅವರು ಸಂಪ್ರದಾಯಗಳನ್ನು ನಡೆಸಿದಾಗ ಎರಡು ಸಂಗತಿಗಳಿರುತ್ತವೆ. ಕೆಲವೊಮ್ಮೆ ಅವರು ಅದೃಶ್ಯರಾಗಿದ್ದುಕೊಂಡು, - ನನ್ನ ಮೂಲಕ, ನಿಮ್ಮ ಮೂಲಕ, ಸಂಪ್ರದಾಯಗಳನ್ನು ನಡೆಸುತ್ತಾರೆ. ಇನ್ನು ಕೆಲವೊಮ್ಮೆ ಅವರು ವಿಶುದ್ಧಾನಂದ ಪರಮಹಂಸರಂಥ ತಮ್ಮ ಪ್ರತಿನಿಧಿಯನ್ನು ಸಂಪ್ರದಾಯಗಳನ್ನು ನಡೆಸಲು ಕಳುಹಿಸುತ್ತಾರೆ. ಅವರು ವಿಶುದ್ಧಾನಂದರಂಥವರನ್ನೂ ಜ್ಞಾನಗಂಜದಿಂದಲೇ ನೇರವಾಗಿ ಕಳಿಸುತ್ತಾರೆ. ಒಮ್ಮೆ ಮಾನವತೆಯಲ್ಲಿ ತಮ್ಮ ಸಂಪ್ರದಾಯವನ್ನು ಸ್ಥಾಪಿಸಿದ ಬಳಿಕ,ಅವರು ಮತ್ತೆ ಅದೃಶ್ಯರಾಗುತ್ತಾರೆ. ಇತರರು ಈ ಪ್ರಕಾರ ಸಂಪ್ರದಾಯವನ್ನು ನಡೆಸಲಿ; ಎಂದವರು ಹೇಳುತ್ತಾರೆ.

ಹೀಗೆ ನೀವು ನೆಲೆಗೊಳ್ಳಬೇಕಾದರೆ, ವಿಭಿನ್ನ ವಿಧಾನಗಳಿವೆ. ನೀವು ಸಿದ್ಧರನ್ನು ಕಾಣಲೂಬಹುದು.

ನಾನು ನನ್ನದೇ ಆದ ಸಿದ್ಧಮಂಡಲಕ್ಕೀಗ ಬರುವೆ. ಅದರ ಹೆಸರು, ವೀರಶೈವ ಸಿದ್ಧ ಮಂಡಲ ಎಂದಿದೆ.



ಇದುವೇ ಸಿದ್ಧ ಮಂಡಲ.

ಎಲ್ಲ ತತ್ತ್ವಗಳಲ್ಲಿಯೂ ಒಂದು ಕೇಂದ್ರೀಯ ನೆಲೆ ಇದೆ; ಎಂದವರು ಹೇಳುತ್ತಾರೆ. ಪ್ರಥಮವಾಗಿ ಅವರು ಐದನ್ನು ಪ್ರತಿಷ್ಠಾಪಿಸುತ್ತಾರೆ. ರೇಣುಕ, ದಾರುಕ, ಗಂಟಕರಣ, ಗಜಕರಣ, ಗೋಕರಣ. ಐವರು ಮಾನವ ಮಟ್ಟದ ಗುರುಗಳಿದ್ದಾರೆ. ಅವರನ್ನು ರೇಣುಕಾಚಾರ್ಯ, ದಾರುಕಾಚಾರ್ಯ, ಪಂಡಿತ ರಾಜ, ಏಕೋರಾಮ ರಾಜ, ಮರುಳ ರಾಜ ಎನ್ನುತ್ತಾರೆ. ಈ ಗುರುಗಳು ಭೂಮಿಯ ಮೇಲೆ ಬಂದಿದ್ದರು. ಮತ್ತು ಮರುಳ ಸಂಪ್ರದಾಯಕ್ಕೆ ಸೇರಿದ್ದರು. ನನ್ನ ಗುರುವು (ದೇಹಧಾರಿ ಗುರುವು) ಇದಕ್ಕೆ ಸೇರಿದ್ದಾರೆ. ಈ ಐವರೂ ಉನ್ನತ ಸ್ತರದಲ್ಲಿ, ಒಂದೇ ತರದ ಮುಖವನ್ನು ಹೊಂದಿದ್ದಾರೆ. ನೀವು ಅವರನ್ನು ಸುಲಭವಾಗಿ ವಿಂಗಡಿಸಿ ಅರಿಯಲಾರಿರಿ. ಆದರೂ ಸಹ, ವಿಂಗಡಿಸಿ ತಿಳಿಯುವ ಸಂಭವವಿದೆ. ಇದಾವ ರೀತಿಯ ಭೇದವಿರಬಹುದು? ಅವರ ಉಡುಗೆಯ ಸಮವಸ್ತ್ರದಲ್ಲಿ ಸ್ವಲ್ಪ ಭೇದವಿದೆ. ಅವರು ಕೈಯಲ್ಲಿ ದಂಡ ಕಮಂಡಲು ಧರಿಸಿರುತ್ತಾರೆ. ಅಲ್ಲಿಯೂ ಬೇರೆ ಬೇರೆ ವಿಧಾನಗಳಿವೆ. ಅದರ ಮೇಲಿಂದ ಅವರು ಬೇರೆ ಬೇರೆಯೆಂದು ಗುರುತಿಸಬಹುದು. ಆದರೆ, ಅವರ ಮುಖವು ಮಾತ್ರ ಏಕ ಸಮಾನ. ಅಂಥವರು ಅನೇಕರಿರಬಹುದು. ಹಾಗಿರುವ ಸಂಭವವೂ ಇದೆ. ಉದಾಹರಣೆಗೆ ಶಿಶುಗಳನ್ನೇ ನೋಡಿರಿ. ಕೂಡಲೇ ಒಂದು ಶಿಶುವಿನಿಂದ ಇನ್ನೊಂದನ್ನು ಪ್ರತ್ಯೇಕಿಸಿ ಅರಿಯಲಾರಿರಿ. ಯಾವಾಗ ಶೀರ್ಣತೆಯು ಪ್ರಾರಂಭವಾಗುವುದೋ, ಆಗ ವಿಶೇಷತೆಯೂ ಹೆಚ್ಚು ಹೆಚ್ಚು

ಸ್ಫುಟವಾಗುತ್ತದೆ. ಹೀಗೆ, ಆ ಐವರ ದೇಹದಲ್ಲಿ ಭೇದ ಕಾಣಬರುವುದಿಲ್ಲ. ಸಿದ್ಧ ದೇಹವೆಂದೂ ಶೀರ್ಣವಾಗುವುದಿಲ್ಲ. ಏಕೆಂದರೆ, ಅದು ಅಮರ ದೇಹವಾಗಿದೆ. ಅದು ಯಾವಾಗಲೂ ಅದೇ ವಯಸ್ಸಿನದಾಗಿರುತ್ತದೆ. ಅದು ಹತ್ತು ವರ್ಷದ ದೇಹವಾಗಿದ್ದರೆ, ಎಂದೆಂದಿಗೂ ಹತ್ತು ವರ್ಷದ್ದಾಗಿಯೇ ಉಳಿಯುತ್ತದೆ. ಹದಿನಾರು ವರ್ಷದ್ದಾಗಿದ್ದರೆ, ಎಂದೆಂದಿಗೂ ಹದಿನಾರು ವರ್ಷದ್ದಾಗಿಯೇ ಉಳಿಯುತ್ತದೆ. ಇಪ್ಪತ್ತು ವರ್ಷದ್ದಾಗಿದ್ದರೆ, ಎಂದೆಂದಿಗೂ ಇಪ್ಪತ್ತು ವರ್ಷದ್ದಾಗಿಯೇ ಉಳಿಯುತ್ತದೆ. ಸಾವಿರಾರು ವರ್ಷಗಳಾದ ಮೇಲೂ ಸಹ, ಅದು ಹಾಗೆಯೇ ಉಳಿಯುತ್ತದೆ. ಅದೇ ಪ್ರಕಾರ, ಅವರೈವರೂ ಹದಿನೆಂಟು ವರ್ಷದವರಾಗಿದ್ದಾರೆ. ಯಾರಿಗೂ ಗಡ್ಡ ಮೀಸೆಗಳಿಲ್ಲ. ಕೆಲವು ವೈಷ್ಣವ ಸಿದ್ಧರಿದ್ದಾರೆ. ಅವರಿಗೂ ಗಡ್ಡ-ಮೀಸೆಗಳಿಲ್ಲ. ಅವರು ಎಂದೆಂದಿಗೂ ಒಂದೇ ವಯಸ್ಸಿನವರಾಗಿರುತ್ತಾರೆ. ಈ ಸಿದ್ಧರೆಂದೂ ಪ್ರೌಢ ವಯಸ್ಕರಾಗುವುದೇ ಇಲ್ಲ. ಏಕೆಂದರೆ, ಅವರು ನಿತ್ಯರಾಗಿದ್ದಾರೆ. ಅವರು ಯಾವಾಗಲೂ ಉನ್ನತ ಮಟ್ಟದಲ್ಲಿರುತ್ತಾರೆ.

ಆದರೆ, ಈ ಜನರು ಮಾನವರಾಗಿದ್ದರು. ಅವರು ಆಚಾರ್ಯರಾಗಿದ್ದರು. ಅವರು ತಮ್ಮ ದೇಹಗಳನ್ನು ಸಿದ್ಧ ಶರೀರಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಅವರು ತಮ್ಮ ಮೂಲ ಕುರಿತು ಹೇಳಿದ್ದಾರೆ. ಈ ಮಂತ್ರ ದೇಹಗಳನ್ನು ಸೃಷ್ಟಿಸುವದೆಂತು? ಎಂಬುದನ್ನು ಕುರಿತು ಅವರು ಹೇಳಿದ್ದಾರೆ. ಅವರು ಹೇಳುವುದು ಹೀಗೆ : ಬೀಜಾಕ್ಷರಗಳಿವೆ. ನ. ಮ. ಶಿ..... ಇವು ಮಂತ್ರದ ಪಾದಗಳು. ಇವುಗಳಿಗೆ ವರ್ಣಗಳೆನ್ನುತ್ತಾರೆ. ಕೇಂದ್ರದಲ್ಲಿ ಇಂಥ ದೇಹವನ್ನು ಸೃಷ್ಟಿಸುತ್ತಿವೆ. ನೀವು ಯಾವನೊಬ್ಬ ವಿಶೇಷ ಸಿದ್ಧನನ್ನು ಕೇಂದ್ರದಲ್ಲಿಯೇ ಕಾಣಬೇಕು. ನೀವು ಅವನ ಹೃದಯದಲ್ಲಿ ನೋಡಿದರೆ ವರ್ಣದ ಸ್ಪಂದನೆಯು ಅಲ್ಲಿರುತ್ತದೆ. ಇನ್ನೊರ್ವನಲ್ಲಿ, ನೀವು ಮಂತ್ರದ ಸ್ಪಂದನೆಯನ್ನು ಕಾಣುವಿರಿ. ಅವನ ಏಕತೆಯ ಮುಖ್ಯಾಂಶವು ಮಂತ್ರ ಚೈತನ್ಯದಿಂದ ಆಗಿದೆ. ಅಂತೂ, ಒಟ್ಟಾರೆ ಅವರು ಶಿವನ ಅಂಶಗಳಲ್ಲದೆ ಬೇರೇನೂ ಅಲ್ಲ.

ಇವು ಐದು ರೂಪಗಳು. ಆದರೆ, ಇವರು ಏಕಸಮಾನರು. ಮತ್ತು ವಿಶೇಷವಾಗಿ, ಪೂರ್ಣಿಮೆಯಂದು ತಮ್ಮ ಶಿಷ್ಯರನ್ನು ಭೆಟ್ಟಿಯಾಗುತ್ತಾರೆ. ಮತ್ತು ದರ್ಶನ ಲಾಭ ನೀಡುತ್ತಾರೆ. ನೀವು ಕಣ್ಣುಗಳನ್ನು ಮುಚ್ಚಿ, ಅವರನ್ನು ನಿಮ್ಮ ಮಾನಸ ಚಕ್ಷುವಿನಿಂದ ಪೂರ್ಣಿಮೆಯ ದಿನದಂದು ಕಾಣಬಹುದು. ಸಿದ್ಧರ ಚಲನೆಯ ಪದ್ಧತಿಗಳು (ಅವರ ಜೀವನದ ಗತಿ) ವಿಭಿನ್ನವಾಗಿವೆ. ಹಲವರು ಯಾವಾಗಲೂ ಬರುತ್ತಾರೆ. ಹಲವರು ಕೂಡಲೇ ಪ್ರಕಾಶಿಸುತ್ತಾರೆ.

ಸಿದ್ಧರ ಪ್ರಕಾಶವೂ ಎರಡು ವಿಧವಾಗಿದೆ:

ಒಂದು ವಿಧದಲ್ಲಿ, ಜ್ಯೋತಿ ಬಿಂದುವಿರುತ್ತದೆ; ಅದು ಪ್ರಕಾಶ ಬೀರುತ್ತದೆ. ಇಲ್ಲವೆ ಅವರು ಬರುತ್ತಿರುವುದನ್ನು ನೀವು ಕಾಣುತ್ತೀರಿ. ಇನ್ನೊಂದು ವಿಧದಲ್ಲಿ, ಅವರು ಇಳಿದು ಬರುತ್ತಾರೆ; ಪ್ರಕಾಶ ಬೀರುವುದಿಲ್ಲ. ಹೀಗೆ ನಾರದರ ವರ್ಣನೆ ಇದೆ. ಅವರು ಭೂಮಿಗೆ ಬರುವಾಗ ಇಳಿದು ಬರುತ್ತಾರೆ. ಅದೇ ರೀತಿ, ನಮ್ಮ ಸಿದ್ಧರೂ ಇಳಿದು ಬರುತ್ತಾರೆ.

ಅವರು ಬಂದಾಗ, ವರ್ಣಗಳೂ ಸಹ ವಿಭಿನ್ನವಾಗಿರುತ್ತಿದ್ದವು. ಐದು ಬೇರೆ ಬೇರೆ ವರ್ಣಗಳುಂಟು. ಪ್ರತಿಯೋರ್ವನೂ ಬೇರೆ ಬೇರೆ ವರ್ಣದ ಧೋತರಗಳನ್ನು ಉಟ್ಟಿರುತ್ತಿದ್ದರು. ಆದ್ದರಿಂದಲೇ ನನ್ನ ಗುರುವು ತಾಮ್ರ ವರ್ಣದ ಧೋತರವನ್ನೇ ಉಡುತ್ತಿದ್ದನು. ಏಕೆಂದರೆ, ನಮ್ಮ ಸಿದ್ಧನು ತಾಮ್ರ ವರ್ಣದವನಾಗಿದ್ದಾನೆ. ಕೆಲವರು ಸ್ವರ್ಣ ವರ್ಣದ ವಸ್ತ್ರಗಳನ್ನು ಬಳಸುತ್ತಾರೆ. ಹೀಗೆ ಪಂಚ ಧಾತುಗಳನ್ನು (ಐದು ವರ್ಣಗಳನ್ನು) ಬಳಸುತ್ತಾರೆ.

ಇನ್ನು, ಈ ಐವರೂ ವಿಭಿನ್ನ ಸುಗಂಧಗಳನ್ನು ಹೊಂದಿದ್ದರು. ಅದು ರಹಸ್ಯ ವಿಷಯ. ಅದನ್ನು ನಾವೆಂದೂ ಹೊರಗೆಡವಲಾರೆವು. ನೀವು ಅವರನ್ನು ನೋಡಿದ ಕ್ಷಣವೇ ಆ ಸುಗಂಧವನ್ನು ಸವಿಯಬಲ್ಲಿರಿ.

ಪ್ರಶ್ನೆ: ಅವರು ಪೂರ್ಣಿಮೆಯ ದಿನವನ್ನೇ ಏಕೆ ಆಯ್ದು ಕೊಳ್ಳುತ್ತಾರೆ?

ಉತ್ತರ: ಈ ದಿನಗಳು ಅವರು, ಇಳಿದು ಬರಲು ಶುಭ ದಿನಗಳಾಗಿವೆ. ಶಿವರಾತ್ರಿಯಂತೂ ತುಂಬಾ ಮಹತ್ತ್ವದ್ದು. ಅವರು ಶಿವರಾತ್ರಿಯಂದು ತಪ್ಪದೇ ಇಳಿದು ಬರುತ್ತಾರೆ.

ಅವರ ಹಣೆಯಲ್ಲಿ ಶಿವಲಿಂಗವಿರುತ್ತದೆ. ನೀವು ನೋಡಿದರೆ, ಅದು ಬಲ್ಬಿನಂತೆ ಪ್ರಕಾಶಿಸುತ್ತಿರುತ್ತದೆ. ಇದು ಅವರ ಲಕ್ಷಣ.

ಪ್ರತಿಯೊಂದು ಮಂಡಲದಲ್ಲಿ ವಿಭಿನ್ನ ಆತ್ಮಗಳಿವೆ. ಪ್ರತಿಯೊಂದು ಆತ್ಮವೂ ಸಮಾನ ರೂಪ ಹೊಂದಿದೆ. ಅವು ನೂರಾರು ಉಂಟು. ನಾನು ಈ ಸಂಪ್ರದಾಯದಲ್ಲಿ ಇರುವೆನೆಂದು ತಿಳಿಯಿರಿ. ನಾನು ಬೇರೆ ಸಂಪ್ರದಾಯಕ್ಕೆ ಹೋಗದಿದ್ದರೆ, ಇಲ್ಲವೆ ನಾನು ಬೇರೆ ಕಾರ್ಯ ಮಾಡುವಲ್ಲಿ ಉದ್ಯುಕ್ತನಾಗದಿದ್ದರೆ, ನನಗೆ ಬೇರೆ ಮಂಡಲವಿರುವುದಿಲ್ಲ. ನಾನು ಸಿದ್ಧ ದೇಹ ಪಡೆದ ಮೇಲೆ ಇಲ್ಲಿಗೇ ಹೋಗಬೇಕಾಗುತ್ತದೆ.

ಇನ್ನು ವಿಭಿನ್ನ ನೆಲೆಗಳನ್ನು ನಾವು ಸಂವೇದಿಸುವಂತೆಯೇ, ಆಮ್ನಾಯಗಳೂ ಉಂಟು. ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ ಇವು

ಊರ್ಧ್ವಾಮ್ನಾಯಗಳು. ಆರ್ಥಾತ್ ಉನ್ನತೋನ್ನತ ಹಾದಿಯಲ್ಲಿಯವು. ನೀವು ನೋಡಿದರೆ, ನಕ್ಷತ್ರ ತ್ರಿಕೋಣದ ಹೊರತು ಬೇರೇನನ್ನೂ ಕಾಣಲಾರಿರಿ. ಇನ್ನು ನೀವು ಕೇಂದ್ರದಲ್ಲಿ ಪ್ರವೇಶಿಸಿದರೆ, ಬರೀ ಶಿವಲಿಂಗವನ್ನಷ್ಟೇ ನೋಡುತ್ತೀರಿ. ಮುಂದೆ, ನೀವು ಅದರಲ್ಲಿಯೇ ಪ್ರವೇಶಿಸಿದರೆ, ಅವರನ್ನು ಕಾಣುವಿರಿ. ಮತ್ತು ಅವರಿಗೆ ಅವರ ಶಿಷ್ಯ ಗಣವೂ ಉಂಟು.ಮತ್ತು ಅವರಿಗೆ ಅವರದೇ ಆದ ಬೋಧಿಯ ಮತ್ತು ಜ್ಞಾನದ ತರಬೇತಿಯಿದೆ. ಈ ಪ್ರತಿಯೊಬ್ಬರಿಗೂ ಇದೆ. ನೀವು ಒಬ್ಬರೊಡನೆ ಸಂಪರ್ಕಿಸಿದರೆ ಸಾಕು; ಎಲ್ಲರೂ ಸಂಪರ್ಕ ಲಾಭ ನೀಡುತ್ತಾರೆ. ಏಕೆಂದರೆ, ಅದು ಸಿದ್ಧರ ಒಂದು ಘಟಕ ತಾನೇ. ಅವರು ತಮ್ಮ ಸಂಪ್ರದಾಯದ ಶಿಷ್ಯರೊಂದಿಗೆ ಮಾತ್ರ ಸಂಪರ್ಕಿಸುತ್ತಾರಲ್ಲದೆ, ಬೇರೆಯವರೊಡನೆ ಅಲ್ಲ.

ಹೀಗೆ ಈ ಸಂಪ್ರದಾಯದಲ್ಲಿ ಇರುವವರಿಗೆ ಪಂಚಾಕ್ಷರ ಮಂತ್ರವನ್ನು ನೀಡಲಾಗುತ್ತಿದೆ.

ಪ್ರಶ್ನೆ: ಪಂಚಾಕ್ಷರ ಮಂತ್ರವನ್ನು ಅವರ ಸಂಪ್ರದಾಯದಲ್ಲಿ ಅಷ್ಟೇ ಜಪಿಸುವರೋ, ಇಲ್ಲವೆ ಬೇರೆ ಹಲವರೂ ಅದನ್ನು ಜಪಿಸುವರೋ?

ಉತ್ತರ: ಅಂಥ ಅನೇಕ ಸಂಪ್ರದಾಯಗಳಿವೆ. ಇದೂ ಒಂದು ಸಂಪ್ರದಾಯವಷ್ಟೇ.

ಪ್ರಶ್ನೆ: ಇತರ ಸಂಪ್ರದಾಯದವರು ಇವರೊಂದಿಗೆ ಸಂಪರ್ಕ ಹೊಂದಲಾರರೇನು?

ಉತ್ತರ: ಇಲ್ಲ; ಅವರೆಂದೂ ಪಡೆಯರು.

ಪ್ರಶ್ನೆ: ಅವರು ಅದೇ ಮಂತ್ರವನ್ನು ಜಪಿಸಿದರೂ ಸಹ...?

ಉತ್ತರ: ಹಾಗಿದ್ದರೆ, ಅವರು ಇತರ ಸಂಪ್ರದಾಯಗಳ ಮೂಲಕ, ನೇರವಾಗಿ ಶಿವನ ಸಂಪರ್ಕವನ್ನೇ ಪಡೆಯುತ್ತಾರೆ.

ಪ್ರಶ್ನೆ: ಅವರ ಸಂಪ್ರದಾಯದಲ್ಲಿರದ ಯಾವನೋ ಒಬ್ಬನು ಅವರನ್ನು ಸಂಪರ್ಕಿಸಲು ಬಯಸುವನೆಂದು ತಿಳಿಯಿರಿ. ಆಗ?

ಉತ್ತರ: ಅವನು ಅವರನ್ನು ಸಂತೋಷ ಪಡಿಸಿದರೆ, ಅವರು ಕೂಡಲೇ ಸಂಪರ್ಕಿಸುತ್ತಾರೆ. ಅವರು ಜ್ಞಾನ ನೀಡಬಹುದು. ಅವರು ವಿಷಯಗಳನ್ನು ವಿವರಿಸಬಹುದು. ಅವರು ಅಷ್ಟು ಪೂರ್ವಗ್ರಹ ದೂಷಿತರೇನಲ್ಲ. ಆದರೆ, ಅವರೊಂದಿಗಿರುವುದೇ ದೊಡ್ಡ ಸಮಸ್ಯೆ. ನೀವು ಅವರೊಂದಿಗೆ ಮೇಳವಿಸಿದರೆ, ಅವರು ಬಂದು ಸಂಪರ್ಕ ಲಾಭ ನೀಡುತ್ತಾರೆ.

ಅವರನ್ನು ಹೇಗೆ ಸಂಪರ್ಕಿಸಬಹುದೆಂಬುದೊಂದು ಸಾಂಪ್ರದಾಯಿಕ ರಹಸ್ಯ. ನಿಮ್ಮ ಗುರುವು ನಿಮಗೆ ಮಂತ್ರ ದೀಕ್ಷೆ ನೀಡುವಾಗ ಅದನ್ನು ಬಿಡಿಸಿ ಹೇಳುತ್ತಾನೆ.

ಅವರು ಪ್ರತಿಯೊಂದು ತತ್ತ್ವದಲ್ಲಿಯೂ, ಅಂದರೆ ಐದೂ ತತ್ತ್ವಗಳಲ್ಲಿಯೂ ಇದ್ದಾರೆ: ಪೃಥ್ವಿ, ಆಪ್, ತೇಜಸ್, ವಾಯು ಮತ್ತು ಆಕಾಶ. ಪ್ರತಿಯೊಂದರಲ್ಲಿಯೂ ಅವರಿಗೆ ತಮ್ಮದೇ ಆದ ಪ್ರಭುತ್ವವಿದೆ. ನಮ್ಮದು ಆಪ್ ತತ್ತ್ವ. ಮತ್ತು ಅವರು ಪ್ರತಿಯೊಂದು ತತ್ತ್ವದೊಂದಿಗೆ ಸಂಪರ್ಕಿಸುತ್ತಾರೆ.

೩

ದಿವ್ಯ ಸಾಮ್ರಾಜ್ಯ ಅಥವಾ ಪ್ರೇಮ ಕಮಲ

ತನ್ನ ಆಂತರ್ಯದಲ್ಲಿ ಕ್ರಿಯಾಶೀಲವಾಗಿರುವ ಶುದ್ಧ ಭಾವನೆಗಳನ್ನು ಅರಿತುಕೊಂಡರೆ, ಮಾನವನು ಎಷ್ಟು ಸುದೈವಿ! ಬರೀ ಇಷ್ಟೇ ಏಕೆ? ಒಂದು ವೇಳೆ, ಮಾನವನು ಆಂತರ್ಯದ ಭಾವನೆಗಳೊಂದಿಗಿನ ಈ ಶುದ್ಧ ಸಂಬಂಧವನ್ನು ಅರಿತರೆ, ಅವನು ಇನ್ನಷ್ಟು ಹೆಚ್ಚು ಸುದೈವಿ, ಎಂದು ನಾನು ಹೇಳುವೆ. ಅವನು ಈಗಾಗಲೇ ಮಾನವತೆಯಲ್ಲಿ ಕ್ರಿಯಾಶೀಲವಾಗಿರುವ ಗತಿಶೀಲ ಪ್ರೇಮವನ್ನು ಅರಿಯಬಲ್ಲನು. ಭಾವನಾತ್ಮಕವಾಗಿ ವಿವರಿಸುವುದಾದರೆ, ನಾನು ಅದನ್ನು ಪ್ರೇಮವೆಂದು ಕರೆಯುವೆ. ಆದರೆ, ವಾಸ್ತವವಾಗಿ, ಅದು ಗತಿಶೀಲ ಪ್ರಜ್ಞೆಯಲ್ಲದೆ ಬೇರೇನೂ ಅಲ್ಲ. ಪೂರ್ಣ ಪ್ರಜ್ಞೆಯು ಮಾನವನಲ್ಲಿ ಇದೆ. ಮಾನವನು ತನ್ನ ಮುಸುಕನ್ನು ಅರ್ಥಾತ್ ತನ್ನೊಳಗೇ ಇರುವ ಹೊದಿಕೆಯನ್ನು ತೆಗೆಯುವುದನ್ನು ಅರಿತುಕೊಳ್ಳಬೇಕಷ್ಟೇ. ಆ ಮುಸುಕು ಇಲ್ಲವೆ ಹೊದಿಕೆಗಳು ಅಲ್ಲಿ ಸ್ವಭಾವ ಮೂಲಕ, ಬಾಹ್ಯಿಕ ಸ್ವಭಾವ ಮೂಲಕ ಇವೆ. ನಾವು ಅವುಗಳನ್ನೇ ಐಂದ್ರಿಯಕ ಜ್ಞಾನವೆನ್ನುತ್ತೇವೆ. ಮನಸ್ಸು, ಬುದ್ಧಿ, ಭಾವಾತ್ಮಕ ಸಂಬಂಧಗಳ, ತರ್ಕಬದ್ಧತೆಗಳಲ್ಲ. ಜೀವನದ ಸೀಮಿತ ದೃಷ್ಟಿಕೋಣಗಳಷ್ಟೇ. ಮಾನವನು ಶತಮಾನಗಳಿಂದ ಆಂತರಿಕ ಜೀವನವನ್ನು ಅರಿಯಲು ಪ್ರಯತ್ನಿಸುತ್ತ ಬಂದಿದ್ದಾನೆ. ಇನ್ನು ಮಾನವನು ಆಧ್ಯಾತ್ಮಿಕನೂ ಆಗಬಹುದು. ಆದರೆ, ಆಧ್ಯಾತ್ಮಿಕತೆ ಎಂದರೇನು? ಅದನ್ನು ಸ್ಪಷ್ಟೀಕರಿಸುವುದೆಂತು? ಆಧ್ಯಾತ್ಮಿಕತೆಯ ಅಂತಿಮ ಗುರಿಯಾದರೂ ಏನು? ಅದಿನ್ನೂ ಮಾನವ ಮನದಲ್ಲಿ ನಡೆದಿದೆ. ಅದು ವಿಕಾಸಗೊಳ್ಳುತ್ತಿದೆ. ಅನೇಕ ಧಾರ್ಮಿಕ ಬೋಧಕರು, ಅನೇಕ ಸತ್ಯ ಶೋಧಕರು, ಈ ವಿಷಯಗಳನ್ನು ವಿವರಿಸಲು ಯತ್ನಿಸಿದ್ದಾರೆ. ಆದರೆ, ನಾನು ನಿಮಗೊಂದು ಸಂಗತಿಯನ್ನು ಹೇಳಿಬಿಡುವೆ. ಯಾವ ವ್ಯಕ್ತಿಯು

ಸದ್ಗುಣವನ್ನು,— ಅಂದರೆ, ಯಾವುದನ್ನು ನಾನು ಅನುಕಂಪವೆಂದು ಕರೆಯುವೇನೋ, ಯಾವುದನ್ನು ನಾನು ಪ್ರೇಮವೆಂದು ಕರೆಯುವೆನೋ, ಯಾವುದನ್ನು ನಾನು ಅನ್ಯರಿಗೆ ಹಿತ ಮಾಡುವುದು ಎನ್ನುವೇನೋ, ಯಾವುದು ಅನ್ಯರ ತೊಂದರೆಗಳಿಗೆ ಪ್ರತಿಸ್ಪಂದಿಸುವುದೋ, ಅನ್ಯರ ಭಾವನೆಗಳನ್ನು ಅರಿಯುವುದೋ ಮತ್ತು ಯಾವುದಾದರೂ ಭಾವಯುಕ್ತವಾಗುವುದೋ ಅದನ್ನು— ಹೊಂದಿರುವನೋ, ಅವನನ್ನು ಮಾತ್ರ ನಾನು ಮಾನವನೆಂದು ಕರೆಯುವೆ. ಈ ಸದ್ಗುಣಾತ್ಮಕ, ಶುದ್ಧ ಪ್ರಜ್ಞೆಯೇ ಮಾನವ–ಪ್ರಜ್ಞೆಯಾಗಿದೆ. ಒಂದು ವೇಳೆ, ಅವನು ಈ ಪ್ರಜ್ಞಾವಿಹೀನನಾದರೆ, ಅವನಲ್ಲಿ ಮಾನವನೆನಿಸಲು ಬೇಕಾದ –ಹೆಚ್ಚಿನ ವಿಶೇಷತೆಗಳೇನಿಲ್ಲ. ಅವನು ಮೃಗ; ಬೇಕಾದರೆ,ಅದಕ್ಕಿಂತ ಕಡೆಯೆನ್ನಿ. ಈ ಗುಣಗಳನ್ನು ಆಂತರ್ಯದಲ್ಲಿ ಹೊಂದಿದ ಮಾನವನೇ ಆತ್ಮ ವಿಚಾರದ ಅಧಿಕಾರಿಯಾಗಬಲ್ಲನು. ಆದರೂ ಸಹ, ಆಂತರ್ಯವನ್ನು ಅರಿಯುವ ಆಧ್ಯಾತ್ಮವಾದವು ಅನೇಕ ಸಂಪ್ರದಾಯಗಳಿಂದ ನಡೆಯುತ್ತಿದೆ. ಅವನು ಆಧ್ಯಾತ್ಮಿಕ ಮಾನವನಾದಾಗ ಮಾತ್ರ, ಅವನು ಪೂರ್ಣ ಪ್ರಜ್ಞೆಯೊಂದಿಗೆ ಸಮರಸ ಹೊಂದಬಹುದು. ಈಗ ನಾವು ಮಾನವನನ್ನು ಅತಿ ಮಾನವನಾಗಿ (Super man) ಕಾಣಬೇಕಾಗಿದೆ. ಅದು ತುಂಬಾ ಮಹತ್ವದ ಸಂಗತಿ. ನಾವೀಗ ನಮ್ಮೆದುರಿಗಿರುವ ಜೀವನದ ಸಂಪೂರ್ಣ ಹೊಸ ಆಯಾಮವನ್ನೇ ಕಾಣಲು ಬಯಸುತ್ತೇವೆ. ಈಗ ನಮ್ಮ ಪ್ರಜ್ಞೆಯು ಭಿನ್ನವಲ್ಲ. ಅದು ಸಂಪೂರ್ಣವಾಗಿ ಮಾನವತೆಯ ಸಮಷ್ಟಿಯೊಂದಿಗೆ ಸಮರಸ ಹೊಂದಿದೆ. ನಾವು ಮಾನವರೆಂಬ ಏಕತೆಯಲ್ಲಿ ಒಂದುಗೂಡಿದ್ದೇವೆ. ಹೀಗೆ ಸಮಷ್ಟಿ ಬುದ್ಧಿಯಿದೆ; ಸಮಷ್ಟಿ ಮನವಿದೆ. ಸಮಷ್ಟಿ ಇಂದ್ರಿಯಗಳಿವೆ. ಸಮಷ್ಟಿ ಪ್ರಾಣವಿದೆ. ಸಮಷ್ಟಿಯ ಪ್ರತಿಯೊಂದೂ ವ್ಯಷ್ಟಿಯಲ್ಲಿ ಕ್ರಿಯಾಶೀಲವಾಗಿವೆ. ಸಂತ–ಮಹಂತನಾಗಲು ಇಲ್ಲವೆ ಅನ್ಯರನ್ನು ಬಿಟ್ಟುಗೊಟ್ಟು ಉನ್ನತ ವ್ಯಕ್ತಿಯಾಗಲು, ಯಾವನೊಬ್ಬನ ವ್ಯಕ್ತಿತ್ವಕ್ಕೇ ಅತಿ ಹೆಚ್ಚಿನ ಗುರುತ್ವ ನೀಡುವ ಆ ದಿನಗಳು ಹಿಂದಾದವು. ನಾವೀಗ ರೂಪಾಂತರತೆಯನ್ನು (transformation) ಬಯಸುತ್ತೇವೆ; ಮತಾಂತರತೆಯನ್ನಲ್ಲ. ಮತಾಂತರತೆಯ ದಿನಗಳು ಹಿಂದಾದವು. ಈಗ ಮಾನವನನ್ನು ದೇವತೆಯನ್ನಾಗಿ ರೂಪಾಂತರಿಸುವ ದಿನಗಳು ಬಂದಿವೆ. ಇಂದು ಮಾನವನು ಬುದ್ಧಿವಂತ ಮಾನವನಾಗಿದ್ದಾನೆ. ಮಾನವನಿಗೆ ಮತಧರ್ಮಗಳ ನ್ಯೂನತೆಗಳ ಅರಿವಾಗಿದೆ. ಇವುಗಳೆಲ್ಲ ಬರೀ ಯಾಂತ್ರಿಕವಾಗಿ ಮುಂದುವರಿದಿವೆಯೆಂಬುದನ್ನು ಮಾನವನು ಅರಿತಿದ್ದಾನೆ.

ಒಂದೆಡೆಗೆ, ಈ ಧಾರ್ಮಿಕ ಮುಖಂಡರು ಅತ್ಯಂತ ವಿಷಯಗತ ಜನರಾಗುತ್ತಿದ್ದಾರೆ; ಆಧುನಿಕ ಜೀವನಕ್ಕೆ ತಕ್ಕಂತೆ ಸಂಘಟಿತರಾಗುತ್ತಿದ್ದಾರೆ. ಹೀಗಾಗಿ, ಅವರು ಜನರ ಹೃದಯವನ್ನು ಅರಿಯದವರಾಗಿದ್ದಾರೆ. ಅವರ ಹೃದಯದಲ್ಲಿ ಏನು ನಡೆದಿದೆಯೆಂಬುದನ್ನು ತಿಳಿಯರವರು. ಈಗ ಜನರು ತಮ್ಮಷ್ಟಕ್ಕೆ ತಾವೇ ವಿಚಾರಿಸಲು, ಅರಿತುಕೊಳ್ಳಲು ಶಕ್ಯವಾಗುವಷ್ಟು ಎಚ್ಚತ್ತಿದ್ದಾರೆ. ಈ ಓದುಗುಳಿಗಳ ವಿದ್ಯೆಯನ್ನು, ಈ ಔಪಚಾರಿಕತೆಗಳನ್ನು ಯಾರೂ ಬೆಂಬಲಿಸರು. ಆದರೆ ನಾವು ಈ ವಿಷಯವನ್ನೆಲ್ಲ ಸುವ್ಯವಸ್ಥೆಗೊಳಿಸುವುದೆಂತು? ನಾವು ಈ ಸಂಗತಿಗಳನ್ನು ಸಂಶ್ಲೇಷಿಸುವುದೆಂತು? ನಾವು ನೀಡಬಹುದಾದ ವಿಕಮೇವ ಉತ್ತರವಿದು: ನಮ್ಮೊಡನಿರುವ ಗತಿಶೀಲ ಭಾವನೆಗಳ ಹಾದಿಯಲ್ಲಿ ನಾವು ನಮ್ಮನ್ನು ಹೊಂದಿಸಿಕೊಳ್ಳಬೇಕು. ಮತ್ತು ಗತಿಶೀಲ ಪ್ರೇಮವಾವುದೆಂದು ಮನಗಾಣಬೇಕು.

ನನ್ನ ಗುರುವರ್ಯರು ಸಾಧನೆ ಮಾಡುತ್ತಿದ್ದ ಕಾಲದಲ್ಲಿ, ತಮ್ಮ ವೈಯಕ್ತಿಕ ಶಕ್ತಿಗಳನ್ನೂ, ವೈಯಕ್ತಿಕ ಅನುಭೂತಿಗಳನ್ನೂ,ಅಲ್ಲಗಳೆದು, ಈ ಉನ್ನತ ಪ್ರಜ್ಞೆಯ, ಈ ದಿವ್ಯ ಮಾತೆಯ ಅವತರಣವನ್ನು ಕಂಡುಕೊಳ್ಳುತ್ತಿದ್ದರು. ಮತ್ತು ಅದಕ್ಕಾಗಿ ಅವರು ಈ ಪ್ರೇಮ ಕಮಲ (Lotus of love) ವನ್ನು ರಚಿಸಿದ್ದಾರೆ. ಮತ್ತು ಅದು ಅಲ್ಲಿ ಯಾವಾಗಲೂ ಇರುತ್ತದೆ. ಈ ಸಂಪ್ರದಾಯಕ್ಕೆ ಸಂಬಂಧಿಸಿದವರು, ಮುಕ್ತಿಗಾಗಿಯೂ ಹೋಗರು; ಬೇರೆ ಸಾಮ್ರಾಜ್ಯಗಳಿಗೂ ಹೋಗರು; ಇನ್ನು ಮತಧರ್ಮಗಳ ಸ್ವರ್ಗಕ್ಕೆ ದೇವತೆಗಳಾಗಿಯೂ ಹೋಗರು. ನಾವು ದೇವತೆಗಳ ಭೂಮಿಯಿಂದಲೇ ಬಂದಿದ್ದೇವೆ. ನಾವು ಅನೇಕಾನೇಕ ಸ್ಥಾನಗಳಿಂದ ಬಂದಿದ್ದೇವೆ. ನಾವು ಅನೇಕ ಸಲ ಅನೇಕ ಉನ್ನತ ಲೋಕಗಳಲ್ಲಿದ್ದೆವು. ಈಗ ಮತ್ತೆ ಅಲ್ಲಿ ಹೋಗಬೇಕಾದ ಅಗತ್ಯವೇನಿಲ್ಲ. ಆದರೆ, ನಾವು ಆ ಕಮಲದಲ್ಲಿ ನಮ್ಮ ಗುರುವಿನೊಂದಿಗೆ ನೆಲೆ ಕಂಡುಕೊಳ್ಳಬೇಕು. ಈ ನೆಲೆಯು ಕಾಲದ ಕೇಂದ್ರದಲ್ಲಿದೆ. ಅದು ಜ್ಯೋತಿ ಮೂಲಕ ನಿರ್ಮಿತವಾಗಿದೆ. ಅದೇನೂ ದೇವನಿಂದ ನಿರ್ಮಿತವಾಗಿಲ್ಲ. ಆದರೆ ಅತಿಮಾನವನಿಂದ ನಿರ್ಮಿತವಾಗಿದೆ. ಅದು, ನೀವು ಮಾತೃ ಶಕ್ತಿಯೆಂದು ಕರೆಯುವ, ದಿವ್ಯ ಅವತರಣದ ಉನ್ನತತಮ ಶಕ್ತಿಗಳನ್ನು ಸ್ವೀಕರಿಸಲು ಮತ್ತು ಆ ಪ್ರಜ್ಞೆಯಲ್ಲಿ ನೆಲೆಗೊಳ್ಳಲು, ಅತಿಮಾನವನಿಂದ ನಿರ್ಮಿತವಾದ ವಿಸ್ತರಣೆಯಾಗಿದೆ. ವಾಸ್ತವವಾಗಿ ದಿವ್ಯ ಮಾತೆಯು ಎಲ್ಲೆಡೆಗೂ ಇದ್ದಾಳೆ. ದಿವ್ಯ ಮಾತೆಗೆ ಅನಂತ ರೂಪಗಳಿವೆ. ಆದರೂ ಅವಳು ಅರೂಪಳು; ನಿರಾಕಾರಳು.

ಏಕೆಂದರೆ, ಎಲ್ಲಿ ನಿಮ್ಮ ಸಮಷ್ಟಿ ಭಾವನೆಗಳು ಮಾನವತೆಯ ಕೇಂದ್ರದಲ್ಲಿ, ವಿಕೇಭವಿಸುವವೋ, ಅಲ್ಲಿ ಅದು ಇಂಥ ಗತಿಶೀಲ ಭಾವನೆಯನ್ನು ನೀಡುವ ಪ್ರಾಣಕೇಂದ್ರವಾಗಿರುವುದನ್ನು ನೀವು ಕಾಣುತ್ತೀರಿ. ಇನ್ನು, ಅಲ್ಲಿ ಗತಿಶೀಲ ಭಾವನೆಯಿದೆ. ಮತ್ತು ಮಾತೃ ಭಾವನೆಯು ಇನ್ನೂ ಪ್ರಧಾನವಾಗಿದೆ. ಹೀಗೆ, ನಾವು ಅದನ್ನು ಜೀವ–ಮಾತೃ ಎನ್ನುತ್ತೇವೆ. ಅಥವಾ ಕುಮಾರಿ ಶಕ್ತಿ ಅರ್ಥಾತ್ ಕನ್ಯಾ ಎನ್ನುತ್ತೇವೆ. ಅದೆಷ್ಟು ಸುಂದರ! ವಾಸ್ತವವಾಗಿ ನಾವು ಇಂಥ ಅದ್ಭುತ ಸ್ಥಾನಕ್ಕೆ ಸಂಬಂಧಿಸಿದ್ದೇವೆ! ಮತ್ತು ಈ ಎಲ್ಲ ಸಂಗತಿಗಳನ್ನು ಕಾರ್ಯಕಾರಿಗೊಳಿಸಲು ಬಂದಿದ್ದೇವೆ. ಒಂದೆಡೆಗೆ, ಎಲ್ಲ ಧಾರ್ಮಿಕ ಪ್ರಜ್ಞೆಯನ್ನು ಕ್ರೋಢೀಕರಿಸಲು ಬಂದಿದ್ದೇವೆ ಮತ್ತು ಇನ್ನೊಂದೆಡೆಗೆ, ನಾವು ಸಂಪೂರ್ಣವಾಗಿ ಧಾರ್ಮಿಕ ಪ್ರಜ್ಞೆಯಿಂದ ಸ್ವತಂತ್ರರಾಗಿದ್ದೇವೆ. ನಾವು ನಿಜವಾದ ಸತ್ಯ ಶೋಧಕರು. ನಮಗೆ ಸತ್ಯ ಮತ್ತು ಪ್ರೇಮಗಳು ಬೇಕು. ಮತ್ತು ನಾವು ನಮ್ಮ ಶುದ್ಧ ಪ್ರೇಮವನ್ನು ಸರ್ವರಲ್ಲಿಯೂ ಹಂಚಿಕೊಳ್ಳ ಬಯಸುತ್ತೇವೆ. ಏಕೆಂದರೆ, ಪ್ರತಿಯೊಬ್ಬರನ್ನೂ ಪ್ರೀತಿಸುವುದೇ ನಮ್ಮ ಕಾರ್ಯ. ಅವರು ನಮ್ಮ ಪರಿಚಯದವರಿರಬಹುದು; ಇರಲಿಕ್ಕಿಲ್ಲ. ಅದರ ಪರಿವೆ ನಮಗಿಲ್ಲ. 'ನಾನು ನಿನ್ನನ್ನು ಪ್ರೀತಿಸುವೆ;' ಎಂಬ ಚಿತ್ರವನ್ನು ಅವರಲ್ಲಿ ಮೂಡಿಸುವ ಆವಶ್ಯಕತೆಯೇನಿಲ್ಲ; ಪ್ರೇಮವು ಆ ಪ್ರಕಾರದ್ದೇ ಅಲ್ಲ. ನಮಗೆ ನಮ್ಮ ಮನೋಭಾವಗಳಲ್ಲಿ ವಿಶ್ವಾಸವಿದೆ. ನೀವು ಮನೋಭಾವದ ಕೇಂದ್ರಕ್ಕೆ ಹೋಗುತ್ತಿದ್ದೀರಿ. ಇಲ್ಲವೆ, ಒಂದು ವೇಳೆ, ನೀವು ಮನದ ಕೇಂದ್ರವನ್ನು ತಲುಪಿದರೆ, ಇಲ್ಲವೆ ಪ್ರಾಣದ ಕೇಂದ್ರವನ್ನು, ವಿಶ್ವ ಪ್ರಾಣ ಕೇಂದ್ರವನ್ನು ತಲುಪಿದರೆ, ಆಗ ಕಾಲವು ಮತ್ತು ನಿಮ್ಮ ಅಪಂಕಾರವು ಕ್ರಿಯಾನ್ವಿತವಾಗುವುದಿಲ್ಲ. ನಿಮ್ಮ ವ್ಯಕ್ತಿ ಸತ್ತೆಯ ಸಮಷ್ಟಿ ಪ್ರಜ್ಞೆಯು ಕ್ರಿಯಾನ್ವಿತವಾಗಿರುತ್ತದೆ. ಆಗ ನೀವು, ಮನೋಭಾವದ ಸಮಷ್ಟಿ ಪ್ರಜ್ಞೆಯಲ್ಲಿ ಇದ್ದರೆ, ಮತ್ತು ಅದರೊಂದಿಗೆ ಮೇಳವಿಸಿದ್ದರೆ, ನೀವು ಯಾರನ್ನಾದರೂ ಕಾಣಬಲ್ಲಿರಿ. ಅವರು ಸಹ ಸ್ವೀಕರಿಸಬಲ್ಲರು. ಮತ್ತು ಸ್ವೀಕಾರಯೋಗ್ಯರಾಗುತ್ತಾರೆ. ಆದರೆ ನಾನು ಹೇಳುವುದು, ಇದಿಷ್ಟೇ ಅಲ್ಲ. ನಾವು ರೂಪಾಂತರಗೊಳ್ಳಬಲ್ಲೆವು. ನಾವು ಮಾನವನನ್ನು ಸಹ ಬದಲಿಸಬಲ್ಲೆವು. 'ನೀವು ನನ್ನನ್ನು ಪ್ರೀತಿಸಿರಿ' ಎಂದು ನೀವು ಕೇಳುವ ಅಗತ್ಯವೇ ಇಲ್ಲ. ಆದರೆ, ನೀವು ಪ್ರೇಮದ ಕೇಂದ್ರದಲ್ಲಿದ್ದರೆ, ನೀವು ಪ್ರೇಮ ಪೂರ್ವಕ ನೋಡುತ್ತಿದ್ದರೆ, ನೀವು ಏನನ್ನೇ ಆಗಲಿ, ಹೇಳುವ ಅಗತ್ಯವಿಲ್ಲ. ನೀವು ಆನಂದವನ್ನು ಪಡೆಯುತ್ತೀರಿ ಮತ್ತು ಪರಿವರ್ತಿತ

ರಾಗುತ್ತೀರಿ. ಪರಿವರ್ತನೆಯು ಪ್ರದರ್ಶನದಲ್ಲಾಗಲಿ, ಪುಸ್ತಕಗಳಲ್ಲಾಗಲಿ ಇಲ್ಲ. ಅದು ಬುದ್ಧಿಪೂರ್ಣ ಸ್ಪಷ್ಟೀಕರಣಗಳಲ್ಲಿಯೂ ಇಲ್ಲ. ವ್ರತಾನುಷ್ಠಾನಗಳ ಆಚರಣೆಯಲ್ಲಿಯೂ ಇಲ್ಲ. ಅಂಥವುಗಳೆಲ್ಲ ಕಳೆದು ಹೋದ ದಿನಗಳ ಮಾತಷ್ಟೇ.

ಮಾನವತೆಯನ್ನು ಬದಲಿಸುವುದು, ರೂಪಾಂತರವನ್ನು ಸಾಧಿಸುವುದು, ನೀವು ಎಲ್ಲಿಗೆ ಹೋದಾಗ ಸಾಧ್ಯ? ಮಾನವತೆಯ ಸಮಷ್ಟಿ ಪ್ರಜ್ಞೆಯ ಕೇಂದ್ರಕ್ಕೆ ಹೋದಾಗ. ಆಗ ಮಾತ್ರ, ಮಾನವತೆಯು ಬದಲಾಗಬಹುದು; ಮಾನವನೂ ಬದಲಾಗಬಹುದು. ಆ ಬದಲಾವಣೆಯು ಕ್ರಾಂತಿಕಾರಕ ಬದಲಾವಣೆಯಲ್ಲ. ಅದು ರೂಪಾಂತೃಕರಣವೇ ಸರಿ.

ತಾಮ್ರವನ್ನು ಬಂಗಾರವನ್ನಾಗಿ ಪರಿವರ್ತಿಸಬಹುದೆಂದು ನಾನು ನಿಮಗೆ ಹೇಳಿದ್ದೇನೆ. ಪ್ರಾಚೀನ ಕಾಲದಿಂದಲೂ ಫ್ರಾನ್ಸ್, ಭಾರತ ಮತ್ತಿತರ ದೇಶಗಳು, ಕೀಳು ಧಾತುವಿನಿಂದ ಸ್ವರ್ಣ ತೈಯಾರಿಸುವ (Alchemy) ದೇಶಗಳಾಗಿವೆ. ಒಂದು ಕಾಲದಲ್ಲಿ, ಎಲ್ಲರೂ ಈ ಕುರಿತು ಆಸಕ್ತಿ ವಹಿಸಿದ್ದರು. ಕೇವಲ ಧಾತುಗಳ ಸ್ವರ್ಣೀಕರಣವಷ್ಟೇ ಅಲ್ಲ; ಆತ್ಮ ಮತ್ತು ದೇಹಗಳನ್ನೂ ಸಹ.

ಸ್ವರ್ಣೀಕರಣದ ಮೂಲಕ ಅಮರತ್ವ ಪಡೆಯುವ ಗ್ರಹಿಕೆಯೊಂದಿದೆ. ನಮ್ಮ ಭಾಷೆಯಲ್ಲಿ ಅದನ್ನು ರಸ ಶಾಸ್ತ್ರವೆನ್ನುತ್ತಾರೆ. ವಾಸ್ತವವಾಗಿ ಪಾರಜದಲ್ಲಿ ಧಾತುಗಳನ್ನು ಸ್ವರ್ಣವಾಗಿಸುವ ಶಕ್ತಿಯಿದೆ.

ಈ ರಸ ಶಾಸ್ತ್ರದಲ್ಲಿ ಅರ್ಥಾತ್ ಸ್ವರ್ಣವಿದ್ಯೆಯಲ್ಲಿ ಎರಡು ಪ್ರಕಾರಗಳಿವೆ.

ಒಂದು ಪಾರಜದ ಮೂಲಕ; ಇನ್ನೊಂದು ಅಭ್ರಕದ ಮೂಲಕ.

ಅವು ಶಿವ ಮತ್ತು ಶಕ್ತಿಯರ ಪ್ರತೀಕಗಳಾಗಿವೆ. ಪಾರಜವು ಶಿವ; ಅಭ್ರಕವು ಶಕ್ತಿ; ಎಂದು ಕರೆಯಲ್ಪಡುತ್ತವೆ. ಹೀಗೆ ಮೊತ್ತ ಮೊದಲು ಈ ರಸ ವಿದ್ಯೆಯು ಪರಿವರ್ತನೆಯನ್ನು ಕಂಡುಕೊಂಡಿತು. ಅರ್ಥಾತ್ ಪ್ರತಿಯೊಂದು ಅಣು–ಪರಮಾಣುವು, ಪ್ರತಿಯೊಂದು ಕ್ಷುದ್ರ ಕಣವು, ಸರ್ವವನ್ನೂ ಒಳಗೊಂಡಿದೆ, ಎಂಬುದು ಅವರ ಗ್ರಹಿಕೆಯಾಗಿತ್ತು.

ಆದಾಗ್ಯೂ ರೂಪಾಂತರದಲ್ಲಿನ, ಮಹತ್ವದ ಬದಲಾವಣೆಯ ವಿಷಯವು ತೀರ ಬೇರೆಯೇ ಇದೆ. ಈ ರೂಪಾಂತರ (transformation) ಶಬ್ದವನ್ನು ಶ್ರೀ ಅರವಿಂದರು ತಮ್ಮದೇ ಆದ ರೀತಿಯಲ್ಲಿ ಬಳಸಿದ್ದಾರೆ. ಆದರೆ ನಾವು ಅದನ್ನು 'ರೂಪಾಂತೃಕರಣ' ಎನ್ನುತ್ತೇವೆ. ನನ್ನ ಗುರುವು ಅಖಿಂಡ ಮಹಾಯೋಗದ ಮೇಲೆ ಯಾವುದೇ ಗ್ರಂಥ ರಚಿಸಲಿಲ್ಲ. ಆದರೆ, ಅವರು ತಮ್ಮ

ಗ್ರಹಿಕೆಯನ್ನು ವಿವರಿಸಲು ತಾಂತ್ರಿಕ ಪದಗಳನ್ನು ಪ್ರಯೋಗಿಸಿದ್ದಾರೆ. ಹೀಗೆ ನಾವು ಅದನ್ನು ರೂಪಾಂತೃಕರಣ ಎನ್ನುತ್ತೇವೆ. ಅದುವೇ ರೂಪಾಂತರ (transformation). ಆದರೆ ರೂಪಾಂತರ (transformation) ಪದವೂ ಮತ್ತು ನಾವು ಬಳಸುವ ರೂಪಾಂತೃಕರಣ ಪದವೂ ತೀರ ವಿಭಿನ್ನ. ಆದರೆ, ಅದೇನೇ ಇರಲಿ; ಮೂಲ ಗ್ರಹಿಕೆಯು ಒಂದೇ ಆಗಿದೆ. ಆದ್ದರಿಂದ, ನಾವು ರೂಪಾಂತರ (transformation) ಶಬ್ದವನ್ನೂ ಬಳಸಬಹುದು. ಅದರಿಂದೇನೂ ತೊಂದರೆ ಇಲ್ಲ.

('ಸರ್ವ ದರ್ಶನ ಸಂಗ್ರಹ'ಃ ರಸೇಶ್ವರ ಸಿದ್ಧಾಂತವನ್ನು ನೋಡಿರಿ.)

ಈಗ ಒಂದು ಪ್ರಶ್ನೆ ಏಳುತ್ತದೆ. 'ಬ'ನನ್ನು 'ಅ' ಆಗಿ ರೂಪಾಂತರಿಸುವುದು ಸಂಭವವೇನು? 'ಬ'ನು 'ಅ'ನ ಗುಣಗಳನ್ನು ಹೊಂದಿರುವನೇ? ಇದರ ಅರ್ಥವೇನು?

ಯುಕ್ತಿಪೂರ್ಣವಾಗಿ ವಿಶ್ಲೇಷಿಸಿದರೆ, 'ಬ'ನು, 'ಅ' ಆಗಿ ರೂಪಾಂತರಗೊಂಡನು ಎಂದರೆ, 'ಬ'ನು 'ಅ'ನೇ ಆದನು, ಎಂದರ್ಥ. 'ಬ'ನಲ್ಲಿ ಕೆಲವು ವಿಶೇಷ ಗುಣಗಳಿದ್ದವು. ಅವುಗಳೆಲ್ಲ 'ಅ'ನಲ್ಲಿ ರೂಪಾಂತರಗೊಂಡವು. ಅಂದರೆ, 'ಬ'ನು 'ಅ'ನ ಗುಣಗಳನ್ನೇ ಪಡೆದನು, ಎಂದರ್ಥ. ಇದನ್ನೇ ರೂಪಾಂತೃರಣವೆನ್ನುತ್ತಾರೆ.

'ಬ'ನು ರೂಪಾಂತರಗೊಳ್ಳಬೇಕಾದರೆ, 'ಅ'ನಲ್ಲಿ ಯಾವ ಗುಣಗಳಿದ್ದವು? ಈಗ 'ಅ' ಮತ್ತು 'ಬ' ಏನಾಗಿದ್ದಾರೆ? 'ಅ' ಮಹಾಶಕ್ತಿ ಎಂದು ನಾನು ಹೇಳುವೆ. ಅವಳು ಸಕಲ ಗುಣ ಸಂಪನ್ನೆಯಾಗಿದ್ದಾಳೆ. ಅವಳ ಪ್ರಜ್ಞೆಯಿಂದ, ಮರ್ತ್ಯನಾದ, ದುರ್ಬಲನಾದ, 'ಬ'ನು ರೂಪಾಂತೃಕೃತನಾಗಲೇಬೇಕು. ಅರ್ಥಾತ್, ನಾವು ರೂಪಾಂತೃಕೃತರಾಗಬೇಕಾದರೆ, ಒಂದು ಮಾದರಿ ಬೇಕು. ನೀವು ಅದನ್ನು transformer (ರೂಪಾಂತೃಕಾರಕ) ಎನ್ನುವಿರಲ್ಲವೇ? ಅಹುದೋ, ಅಲ್ಲವೋ? ಅರ್ಥಾತ್ ವಿಶೇಷ ಶಕ್ತಿಯು 'ಬ'ನಲ್ಲಿ ರೂಪಾಂತೃಕರಿಸಬೇಕು. ಹಾಗಾದರೆ ಮಾತ್ರ, ಈ ಶಕ್ತಿಯು 'ಬ'ನಲ್ಲಿ ಕಾರ್ಯ ಮಾಡಬಲ್ಲದು.

ಇದೇ ರೀತಿ, ಈ ಪೂರ್ಣ ಯೋಗ ಅಥವಾ ಅಖಿಂಡ ಮಹಾಯೋಗದ ಪದ್ಧತಿಯಲ್ಲಿ ಕಾರ್ಯ ಮಾಡುವ ಜನರು, ಈ ರೂಪಾಂತೃಕರಣ ಕುರಿತು ಏನನ್ನು ಗ್ರಹಿಸಿದ್ದಾರೆ? ಅದರಿಂದ, ಅವರೇನನ್ನು ಹೊಂದಬಯಸಿದ್ದಾರೆ? ಅದರ ಬಗೆಗೆ ಅವರ ಹೇಳಿಕೆ ಏನು? ಎಂಬದನ್ನಿಷ್ಟು ಚರ್ಚಿಸೋಣ.

ಈಗ ಮಾನವನಿಗೆ ತನ್ನ ಮನವಿದೆ. ಅವನ ಭೌತಿಕ, ಮಾನಸಿಕ ಮತ್ತು ಪ್ರಾಣಿಕ ಸ್ತರಗಳಿವೆ. ಮಾನವೀಯ ಸ್ತರಗಳಿವೆ: ಮಾನವನು, ಅನ್ನ, ಪ್ರಾಣ, ಮನೋ, ವಿಜ್ಞಾನ ಮತ್ತು ಆನಂದಮಯಹೀಗೆ ಐದು ಕೋಶಗಳನ್ನು ಹೊಂದಿದ್ದಾನೆ. ಅವನಿಗೆ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಿವೆ. ಮತ್ತು ಅವನು ಜಗದೊಂದಿಗೆ ಸಂಬಂಧ ಹೊಂದಿದ್ದಾನೆ. ಅವನಲ್ಲಿ ಅನುಕಂಪವಿದೆ. ಆದರೆ, ಮಾನಸ ಸ್ತರದಲ್ಲಿ ಅವನಲ್ಲಿ ಮತ್ಸರ, ದ್ವೇಷ, ಕಾಮ, ಕ್ರೋಧ, ಲೋಭ ಮುಂತಾದವುಗಳಿವೆ ಈ ಎಲ್ಲ ವೃತ್ತಿಗಳೂ ಇವೆ. ಮತ್ತು ಮಾನವನು ಕಾಲ ಪ್ರಜ್ಞೆಯಲ್ಲಿ ಸಾಮಾಗಲೂ ಕೊಳೆಯುತ್ತಿರುತ್ತಾನೆ. ಅಲ್ಲಿ ಒಬ್ಬ ಮನುಷ್ಯನಿದ್ದಾನೆ. ಅವನೊಬ್ಬ ಯುವಕ. ಅವನು ವೃದ್ಧನಾದ ಮೇಲೆ ಅವನ ಇಂದ್ರಿಯಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಅವನು ತೀಕ್ಷ್ಣ ಮುದುಕನಾಗುತ್ತಾನೆ. ಆ ಬಳಿಕ, ಅವನು ಪ್ರಕೃತಿಯ ಮೇಲೆ ಎಷ್ಟೊಂದು ಅವಲಂಬಿತನಾಗುವುನೆಂದರೆ, ಕೊನೆಗೊಂದು ದಿನ ಅವನು ತನ್ನೆಲ್ಲ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ. ಮತ್ತು ಸತ್ತು ಹೋಗುತ್ತಾನೆ. ಇದುವೇ ಮಾನವನ ಸ್ವಭಾವ. ಇತ್ತ ನಾವು, "ಇದನ್ನು ನಾನು ಪಡೆದಿದ್ದೇನೆ. ಇದು ನನ್ನ ಧನ," ಎಂದು ಹಂಕರಿಸುತ್ತೇವೆ. ಒಬ್ಬನು ಧನಿಕ, ಇನ್ನೊಬ್ಬನು ದರಿದ್ರ; ಒಬ್ಬನು ಶಿಕ್ಷಿತ, ಇನ್ನೊಬ್ಬನು ಅಶಿಕ್ಷಿತ; ಕೆಲವರು ಸುಖಿಗಳು, ಕೆಲವರಿಗೆ ಸುಖವೆ ಸಿಗದು; ಕೆಲವರು ಅತಿ ಪರಿಶ್ರಮ ಮಾಡುತ್ತಾರೆ; ಕೆಲವರು ಏನನ್ನೂ ಮಾಡರು. ಈ ಎಲ್ಲ ವೈಷಮ್ಯಗಳೂ ಇವೆ. ಕೆಲವು ರಾಷ್ಟ್ರಗಳು ಇತರರನ್ನು ಗೆಲ್ಲುತ್ತವೆ. ಇವೆಲ್ಲ ಉಂಟು.

ಇನ್ನು, ಕೆಲವು ಜನರು ಉನ್ನತ ಜೀವನ ಪಡೆಯುತ್ತಾರೆ. ಅರ್ಥಾತ್ ಕೆಲವರು ಆತ್ಮ ಸಾಕ್ಷಾತ್ಕಾರ ಪಡೆದಿದ್ದಾರೆ. ಕೆಲವರು ಸಂತರೆನಿಸಿದ್ದಾರೆ. ಇನ್ನು ಕೆಲವರು ಅತಿ ಕೇಡಿ ಜನರಾಗುತ್ತಾರೆ. ಮಾನವತೆಯಲ್ಲಿ ಇದೆಲ್ಲ ನಡೆದೇ ಇದೆ.

ಒಂದು ವೇಳೆ, ನೀವಿನ್ನೂ ಆಳಕ್ಕಿಳಿದರೆ, ನಮ್ಮಲ್ಲಿ ವಿಭಿನ್ನ ಅಭಿಪ್ರಾಯಗಳಿರುವುದು ಕಂಡುಬರುತ್ತದೆ. ವಿಭಿನ್ನ ಮತಧರ್ಮಗಳಿವೆ. ನಾವು ಬೇರೆ ಬೇರೆ ವಿಷಯ ಕುರಿತು ಮಾತನಾಡುತ್ತೇವೆ. ನಾವು ನಮ್ಮ ವಿಭಿನ್ನ ಸಂಸ್ಕಾರಗಳೊಂದಿಗೆ ಘರ್ಷಣೆಗಿಳಿಯುತ್ತೇವೆ. ಇನ್ನು ಕೆಲವು ನಿಜ ಸಾಧಕರಿರುತ್ತಾರೆ. ಅವರು ಪರಿಶೋಧ ನಡೆಸಿ ಪ್ರಜ್ಞೆಯ ಪ್ರಕಾಶವನ್ನು ಪಡೆಯುತ್ತಾರೆ. ಅವರು ಸಾಕ್ಷಾತ್ಕಾರ ಪಡೆಯುತ್ತಾರೆ. ಅವರು ತುಂಬಾ ಸಾಧು ಸ್ವಭಾವಿಗಳು; ಅವರು ಈ ಜಗವನ್ನು ಸದ್ಗುಣಿಯನ್ನಾಗಿ ಮಾಡುತ್ತಾರೆ. ಅವರು ಸಹಾಯ ಸಲ್ಲಿಸುತ್ತಾರೆ. ಅವರು ಇತರರಿಗೆ ನೆರವು ನೀಡಲು ಬಯಸುತ್ತಾರೆ. ಈ ವಿಶ್ವದಲ್ಲಿ ಇವೆಲ್ಲ ಸಂಗತಿಗಳು ಸಂಭವಿಸುತ್ತಿರುತ್ತವೆ. ಇನ್ನು ಕೆಲವರು, ಈ ಜಗತ್ತನ್ನು ತೊರೆಯುತ್ತಾರೆ. ಮತ್ತು ಮುಕ್ತಿ ಪಡೆಯ ಬಯಸುತ್ತಾರೆ. ಹೀಗೆಲ್ಲ ನಡೆದಿರುತ್ತದೆ.

ಈಗ ರೂಪಾಂತರಣದ ಪ್ರಶ್ನೆಯತ್ತ ಹೊರಳುವಾ: ರೂಪಾಂತರಣ ಎಂದರೇನು? ನಾವು ರೂಪಾಂತರಿಸುವುದು ಏನನ್ನು? ಕೆಲವರು ಹೀಗೆ ಹೇಳುತ್ತಾರೆ; "ಓಹೋ! ನಾವು ಒಂದು ಸಂಸ್ಥೆಯನ್ನು ಸಂಘಟಿಸಿದರೆ, ಎಲ್ಲವೂ ಸರಿಹೋಗುತ್ತದೆ. ಅದು ಹೆಚ್ಚು ಒಳ್ಳೆದು" ಇಲ್ಲವೆ "ನಾವು ಚರ್ಚೆಗಳ ಮೂಲಕ, ನಮ್ಮ ಮತಧರ್ಮವನ್ನು ಪ್ರಸಾರ ಪಡಿಸುತ್ತೇವೆ. ಹೀಗಾದರೆ, ಜನರು ಸರಿಯಾಗುತ್ತಾರೆ." ಆದರೆ, ಈ ಪ್ರಯತ್ನಗಳೆಲ್ಲ ಅಯಶಸ್ವಿಯಾಗಿವೆ. ಕೆಲವು ಮತಧರ್ಮಗಳು ಜನರನ್ನು ಮತಾಂತರಿಸಲು ಪ್ರಯತ್ನಿಸಿವೆ. ಆದರೆ, ಹೀಗೆ ಮತಾಂತರಗೊಂಡ ಜನರು ಏನನ್ನೂ ಮಾಡಲಾರರು. ಅವರೂ ಸಹ, ಇತರರಂಥ ಧಾರ್ಮಿಕರಾಗುತ್ತಾರೆ. ಇನ್ನು ಕೆಲವರು ಬಂದು, ಇತರ ಬುದ್ಧಿವಂತ ಜನರಿಗೆ ಪರಿಣಾಮಕಾರಿ ಭಾಷಣ ಮಾಡಿದರು. ಆದರೇನು? ಈ ಎಲ್ಲ ಸಂಗತಿಗಳು ನಡೆದೇ ಇವೆ.

ಇನ್ನು ಕೆಲವರು ಆತ್ಮಾನುಭೂತಿ ಹೊಂದಿದ್ದಾರೆ. ಇಂಥವರನ್ನು ಕುರಿತು ನಾವು, "ಅವನು ಶ್ರೇಷ್ಠನು; ಅವನು ಅವತಾರಿಯು" ಎಂದು ಹೇಳುತ್ತೇವೆ ಅವನು ಅನೇಕ ಸಂಗತಿಗಳನ್ನು ಮಾಡಿ, ಮರಳಿ ಹೋಗಿಬಿಟ್ಟನು. ಆದರೆ, ಈ ವಿಶ್ವದ ಗತಿಯೇನು? ಈ ಪ್ರಶ್ನೆಯು ಅನೇಕ ಅನುಭಾವಿಗಳೆದುರು ನಿಂತಿತು. ಅವರು ಈ ಬಗೆಗೆ "ಓಹೋ; ಇದು ದೇವರ ಇಚ್ಛೆ. ದೇವರು ತನ್ನ ಸ್ವತಂತ್ರ ಇಚ್ಛೆಯಿಂದ ಈ ಜಗತ್ತನ್ನು ಸೃಷ್ಟಿಸಿದ್ದಾನೆ. ನಾವೇನು ಮಾಡಲು ಸಾಧ್ಯ? ಇದು ಹೀಗೇ ನಡೆಯುತ್ತದೆ." ಎಂದು ಹೇಳುತ್ತಾರೆ. ಹೀಗೆ ಏನು ನಡೆದಿದೆಯೋ ಅದೇ ಸರಿ; ಎಂದು ಬುದ್ಧಿವಂತರೂ ಮನಗಂಡಿದ್ದಾರೆ. ಅಪರ ಮೇರೆಗೆ, 'ನಾವು ನಮ್ಮ ದೃಷ್ಟಿಕೋಣವನ್ನೇ ತಿದ್ದಿಕೊಳ್ಳಬೇಕು. ಮತ್ತು ಇದೆಲ್ಲ ದೇವರ ಲೀಲೆ; ಎಂದು ಹೇಳಬೇಕಷ್ಟೇ. ಕೆಲವರು ದರಿದ್ರರಿದ್ದಾರೆ, ಸರಿ. ಅವರು ದರಿದ್ರರಾಗಿಯೇ ಇರಲಿ ಬಿಡಿ. ಅವರು ಸಾಯುತ್ತಾರೆ; ಸರಿ. ಅವರು ಸಾಯಬೇಕೆಂಬುದೇ ದೇವರ ಇಚ್ಛೆ.' ಹೀಗೆ ನಾವು ನಮ್ಮ ಬುದ್ಧಿಯನ್ನು ಸಾಂತ್ವನಗೊಳಿಸಿದ್ದೇವೆ. ನಮ್ಮ ಮನವನ್ನು ಸಾಂತ್ವನಗೊಳಿಸಿದ್ದೇವೆ. ನಾವೆಷ್ಟೇ ಉನ್ನತ ಮಟ್ಟ ಮುಟ್ಟಿದ್ದರೂ ಇದು ವರೆಗೆ ಮಾಡಿದುದು ಇಷ್ಟೇ. ಈ ಅತಿ

ಭಾತಿಕ ಮತ್ತು ದಾರ್ಶನಿಕ ಸಾಂತ್ವನಗಳನ್ನೂ ಮತ್ತು ಸಾಕ್ಷಾತ್ಕಾರ ಪಡೆದವರು ನೀಡುವ ಸಾಂತ್ವನ ಪರ ನುಡಿಗಳಾದ "ನೀವು ಕು-ಕರ್ಮ ಮಾಡಿದ್ದಿರಿ. ಅದರಿಂದಾಗಿ ಹಾಗಾಗಿದೆ;' ಎಂಬಿವುಗಳನ್ನು ನಾವು ನಂಬಿಕೊಂಡು ಬಂದಿದ್ದೇವೆ. ಆದರೆ, ಈಗ ಇರುವ ಪ್ರಶ್ನೆ ಹೀಗೆ: ಒಂದು ವೇಳೆ, ಈ ವೈಷಮ್ಯವು ನಿರಂತರವಾಗಿ ಮುಂದುವರಿದರೆ, ಈ ಜೀವನದ ಸಾರ್ಥಕತೆಯಾದರೂ ಏನು? ಈ ತರದ ವಿಚಾರವು ನನ್ನ ಗುರು ಮತ್ತು ಶ್ರೀಅರವಿಂದರಂಥ ಮಾನವರಲ್ಲಿ ಮೂಡಿದಾಗ, ಅವರು ತಮ್ಮಲ್ಲಿಯೇ ಇಂಥ ವಿಚಾರ ವಿಮರ್ಶೆಗೆ ಇಂಬುಗೊಟ್ಟರು. ಅರ್ಥಾತ್ ಅವರಲ್ಲಿ ಒಂದು ತಾಳಮೇಳಗೊಂಡ ಬೋಧಿಯು ವಿಕಸಿತವಾಯಿತು. "ಓಹೋ! ಇದು ಹಾಗಲ್ಲ. ಪಾರ್ಥಿವ-ಪ್ರಜ್ಞೆಗೆ ಇಷ್ಟೊಂದು ಉನ್ನತ ಶಕ್ತಿಯು ಇಳಿದು ಬರುತ್ತಿರುವುದು ನಮ್ಮ ಸುದೈವ! ನಾವು ಯಾವುದಕ್ಕಾಗಿ ಪರದಾಡುತ್ತಿರುವೆವೋ, ಅಂಥ ಅದ್ಭುತ ಶಕ್ತಿಯು ಪ್ರವಹಿಸುತ್ತಿದೆ. ಮಾನವತೆಯಲ್ಲಿ ಪ್ರಚಂಡ ಶಕ್ತಿಯು ಪ್ರವಹಿಸುತ್ತಿದೆ"; ಎಂದವರು ಕಂಡರಿತು ಹೇಳಿದರು. ಇಂಥ ಶಕ್ತಿಯ ಅವತರಣವನ್ನು ಅವರು ಕಂಡುಕೊಂಡರು. ಆಗ ಅವರು ತುಂಬಾ ಹರ್ಷಭರಿತರಾದರು. "ಓಹೋ! ಇದು ಕೃಪಾಧಾರೆಯೇ ಇರಬೇಕು!" ಎಂದು ಅವರು ನುಡಿದರು. ಅವರು ಬೋಧಿ-ಮಾರ್ಗದಲ್ಲಿ ಧ್ಯಾನಗೆಯ್ದಾಗ, ಪರಿವರ್ತನೆಯ ಇಂಥ ಕೃಪೆಯನ್ನು ಪಡೆದರು. ಮೊದಲು ಈ ಕಲ್ಪನೆ ಇಲ್ಲಪಿ ಈ ವಿಚಾರಗಳನ್ನು ಅವರು ತಮ್ಮ ಬೋಧಿಯ ಸ್ತರದಲ್ಲಿ ಅಥವಾ ಅನುಭಾವಗಳಲ್ಲಿ ಅತಿ-ಮಾನಸದಿಂದಾಗಿ ಪಡೆದರು. ನಾವದನ್ನು ಉನ್ನತ ಎನ್ನುತ್ತೇವೆ. ಅದು ಉನ್ನತದ ಲೀಲೆಯಾಗಿದೆ. ದಿವ್ಯ ಮಾತೆಯು ಯಾವಾಗಲೂ ಹೀಗೆ ಹೇಳುತ್ತಿರುವುದನ್ನು ನಾವು ತಿಳಿಯುತ್ತೇವೆ: "ಓಹೋ! ನಾನು ಮಾನವತೆಗಾಗಿ ಬಂದಿರುವೆ. ನಾನು ನಿಮ್ಮನ್ನು ಪ್ರೀತಿಸಿ, ಆಪ್ಪಿಕೊಂಡಿರುವೆ. ನಾನು ನಿಮ್ಮೆಲ್ಲರನ್ನೂ ಪರಿವರ್ತಿಸುವೆ". ಅವಳು ಧ್ಯಾನಮಗ್ನರಾಗಿ ಕುಳಿತಾಗಲೆಲ್ಲ, ಇಂಥ ದರ್ಶನಗಳನ್ನು ಪಡೆಯುತ್ತಿದ್ದರು. ಅವರಿಗೆ ತಾಯಿಯ ನುಡಿಯೂ ಹೀಗೆ ಕೇಳುತ್ತಿತ್ತು: "ನಾನು ಮಾನವತೆಯನ್ನು ಪ್ರೀತಿಸುವೆ. ನಾನು ಮಾನವತೆಗಾಗಿ ಬಂದಿರುವೆ. ನಾನು ಕಾಲದ ಕೇಂದ್ರದಲ್ಲಿ ಬಂದಿರುವೆ. ನಾನು ಮಾನವತೆಯನ್ನು ರೂಪಾಂತ್ಕರಿಸುವೆ."

ಯಾವಾಗ ಅವರು ಇಂಥ ವಿಶ್ವಾಸದ ನುಡಿಗಳನ್ನು ಕೇಳುತ್ತಿದ್ದರೋ, ಆಗ ಅವರು ಕೇಳಿದರು: "ಹಾಗಾದರೆ, ಇದಕ್ಕಾಗಿ ನಾನೇನು ಮಾಡಲಿ?" ಆಗ ತಾಯಿ ನುಡಿದಳು: "ನೀನು ಈ ಸಂಗತಿಗಳಿಗಾಗಿ ಮಾಧ್ಯಮವಾಗು. ನಾನು

ಇವುಗಳಿಗಾಗಿ ನಿನ್ನನ್ನು ಮಾಧ್ಯಮವಾಗಿಸುವೆ."

ಮುಂದೆ ಕ್ರಮೇಣ ಅವಳು, ತನ್ನ ಮಾಧ್ಯಮವು, ಶಾರೀರಿಕ, ಮಾನಸಿಕ ಮತ್ತು ಪ್ರಾಣಿಕ ಸಮಷ್ಟಿ ಪ್ರಜ್ಞೆಯನ್ನು ಅರಿತುಕೊಳ್ಳುವಂತೆ ಮಾಡಿದಳು. ಆ ಬಳಿಕ, ಈ ದಿವ್ಯ ಮಾತೆಯು ತಾನೇ, ಯಾರು ಸಮಷ್ಟಿ ಪ್ರಜ್ಞೆಯೊಂದಿಗೆ ಶ್ರುತಿಗೊಂಡಿರುವರೋ, ಅವರ ಮೂಲಕ, ಮಾನವತೆಯ ಕಲ್ಯಾಣಕ್ಕಾಗಿ ಪ್ರಯತ್ನಿಸತೊಡಗಿದಳು.

ಹೀಗೆ, ಇಂದು ರೂಪಾಂತ್ಕರಣಕ್ಕೆ ತೀರ ಅಗತ್ಯವಾದವುಗಳೆಲ್ಲ ಪಾರ್ಥಿವ ಪ್ರಜ್ಞೆಯಲ್ಲಿ ಬಂದಿವೆ. ಈಗ ನೀವು ಶ್ರುತಿಗೂಡಿಸಿದರೆ, ಇಂಥ ಕಾರ್ಯದಲ್ಲಿ ಜೊತೆಗೂಡಿದರೆ, ಈ ವಿಶ್ವವನ್ನು ರೂಪಾಂತ್ಕರಿಸಲು ಅಷ್ಟೊಂದು ಸಮಯ ಹಿಡಿಯದು. ಏಕೆಂದರೆ, ಅದರೊಂದಿಗೆ ಶ್ರುತಿಗೂಡಿಸಲು ಹೆಚ್ಚು ಹೆಚ್ಚು ಆತ್ಮಗಳ ಅಗತ್ಯವಿದೆ. ಈ ವಿಷಯಗಳ ಬಗೆಗೆ, ನಿಮಗೆ ಸಮಷ್ಟಿ ಪ್ರಜ್ಞೆಯಲ್ಲಿ ಪೂರ್ಣ ವಿಶ್ವಾಸವಿದ್ದರೆ, ರೂಪಾಂತ್ಕರಣವು ಆಗಿಯೇ ತೀರುವುದೆಂಬ ಖಚಿತ ನಂಬುಗೆ ನನಗಿದೆ. ನಾವು ಕೇವಲ ಪಾತ್ರಿಗಳು, ರೂಪಾಂತ್ಕರಣದ ಉಪಕರಣಗಳಷ್ಟೇ. ನಾವು ರೂಪಾಂತ್ಕರಣವನ್ನು ಹೇತು ಪೂರ್ವಕವಾಗಿಯೇನೂ ಮಾಡುತ್ತಿಲ್ಲ. ನಾವು ಕೇವಲ ದಿವ್ಯ ಮಾತೆಯ ಪ್ರಜ್ಞಾ ಶಕ್ತಿಯನ್ನು ವೀಕ್ಷಿಸುತ್ತಿದ್ದೇವೆ. ಅದು ಹೇಗೆ ಕ್ರಿಯಾಶೀಲವಾಗುವುದು? ಹೇಗೆ ಆಗಹತ್ತಿದೆ? ಎಂಬುದನ್ನು ವೀಕ್ಷಿಸುತ್ತಿದ್ದೇವೆ. ಹೀಗೆ ವಿಜ್ಞಾನವು ಹೇಳುತ್ತಿರುವ ಹಾಗೆ, ಖಗೋಳ ಶಾಸ್ತ್ರವನ್ನು ಅಭ್ಯಸಿಸಿದರೆ, ನೀವು ಒಂದು ವಿಶೇಷ ನಕ್ಷತ್ರವನ್ನು ನೋಡಬಯಸಿದಾಗ, ಸೂಕ್ಷ್ಮದರ್ಶಕ ಕ್ಷೇತ್ರಕ್ಕೆ ಬರಬೇಕಷ್ಟೇ. ಇದಕ್ಕೆ ಕನಿಷ್ಠ ಮಿಲಿಯಗಟ್ಟಲೆ ವರ್ಷ ಕಾಲ ಹಿಡಿಯುತ್ತದೆ. ಆ ನಕ್ಷತ್ರವು ಮಿಲಿಯ ವರ್ಷಗಳ ನಂತರ, ಸೂಕ್ಷ್ಮದರ್ಶಕ ಯಂತ್ರದೆದುರು ಬರುತ್ತದೆ. ಆಗ ನಾವು ಅದು ಅಸ್ತಿತ್ವದಲ್ಲಿದೆ; ಎಂದು ಹೇಳುತ್ತೇವೆ. ಅದೇ ರೀತಿ, ರೂಪಾಂತ್ಕರಣದ ಗ್ರಹಿಕೆಯು ಲಕ್ಷಾಂತರ ವರುಷ ಮೊದಲು ಇತ್ತು. ಆದರೂ ಅದು, ನಮ್ಮ ಬೋಧಿಯ ಎಲ್ಲಿಯಲ್ಲಿಯೂ ಬಂದಿರಲಿಲ್ಲ. ಆದರೆ, ಅದೀಗ ನಮ್ಮ ದೂರದರ್ಶಕದ ಮಟ್ಟಕ್ಕೆ ಬಂದಿರುವುದು ನಮ್ಮ ಸುದೈವ. ಆದ್ದರಿಂದ, ನಾವು ಅದನ್ನು ಸ್ವೀಕರಿಸಲು ಹರ್ಷಿಸುತ್ತೇವೆ. ಮತ್ತು ಈಗ ವಿವರಗಳನ್ನೂ ತಿಳಿಯಬಲ್ಲೆವು.

ಹೀಗೆ, ನಾವು ರೂಪಾಂತ್ಕರಣದ ಸಮದಯಲ್ಲಿದ್ದೇವೆ. ಮತ್ತು ಇಂಥ ಸಂಗತಿಗಳನ್ನು ಮಾಡುವಲ್ಲಿ ಮತ್ತು ಸ್ವೀಕರಿಸುವಲ್ಲಿ ನಾವೆಷ್ಟು ಸುದೈವಿಗಳಾಗಿದ್ದೇವೆ! ಆದ್ದರಿಂದ, ನಾವು ಇವುಗಳನ್ನು ಅರಿತುಕೊಳ್ಳಬೇಕು.

ಳ

ಸಾಧನೆ: ಆಂತರಿಕ ಭಾವ

ನಮ್ಮ ಸಂಪ್ರದಾಯದಲ್ಲಿ ಸಾಧನೆಯನ್ನು ಹೇಗೆ ಮಾಡಬೇಕು? ಎಂದು ನಾನು ನಿಮಗೆ ಹೇಳಿದ್ದೇನೆ. ಸಾಧನೆಗಾಗಿ ನಾವು ನಮ್ಮ ಬುದ್ಧಿ, ಮನಸ್ಸು ಮತ್ತು ಇಂದ್ರಿಯಗಳನ್ನು ಬಳಸಬೇಕೆಂಬುದನ್ನೂ ನಾನು ಹೇಳಿರುವೆ. ನಾವು ನಮ್ಮ ಇಂದ್ರಿಯಗಳ ಮೂಲಕ ಏನನ್ನು ಗ್ರಹಿಸುವೆವೋ, ಏನನ್ನು ಭೋಗಿಸುವೆವೋ, (ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ) ಆ ಎಲ್ಲವುಗಳನ್ನೂ ನಾವು ಸಾಧನ ಮಾರ್ಗದಲ್ಲಿ ಬಳಸಬೇಕು. ಹೀಗೆ ನಮ್ಮ ಸಾಧನೆಯು ವಸ್ತುಗಳನ್ನು 'ನೇತಿ'ಗೊಳಿಸುವುದಲ್ಲ. ಅಥವಾ ಸಕಲ ವಸ್ತುಗಳಿಂದ ಪ್ರತ್ಯೇಕವಾಗಿ ಉಳಿಯುವುದಲ್ಲ; ಎಂದೂ ನಾನು ಹೇಳಿದ್ದೇನೆ. ಅದು ಹಾಗೆ ಅಲ್ಲ. ನಾವು ಈ ಜಗತ್ತಿನಲ್ಲಿ ಇರಬೇಕು. ಮತ್ತು ಯಾವಾಗಲೂ ವೀಕ್ಷಿಸುತ್ತಿರಬೇಕು. ಮತ್ತು ಯಾವಾಗಲೂ ದಿವ್ಯ ಮಾತೆಯ ಕೃಪೆಯನ್ನು ಸಂವೇದಿಸುತ್ತಿರಬೇಕು. ಇನ್ನು ನಮ್ಮ ಕರ್ತವ್ಯವೇನಿದೆಯೋ, ಅದೂ ಸಹ, ನಮಗೆ ಪೂಜೆ ಇದ್ದಂತೆ. ಅದನ್ನು ನಮ್ಮ ಮೇಲೆ ಹೇರಲಾಗಿದೆ ಎಂದೂ, ಮತ್ತು ನಾವು ನಮ್ಮ ಕರ್ತವ್ಯವನ್ನು ತಪ್ಪಿಸಿ ಓಡಬೇಕೆಂದೂ, ನಾವು ತಿಳಿಯತಕ್ಕದ್ದಲ್ಲ. ನಾವು ನಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಹರ್ಷಿಸಬೇಕು. ಆದರೆ, ನಾವು ಸದಾ ಅಂತರ್ಮುಖಿಗಳಾಗಿರಬೇಕು. ಇನ್ನು ನಮ್ಮ ಬೌದ್ಧಿಕ ವಿಚಾರವು ಸತ್ಯವನ್ನು ತಲುಪುವಂತಿರಬೇಕು. ಇದಲ್ಲದೆ, ಎಲ್ಲ ಮತಧರ್ಮಗಳೂ ಅಂಶಿಕವಾಗಿ ಸತ್ಯವನ್ನೇ ಸೂಚಿಸುವವೆಂಬ ಸಾಧಾರಣ ಗ್ರಹಿಕೆಯೂ ನಮ್ಮದಾಗಿರಬೇಕು. ಆದರೆ, "ನಾನು ಅಂಥವನು ಅಥವಾ ಇಂಥವನು" ಎಂಬಂಥ ಹಗುರು ಭಾವನೆಗಳು ನಮ್ಮಲ್ಲಿ ಇರಕೂಡದು. ಇಲ್ಲವೆ, ನಾವು ಇವುಗಳ ಚರ್ಚೆಯಲ್ಲಿಯೂ ತೊಡಗಕೂಡದು. ಇಲ್ಲವೆ ಶುಷ್ಕ ರಾಜಕೀಯದ ಚರ್ಚೆಯಲ್ಲಿಯೂ ಬಹಳಷ್ಟು ಸಿಲುಕಿಕೊಳ್ಳಬಾರದು. ನಾವು

ಕೇವಲ ವೀಕ್ಷಕರಾಗಿರಬೇಕು. ಮತ್ತು ಜನರೊಂದಿಗೆ ಹೊಂದಿಕೊಂಡು ನಡೆಯಬೇಕು. ಮೇಲಾಗಿ, "ನನ್ನ ಹಾದಿಯೇ ಸರಿ; ನಿನ್ನದು ತಪ್ಪು." ಎಂದು ಜನರೊಂದಿಗೆ ವಾದಿಸಲಿಕ್ಕೂ ಹೋಗಬಾರದು. ನೀವು ಆಂತರಿಕ ಚರ್ಚೆಯಲ್ಲಿಯೂ ತೊಡಗಬಾರದು. ಒಂದು ವೇಳೆ, ಚರ್ಚೆಯು ನಡೆದರೆ, ನಾವು ಕೇವಲ ವೀಕ್ಷಕರಾಗಿರಬೇಕು ಮತ್ತು ಶಾಂತರಾಗಿರಬೇಕು. ಈ ಎಲ್ಲ ವಿಷಯಗಳನ್ನು ನಿಮ್ಮ ಮನದಲ್ಲಿ ತರಲೇ ಕೂಡದು. ಭೌತಿಕವಾಗಿ, ಇದೇ ಸಾಧಕನ ಭಾವನೆಯಾಗಿರತಕ್ಕದ್ದು. ಮೇಲಾಗಿ ನಾವು ಓದಬೇಕು; ಅಧ್ಯಯನ ಮಾಡಬೇಕು. ಯಾವಾಗಲಾದರೂ ನಾವು (ಶ್ರೀ ಅರವಿಂದ.....) ಓದಿದಾಗ, ನಾವು ಆ ಗ್ರಂಥಗಳಿಂದ ನಮ್ಮ ಸಂಪ್ರದಾಯಕ್ಕೆ ಸರಿ ಹೊಂದುವ ಒಳ್ಳೆಯ ಅಂಶಗಳನ್ನು ಸ್ವೀಕರಿಸಲು ಪ್ರಯತ್ನಿಸಬೇಕು. ನಾವು ಬೇರೆಯವರ ಪ್ರಭಾವದ ಅಲೆಗಳನ್ನು ನಮ್ಮಲ್ಲಿ ಎಬ್ಬಿಸಿಕೊಳ್ಳಬಾರದು. "ನಮ್ಮ ಮಾರ್ಗವು ಅಷ್ಟೊಂದು ಚೆನ್ನಾಗಿಲ್ಲ. ಬೇರೆ ಮಾರ್ಗಗಳು ಚೆನ್ನಾಗಿವೆ"; ಇತ್ಯಾದಿ ವಿಚಾರಗಳಿಗಿಂಬು ನೀಡಬಾರದು. ನೀವು ತೆರೆದ ಮನಸ್ಸಿನಿಂದ ವಿಷಯಗಳನ್ನು ಸ್ವೀಕರಿಸಲು ಯತ್ನಿಸಿರಿ. ಆದರೆ, ನೀವು ಯಾವ ಮಾರ್ಗದಲ್ಲಿರುವಿರೋ, ಅದರಲ್ಲಿಯೇ ಮುಂದುವರಿಯಿರಿ. ಮೇಲಾಗಿ, ನಾವು ಅನ್ಯರನ್ನು ಟೀಕಿಸಕೂಡದು. ಅವರು ಒಳ್ಳೆಯವರಲ್ಲವೆಂದು ಹೀಗಳೆಯಬಾರದು. ಅವರು ತಮ್ಮ ಮಾರ್ಗದಲ್ಲಿಯೇ ಸರಿಯಾಗಿರಬಹುದು. ಅವರು ತಮ್ಮದನ್ನೇ ಮಾಡಲಿ. ನೀವು ಕೇವಲ ವೀಕ್ಷಿಸಿರಿ. ಯಾರಾದರೂ ಕಳಕಳಿಯಿಂದ ಏನನ್ನಾದರೂ ಕೇಳಿದರೆ, ಆಗ ಮಾತ್ರ, ಅವರ ನ್ಯೂನತೆಗಳನ್ನು ಕುರಿತು ತಿಳಿಸಿ ಹೇಳಿರಿ. ಏಕೆಂದರೆ, ನಮ್ಮದು ಸಂಶ್ಲೇಷಣೆಯ ಹಾದಿ. ನೀವು ಮುಂದೆ ಸಾಗಿದಂತೆಲ್ಲ ಅನ್ಯ ಮಾರ್ಗಗಳಲ್ಲಿ ಯಾವ ಯಾವ ತೊಂದರೆಗಳೂ, ಕುಂದು-ಕೊರತೆಗಳೂ ಇವೆಯೆಂಬುದು ನಿಮಗೆ ತಿಳಿಯುತ್ತದೆ. ನೀವು ಅವುಗಳನ್ನೆಲ್ಲ ಕಂಡರಿಯುತ್ತೀರಿ. ಆದರೆ, ನೀವು ನಿಮ್ಮ ನಿರ್ಣಯವನ್ನು ಕಾಯ್ದಿರಿಸಬೇಕು. ಅನ್ಯರು ಸರಿಯಿಲ್ಲದಿದ್ದರೂ ನಿಮ್ಮ ಮನದ ಅನಿಸಿಕೆಗಳನ್ನೆಲ್ಲ ಬಯಲು ಮಾಡಬೇಡಿರಿ. ನೀವು ಅವರನ್ನು ನೋಡಿ ಮುಗುಳ್ನಗೆ ಸೂಚಿಸಿರಿ. ಬೇರೆ ಮಾರ್ಗದಲ್ಲಿ ಇರುವವರಿಗೆ ಮನ ನೋಯಿಸಬೇಡಿರಿ. ಅವರು ತಮ್ಮ ಹಾದಿಯಲ್ಲಿ ಸಾಗಲಿ. ಅವರು ಕಳಕಳಿಯಿಂದ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಿದರೆ, ಆಗ ಮಾತ್ರ ಸಲಹೆ ನೀಡಿರಿ. ಏಕೆಂದರೆ, ನಮ್ಮ ಹಾದಿಯು ಸಂಶ್ಲೇಷಣಾತ್ಮಕ ಹಾದಿ. ಅದರಲ್ಲಿ, ಇತರರ ಇತಿಮಿತಿಗಳನ್ನು ಕೂಡಲೇ ಅರಿಯಬಲ್ಲ, ತಿಳಿವಳಿಕೆಯುಂಟು.

ಏಕೆಂದರೆ, ಅದು ಸಂಶ್ಲೇಷಣಾತ್ಮಕ ಹಾದಿಯಾಗಿದೆ. ಅದರಿಂದಾಗಿಯೇ, ಇಲ್ಲಿ ಇತರ ಹಾದಿಗಳಿಗಿಂತ ಅಧಿಕ ಜ್ಞಾನವಿರುತ್ತದೆ. ನೀವು ಆಂತರ್ಯದಲ್ಲಿಯೂ ಸಹ, ಪ್ರಜ್ಞೆಯ ಅಧಿಕ ವಿಸ್ತಾರವನ್ನು ಹೊಂದುತ್ತೀರಿ. ಹೀಗೆ, ಸಹಜವಾಗಿಯೇ ನೀವು "ಓಹೋ; ಬಿಡಿ. ಅದು ತೀರ ಕ್ಷುದ್ರವಾದುದು." ಎಂದು ಕಂಡುಕೊಳ್ಳುವಿರಿ. ಆದರೆ ನಾವು, "ಅವರು ಕ್ಷುದ್ರರು. ಆದ್ದರಿಂದ ನಾವೆಷ್ಟು ಉನ್ನತರಾಗಿರುವೆವೆಂಬುದನ್ನು ತೋರಿಸೋಣ" ಎಂದು ವಿಚಾರಿಸಕೂಡದು. ನೀವು ಹಾಗೆ ವಿಚಾರಿಸಲೇ ಕೂಡದು. ಏಕೆಂದರೆ, ನೀವು ಹೀಗಿರುವುದು ಅವರಿಗೋಸ್ಕರ ಅಲ್ಲ. ಅದು ನಿಮ್ಮ ಪಾತ್ರತೆಯನ್ನೇ ಅವಲಂಬಿಸಿದೆ. ನಿಮ್ಮ ಗ್ರಹಣ ಶಕ್ತಿಯು ಸಂಶ್ಲೇಷಣಾತ್ಮಕವಿದ್ದರೆ. ಮತ್ತು ವಿಸ್ತಾರಶೀಲವಾಗಿದ್ದರೆ, ಸ್ವಾಭಾವಿಕವಾಗಿ ನೀವು ಹೆಚ್ಚು ವಿಷಯಗಳನ್ನು ಕಲೆ ಹಾಕಬಲ್ಲಿರಿ. ಯಾವಾಗಲೂ ನಾವು ಇಂಥ ದೃಷ್ಟಿಕೋಣವನ್ನೇ ಇರಿಸಿಕೊಳ್ಳಬೇಕು. ಏಕೆಂದರೆ, ನಾನು ಏನನ್ನೇ ಓದಲಿ, 'ಯಾವಾಗಲೂ ಅವೆಲ್ಲ ಆಂಶಿಕ ಸಂಗತಿಗಳಷ್ಟೇ", ಎಂಬ ಭಾವನೆ ನನ್ನಲ್ಲಿ ಬರುತ್ತದೆ. ಬೇರೆ ಬೇರೆ ಪ್ರತ್ಯೇಕ ಹಾದಿಗಳ ಸಾಧನೆಗಳೆಲ್ಲ "ಅಲ್ಪವಷ್ಟೇ" ಎಂದು ಕಂಡುಬರುತ್ತದೆ. ಆದರೆ, ನಾನು ಹಾಗೆ ಹೇಳುವುದಿಲ್ಲ. ನನ್ನ ಗುರುಗಳು ಸಹ, ಇದೇ ಅಭಿಪ್ರಾಯ ಹೊಂದಿದ್ದರು. ಆದರೆ ಅವರು, "ಓಹೋ! ನೀನು ನಿನ್ನ ನಿರ್ಣಯವನ್ನು ಕಾಯ್ದಿಟ್ಟುಕೋ. ಏಕೆಂದರೆ, ಅವರೆಲ್ಲ ಅಲ್ಪರು. ಅವರನ್ನು ಅಸಂತುಷ್ಟಗೊಳಿಸಬೇಡ. ಅವರೂ ಸಾಗಲಿ. ಅವರೂ ತಮ್ಮದನ್ನು ಮಾಡಲಿ. ಅವರನ್ನು ಪ್ರೋತ್ಸಾಹಿಸು" ಎನ್ನುತ್ತಿದ್ದರು. ಈಗ ಸುಪ್ರಸಿದ್ಧ ಶಾಸ್ತ್ರೀಯ ಸಂಗೀತಗಾರ, ರವಿ ಶಂಕರನ ಉದಾಹರಣೆಯನ್ನೇ ತೆಗೆದುಕೊಳ್ಳಿರಿ. ಇನ್ನೊಬ್ಬನು ಅದೇ ವೃತ್ತಿಯಲ್ಲಿ ಪ್ರಯತ್ನಿಸುವುದನ್ನು ಕಂಡು, ರವಿ ಶಂಕರನೇನಾದರೂ,"ನೀನೊಬ್ಬ ಮೂರ್ಖ. ನಿನಗೇನೂ ತಿಳಿದಿಲ್ಲ" ಎಂದರೆ, ಆ ಮನುಷ್ಯನ ಗತಿಯೇನು? ಅವನೂ ಸಂತೋಷ ಪಡಬೇಡವೇ? ಅವನೂ ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೂ, ಅವನು ಆ ಮಟ್ಟಕ್ಕೆ ಬರಲಾರನು. ಆದರೆ, ಅವನು ಅದಕ್ಕಾಗಿ ಪಸಿಶ್ರಮಿಸುತ್ತಿರುವುದಂತೂ ನಿಜ ತಾನೇ?

ಆದೇ ರೀತಿ, ನಮ್ಮ ಹಾದಿಯಲ್ಲಿಯ ಅನುಭೂತಿಗಳು, ಭಾವಗತ ಅನುಭೂತಿಗಳು. ನಾವು ಅನೇಕ ಮನಸ್ತಾತ್ವಿಕ ಸುಸಂಸ್ಕಾರಗಳನ್ನು ಹೊಂದಿದ್ದೇವೆ. ನಮ್ಮ ಮನಸ್ಸು, ನಮ್ಮ ಊಹೆಗಳೆಲ್ಲ ವಿಸ್ತಾರಗೊಳ್ಳುತ್ತವೆ. ಇದು ತುಂಬಾ ವಿಸ್ತಾರಾತ್ಮಕ ಹಾದಿ. ಅದು ಸರ್ವವ್ಯಾಪ್ತವಾಗುತ್ತವೆ. ಆ ಕಾಲಕ್ಕೆ

ನಾವು, "ನಾನು ಪಡೆದುದು ತೀರ ಅಲ್ಪ; ನಾನು ಇನ್ನಷ್ಟು ಪಡೆಯಬೇಕು. ಈಗ ಬಂದುದು ಕೇವಲ ಮಾರ್ಗ ಮಧ್ಯೆಯ ಉಪಲಬ್ಧಿ. ಇನ್ನೂ ಬಹಳಷ್ಟು ಬರಬೇಕಾಗಿದೆ." ಎಂಬ ಭಾವನೆ ಇರಿಸಿಕೊಳ್ಳಬೇಕು. ಏಕೆಂದರೆ, ಅನುಭವಗಳು ನಮ್ಮ ಮೇಲೆ ನಿಸ್ಸಂದೇಹವಾಗಿ ಪ್ರಭಾವ ಬೀರುತ್ತವೆ. ಏಕೆಂದರೆ, ಎಷ್ಟೇ ಆಗಲಿ; ಅವು ಅನುಭವಗಳಲ್ಲವೇ? ಅನೇಕ ಜನರು ತಮ್ಮ ಜೀವನವಿಡೀ ಈ ಅನುಭವಗಳನ್ನು ಪಡೆಯಲು ಪ್ರಯತ್ನಿಸುತ್ತಾರೆ. ಆದರೂ ಅವರು ಪಡೆಯುವುದಿಲ್ಲ. ಆದರೆ, ಅಂತಿಮ ಗುರಿಯೆಂದರೆ, ಅನೇಕ ಪ್ರಕಾರದ ಅನುಭೂತಿ ಪಡೆಯುವುದೇ ಆಗಿದೆ.

ನಾನು ನಿಮಗಾಗಲೇ ಹೇಳಿದಂತೆ, ಆಂತರ್ಯದಲ್ಲಿ, ಮನದ ಮೂಲಕ ಹಲವು ದರ್ಶನಾನುಭವಗಳಾಗುವವೆಂದು ವಿವರಿಸಿದ್ದೇನೆ. ನೀವು ಬುದ್ಧಿ ಮೂಲಕ ದರ್ಶನಾನುಭೂತಿ ಹೊಂದಬಹುದು. ಹಾಗೆ ನೋಡಿದರೆ, ಅವು ಬೌದ್ಧಿಕವೇನೂ ಅಲ್ಲ; ಆದರೆ, ನೀವು ನಿಮ್ಮ ಮನದಲ್ಲಿ ಅನೇಕ ವಿಶ್ಲೇಷಣೆಗಳನ್ನು ಮಾಡಬಹುದು. ಕೆಲವೊಮ್ಮೆ ನಿಮಗೆ ಒಳ್ಳೆಯ ಕನಸುಗಳು ಬೀಳುತ್ತವೆ. ಕೆಲವೊಮ್ಮೆ ನೀವು ಸದಾ ತನ್ಮಯರಾಗಿರುತ್ತೀರಿ. ಇದು ಹೀಗೆಯೇ ಸಾಗಿರುತ್ತದೆ. ಆದರೆ, ನಮ್ಮ ಹಾದಿಯಲ್ಲಿ ಅತಿ ಮುಖ್ಯವಾದುದೆಂದರೆ, ನಾವು ಯಾವಾಗಲೂ ಕವಿರಾಜ ಮಹಾರಾಜರ ಸಾನ್ನಿಧ್ಯವನ್ನು ಸಂವೇದಿಸಬೇಕು. ಏಕೆಂದರೆ, ಅವರಿನ್ನೂ ತಮ್ಮ ದಿವ್ಯ ಭೌತಿಕ ಶರೀರದಲ್ಲಿದ್ದಾರೆ. ಅವರು ಉಪಸ್ಥಿತರಿದ್ದಾರೆ. ನಾವು ಅವರ ಸಾನ್ನಿಧ್ಯವನ್ನು ತಿಳಿಯುವುದು ಹೇಗೆ? ಎಂಬುದನ್ನು ಕುರಿತು ವಿವರಿಸುವೆ. ಅದೇನು ತಾರ್ಕಿಕವಾಗಿಯೋ ಇಲ್ಲವೆ ಬೌದ್ಧಿಕವಾಗಿಯೋ? ಅದು ಹೇಗೆ ಸಾಧ್ಯ? ನಾನು ನಿಮಗೆ ವಿವರವಾಗಿ ತಿಳಿಸುವೆ. ನೀವು ತೆರೆದ ಮನಸ್ಸಿನಿಂದ ಇರಿ. ನೀವು ಮನದಲ್ಲಿ "ಇದು ಸಂಭನೀಯ." ಎಂದು ಭಾವಿಸಿದರೆ, ನೀವು ಆದನ್ನು ಅರಿಯಬಲ್ಲಿರಿ. "ಅದು ಆಗದ ಹೋಗದ ಮಾತು; ಅಸಾಧ್ಯ ಕೋಟಿಯ ಮಾತು" ಎಂದು ತಿಳಿಯುವುದೇ ಎಲ್ಲಕ್ಕಿಂತ ಹೆಚ್ಚಿನ ಅಡೆತಡೆ. ನಾವು ಅಸಾಧ್ಯವೆಂದು ಬಗೆದರೆ, ನಮ್ಮಿಂದ ಏನೇನೂ ಆಗದು. ನಾವು 'ಸಾಧ್ಯ'ವೆಂದು ಬಗೆದಾಗ ಮಾತ್ರ, ಅದಕ್ಕೆ ತಕ್ಕ ಶಕ್ತಿಯು ನಮ್ಮಲ್ಲಿ ಬರುತ್ತದೆ. ನನ್ನ ಗುರುವಿನ ಗುರುವು, ಪಾಶ್ಚಿಮಾತ್ಯ ಜನರು ಮಹಾಶಕ್ತಿ ಸಂಪನ್ನರಾಗುವುದಿಲ್ಲ; ಎಂದು ಹೇಳುತ್ತಿದ್ದರು. ಅವರು ಪಾಲ ಬ್ರಂಟನ್ ಮತ್ತಿತರರಿಗೆ ಹಾಗೆ ಹೇಳಿದ್ದರು. "ಏಕೆ?" ಎಂದವರು ಪ್ರಶ್ನಿಸಿದಾಗ, "ಏಕೆಂದರೆ ಅದು ಸಾಧ್ಯವೆಂದು ನೀವು

ತಿಳಿಯುವದಿಲ್ಲ" ಎಂದು ಉತ್ತರಿಸುತ್ತಿದ್ದರು. ಯಾವಾಗ ಅದು ಸಾಧ್ಯವೆಂದು ನಿಮ್ಮ ಮನದಲ್ಲಿ ಮೂಡುವುದೋ, ಆಗ ಅದು ಸಂಭವಿಸುತ್ತದೆ. ನೀವು ಅದು ಸಾಧ್ಯವಾಗಬಹುದೇ? ಎಂದು ಶಂಕಿಸುತ್ತೀರಿ. ಅಂದ ಮೇಲೆ, ಅದು ಹೇಗೆ ಕ್ರಿಯಾನ್ವಿತವಾದೀತು? ಏಕೆಂದರೆ, ನಿಮ್ಮ ಮನಸ್ಸು ಆಧುನಿಕ ವಿಜ್ಞಾನದಿಂದ ಎಷ್ಟೊಂದು ಸೀಮಿತವಾಗಿದೆ! 'ನಾನು ಕಣ್ಣು ಮುಚ್ಚಿದೊಡನೆ, ಒಬ್ಬ ವ್ಯಕ್ತಿಯು ಏನು ಮಾಡುತ್ತಿರುವನೆಂದು ತಿಳಿಯುತ್ತೇನೆ' ಎನ್ನುತ್ತೇನೆ. ನೀವು 'ಅದು ಅಸಾಧ್ಯ!' ಎಂದು ತಿಳಿಯುತ್ತೀರಿ. ಏಕೆಂದರೆ, ಆಧುನಿಕ ವಿಜ್ಞಾನವು ನಿಮ್ಮ ಮನವನ್ನು ಬೇರೊಂದು ದಿಶೆಯಲ್ಲಿ ತರಬೇತುಗೊಳಿಸಿದೆ. ಅದು ನಿಮ್ಮ ಮನವನ್ನು ವಸ್ತು ತಾಂತ್ರಿಕವಾಗಿ ಮಾಡಿದೆ. ಯಾವಾಗಲೂ ವಿಷಯ ಭೂತ ಸಂಗತಿಗಳಷ್ಟೇ ಸಾಧ್ಯವೆಂದು ಬಗೆಯುತ್ತೀರಿ. ಇನ್ನು ವಿಷಯೀ ಭಾವದ ಸಂಗತಿಗಳೆಲ್ಲವೂ ಅಸಾಧ್ಯವೆನ್ನುತ್ತೀರಿ. ನೀವು ಈ ಪ್ರಕಾರದ ಮಾನಸಿಕ ರೀತಿಯಲ್ಲಿ ತರಬೇತಿ ಪಡೆದಿದ್ದೀರಿ. ಅಲ್ಲವೇನು ಮತ್ತೆ? ನೀವು ಎಷ್ಟೊಂದು ತರಬೇತಿ ಪಡೆದಿರುವಿರೆಂದರೆ, ನಿಮಗೆ ನಂಬುವುದು ಕಷ್ಟವಾಗುತ್ತದೆ. ಉದಾಹರಣೆಗೆ ನೋಡಿರಿ : ನಾನು ನಿಮ್ಮನ್ನು ನೆನೆಸಿದರೆ, ನೀವು ನನ್ನನ್ನು ನೆನೆಸುತ್ತೀರೆಂದು ತಿಳಿಯಿರಿ. ಮತ್ತು ಕೂಡಲೇ ನಾನು 'ಅದೊಂದು ವಿಜ್ಞಾನ' ಎನ್ನುತ್ತೇನೆ. ಆದರೆ, ನೀವಾದರೋ 'ಅದು ಕೇವಲ ಆಕಸ್ಮಿಕವಷ್ಟೇ" ಎನ್ನುತ್ತೀರಿ. ಏಕೆಂದರೆ, ನಿಮ್ಮ ಮನಸ್ಸು ಆ ರೀತಿ ತರಬೇತಿ ಹೊಂದಿದೆ. ಹೀಗೆ, ಈ ಆಧ್ಯಾತ್ಮಿಕ ಶಕ್ತಿಗಳೆಲ್ಲ ಶ್ರದ್ಧೆ–ವಿಶ್ವಾಸದ ಮೇಲೆ ಅವಲಂಬಿಸಿವೆ. ಮೊದ ಮೊದಲು ಇವುಗಳೆಲ್ಲ ನಿಜವೆಂದು ನಂಬಬೇಕು. ಇದೆಲ್ಲ ಕುರುಡು ನಂಬುಗೆ; ಎಂದು ತಿಳಿಯಕೂಡದು. ಅದು ಶತಃಸಿದ್ಧವೆಂದು ನಂಬುವ ಮುನ್ನ ಏನನ್ನಾದರೂ ಹೇಳಿದರೆ, 'ಸರಿ' ಎಂದು ನುಡಿದು, ಅನಂತರ ನೀವು ಅದನ್ನು ಕುರುಡು–ನಂಬುಗೆ ಎಂದು ತಿಳಿಯಬಾರದು. ಆದರೆ, ಜನರು ಹಾಗೆ ಭಾವಿಸುತ್ತಾರೆ. 'ದೇವರು ಇದ್ದಾನೆ' ಎಂದು ನಾನು ಹೇಳಿದೆನೆಂದು ತಿಳಿಯಿರಿ. ಕೂಡಲೇ ಬೇರೆಯವರು "ಅದೆಲ್ಲ ಹೇಗೆ ಸಾಧ್ಯ? ನಮ್ಮ ಇಂದ್ರಿಯಗಳು ಗ್ರಹಿಸವು. ನಮಗಂಥ ಅನುಭವಗಳಾಗಿಲ್ಲ. ದೇವರು ಇದ್ದುದೇ ಆಗಿದ್ದರೆ, ಇಷ್ಟೆಲ್ಲ ಸಮಸ್ಯೆಗಳೇಕಿವೆ? ಅನೇಕ ಜನರು ಉಪವಾಸ ಸಾಯುವುದೇಕೆ? ನನಗೆ ಅನೇಕಾನೇಕ ಸಮಸ್ಯೆಗಳು ಎದುರಾಗುತ್ತಿವೆ" ಎನ್ನುತ್ತಾರೆ. "ದೇವರು ಇರುವುದಾದರೆ, ನಾನೇಕೆ ತೊಂದರೆಗೀಡಾಗುತ್ತಿದ್ದೆ?" ಎಂದೂ ಅವರು ಕೇಳುತ್ತಾರೆ. ಈ ಪ್ರಶ್ನೆಗಳು ಕಿರಿಯರಿಗೆ ಮತ್ತಿತರರಿಗೆ

ಬಂದೇ ಬರುತ್ತವೆ. ಆದರೆ, ನಿಜವಾದ ಪ್ರಶ್ನೆಯೆಂದರೆ, ದೇವರೆಂದರೆ, ನಿಶ್ಚಯವಾಗಿಯೂ, ನೀನು ಏನೆಂದುಕೊಂಡಿರುವಿ?" ನಿನ್ನ ಸ್ವಭಾವವೆಂದರೇನು? ನಿನ್ನ ನೋವು ಎಂದರೇನು? ಎಂದು ತಿಳಿಯಬೇಕು. ಆಗ ನಿನಗೆ ನೋವು, ನಲಿವುಗಳೆಂಬ ಯಾವವೂ ವಾಸ್ತವದಲ್ಲಿ ಇಲ್ಲ; ಎಂಬುದು ಗೊತ್ತಾಗುತ್ತದೆ. ಆದರೆ ನೀನಾದರೋ, "ನನಗೆ ನೋವಾಗುತ್ತದೆಯಲ್ಲ?" ಎಂದು ಹೇಳುವೆ. ಅಹುದು; ನಿನಗೆ ನೋವಾಗುತ್ತಿರುವುದು ಸುಸ್ಪಷ್ಟವಿದೆ. ಅದು ಸರಿ. ಆದರೆ ಯಾವಾಗ? ನೀನು ಮಾನಸ ಸ್ತರದಲ್ಲಿ ಇರುವಾಗ. ಅದೇ ರೀತಿ, ನಿನಗೆ ನಲಿವೂ ಆಗುತ್ತಿದೆ. ಯಾವಾಗ? ಮಾನಸ ಸ್ತರದಲ್ಲಿ ಇರುವಾಗ. ಆದರೆ ಎರಡನ್ನೂ ಅತಿಶಯಿಸಲು ಪ್ರಯತ್ನಿಸು. ನಿನ್ನ ಸ್ವಂತ ಮಟ್ಟವನ್ನು ಮುಟ್ಟಲು ಯತ್ನಿಸು.

ನಾವು ಈ ಸಂಗತಿಗಳನ್ನೆಲ್ಲ ನಮ್ಮ ಆಂತರಿಕ ಅನುಭವಗಳ ಮೂಲಕ ತಿಳಿಯಬಲ್ಲೆವು. ಆದರೆ ನಾವು ಆಧುನಿಕ ವಿಜ್ಞಾನಕ್ಕೆ, ಆಧುನಿಕ ಮಾನಸ ಶಾಸ್ತ್ರಕ್ಕೆ, ಆಹ್ವಾನವೀಯುವ ತೀರ ವಿಭಿನ್ನ ಹಾದಿಯನ್ನು ತುಳಿಯುತ್ತಿದ್ದೇವೆ; ಎಂದು ಹೇಳಬಯಸುವೆ. ಅದೊಂದು ಅದ್ಭುತ ವಿಷಯ! ಏಕೆಂದರೆ, ನಾವು ಆಂತರಿಕವಾಗಿ ಸಾಗುತ್ತಿದ್ದೇವೆ. ನಾವು ನಮ್ಮ ಆಂತರಿಕ ಸತ್ತೆಯಿಂದ, ನಮ್ಮ ಆಂತರಿಕ ಮೂಲ್ಯದಿಂದ ಪ್ರಾರಂಭಿಸುತ್ತಿದ್ದೇವೆ. ಏಕೆಂದರೆ, ಅದು ಪೂರ್ಣತ್ವದ ಪಥವನ್ನವಲಂಬಿಸಿದೆ. ಬೇರೆಯವರು ವಸ್ತುಗಳೊಂದಿಗೆ ಪ್ರಯೋಗ ನಡಸಲು ಇಚ್ಛಿಸುತ್ತಾರೆ. ಅದು ಸಾಧ್ಯವೆಂದು ಅವರು ಕಾಣಬಲ್ಲವರಾದರೆ, ಮಾತ್ರ ಅದನ್ನು ಸ್ವೀಕರಿಸುತ್ತಾರೆ. ಆದರೆ ಅದು ನಿಮ್ಮ ಕಲ್ಪನೆ. ನಿನ್ನ ಮಾರ್ಪಾಟು ಮಾತ್ರ; ಎಂದು ನಾವು ಹೇಳುತ್ತೇವೆ. ಆದರೆ, ಚಿತ್‌ಶಕ್ತಿ ಎಂಬ ಬೇರೊಂದು ಶಕ್ತಿಯಿದೆ. ಅದರ ವಿಸ್ತಾರವು ಇನ್ನಷ್ಟು ಅಧಿಕ. ಅದರ ಮೂಲಕ ನಾವು ಸಾಗಬೇಕು. ಏಕೆಂದರೆ, ಆಧುನಿಕ ವಿಜ್ಞಾನವು ಪ್ರೇಮವನ್ನು ನೀಡದು. ಆಧುನಿಕ ವಿಜ್ಞಾನವು ಕೃಪೆಯನ್ನು ಸುರಿಸದು. ಏಕೆಂದರೆ, ಅದು ವಿಷಯಗತವಿದೆ; ಅದು ಪ್ರಕೃತಿ ಶಕ್ತಿಯಷ್ಟೇ ಆಗಿದೆ. ನಾವು ಆಧುನಿಕ ವಿಜ್ಞಾನದಿಂದ ಬಹು ದೂರವಿಲ್ಲ. ನಾವು ಅದನ್ನು ಅಲ್ಲಗಳೆಯುತ್ತಿಲ್ಲ. ನಾವು ಅದನ್ನು ಬಳಸಿಕೊಳ್ಳುತ್ತೇವೆ. ಅದನ್ನೊಂದು ಪಿಣಿಯೆಂದು ಗಣಿಸುತ್ತೇವೆ. ಅದನ್ನು ಅಲ್ಲಗಳೆಯುವುದಿಲ್ಲ. ನಾವು ಎಲ್ಲವನ್ನೂ ಸ್ವೀಕರಿಸುತ್ತೇವೆ. ಆದರೆ ಇರುವ ಪ್ರಶ್ನೆಯೆಂದರೆ, ಅದೇನು ಜೀವನದ ಚರಮ ಲಕ್ಷ್ಯವೇ? ಎಂಬುದು. ಇಲ್ಲ. ಅದಲ್ಲ ನಮ್ಮ ಲಕ್ಷ್ಯ.

ಹೀಗೆ, ಅತ್ಯಂತ ಮಹತ್ವದ ಉಪಕರಣವಾದ ಈ ಭೌತಿಕ ದೇಹ, ಇಂದ್ರಿಯ ಮತ್ತು ಮನಸ್ಸುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿರಿ. ಅವುಗಳ ಕಾರ್ಯ ವಿಧಾನವಾವುದು? ನನ್ನ ಅಹಂಕಾರವೆಂತಿದೆ? ಅದೆಂತು ಕಾರ್ಯ ಮಾಡುತ್ತಿದೆ? ನಾವು ಯಾವಾಗಲೂ ಬಳಸುತ್ತಿರುವ ಉಪಕರಣಗಳಿವು. ಆದರೆ, ಇವುಗಳೇನೆಂಬುದು ನಮಗೆ ತಿಳಿದಿಲ್ಲ. ನಾವವುಗಳನ್ನು ತಿಳಿಯಬೇಕಾಗಿದೆ. ನಾವು ಅನುಭವಿಸಬೇಕಾದ ಸಂಗತಿಯೇ ಇದು. ನಿಮಗೆ ಅನುಭವಗಳಾಗದಿದ್ದರೆ, ನಿಮ್ಮಲ್ಲಿ ಪ್ರಗತಿಯಾಗಿಲ್ಲವೆಂದು ತಿಳಿಯಬೇಡಿರಿ. ಪ್ರಗತಿ ಇದ್ದೇ ಇದೆ. 'ಅ'ನಿಗೆ ಅನುಭೂತಿಯು ಬೇಗನೇ ಆಗಬಹುದು. 'ಬ'ನಿಗೆ ತಡಮಾಡಿ ಆಗಬಹುದು. ಇನ್ನು 'ಕ'ನಿಗೆ ಇನ್ನಷ್ಟು ತಡವಾಗಿ ಆಗಬಹುದು. ಒಬ್ಬನು ಬುದ್ಧಿ–ಜೀವಿಯಾಗಿದ್ದರೆ, ಅವನು ಮನಗಾಣುವುದು ನಡೆದಿರುತ್ತದೆ. ಅವನು ತನ್ನ ಅನುಭೂತಿಯನ್ನು ಖಚಿತಪಡಿಸಿಕೊಳ್ಳುತ್ತ ಸಾಗುತ್ತಾನೆ. ಆದರೆ, ದರ್ಶನಗಳನ್ನು ಪಡೆಯುತ್ತಿಲ್ಲ. "ಓಹೋ! ಅದೆಲ್ಲ ಸರಿ. ನಾನು ಇನ್ನಷ್ಟು ಪಡೆಯಬೇಕಾಗಿರುವುದರಿಂದ, ಇದನ್ನೂ ಮಾಡಬೇಕು". ಇದೂ ಸಹ, ಒಂದು ಬಗೆಯ ಅನುಭವವೇ. ನಾನು ಆಂತರ್ಯದಲ್ಲಿ ಏನನ್ನಾದರೂ ಕಂಡರೆ, ಅದಷ್ಟೇ ಅನುಭೂತಿ; ಎಂದು ನೀವು ತಿಳಿಯಬೇಕಾಗಿಲ್ಲ. ಅದೂ ಒಂದು ಪ್ರಕಾರದ ಅನುಭೂತಿಯಷ್ಟೇ. ನಿಮ್ಮ ಉಪಕರಣವು ಈ ವಿಭಿನ್ನ ವಸ್ತುಗಳನ್ನು ಮೆಚ್ಚುತ್ತದೆ. ಪ್ರಾರಂಭದಲ್ಲಿ ಅನುಭವಗಳು ಬದಲಾಗುತ್ತಿರುತ್ತವೆ. ಸ್ಥಿತ್ಯಂತರವು ಇದ್ದೇ ಇದೆ. ಹೀಗೆ ನನಗೆ ಅನುಭವವಾಗಲಿಲ್ಲವೆಂದೂ,ಆದ್ದರಿಂದ ನಾನು ಕೀಳೆಂದೂ, ನಾನು ತಿಳಿಯಬೇಕಾಗಿಲ್ಲ. ನನಗೆ ಉತ್ತಮ ಗುರುವಿದ್ದರೆ ಸಾಕು; ನಾನೇನೂ ಕೀಳಲ್ಲ. ಏಕೆಂದರೆ, ಗುರುವು ತಾನೇ ಆಂತರ್ಯದ ಹೊಣೆ ಹೊರುತ್ತಾನೆ. ಹಾಗೆಂದರೇನು? ಅವನು ಚಿತ್ ಸ್ವರೂಪನು. ಅವನ ಪ್ರಜ್ಞೆಯು ಯಾವಾಗೂ ನಮ್ಮ ಪ್ರಜ್ಞೆಯನ್ನು ಸ್ಪರ್ಶಿಸುತ್ತದೆ. ನಮ್ಮ ಪ್ರಜ್ಞೆಯು ಸಹ, ಅವನನ್ನು ಮುಟ್ಟುವುದೆಂಬುದು ನಮಗೆ ತಿಳಿದಿರುವುದಿಲ್ಲ. ಹೀಗೆ ಅರಿತೋ, ಅರಿಯದೆಯೋ, ಅದು ಗುರುವಿನೊಂದಿಗೆ ಇರಬಯಸುತ್ತದೆ. ಮತ್ತು ಅದು ಶುದ್ಧವಾಗಿದ್ದರೆ, ಸಂಭಾಷಿಸ ಬಯಸುತ್ತದೆ; ಪ್ರೀತಿಸಬಯಸುತ್ತದೆ. ಹೀಗೆ, ನಮ್ಮ ಸಾಧನೆಯಲ್ಲಿ, ನಮ್ಮ ನಿತ್ಯ ಜೀವನದಲ್ಲಿ ಪ್ರಥಮತಃ ನಾವು ಜಾಗರೂಕರಾಗಿರಬೇಕು. ಮತ್ತು ಯಾವಾಗಲೂ ಹರ್ಷಚಿತ್ತರಾಗಿರಬೇಕೆಂದೂ ನಾನು ಹೇಳುವೆ. ಎರಡು ಸಂಗತಿಗಳು ತುಂಬಾ ಅವಶ್ಯಕವಾಗಿವೆ:

ಒಂದನೆಯದೆಂದರೆ ಸದಾ ಹರ್ಷಚಿತ್ತರಾಗಿರುವುದು. ಸುಖವು, ಅಥವಾ

ಆಂತರಿಕ ಸುಖವು, ಯಾವಾಗಲೂ ಕಾಲದಿಂದ ಇಲ್ಲವೆ ಬಾಹ್ಯ ಸ್ಥಿತಿಗತಿಗಳಿಂದ ಕದಡುತ್ತಿರುತ್ತದೆ. ಇನ್ನು ನೀವು, ಒಂದು ವೇಳೆ, ಸಾಧನೆ ಪ್ರಾರಂಭಿಸಿದರೆ ನಿಮ್ಮ ಶಾಂತಿಯನ್ನು ಕದಡಲು, ಅನೇಕ ಬಾಹ್ಯಿಕ ದುರಂತಗಳು ನಿಮ್ಮ ಹಾದಿಯಲ್ಲಿ ಬರುತ್ತವೆ. ಏಕೆಂದರೆ, ನೀವು ಸದಾ ಶಾಂತಮಯರಾಗಿರುವುದು ಅವುಗಳಿಗೆ ಬೇಕಿಲ್ಲ. ಹೀಗೆ, ಈ ವಿರೋಧಿ ಶಕ್ತಿಗಳು ಅರ್ಥಾತ್ ಕಾಲವು, ಅದರೊಂದಿಗೆ ನೀವು ಸುಖಿ ಸಲ್ಲಾಪದಿಂದಿರಬೇಕೆಂದು ಬಯಸುತ್ತದೆ. ಕಾಲನು ನಿಮ್ಮ ಮಿತ್ರ. ನೀವು ಅವನೊಂದಿಗೆ ಎಲ್ಲ ಸಂದರ್ಭಗಳಲ್ಲಿಯೂ ಸುಖಿಸುತ್ತಿರಬೇಕೆಂದು ಅವನ ಬಯಕೆ, ಆದರೆ, ನೀವಾದರೋ ಯೋಗಿಗಳಾಗಬೇಕಿದೆ. ಆಗ, ವಿಷಯಗತ ಸಂದರ್ಭಗಳು ನಿಮ್ಮ ವಿರುದ್ಧ ದಂಗೆ ಏಳುತ್ತವೆ. ಆಗ ನೀವು ಬೆದರ ಕೂಡದು. ನೀವು ತಾಳಬೇಕು. ಮತ್ತು ವೀಕ್ಷಿಸಬೇಕು. "ಓಹೋ! ಇದೆಲ್ಲ ಸರಿ. ಅವು ಬರುತ್ತವೆ; ಹೋಗುತ್ತವೆ." ಎಂದರಿತು ಅವುಗಳನ್ನು ನೀವು ಕ್ರೀಡಾ ಮನೋಭಾವದಿಂದ ಸ್ವೀಕರಿಸಿರಿ. "ಅದೆಲ್ಲ ಸರಿ." ಎನ್ನಿರಿ. ಆದರೆ, ಆಳವಾಗಿ ಚಿಂತಿಸಿದರೆ, ನೀವು ನಿಜವಾಗಿಯೂ ತೊಂದರೆಯಲ್ಲಿ ಸಿಲುಕಿಕೊಳ್ಳುವಿರಿ. ಆದ್ದರಿಂದ, ನೀವು ಇಂಥ ವಿಷಯಗಳನ್ನು ಆಳವಾಗಿ ಚಿಂತಿಸಬಾರದು.

ನಾನು ನನ್ನ ಶಿಷ್ಯರಿಗೆಲ್ಲ ಜಪಿಸಲು ಮಂತ್ರ ದೀಕ್ಷೆ ನೀಡುತ್ತೇನೆ. ಆ ಮಂತ್ರವು ತುಂಬಾ ಮಹತ್ವದ್ದು. ಅದು ನಿಮ್ಮ ಆಂತರಿಕ ಗುರು ಮತ್ತು ಬಾಹ್ಯಿಕ (ದೇಹಧಾರಿ) ಗುರುವಿನ ನಡುವಿನ ಕೊಂಡಿಯಂತಿದೆ. ಆದ್ದರಿಂದ, ನೀವು ಅದಕ್ಕೆಂದೂ ಭಂಗ ತರಬಾರದು. ನಿಮ್ಮ ಬಳಿ ಮಾಲೆ ಇರದಿದ್ದರೆ ಪರವಾಯಿಲ್ಲ. ನಿಗದಿತ ವೇಳೆಗೆ ನೀವು ಕುಳಿತು, ಕನಿಷ್ಠ ನಾಲ್ಕೈದು ಮಿನಿಟುಗಳ ವರೆಗಾದರೂ ಮಂತ್ರ ಜಪ ಮಾಡಬೇಕು. ಇದರಲ್ಲಿ ಭಂಗವು ತರವಲ್ಲ. ನೀವು ಕಾರಿನಲ್ಲಿ ಪ್ರಮಾಣಿಸುತ್ತಿದ್ದರೂ ಚಿಂತೆಯಿಲ್ಲ; ಒಂದೆರಡು ಮಿನಿಟುಗಳ ವರೆಗೆ ಸ್ಮರಣೆ ಮಾಡಿ ಮುಂದೆ ಸಾಗಿರಿ. ಆದರೆ, ನಿಯಮಿತ ಪುನುರುಚ್ಚಾರಣೆಯು ಅನಿವಾರ್ಯ ಮತ್ತು ಆವಶ್ಯಕ. ನೀವಿದನ್ನು ಒಂದು ದಿನ ನಿಲ್ಲಿಸಿ, ಮರಳಿ ಗಂಟೆಗಟ್ಟಳೆ ಮಾಡಿದರೂ, ಆರು ತಿಂಗಳು ಹಿಂದೆ ಬೀಳುತ್ತೀರಿ. ಹೀಗೆ, ನೀವು ದಿನದ ಇಪ್ಪತ್ತನಾಲ್ಕು ಘಂಟೆಗಳ ಕಾಲ ಕಾರ್ಯಮಗ್ನರಾಗಿರುವಿರೆಂದು ನನಗನಿಸುವುದಿಲ್ಲ. ನಿಮಗೆ ಬೇಕೆನಿಸಿದಾಗ, ಒಂದು ಕ್ಷಣವಾದರೂ ನಿಮಗೆ ಮಾನಸಿಕ ವೇಳೆ ಸಿಗಬಹುದು. ಸಿಕ್ಕೇ ಸಿಗುತ್ತದೆ.

ಕಾಲ-ಪ್ರಜ್ಞೆಯು ಎರಡು ವಿಧ. ಒಂದು ದಿನಮಾನ (chronological) ಕಾಲ; ಮತ್ತು ಇನ್ನೊಂದು ಮಾನಸಿಕ ಕಾಲ. ದಿನಮಾನ ಕಾಲವು ಗಡಿಯಾಳಕ್ಕನು

ಗುಣವಾಗಿ ಸಾಗುತ್ತದೆ. ಇನ್ನು ಮಾನಸಿಕ ಕಾಲವು ಮಾನಸಿಕ ತಿಳಿವಳಿಕೆ ಸಂವೇದನೆಗೆ ಅನುಗುಣವಾಗಿ ಸಾಗುತ್ತದೆ. ಅಂದಮೇಲೆ, ಈಗ ಪ್ರಶ್ನೆ ಎಂದರೆ, ನಿಮಗೆ ನಿಮ್ಮ ಮಾನಸಿಕ ಕಾಲದಲ್ಲಿ ತೊಂದರೆಯುಂಟಾದರೆ, ದಿನಮಾನ ಕಾಲವು ವಿಸ್ತೃತವಾಗುತ್ತದೆ. ಅದು ಅತಿ ದೀರ್ಘವೆನಿಸುತ್ತದೆ. ಇದನ್ನು ನೀವು ಅನುಭವಿಸಿರಬಹುದು. ತೊಂದರೆ ಇರುವಾಗ, ಕಾಲವು ಎಷ್ಟೊಂದು ದೀರ್ಘವೆನಿಸುವುದೆಂದರೆ, ನೀವು ಗಡಿಯಾಳವನ್ನು ನೋಡಿಯೇ ನೋಡುತ್ತೀರಿ. ಅದೊಂದು ಸಮಸ್ಯೆಯೇ ಆಗುತ್ತದೆ. ಅಂಥ ಪ್ರಸಂಗದಲ್ಲಿ ದಿನಮಾನ ಕಾಲವನ್ನು ಕಳೆಯುವುದೇ ಒಂದು ಸಮಸ್ಯೆಯಾಗುತ್ತದೆ. ಒರ್ವನು ಸಿನೇಮಾಕ್ಕೆ ಹೋಗಬಯಸುತ್ತಾನೆ. ಇಲ್ಲವೆ ಯಾವುದಾದರೂ ಸಂತೋಷ–ಕೂಟಕ್ಕೆ ಹೋಗಬಯಸುತ್ತಾನೆ. ಇಲ್ಲವೆ ದಿನಮಾನ–ಕಾಲವನ್ನು ಮರೆಯಲು ಮತ್ತೇನನ್ನೋ ಕಲ್ಪಿಸಿಕೊಳ್ಳುತ್ತಾನೆ. ಏಕೆ? ಏಕೆಂದರೆ, ಸ್ವಾಭಾವಿಕ ಜೀವನದಲ್ಲಿಯೂ ಸಹ ಆಂತರಿಕ ತಿಳಿವಳಿಕೆ ಇಲ್ಲ. ನಾವು ಮಾನಸಿಕವಾಗಿ ಸಂತಸಭರಿತರಾಗಿದ್ದರೆ, ಆಗ ದಿನಮಾನ ಕಾಲವು ಹ್ರಸ್ವಗೊಳ್ಳುತ್ತದೆ. ದಿನದ ಇಪ್ಪತ್ತು ಘಂಟೆಗಳೇ ಇದ್ದರೂ ಸಹ, ಅವು ಒಂದೆರಡು ಘಂಟೆಗಳಂತೆ ಗೋಚರಿಸುತ್ತವೆ. "ಓಹೋ! ನಾವು ಹೇಗೆ ದಿನಗಳೆದೆವೆಂಬುದೇ ಗೊತ್ತಾಗಲಿಲ್ಲ!" ಎನ್ನುತ್ತೇವೆ. ಏಕೆಂದರೆ, ಆಂತರಿಕ ಸಂತೋಷವು ಎಂಥ ಗತಿಶೀಲ ಸತ್ತೆಯೆಂದರೆ, ಅದು ನಿಮ್ಮ ಪ್ರಜ್ಞೆಯನ್ನು ದಿನಮಾನ ಕಾಲವನ್ನು ಮರೆಯುವಂತೆ ಮಾಡುತ್ತದೆ. ನೀವು ಇಂಥ ಮಾನಸಿಕ ಕಾಲದಲ್ಲಿರುವಾಗ, ದಿನಮಾನ ಕಾಲವು ಹ್ರಸ್ವವೆನಿಸುತ್ತದೆ. ಆಧುನಿಕ ಮಾನಸಗಳು ಈ ವಿಜ್ಞಾನವನ್ನು ಮರೆತಿವೆ. ಅವರು ಜಪ ಕ್ರಿಯೆಯೆಂದರೆ ವೇಳೆಯ ಅಪವ್ಯಯ; ಎಂದು ತಿಳಿದಿದ್ದಾರೆ. ಈ ರೀತಿ, ಸುಮ್ಮನೆ ಕುಳಿತು ಕೊಳ್ಳುವುದು ಕಾಲ ಹರಣವೆಂದು ಅವರ ಮತ. ನಾವು ಸಂತತ ಕ್ರಿಯಾಶೀಲರಾಗಿರಬೇಕೆಂದು ಅವರ ಅಭಿಪ್ರಾಯ. ಇಲ್ಲವಾದರೆ, ನಾವು ಯಾವುದೊಂದು ಸಿನೇಮಾ, ಟಿ. ವ್ಹಿ ಕಾರ್ಯಕ್ರಮವನ್ನು ನೋಡಬೇಕು. ಇಲ್ಲವೆ ಗೆಳೆಯರೊಂದಿಗೆ ಮಾತಾಡಬೇಕು. ಇಲ್ಲವೆ ಚಿತ್ರ ಕಲೆಯಲ್ಲಿಯೋ, ವಾದ್ಯ ವಾದನದಲ್ಲಿಯೋ ತೊಡಗಬೇಕು. ಅದು ಕಾಲದ ಅಪವ್ಯಯವಲ್ಲವಂತೆ. ಅದೇ ಕಾಲದ ಸರಿಯಾದ ಬಳಕೆ; ಎಂದು ಅವರ ಅಭಿಪ್ರಾಯ. ಆದರೆ, ಹೀಗೆ ನಮ್ಮಂತೆ ಸುಮ್ಮನೆ ಕುಳಿತರೆ, ಅವರು "ವೇಳೆ ಪಾಳು" ಎನ್ನುತ್ತಾರೆ.

ಆದರೆ, ಹೀಗೆ ಅಭಿಪ್ರಾಯ ಪಡುವುದು ಶುದ್ಧ ಮೂರ್ಖತನ. ಏಕೆಂದರೆ, ಅವರಿಗೆ ವಾಸ್ತವಿಕ ಜೀವನವೆಂದರೆ ಏನೆಂಬುದೇ ತಿಳಿದಿಲ್ಲ. ಒಂದುವೇಳೆ,

ನೀವು ಏನನ್ನೂ ಮಾಡದೆ, ಯಾವುದೋಂದು ಮಂತ್ರ ಜಪ ಮಾಡಬಲ್ಲರಾದರೆ, ನಿಮ್ಮ ಕಾಲವು ಅತ್ಯಂತ ಉಪಯುಕ್ತವಾಗಿ ಕಳೆಯುತ್ತದೆ. ಹೀಗೆ, ವೇಳೆಯನ್ನು ಉಪಯೋಗಿಸುವುದು ಒಳ್ಳೇ ಸುದ್ದೆವ. ಏಕೆಂದರೆ, ಅದು ನಿಮ್ಮ ಸ್ವ-ಪ್ರಜ್ಞೆಯ ಆಂತರಿಕ ಪರಿಶೋಧದಲ್ಲಿ ಉನ್ನತೋನ್ನತ ಮಟ್ಟಕ್ಕೆ ಕರೆದೊಯ್ಯುತ್ತದೆ. ವಾಸ್ತವವಾಗಿ ನೀವು ಆಂತರಿಕ ತಿಳಿವಳಿಕೆಯನ್ನು ಹೊಂದುತ್ತೀರಿ. ಆದರೆ, ನಾವಿಂದು ಆಧುನಿಕ ಜಗತ್ತಿನಲ್ಲಿ ಇದ್ದೇವೆ. ನಾವು ಹೀಗೆಯೇ ಇಪ್ಪತ್ತು–ನಾಲ್ಕು ಘಂಟೆಗಳ ಕಾಲವೂ ಮಾಡಲಾರೆವು. ಏಕೆಂದರೆ, ನಮ್ಮ ಇಂದಿನ ಜೀವನದಲ್ಲಿ ಹಲವು ಬಾಹ್ಯಿಕ ಸಮಸ್ಯೆಗಳಿವೆ ಸರಿ. ನಾವು ಆಧುನಿಕ ಜಗದ ಈ ಜನರೊಡನೆ ಸಾಗಬೇಕು; ಮತ್ತು ನಾವು ಸಾಗುತ್ತೇವೆ. ನಾವು ಇಂಜಿನಿಯರರಾಗುತ್ತೇವೆ; ನಮಗೇನಾಗಬೇಕಿದೆಯೋ ಅದೂ ಆಗುತ್ತೇವೆ. ಅದರಿಂದ ನಮಗಾವ ಬಾಧೆಯಿಲ್ಲ. ಆದರೆ ನಾವು ನಮ್ಮ ಜೀವನದಲ್ಲಿ ಸಮತೂಕವನ್ನು ಕಾಯ್ದುಕೊಳ್ಳಬೇಕು. ಅದು ಮುಖ್ಯ ಅವರು ಯಾವುದಕ್ಕೆ ವೇಳೆಯ ಅಪವ್ಯಯ? ಪೆನ್ನು ವರೋ, ಆ 'ಅಪವ್ಯಯ'ವನ್ನೇ ಮಾಡಲು ನಾವು ಪ್ರಯತ್ನಿಸುತ್ತೇವೆ. ನಾವು ನಮ್ಮ ಕರ್ತವ್ಯದಲ್ಲಿ ತುಂಬಾ ಶ್ರದ್ಧೆಯುಳ್ಳವರಾಗುತ್ತೇವೆ. ಆದರೆ, ಆ ಜನರು ಮನರಂಜನೆಯಲ್ಲಿ ಹಾಳು ಮಾಡುವಂತೆ, ವೇಳೆಯನ್ನು ನಾವು ಹಾಳು ಮಾಡಬಯಸುವುದಿಲ್ಲ. ನಾವು ನಮ್ಮನ್ನೇ ಅರಿತುಕೊಳ್ಳಬಯಸುತ್ತೇವೆ. ನಾವು ನಮ್ಮನ್ನು ಅರಿತುಕೊಂಡ ಮೇಲೆ, ಆಗ ನಮ್ಮ ಕರ್ತವ್ಯವು ದಿವ್ಯ ಮಾತೆಯ ಸೇವೆಯಾಗುತ್ತದೆ. "ನನಗೆ ಹಣಬೇಕಾಗಿದೆ; ಅದಕ್ಕಾಗಿ ಈ ಕಾರ್ಯ ಮಾಡುತ್ತೇನೆ ಇಲ್ಲವೆ ದೇವರು ಈ ತುತ್ತಿನ ಚೀಲವೊಂದನ್ನು ಕೊಟ್ಟಿದ್ದಾನೆ. ಆದ್ದರಿಂದ ಕರ್ಮ ಮಾಡುವೆ. ಒಂದು ವೇಳೆ, ಈ ಹೊಟ್ಟೆಯೊಂದಿರದಿದ್ದರೆ, ನಾನೇನೂ ಸ್ವೀಕರಿಸುತ್ತಿರಲಿಲ್ಲ. ನಾನು ಸ್ವಚ್ಛಂದದ ಹಕ್ಕಿಯಂತಾಗುತ್ತಿದ್ದೆ" ಎಂದು ಹೇಳುತ್ತಿರುವಂತೆ ಅಲ್ಲವಿದು. ನಾವು ಹೀಗೆ ವಿಚಾರಿಸಕೂಡದು. ಅದು ಕೇವಲ ಅನಿಸಿಕೆಯ ಮಾತು." ಅದೇ ಕರ್ತವ್ಯವನ್ನು ನೀನೂ ಅನಿವಾರ್ಯವಾಗಿ ಮಾಡಿಯೇ ಮಾಡುತ್ತೀ. ಹೀಗೆ, ಭಗವದ್ಗೀತೆಯು ಹೇಳುವುದೇನೆಂದರೆ, "ನೀನು ಏನನ್ನೇ ಮಾಡು. ಅದನ್ನು ಮಾಡಲೇಬೇಕಷ್ಟೇ. ಆದರೆ ಅದನ್ನು ಅರಿತುಕೊಳ್ಳಲು ಪ್ರಯತ್ನಿಸು". ನಿಮ್ಮ ದೃಷ್ಟಿಕೋನವನ್ನು ಬದಲಿಸಲು ಪ್ರಯತ್ನಿಸಿರಿ. ಹಾಗೆಂದರೇನು? ನೀವು ಕರ್ಮ ಯೋಗ ಮಾಡಿರಿ. ಗೀತಾಕಾರನು ಹೇಳುವುದೇನಂದರೆ, ನೀವು ಏನನ್ನೇ ಮಾಡಿರಿ ಅದು ಹೊಟ್ಟೆಗಾಗಿ ಮಾತ್ರವಲ್ಲ; ಇಲ್ಲವೆ ನಿಮ್ಮ ಸ್ವಾರ್ಥಕ್ಕಾಗಿ ಅಲ್ಲ. ಅದೆಲ್ಲ ದೈವ ಸೇವೆ.

ನಾನೊಂದು ಸ್ಕೃತಿರುಗಿಸಿದರೂ ಸಹ, ಅದು ದೈವೀ ಸೇವೆಯೆ? 'ನಾನಿದನ್ನು ಬರಿ ದೈಹಿಕವಾಗಿ ಮಾಡುತ್ತಿದ್ದೇನೆ;" ಎಂದು ತಿಳಿಯಬೇಡಿರಿ. ಆದರೆ, ನೀವು ಏನನ್ನೇ ಮಾಡಿರಿ. ಸರಿಯಾಗಿ ಮಾಡಿರಿ. ಮತ್ತು 'ನಾನು ಏನನ್ನೇ ಮಾಡಲಿ; ಆದೆಲ್ಲ ದಿವ್ಯ ಸೇವೆ" ಎಂದು ತಿಳಿಯಿರಿ. ನೀವು ಇದೆಲ್ಲ ಮಾನಸಿಕ ಪ್ರತಿಪಾದನೆಯಷ್ಟೇ ಎನ್ನಬಹುದು. ಇಲ್ಲ, ಅದು ಮಾನಸಿಕ ಪ್ರತಿಪಾದನೆಯಲ್ಲ. ಏಕೆಂದರೆ, ಯೋಗಿಗಳಿಗೆ ಪ್ರತಿಯೊಂದು ಕಾರ್ಯವೂ, ಪ್ರತಿಯೊಂದು ಕರ್ತವ್ಯವೂ ದೈವಿಕವಾಗಿದೆ. ನಮ್ಮ ದೃಷ್ಟಿಯೂ ಸಹ ದಿವ್ಯವಾಗಬೇಕು. ನಮ್ಮ ಗ್ರಹಿಕೆಯೂ ಸಹ ದಿವ್ಯವಾಗಬೇಕು. ಆಗ ಮಾತ್ರ, ನಿಮ್ಮ ಮನವು ಬದಲಾಗುತ್ತದೆ. "ನಾನು ಮಾಡುತ್ತಿರುವುದು ನಿರುಪಯೋಗಿ ಕಾರ್ಯ; ಬರೀ ಪೂಜೆಯಷ್ಟೇ ಒಳ್ಳೇದು" ಎಂದು ನಿರ್ಣಯಿಸಬೇಡಿರಿ. ನೀವು ಪೂಜೆ ಮಾಡಿದಾಗ, ಜಪ ಮಾಡಿದಾಗ, ವಿಶ್ರಾಂತಿ ಲಭಿಸುತ್ತದೆ. ಶಕ್ತಿಯ ಸಂಚಯವಾಗುತ್ತದೆ. ಇದನ್ನೇ ನೀವು ಕಾರ್ಯಕ್ಕಿಳಿದಾಗ, ದೈಹಿಕ ರೀತಿಯಲ್ಲಿ ಉಪಯೋಗಿಸಬೇಕು. ಮತ್ತು ನಿಮಗೆ ಸಹಾಯಕವಾಗಬೇಕು. ನಿವು ನಿಮ್ಮ ಭೌತಿಕ ಜೀವನವನ್ನು ಸಂಪೂರ್ಣವಾಗಿ ಬೇರೆಯೇ ಆಗುವಂತೆ ಮಾಡಲಿಕ್ಕಾಗಿ ನಿಮ್ಮ ಶಕ್ತಿಯನ್ನು ಬಳಸುವಂಥ ಜನರಾಗಬೇಡಿರಿ. ಆಗ ಅದು ನಿಮಗೊಂದು ಸಮಸ್ಯೆಯಾಗುತ್ತದೆ. ಆಗ ಸಮತೂಕವನ್ನು ಕಾಯ್ದುಕೊಳ್ಳುವುದು ನಿಮಗೆ ಸಮಸ್ಯೆಯೆನಿಸುತ್ತದೆ. ನೀವು ನಿಮ್ಮ ನಿತ್ಯಜೀವನದಲ್ಲಿ, ಹಣ ಗಳಿಕೆಯಹೊತ್ತನ್ನಾಗಲಿ, ಜಪಕ್ರಿಯೆಯ ಹೊತ್ತನ್ನಾಗಲಿ ಬೇರೆ ಬೇರೆಯಾಗಿರಿಸಬೇಡಿರಿ. ಆದೇ ವಸ್ತುಗಳಿಂದ ನೀವು ನಿಮ್ಮ ಬಾಹ್ಯಿಕ ಜೀವನವನ್ನು, ಪ್ರಾಪಂಚಿಕ ಜೀವನವನ್ನು ನಡೆಸಬೇಕು. ಹಾಗೆಂದರೇನು? ಬಾಹ್ಯಿಕ ಜೀವನದಲ್ಲಿ ಹೇಳಬೇಕಾದುದೇನೂ ಇಲ್ಲ. ನೀವು ಪರಿವರ್ತಿಸಬೇಕಾದುದೆಂದರೆ, ನಿಮ್ಮ ತಿಳಿವಳಿಕೆಯನ್ನು ಮಾತ್ರ. ಒಂದು ವೇಳೆ, ನಾನು "ವಿಶ್ವವಿದ್ಯಾಲಯದ ವೃತ್ತಿಯಲ್ಲಿರುವುದು ಕೇವಲ ಹಣಗಳಿಕೆಗಾಗಿ ಮಾತ್ರ" ಎಂದು ತಿಳಿದರೆ, ಆದರ ಅರ್ಥ, ನಾನು ನನ್ನ ಕರ್ತವ್ಯದಲ್ಲಿ ಹರ್ಷಿಸುವುದಿಲ್ಲವೆಂದ ಹಾಗಾಯಿತು. ಪ್ರತಿಯಾಗಿ, ನಾನು "ಓಹೋ! ದೇವರು ನನಗೆ ಈ ಕರ್ತವ್ಯವನ್ನು ಒಪ್ಪಿಸಿದ್ದಾನೆ. ನಾನದನ್ನೇ ಮಾಡುವೆ" ಎಂದು ಭಾವಿಸಿದರೆ, ಮತ್ತು ನಾನು ಜನರೊಂದಿಗೆ ಪ್ರಾಮಾಣಿಕವಾಗಿ ವ್ಯವಹರಿಸಿದರೆ, ನನಗೆ ಕಡಿಮೆ ಹಣ ಲಭಿಸಿದರೂ ಚಿಂತೆಯಿಲ್ಲ. ಆದರಿಂದ ಯಾವ ಬಾಧೆಯಿಲ್ಲ. ನಾನು ಸ್ವಲ್ಪ ಹೆಚ್ಚು ಪಡೆದರೆ, ಆದರಿಂದಾವ ಬಾಧೆಯಿಲ್ಲ. ಆದರೆ ನಾನೇನನ್ನೇ ಮಾಡಲಿ; ಆದನ್ನು ಕಳಕಳಿಯಿಂದ ಮಾಡಬೇಕು. ಮತ್ತು ಈ ಮನೋಭಾವವೇ

ಪೂಜೆ ಎನಿಸುತ್ತದೆ. ನೀವು ಪೂಜೆಯನ್ನು ಮಾಡುವಾಗ, ಯಾವ ಸ್ಪಂದನಗಳನ್ನು ಹೊಂದುವಿರೋ, ಅವೇ ಸ್ಪಂದನಗಳನ್ನು ಸ್ಕೃಜಡಿಯುವಾಗ ಸಹ ಹೊಂದುತ್ತೀರಿ. ಕೆಲವೊಮ್ಮೆ ಹೆಚ್ಚಾಗಿಯೇ ಹೊಂದುವಿರೆಂದು, ನಾನು ಹೇಳುವೆ.

ಹೀಗೆ, ಆದರಲ್ಲಿಯೂ ವಿಶೇಷವಾಗಿ ಭಾರತೀಯ ಸಂಪ್ರದಾಯದಲ್ಲಿ ಗುರುವಿಗೆ ಸೇವೆ ಸಲ್ಲಿಸುವ ವಿಧಾನವಿದೆ. ಗುರು–ಸೇವೆಯೂ ಸಾಧನವೇ. ನಾನು ಚಿಕ್ಕ ಹುಡುಗನಾಗಿದ್ದಾಗ ನಾನೊಬ್ಬ ದೊಡ್ಡ ಗುರುವಿನ ಬಳಿ ಇದ್ದೆ; ಅವನೊಬ್ಬ ವಿಶೇಷ ಗುರು. ಆಗ ನಾನು ಮೂರು ಇಲ್ಲವೆ ನಾಲ್ಕು ಘಂಟೆಯ ವರೆಗೆ ಪೂಜೆಗೆ ಕುಳಿತುಕೊಳ್ಳುತ್ತಿದ್ದೆ. ನನ್ನ ಗುರು ನನ್ನನ್ನು ನೋಡಿದ ಕೂಡಲೇ "ಏನು ಮಾಡ್ತೀಯಪ್ಪಾ. ಎಲ್ಲ ಹಾಳು ಕೆಲಸ!" ಎನ್ನುತ್ತಿದ್ದರು, ನನ್ನ ಪೂಜೆ ಕುರಿತು. "ನೀನು ನನ್ನ ಬಟ್ಟೆ ತೊಳೆ. ನನ್ನ ಕೊಠಡಿಯ ಕಸ ಗುಡಿಸು." ಎಂದು ಹೇಳುತ್ತಿದ್ದರು. ಇಡೀ ದಿನ, ಇಂಥ ಕಾರ್ಯಗಳಲ್ಲಿ ನನ್ನನ್ನು ತೊಡಗಿಸುತ್ತಿದ್ದರು. ಆದರೆ, ತಾವು ಮಾತ್ರ ದಿನದಲ್ಲಿ, ಅನೇಕ ಸಲ ಪೂಜೆ ಮಾಡುತ್ತಿದ್ದರು. ಕಾರ್ಯಭಾರ ನಿಮಿತ್ತ ನಾನು ಪೂಜೆಯನ್ನೇ ಮಾಡುತ್ತಿರಲಿಲ್ಲ. ಆಗ ನಾನು, "ಇದೆಲ್ಲ ಏನು ಪ್ರಯೋಜನ? ಅವರು ನನ್ನನ್ನು ಒಬ್ಬ ಸಾಮಾನ್ಯ ಸೇವಕನಂತೆ ಇಟ್ಟುಕೊಂಡಿದ್ದಾರೆ." ಎಂದು ಕಳವಳಗೊಂಡೆ. ಒಂದು ದಿನ ಚೆನ್ನಾಗಿ ಅತ್ತುಬಿಟ್ಟೆ. ಹೀಗಾಗಿ ನಾನು ಗೊಂದಲಕ್ಕೀಡಾಗಿ ಅತ್ತಿತ್ತ ಅಡ್ಡಾಡುತ್ತಿದ್ದೆ. ಆಗ ಅವರು ನನ್ನನ್ನು ಕರೆದು, "ನೀನೊಬ್ಬ ಶತಮೂರ್ಖ. ನಾನು ನನಗಾಗಿ ಪೂಜೆ ಮಾಡುತ್ತಿರುವೆ" ಎಂದು ನುಡಿದರು. ಆಗ ನಾನು, "ಅದೆಂತು ಸಾಧ್ಯ?" ಎಂದು ನಸುನಕ್ಕೆನು. "ಅವರು ಪೂಜೆ ಮಾಡುತ್ತಾರಂತೆ; ಅದೂ ನಿನಗಾಗಿ?" ಇದು ನನಗೆ ದಿಗಿಲಾಯಿತು. ಆಗ ನನ್ನ ಆ ಗುರು ಹೇಳಿದರು: "ನೀನು ನಿನ್ನ ಕರ್ತವ್ಯವನ್ನು ಮಾಡುವಾಗ, ನೀನು ಯಾಂತ್ರಿಕವಾಗಿ ಮಾಡಿದರೆ, ಅದರಿಂದ ಯಾವ ಪ್ರಯೋಜನವೂ ಇಲ್ಲ, ಹೀಗೆಲ್ಲ ವಿವರಿಸಿದರು. ಆದ್ದರಿಂದ, ನಾನು ನನ್ನ ಗುರುಗಳನ್ನು ಸಂಪ್ರೀತಗೊಳಿಸಲು ಮಾಡಿದಂತೆಯೇ ನೀವೂ ಮಾಡಿರಿ. ನನ್ನ ಕರ್ತವ್ಯ ನಿರ್ವಹಣೆ ಇಲ್ಲವೆ ಗುರುಸೇವೆಯೂ ನನ್ನ ಪೂಜೆಯೇ ಆಗಿತ್ತು. ನೀವೂ ಹಾಗೆಯೇ ಮಾಡಬೇಕು. ಆಗ, ನಿಮಗದರ ಮಹಿಮೇ ಅರ್ಥವಾಗುತ್ತದೆ.

ವಾಸ್ತವವನ್ನೇ ತಿಳಿಸುವುದಾದರೆ, ನಾನು ನನ್ನ ಜೀವನದಲ್ಲಿ ಆ ಮನೋಭಾವವನ್ನು ಬೆಳೆಸಿಕೊಂಡ ಮೇಲೆ, ನಾನು ಕೇವಲ ಐದೇ ನಿಮಿಷ ಪೂಜೆ

ಮಾಡಿದರೂ ಸಹ, ಆರು ಘಂಟೆಗಳ ಕಾಲ ಪೂಜೆ ಮಾಡಿದಷ್ಟು ಆನಂದ ಪಡೆಯುತ್ತಿದ್ದೆ. ಅರ್ಥಾತ್, ನಾನು ಮೊದಲು ಕಾರ್ಯ ಮಾಡುತ್ತಿದ್ದಾಗ, ಬಾಹ್ಯಿಕವಾಗಿರುತ್ತಿದ್ದ ನನ್ನ ಮನಸ್ಸು, ನನ್ನ ಭಾವನೆಗಳು ಆನಂತರ ಶ್ರುತಿಗೊಂಡವು. ಮತ್ತು ಆಗ ನಾನು ಆನಂದ ಘನ ಪಡೆಯುತ್ತಿದ್ದೆ. ಸೇವೆಯೂ ಸಾಧನೆಯ ಭಾಗವೇ. ಎಂಬುದನ್ನು ನಾನು ಒತ್ತಿ ಹೇಳಬಯಸುವೆ. ನಾನು ಅಲ್ಲಿ ಆ ಗುರುಗಳ ಬಳಿ ಇರುವಾಗ, ಅವರು ಹೀಗೆ ಹೇಳುತ್ತಿದ್ದರು. "ನೀನು ಪೂಜೆಯನ್ನು ಕಡಿಮೆ ಮಾಡು. ಆದರೆ ಗುರುಸೇವೆಯನ್ನು ಹೆಚ್ಚಿನ ಮಾಡು". ಅವರು ಹೇಳಿದಂತೆಯೇ ನಾನು ಮಾಡಿ, ಆದರಿಂದ ಹೆಚ್ಚಿನ ಆನಂದಪಡೆಯುತ್ತಿದ್ದೆ. ತಾತ್ಪರ್ಯವಿಷ್ಟೇ. ಈ ದಿನಮಾನ ಕಾಲವು ಹೆಚ್ಚು ಮಹತ್ತ್ವವ್ದದಲ್ಲ. ಆದೆಲ್ಲ ನಿಮ್ಮ ಮನೋಭಾವವನ್ನೂ ಮತ್ತು ಆಂತರಿಕ ತಿಳಿವಳಿಕೆಯನ್ನೂ ಅವಲಂಬಿಸಿದೆ. ಆಂತರಿಕ ತಿಳಿವಳಿಕೆಯೇ ನಿಮಗೆ ಹೆಚ್ಚಾಗಿ ಸಹಾಯ ನೀಡುತ್ತದೆ.

ನನ್ನ ಗುರುಗಳಾದ ಕವಿರಾಜ ಮಹಾರಾಜರಲ್ಲಿ, ನಾನು ಸಂಸ್ಕೃತ ಕಲಿಯುತ್ತಿದ್ದೆ. ಆಗ, ಅವರೇನು ಮಾಡುತ್ತಿದ್ದರು, ಗೊತ್ತೇ? ಅವರು ಎಲ್ಲರಿಗೂ ಕಲಿಸುತ್ತಿದ್ದರು. ಬರುವವರೆಲ್ಲರಿಗೂ ಅವರು ಕಲಿಸುತ್ತಿದ್ದರೂ, ನನಗೆ ಮಾತ್ರ, "ಹೋಗು; ಏನಾದರೂ ತೆಗೆದುಕೊಂಡು ಬಾ" ಎಂದು ಹೇಳಿ ಕಳಿಸುತ್ತಿದ್ದರು. ನಾನು ವಿಧೇಯನಾಗಿ ವರ್ತಿಸುತ್ತಿದ್ದೆ. ಮತ್ತು ಇಡೀ ದಿನ ಅವರ 'ಕ್ಲಾಸುಗಳು' ನಡೆದೇ ಇರುತ್ತಿದ್ದವು. ಇತ್ತ ನಾನಾದರೋ, ನನ್ನ ಗುರುವಿಗಾಗಿ ಬಟ್ಟೆ ತರುವ ಮತ್ತಿತರ ಸೇವಾಕಾರ್ಯಗಳಲ್ಲಿಯೇ ತೊಡಗಿರುತ್ತಿದ್ದೆ. ಇಂಥ ಸೇವೆಯು ನನಗೆ ಸಹಾಯಕವಾಗುವುದೆಂದು ನನಗೆ ಮೊದಲೇ ಅನುಭವವಿದ್ದ ಕಾರಣ, ನಾನು ಹರ್ಷಚಿತ್ತನಾಗಿಯೇ ಇರುತ್ತಿದ್ದೆ. ಆದರೆ ಕೆಲಪೊಮ್ಮೆ, ನಾನು ಬುದ್ಧಿ ಜೀವಿಯಾದುದರಿಂದ, ಏನಾದರೂ ಕೇಳೋಣವೆಂದು ಬರುತ್ತಿದ್ದೆ. ಕೂಡಲೇ ಮಹಾರಾಜರು ಅಲ್ಲಿ ಹೋಗು; ಇಲ್ಲಿ ಹೋಗು, ಎಂದು ಹೇಳಿ ಕಳಿಸುತ್ತಿದ್ದರು. ನನಗಿದು ಸಮಸ್ಯೆಯೇ ಆಯಿತು. 'ಅಲ್ಲಿ ಏನುಂಟು?' ಎಂದು ನಾನು ವಿಚಾರಿಸುತ್ತಿದ್ದೆ. ಆದರೆ, ಹೆಚ್ಚು ಹೆಚ್ಚು ಅಧಿಕಾರಿಯಾದಂತೆ, ಗುರುಗಳು ನನಗಾಗಿ ವಿಶೇಷ ಪಾಠ ಹೇಳಹತ್ತಿದರು. ಮತ್ತು ಅವರು ನನಗೆ ಆಶ್ಚರ್ಯಕರ ಸಂಗತಿಯನ್ನು ನೀಡಿದರು, ಅದನ್ನು ಯಾವುದೇ ಗ್ರಂಥವು ನೀಡದು. ನನ್ನ ಸಾಧನೆಯೂ ನೀಡದು. ಅಂಥದನ್ನು ಅವರು ನನಗೆ ದಯಪಾಲಿಸುತ್ತಿದ್ದರು.

ತಾತ್ಪರ್ಯವಿಷ್ಟೇ: ನಿಮ್ಮ ಆಂತರಿಕ ಪ್ರಜ್ಞೆಯೊಂದಿದೆ. ಅದನ್ನು ನೀವು

ಮಾನಸಿಕ ಪ್ರಜ್ಞೆ ಎನ್ನುತ್ತೀರಿ. ಅದು ತುಂಬಾ ಮಹತ್ವದ್ದು. ಅದು ನಿಮ್ಮೊಳಗೇ ಅತ್ಯಂತ ವಿಸ್ತೃತವಿದೆ. ಅದನ್ನು ವಿಕಾಸಗೊಳಿಸಬೇಕು. ಅದಕ್ಕಾಗಿ ನಾವು ದಿನಮಾನದ ಕಾಲದ ಸಹಾಯವನ್ನೂ ಪಡೆಯಬೇಕು. ಅರ್ಥಾತ್ ಸಾಧನೆಯೆಂದರೆ, ಕೇವಲ ಯಾಂತ್ರಿಕ ಮನೋಭಾವವೇನಲ್ಲ. ಆದರೆ, ಅದು ನಮ್ಮ ಮನವನ್ನು ಪ್ರವೇಶಿಸಬೇಕು. ನಮ್ಮ ಮನೋಭಾವನೆಯನ್ನು ಸ್ಪರ್ಶಿಸಬೇಕು. ಅದು ನಮ್ಮ ಮನವನ್ನು, ಭಾವನೆಯನ್ನು, ಮತ್ತು ಬುದ್ಧಿಯನ್ನು ಸ್ಪರ್ಶಿಸಿದಾಗ, ನಾವು ತುಂಬಾ ಸುದೈವಿಗಳಾಗುತ್ತೇವೆ. ಆಗ ನಮ್ಮ ನಿಜವಾದ ಕಾರ್ಯಕ್ಕೆ ಮೊದಲಾಗುತ್ತದೆ. ಆಗ ನಾವು ಆಂತರ್ಯದಲ್ಲಿ ಕಾರ್ಯ ಮಾಡುವಲ್ಲಿ ಹರ್ಷಿಸುತ್ತೇವೆ. ಇದು ನಿಮಗೆ ತಿಳಿಯುವುದೋ? ಇಲ್ಲವೋ? ಆ ಮಾತು ಬೇರೆ. ಆದರೆ, ನಾವು ಈ ಪ್ರಕಾರದ ಮನೋಭಾವವನ್ನು ದಿನೇ ದಿನೇ ವಿಕಾಸಪಡಿಸಿಕೊಳ್ಳಲೇಬೇಕು. ಮತ್ತು ಇದುವೇ ಆಧ್ಯಾತ್ಮಿಕತೆಯ ಸಂಪದ. ಇದಕ್ಕೇ ಶ್ರದ್ಧೆ ಎನ್ನುತ್ತಾರೆ. ಇದು ನಿಮ್ಮಲ್ಲಿ ಶಕ್ತಿಯನ್ನು ಉಂಟು ಮಾಡುತ್ತವೆ. ಅಹಂಕಾರ ತುಂಬಿದ ಮಾನವನು ಯಾವಾಗಲೂ ತೊಂದರೆಯಲ್ಲಿರುತ್ತಾನೆ. "ನಾನು ಹೊಣೆಗಾರನಿದ್ದೇನೆ" ಎಂದು ಅವನು ತಿಳಿಯುವುದರಿಂದ, ಅಧಿಕಾಧಿಕ ಸಮಸ್ಯೆಗಳೇಳುತ್ತವೆ. ಆಂತರಿಕ ಪ್ರಜ್ಞೆಗೆ ಅಹಂಕಾರವನ್ನು ಸಮರ್ಪಿಸಿರುವ ಆಧ್ಯಾತ್ಮ ಜೀವಿಯು ತನ್ನ ಕರ್ತವ್ಯವನ್ನು ತಾನು ಮಾಡುತ್ತ ಹೋಗುವನಷ್ಟೇ. ಮತ್ತೇನೂ ಇಲ್ಲ. "ಏನೇನಾಗುವುದೋ, ಆದೆಲ್ಲ ಸರಿಯೇ. ಕೆಟ್ಟದ್ದಾಯಿತೋ, ಯಾವ ಬಾಧೆಯಿಲ್ಲ ಬಿಡಿ. ಒಳ್ಳೆಯದಾಯಿತೋ, ಪರವಾಯಿಲ್ಲ ಬಿಡಿ." ಎಂಬ ಮನೋಭಾವನೆ ಅವನದು. ಇನ್ನು, ಪ್ರತಿಶತ ತೊಂಬತ್ತರಷ್ಟು ಯಾವಾಗಲೂ ಒಳ್ಳೆಯದೇ ಆಗುತ್ತಿರುತ್ತದೆ. ಆದರೆ, ಪ್ರಪಂಚದಲ್ಲಿಯ ಮಾನಸಿಕ ಪ್ರತೀಕ್ಷೆಯು ಸಮಸ್ಯೆಗಳನ್ನು ಹುಟ್ಟಿಸುತ್ತಿದೆ. ಹೀಗೆಯೇ ಗೀತೆಯಲ್ಲಿಯೂ ನೀವು ಓದುತ್ತೀರಿ. ಇಡೀ ಗೀತೆಯ ಸಾರಾಂಶವೆಂದರೆ, "ನನಗೇ ಶರಣಾಗು; ನಿನ್ನ ಹೊಣೆಯನ್ನೆಲ್ಲ ನಾನೇ ತೆಗೆದುಕೊಳ್ಳುವೆ." ಆ ನಾನು ಯಾರು? ದೈವೀ ಪ್ರಜ್ಞೆಯೇ ತೆಗೆದುಕೊಳ್ಳುತ್ತದೆ. ಆದರೆ ನಮ್ಮ ಬುದ್ಧಿಯು ಇದಕ್ಕೆ ಅನುವು ಕೊಡದು. ಏಕೆಂದರೆ, ಬುದ್ಧಿಯು ತುಂಬಾ ಧೂರ್ತವಿದೆ. ಅದು ಯಾವಾಗಲೂ ಅಹಂಕಾರದೊಂದಿಗೆ ಇರಬಯಸುತ್ತದೆ. ಅದನ್ನೇ ಪ್ರತಿಬಿಂಬಿಸುತ್ತಿದೆ. ಮತ್ತು "ನಾನು ತಿಳಿದದ್ದೇ ಸರಿ" ಎಂದು ತಿಳಿಯುತ್ತಿದೆ. ಇದು ಅಹಂಕಾರದ ಶಕ್ತಿ. ಇದರ ಇತಿಮಿತಿಯನ್ನು ಅರಿಯಲು ಪ್ರಯತ್ನಿಸಿರಿ. ನಿಮ್ಮ ಅಹಂಕಾರವನ್ನೇ

ತೊರೆಯಿರಿ, ಎಂದು ನಾನು ಹೇಳುತ್ತಿಲ್ಲ. ನಿಮ್ಮ ಬುದ್ಧಿಯನ್ನು ತೊರೆಯಿರಿ; ಎಂದು ಸಹ ನಾನೆಂದೂ ಹೇಳುವುದಿಲ್ಲ. ಅವುಗಳನ್ನು ಸರಿಯಾಗಿ ಬಳಸಿರಿ. ನೀವು ಅವುಗಳಿಗೆ ಆಳಾಗಬೇಡಿರಿ. ಅವುಗಳಿಗೆ ಸೋತು ಶರಣಾಗಬೇಡಿರಿ. ಈ ಎಲ್ಲವುಗಳಿಂದ ನೀವು ಸಂಪೂರ್ಣ ಬೇರೆಯೇ ಆಗಿರುವಿರಿ. ನೀವು ಸ್ವತಃ ಗತಿಶೀಲರಾಗಿದ್ದೀರಿ. ಮತ್ತು ನೀವೇ ಸರ್ವವ್ಯಾಪ್ತರಾಗಿದ್ದೀರಿ. ಇದುವೇ ನಿತ್ಯ ಕೃಪೆ. ಇದುವೇ ನಿಮ್ಮೊಡನಿರುವ ನಿತ್ಯಾನಂದ.

ಮತ್ತೆ ನಮ್ಮೆದುರಿನ ವಿಶೇಷ ವಿಷಯಕ್ಕೆ ಬರೋಣ. ನಾನೀಗಾಗಲೇ ಹೇಳಿರುವಂತೆ, ನಮ್ಮ ಜೀವನದಲ್ಲಿ ನಮಗೆ ದಿನ-ಮಾನ ಕಾಲವು ಲಭ್ಯವಾಗದಿದ್ದರೆ ಹೋಗಲಿ; ಆದರೆ,ನಾವು ನಮ್ಮ ಮಾನಸಿಕ ಕಾಲವನ್ನು ಹೆಚ್ಚು ಹೆಚ್ಚಾಗಿ ಶ್ರುತಿಗೂಡಿಸಬೇಕು. ಮಾನಸಿಕ ಕಾಲವೆಂದರೇನು? ನಿಮ್ಮ ಗತಿಗಳ ಸಂವೇದನೆ: ನಿಮ್ಮ ತಿಳಿವಳಿಕೆ, ನಿಮ್ಮ ವಿಚಾರ, ಅನ್ಯರ ಬಗೆಗೆ ನಿಮ್ಮ ಮನೋಭಾವನೆ, ಇವೆಲ್ಲವುಗಳ ಅನಿಸಿಕೆಗಳು ನಿಮ್ಮ ಮಾನಸಿಕ ಕಾಲದ ಹುಟ್ಟುವಳಿಗಳಾಗಿವೆ. ನೀವು ಹೆಚ್ಚು ಹೆಚ್ಚು ಆಸಕ್ತಿಗೆ ಇಂಬುಗೊಟ್ಟರೆ, ನಿಮ್ಮ ಮನವು ಸಮಸ್ಯೆಗಳಿಂದ ತುಂಬಿಹೋಗುತ್ತದೆ. 'ನಾನು ಅವರನ್ನು ತೃಪ್ತಿಪಡಿಸಬೇಕು, 'ನಾನು ಇದನ್ನು ಮಾಡಬೇಕು', 'ನಾನು ಈ ಸಂಗತಿಗಳಿಗೆ ಹೊಣೆಯಾಗಿದ್ದೇನೆ', 'ನನ್ನ ಮನೆಯ ಗತಿಯೇನು? ಅದು ಹೇಗಿದೆಯೋ?' 'ನಾನಿದನ್ನು ಮಾಡಲೇಬೇಕು', ಎಂಬ ವಿಷಯಗಳ ಬಗ್ಗೆ ಹೆಚ್ಚು ಆಸಕ್ತರಾದರೆ, ಆಗ ಮಾನಸಿಕ ಕಾಲವು ಅಹಂಕಾರದೊಂದಿಗೆ ಸೇರಿಕೊಳ್ಳುತ್ತದೆ. ಮತ್ತು ತಾನು ಎಳ್ಳಷ್ಟು ಹೊಣೆಗಾರವಾಗಿದ್ದರೂ ಹೊಣೆಯನ್ನು ಭಾವಿಸಿಕೊಳ್ಳುತ್ತದೆ. ಅದು ಹೆಚ್ಚು ಹೆಚ್ಚು ಹೊಣೆಗಾರಿಕೆಯನ್ನು ಕಂಡುಕೊಂಡು, ಒಳಗೊಳಗೆ ಹೆಚ್ಚು ಹೆಚ್ಚು ಸುರಕ್ಷಿತವೆಂದು ತಿಳಿಯುತ್ತದೆ. ಹೀಗೆ, ಅನೇಕ ವಿಧದ ಹಂಬಿಕೆ ಹೂಡುತ್ತದೆ. ಆದ್ದರಿಂದ, ಈ ಪ್ರಕಾರದ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಡಿರೆಂದು ನಾನು ಹೇಳುತ್ತೇನೆ. 'ಸ್ವಾಮೀಜಿಯ ಹೇತು ಏನೋ ಇದೆ. ಅವರು ನಮ್ಮ ಮನದಲ್ಲಿ ಏನನ್ನೋ ತುಂಬ ಹತ್ತಿದ್ದಾರೆ'; ಎಂದು ತಿಳಿಯಬೇಡಿರಿ. ಅಂಥದೇನೂ ಇಲ್ಲ. ನಾನು ನಿಮ್ಮನ್ನೂ ನನ್ನ ಹಾಗೆಯೇ ಪ್ರಬಲರನ್ನಾಗಿ, ಸ್ವತಂತ್ರರನ್ನಾಗಿ ಮಾಡಬಯಸುತ್ತೇನೆ. ನೀವು ಪ್ಯಾರಿಸಿನಲ್ಲಿರುವಾಗಲೂ, ನಾನು ತುಂಬಾ ಆನಂದದಿಂದಿರುವೆ. ಮತ್ತು ನೀವು ನನ್ನಂತೆಯೇ ಸ್ವಾಧೀನರಾಗಿರಿ. ಆಗ, ಇನ್ನಷ್ಟು ಸಂತೋಷವೆನಿಸುತ್ತದೆ. ಅದು ಈ ಅಮರ ಪ್ರೇಮವನ್ನು ಕೆಡಿಸದು. ಅದಿನ್ನೂ ಅಧಿಕಾಧಿಕ ಪ್ರಬಲವಾಗುತ್ತದೆ.

ಹೀಗೆ, ನಾವು ನಮ್ಮ ಮಾನಸಿಕ ಕಾಲವನ್ನು ಸಾಧನೆಗಾಗಿ ಉಪಯೋಗಿಸಬೇಕು. ದಿನಮಾನದ ಕಾಲದೊಂದಿಗೆ ಅದರ ಸಂಪರ್ಕವಿದೆ. ಮತ್ತು ಅದನ್ನೂ ಮೀರಿರುತ್ತದೆ. ನನ್ನ ನಿತ್ಯದ ದಿನಚರ್ಯೆಯು ಕಛೇರಿಗೆ ಹೋಗುವುದಾಗಿದೆ. ನಾನು ಹತ್ತು ಘಂಟೆಗೆ ಹೋಗುತ್ತೇನೆ. ನಾನು ದಿನಮಾನದ ಕಾಲಕ್ಕನುಸರಿಸಿಯೇ ಹೋಗುತ್ತೇನೆ. ಆದರೆ, ಕಛೇರಿಗೆ ಹೋದರೂ ಸಹ, ನಾನು ಕಛೇರಿಗೆ ಹೋದಂತಿರುವುದಿಲ್ಲ. ನಾನು ಕಛೇರಿಯಲ್ಲಿ ಕುಳಿತುಕೊಳ್ಳುವೆ. ಆದರೂ ಸಹ, ನನ್ನ ದಿನಮಾನದ ಕಾಲವು ಮನೆಯಲ್ಲಿಯೇ ಇದೆ. ಇದು ಸಾಧ್ಯವೋ ಹೇಗೆ? ಈಗ ನನ್ನ ಕಾರ್ಯವನ್ನು ಕಾರ್ಯಾಲಯದಲ್ಲಿಯೇ ಮಾಡುವದಿದೆಯೆಂದು ತಿಳಿಯಿರಿ. ಮತ್ತು ನಾನು ಕಾರ್ಯಾಲಯದಲ್ಲಿಯೇ ದೈಹಿಕವಾಗಿ ಇದ್ದೇನೆ. ಆದರೂ ಸಹ, ಮಾನಸಿಕವಾಗಿ ನಾನು ಬೇರೆಲ್ಲಿಯೋ ಇರಬಹುದು. ನನ್ನ ಮನವು ಬೇರೆಲ್ಲಿಯೋ ಇರಬಹುದು. ಅದು ಏನನ್ನೋ ಮಾಡುತ್ತಿರಬಹುದು; ಹಂಚಿಕೆ ಹೂಡುತ್ತಿರಬಹುದು. ನಾನಿನ್ನೂ ಕಾರ್ಯಾಲಯದ ಕೆಲಸ ಮಾಡುತ್ತಲೇ ಇರುವೆ; ಮನವು ಮತ್ತೇನನ್ನೋ ಮಾಡುತ್ತಿರುತ್ತದೆ. ಅಥವಾ ನಾನು ಶಾರೀರಿಕವಾಗಿ ಪೂಜೆಯನ್ನು ಮಾಡುತ್ತಿರಬಹುದು. ಆದರೆ, ನನ್ನ ಮನವು ಬೇರಾವುದೋ ಮಾನಸಿಕ ಕ್ರಿಯೆಯಲ್ಲಿ ತೊಡಗಿರಬಹುದು. ನಾನಿಲ್ಲಿ ಕುಳಿತಿದ್ದೇನೆ. "ಓಹೋ! ನನ್ನ ಕೆಲಸದ ಗತಿಯೇನು? ನನ್ನ ಪೂಜೆಯ ಗತಿಯೇನು? ಇಲ್ಲವೆ ನನ್ನ ಸೋದರಿಯ ಗತಿಯೇನು? ಮತದ ಗತಿಯೇನು?....." ಎಂದು ಮನದಲ್ಲಿ ವಿಚಾರದ ಅಲೆಗಳು ಎದ್ದಿರಬಹುದು.

ಸದಾ ಕಾಲ, ನನ್ನ ಮನವನ್ನು ಇಂಥ ವಿಷಯಗಳಲ್ಲಿ, ಸಮಸ್ಯೆಗಳ ಚಿಂತೆಯಲ್ಲಿ, ತೊಡಗಿಸಿರುವ ಸಾಧ್ಯತೆಯಿದೆ. ಸ್ಮೃತಿ-ಚಕ್ರ, ಅನುಭವಗಳ ಚಕ್ರಗಳು ತಿರುಗುತ್ತಿರುತ್ತವೆ. ಅದು ಹೀಗೆಯೇ ನಡೆದಿರುತ್ತದೆ.

ತಾತ್ಪರ್ಯವಿಷ್ಟೇ: ಶಾರೀರಿಕ ಪೂಜೆಯು ಮಾನಸಿಕ ಪೂಜೆಯನ್ನು ಸೂಚಿಸುತ್ತದೆ., ಅಂದರೆ ಸ್ಥೂಲ ಪೂಜೆಯು ಮಾನಸಿಕ ಪೂಜೆಗೆ ಕರೆದೊಯ್ಯುತ್ತದೆ! ಜಪಕ್ರಿಯೆಯಲ್ಲಿಯೂ ಎರಡು ವಿಧಗಳುಂಟು; ಸ್ಥೂಲ ಮತ್ತು ಮಾನಸಿಕ (ಉಪಾಂಶು). ಮಾನಸಿಕ ಎಂದರೆ ಅಭ್ಯಾಸಾನಂತರ, ನಾವು ಮಾನಸಿಕ ಜಪ ಮಾಡಬೇಕು. ಈಗ ನೀವು ಮಾಡುತ್ತಿರುವಂತೆ ಮಣಿ ಎಣಿಸಿ ಮಾಡುವ ಅಗತ್ಯವೇನಿಲ್ಲ. ನೀವು ಕುಳಿತಿರುತ್ತೀರಿ. ಒಳಗೆ ಜಪವು ತಂತಾನೇ ನಡೆದಿರುತ್ತದೆ. ಅರ್ಥಾತ್ ಸಾಧನೆಯಲ್ಲಿ ಅತ್ಯಂತ ಮಹತ್ತ್ವವೆದ್ದೆಂದರೆ, ಯಾವಾ

ಗಲೂ ನಮ್ಮ ಮನವನ್ನು ಶ್ರುತಿಗೊಳಿಸುವುದು. ನಾವು ಯಾಂತ್ರಿಕವಾಗಿ ದಿನದ ಇಪ್ಪತ್ನಾಲ್ಕು ಘಂಟೆಗಳ ವರೆಗೆ ಮಾಡಿದರೂ ಸಹ, ಅದು ಮಾನಸಿಕ ಜಪಕ್ಕೆ ಕರೆದೊಯ್ಯಲಾರದು. ಅದು ಮನಮುಟ್ಟಬೇಕು. ನಾವು ಯಾವಾಗಲೂ ಮಾನಸಿಕ ಕಾಲದಲ್ಲಿ ಈ ಕ್ರಮಗಳನ್ನಿರಿಸಬೇಕು. ನಮಗೆ ದಿನಮಾನ ಕಾಲದ ಗೊಡವೆ ಬೇಡ. ಆಗ, ನಾನು ಎಲ್ಲಿಯೇ ಆಗಲಿ, ಯಾವ ಕಾಲದಲ್ಲಿಯೇ ಆಗಲಿ, ಹೆಚ್ಚು ಕಾರ್ಯ ಮಾಡಬಲ್ಲೆನು. ನಾನು ಪ್ರಾಧ್ಯಾಪಕನಾಗಿ ಆರು ಘಂಟೆ ಕಾಲ ಕಾರ್ಯ ಮಾಡಬಹುದು. ಹೀಗೆ, ನನ್ನ ದಿನಮಾನದ ಕಾಲವನ್ನು ಕಾರ್ಯದಲ್ಲಿ ತೊಡಗಿಸಬಹುದು. ಆದರೆ, ನನ್ನ ಮಾನಸಿಕ ಕಾಲವು ಇನ್ನೂ ಎರಡು ವಸ್ತುಗಳನ್ನೊಳಗೊಂಡಿದೆ; ಒಂದು, ಯಾವಾಗಲೂ ಕ್ರಿಯಾನ್ವಿತವಾಗಿರುತ್ತದೆ. ನಾನು ಒಳಗೆ ವೀಕ್ಷಿಸಿದರೆ "ಓಹೋ! ಸರಿ. ಅದೂ ಇಲ್ಲಿ ಕಾರ್ಯ ಮಾಡುತ್ತಿದೆ' ಎಂದು ನೀವು ಯಾವುದೊಂದು ವಿದ್ಯುತ್ ಯಂತ್ರವು ಕಾರ್ಯ ಮಾಡುವದನ್ನು ನೋಡಿದಾಗ ಭಾಸವಾಗುವಂತೆಯೇ ಭಾಸವಾಗುತ್ತದೆ. ಆಮೇಲೆ, ನೀವು ನಿಮ್ಮ ದಿನ ಚರ್ಯೆಯಲ್ಲಿ ತೊಡಗುತ್ತೀರಿ. ಅನಂತರ, ಆರು ಘಂಟೆ ಕಾಲ ಕಳೆದ ಬಳಿಕ ಬಂದು, "ಓಹೋ! ಸರಿ, ಅದಿನ್ನೂ ಕಾರ್ಯ ನಡೆಸಿದೆ"; ಎಂದು ವಿದ್ಯುತ್ ಯಂತ್ರವನ್ನು ನೋಡುತ್ತೀರಲ್ಲವೇ? ಇದೇ ರೀತಿ, ನೀವು ನಿಮ್ಮ ಮಾನಸಿಕ ಕಾಲವನ್ನೂ ವೀಕ್ಷಿಸುತ್ತ ಅದು ಹೇಗೆ ಕಾರ್ಯಶೀಲವಾಗಿದೆ; ಎಂಬುದನ್ನು ನೋಡಬೇಕು. ನಿಮ್ಮ ಮನವು ಭೌತಿಕ ವಸ್ತುಗಳಲ್ಲಿ ಮಗ್ನವಾಗಿರುವಾಗಲೂ ಸಹ, ನೀವು ಈ ಸಂಗತಿಗಳನ್ನು ಅನುಭವಿಸಿದರೆ, ನನಗೆ ತುಂಬಾ ಹರ್ಷವಾಗುತ್ತದೆ. ನೀವು ಅನುಭವಿಸುವಿರೆಂದು ನಾನು ನಿಶ್ಚಯವಾಗಿಯೂ ಭಾವಿಸುವೆ; ಈ ಬಗ್ಗೆ ನನಗೆ ತುಂಬಾ ವಿಶ್ವಾಸವಿದೆ. ನಿಮಗೆ ನನ್ನ ಬೋಧೆಯಲ್ಲಿ ಮತ್ತು ನನ್ನ ಗುರುವಿನ ಬೋಧೆಯಲ್ಲಿ, ಶ್ರದ್ಧೆ ಇರುವುದಾದರೆ, ನೀವು ನಿಶ್ಚಯವಾಗಿ ಅನುಭವಿಸುತ್ತೀರಿ.

೫

ಸಿದ್ಧಿ ಮತ್ತು ಪವಾಡ

ನಾನಿನ್ನೂ ಚಿಕ್ಕ ಹುಡುಗನಾಗಿದ್ದಾಗ, ನಾನೊಮ್ಮೆ ಹಾದಿಗುಂಟ ಹೊರಟಿದ್ದೆ. ಆಗ ದುಷ್ಟ ಕರಾಳ ಶಕ್ತಿಯೊಂದು ನನ್ನತ್ತ ಬರುತ್ತಿರುವಂತೆ ನನಗೆ ಭಾಸವಾಯಿತು. ಕೂಡಲೇ ನಾನು ನನ್ನ ಮಂತ್ರವನ್ನು ಪಠಿಸಲು ಆರಂಭಿಸಿದೆ. ಆಗ ಇನ್ನೊಂದು ದೈವೀ ಶ್ವೇತ ಶಕ್ತಿಯು ಬಂದಿತು. ಮತ್ತು ಆ ಕರಾಳ ಶಕ್ತಿಯು ಮುಂದುವರಿಯುವುದನ್ನು ತಡೆಯಿತು. ನಾನು ಮಂತ್ರ ಪಠಣೆಯನ್ನು ಮುಂದುವರಿಸಿದೆ. ಆ ಮಂತ್ರವು ಎಷ್ಟೊಂದು ಶಕ್ತಿ–ಸಂಪನ್ನವಾಗಿದ್ದಿತೆಂದರೆ, ಆ ದೈವೀ ಶಕ್ತಿಯು ಕೂಡಲೇ 'ಯಾವುದೋ ಕರಾಳ ಶಕ್ತಿಯು ಅವನನ್ನು ಸಮೀಪಿಸುತ್ತಿದೆ. ಹೋಗಿ ಅದನ್ನು ತಡೆಯಬೇಕು' ಎಂದು ಅರಿಯಿತು.

ಈಗ ನಿಮಗೆ ನಿಮ್ಮ ಗುರುವಿನ ಆಶೀರ್ವಾದವಿದೆಯೆಂದೂ ಮತ್ತು ಮಂತ್ರ ಪುರಶ್ಚರಣೆ ಮಾಡುವಿರೆಂದೂ ತಿಳಿಯಿರಿ. ಆಗ ಯಾವನಾದರೂ ದುಷ್ಟ ವ್ಯಕ್ತಿಯೊಬ್ಬನು ನಿಮ್ಮನ್ನು ಘಾತಿಸಲು ಬಂದರೆ, ಕೂಡಲೇ ದೈವೀ ಶಕ್ತಿಯು ಬಂದು, ನಿಮ್ಮ ಮನವನ್ನು ಪ್ರವೇಶಿಸುತ್ತದೆ. ಹೀಗೆ ಕೂಡಲೇ ಅವನ ಮನವೂ ಬದಲಾಗುತ್ತದೆ. ಅವನಿಗೂ ಭಯವಾಗುತ್ತದೆ. "ಓಹೋ! ಅವನನ್ನು ಸ್ಪರ್ಶಿಸಲು ಇದು ತಕ್ಕ ಸಮಯವಲ್ಲ" ಎಂದು ಬಗೆದು ಆ ದುಷ್ಟನು ಹೋಗಿ ಬಿಡುತ್ತಾನೆ.

ಇವುಗಳೆಲ್ಲ ಮಾನಸಿಕ ಶಕ್ತಿಗಳಷ್ಟೇ.

ಹೀಗೆ ಅನೇಕಾನೇಕ ಸಂದರ್ಭಗಳೊದಗುತ್ತಿವೆ. ಎಂದಾದರೂ ನೀವು ಇಂಥವುಗಳನ್ನು ನೋಡಿದರೆ ಇಲ್ಲವೆ ಕೇಳಿದರೆ, ಗುರುವು ಕೇಂದ್ರದಲ್ಲಿ ಇರುವನೆಂದು ಭಾವಿಸಿರಿ. ನೀವು ಭೂಮಿಯ ಮೇಲೆ ಎಲ್ಲಿ ಬೇಕಾದರೂ ಹೋಗಿರಲಿ;

ಆದರೆ ಸೂರ್ಯನನ್ನು ನೋಡಬಯಸಿದರೆ, ನೀವು ಸೂರ್ಯನನ್ನು ಕಾಣಬಲ್ಲಿರಿ. ಅಹುದೋ ಅಲ್ಲವೋ? ಅದೇ ರೀತಿ, ಪ್ರಜ್ಞೆಯ ಕೇಂದ್ರದಲ್ಲಿ ನಾವು ಗುರುವಿನ ಸಾನ್ನಿಧ್ಯವನ್ನು ವಿಶ್ವವಿದ್ಯಾಲಯದಲ್ಲಿಯೇ ಇರುವಾಗ ಇರಲಿ; ಬೇರೆಲ್ಲಿಯೇ ಇರಲಿ, ಅನುಭವಿಸಬೇಕು. ನೀವು ನೋಡಿದಾಗಲೆಲ್ಲ ಅವನನ್ನು ಕಾಣಬೇಕು. 'ಗುರು–ಸಾನ್ನಿಧ್ಯದ ಅನಿಸಿಕೆ' ಎಂದು ನಾನಿದನ್ನು ಕರೆಯುವೆ. ಕೇವಲ ಮಾನಸಿಕ ಮಟ್ಟದಲ್ಲಷ್ಟೇ ಏಕೆ? ಐಂದ್ರಿಯಿಕ ಮಟ್ಟದಲ್ಲೂ ಕಾಣಬೇಕು. ಆ ಐಂದ್ರಿಕ ಮಟ್ಟವಾವುದು? ಅದು ಅಸಾಧಾರಣ ಮಟ್ಟ. ನಾನು ನನ್ನ ಕಣ್ಣು ತೆರೆದಿದ್ದೇನೆ. ನಾನೀಗ ನಿಮ್ಮನ್ನೂ, ನನ್ನ ಗುರುವನ್ನೂ, ಹೀಗೆ ಎಲ್ಲರನ್ನು ನೋಡುತ್ತಿದ್ದೇನೆ. ಇಂದ್ರಿಯಗಳಲ್ಲಿಯೇ ಎರಡು ಸ್ತರಗಳುಂಟು. ಅವು ವಿಷಯಭೂತ ವಸ್ತುಗಳನ್ನು ನೋಡಬಲ್ಲವು ಮತ್ತು ಅವು ತಮ್ಮ ಸ್ವಂತ ಅಸ್ತಿತ್ವವನ್ನು ಅಂದರೆ, ಮಾನಸಿಕವಾಗಿ ಅಸ್ತಿತ್ವದಲ್ಲಿರುವ ವಸ್ತುಗಳನ್ನೂ ಕಾಣಬಲ್ಲವು.

ನಾನೀಗ ನಿಮ್ಮನ್ನು ನೋಡುತ್ತಿದ್ದೇನೆ. ಆದರೆ ನಾನಿಚ್ಛಿಸಿದರೆ, ನಾನು ನಿಮ್ಮ ಗುರುವನ್ನೂ ನೋಡಬಲ್ಲೆ. ಅವನೇನು ಮಾಡುತ್ತಿದ್ದಾನೆ? ಅವನು ಹೇಗೆ ಇದ್ದಾನೆ? ಎಲ್ಲವನ್ನೂ ನೋಡಬಲ್ಲೆನು. ಅದೇ ರೀತಿ, ನೀವು ಯಾವಾಗಲೂ ಗುರುವಿನ ಸಾನ್ನಿಧ್ಯವನ್ನು ಭಾವಿಸುವಷ್ಟು ನಿಮ್ಮ ಶ್ರದ್ಧೆಯು ಪ್ರಬಲವಾಗಿರಬೇಕು. ನಿಮ್ಮ ಮಾನಸಿಕ ಕ್ರಿಯೆಯೂ ಶಕ್ತಿಯುತವಾಗಿರಬೇಕು. ಒಂದು ವೇಳೆ, ನೀವು ಗುರು–ಸಾನ್ನಿಧ್ಯವನ್ನು ಸಂವೇದಿಸಬಲ್ಲರಾದರೆ, ಆಗ ಸರ್ವರ ಹೊಣೆಯನ್ನು ಹೊರುವದು ಅವನ ಕರ್ತವ್ಯವಾಗುತ್ತದೆ. ಆಗ ನೀವು ಹೀಗೆ ಕೇಳಬಹುದು : "ನನ್ನ ಗುರುವು ಒಬ್ಬನೇ. ಅವನಿಗೆ ಶಿಷ್ಯರನೇಕ. ಒಂದು ವೇಳೆ, ನಾನು ಅವನನ್ನು ಕುರಿತು ಚಿಂತಿಸಿದರೆ, ಅವನನ್ನು ಕದಡಿದಂತಾಗಬಹುದು. ಅದು ಹಾಗೇನೂ ಇಲ್ಲ. ಗುರುವಿನ ಪ್ರಜ್ಞೆಯಲ್ಲಿಯ ಪ್ರತಿಯೊಂದು ಕಣವೂ ಗುರುವಿನ ಪ್ರಜ್ಞೆಯಷ್ಟೇ ಕ್ರಿಯಾಶೀಲವಾಗಿರುತ್ತದೆ. ನಾನು ಸಾಧನೆಯನ್ನು ಕುರಿತು ಹೇಳುವಾಗ, ಈ ಎಲ್ಲ ವಿಷಯಗಳನ್ನು ವಿವರಿಸುವೆನು.

ಗುರುವು ದೇಹಧಾರಿಯಾಗಿದ್ದಾನೆ. ಅವನಿಲ್ಲಿ ಪುಸ್ತಕವನ್ನು ಓದುತ್ತಿರುವನೆಂದೂ ಮತ್ತು ಅವನು ಪ್ರಜ್ಞೆಯೊಂದಿಗೆ ಶ್ರುತಿಗೂಡಿದ್ದಾನೆಂದೂ ತಿಳಿಯಿರಿ. ಅವನಿಲ್ಲಿ ಓದುತ್ತಿದ್ದಾನೆ. ಮತ್ತು 'ಜೌಟಿ'[1] ತನ್ನ ಮನೆಯಲ್ಲಿ ಇರುವನೆಂದೂ

1. ಜೌಟಿ (Jouti) ಓರ್ವ ಫ್ರೆಂಚ ಸಾಧಕ. ಸ್ವಾಮೀಜಿಯ ಶ್ರೋತೃಗಳಲ್ಲೊಬ್ಬ.

ಮತ್ತು ಅವನ ಗುರುವು ಪ್ಯಾರಿಸಿನಲ್ಲೋ, ಮಂದರ ಓಮನಲ್ಲೋ ಇರುವನೆಂದೂ ತಿಳಿಯಿರಿ. ಅಲ್ಲಿ ಅನೇಕ ಜನರಿದ್ದಾರೆ. ಮತ್ತು ನೀವು ಅವನ ಸಾನ್ನಿಧ್ಯವನ್ನು ಸಂವೇದಿಸುತ್ತಿದ್ದೀರಿ. ಆ ಅಣು–ಪ್ರಜ್ಞೆಯು–ನೀವು ಅಣುವೆಂದು ಕರೆಯುತ್ತೀರಷ್ಟೇ-ಗುರುವಾಗಿ ವರ್ತಿಸುತ್ತದೆ.'ಜೌಟಿಯನ್ನು ನೀವು ನೋಡಿಕೊಳ್ಳಿ; ಅವನು ಹೀಗೆ ಮಾಡಬೇಕು' ಎಂದೆಲ್ಲ ಸೂಚನೆಗಳನ್ನೀನೂ ಅವನು ಕೊಡಬೇಕಾಗಿಲ್ಲ. ಅದು ಹಾಗಲ್ಲ.ಅದರ ಸ್ವಭಾವವು ಗುರುವಿನ ಸ್ವಭಾವವಾಗಿದೆ. ಅದು ಕಾರ್ಯಸಾಧ್ಯವಾಗುತ್ತದೆ. ಗುರುವು ನಿಮ್ಮನ್ನ ಸ್ತರದಲ್ಲಿ ಚೇತನ ಮನಸ್ಕನಾಗಬೇಕೆಂದೇನೂ ಇಲ್ಲ. ಆ ಅಣುವೇ ಪ್ರಜ್ಞೆಯಾಗಿದೆ. ಅದು ತಾನೇ ಪೂರ್ಣವಿದೆ. ಅದು ಕಾರ್ಯವನ್ನು ಸಾಧಿಸುತ್ತದೆ. ನೀವು ಗುರುವಿಗೆ, "ಓ ನನ್ನ ಗುರುವರ್ಯ! ನೀನು ನನ್ನನ್ನು ರಕ್ಷಿಸಿದೆ." ಎಂದು ಕೇಳಿದರೆ, 'ನಾನದನ್ನು ಅರಿಯೆ', ಎಂದವನು ಹೇಳುತ್ತಾನೆ; ನಿಮ್ಮ ಸ್ತರದಲ್ಲಿ. ಒಂದು ವೇಳೆ, ಅವನು ಹಾಗೆ ಇಚ್ಛಿಸಿದರೆ, "ಓಹೋ! ನಾನು ನಿನ್ನನ್ನು ರಕ್ಷಿಸಿದೆನೇ?" ಎಂದು ವಿಚಾರಿಸಿ, ಕಣ್ಣುಮುಚ್ಚಿ ಅಣುವಿನೊಂದಿಗೆ ಶ್ರುತಿಗೊಳಿಸಿದರೆ, ಆದೆಲ್ಲವನ್ನೂ ಕಾಣಬಲ್ಲನು. ತಾನು ಆದನ್ನು ಮಾಡಿದುದನ್ನು ಅವನು ಕಾಣಬಲ್ಲನು. ಆ ಬಳಿಕ, ಅವನು 'ಅಹುದು; ಅದನ್ನು ಮಾಡಿದೆ' ಎನ್ನುತ್ತಾನೆ. ಅದೇನೂ ಅವನಿಗೆ ಮಹತ್ವದ್ದಲ್ಲ.

ಯಾವ ಗುರುವು ತನ್ನ ಪವಾಡಗಳು ಮಹತ್ತ್ವದವೆಂದು ಕಾಣುವನೋ, ಆಗ ಅವನು ಪವಾಡಗಳ ಪ್ರಭುವಾಗನು. ಏಕೆಂದರೆ, ಅವನ ಸ್ವಭಾವವೇ ಹಾಗಿರುತ್ತದೆ. ಹೀಗೆ, ಅದೇನೂ ಪವಾಡವಲ್ಲ. 'ನಾನು ಪವಾಡ ಮಾಡುತ್ತೇನೆ" ಎಂದು ನೀವು ಕಂಡುಕೊಂಡರೆ, ಆಗ ಅಹಂಕಾರವು ಕಾರ್ಯಾರಂಭ ಮಾಡುತ್ತದೆ. ಇನ್ನು ಪವಾಡಗಳೇ ನಿಲ್ಲುತ್ತವೆ. ಕೆಲವು ದಿನಗಳಾದ ಬಳಿಕ, ಅವುಗಳ ಸುಳಿವೇ ಉಳಿಯುವುದಿಲ್ಲ.

ಇಲ್ಲಿ ಗುರುವಿನ ಸಾನ್ನಿಧ್ಯವೇ ತುಂಬಾ ಮಹತ್ವದ್ದಾಗಿದೆ ಮತ್ತು ಈ ವಿಷಯದಲ್ಲಿ, ನಮ್ಮ ಶಕ್ತಿಗಳಿಂದ ನಾವು ಬಹು ವಿಧವಾಗಿ ಬಹಳ ವಸ್ತುಗಳನ್ನು ಮಾಡಬಹುದು. ಅಂತೂ ಕೊನೆಗೆ ಇವುಗಳ ಮಹತ್ವವಾದರೂ ಏನು? ಏಕೆಂದರೆ, ಅವು ಏನನ್ನೂ ಕೊಡವು. ಮನಃಶಾಂತಿಯನ್ನು ನೀಡವು.ಬೇರಾವುದೇ ಉನ್ನತ ವಸ್ತುವನ್ನು ನೀಡವು. ಅವು ನಿಮ್ಮಲ್ಲಿ ಶುದ್ಧ ಭಾವಗಳನ್ನು ಎಂದಿಗೂ ಮೂಡಿಸಲಾರವು. ಇಲ್ಲವೆ, ಉಚ್ಚತರ ಪ್ರೇಮವನ್ನು ಕುದುರಿಸವು, ನಿಮ್ಮ ಬುದ್ಧಿಯಲ್ಲಿ ನವೀನವಾದುದೇನನ್ನೂ ಸೃಷ್ಟಿಸವು; ಬುದ್ಧಿಯನ್ನೆಂದೂ ಬೋಧಿ

ಯನ್ನಾಗಿ ರೂಪಾಂತರಿಸವು.

ಶಕ್ತಿಗಳು ಕ್ರಿಯಾಶೀಲವಾಗಿವೆ. ಮತ್ತು ಅವುಗಳ ವಿಜ್ಞಾನವೊಂದಿದೆ; ಎಂಬುದನ್ನು ಮಾತ್ರ ನೀವು ಅರಿಯುತ್ತೀರಿ. ನೀವು ಅದನ್ನು ಅರಿಯುತ್ತೀರಿ. ಮತ್ತು ಅದು ಕಾರ್ಯರೂಪಕ್ಕಿಳಿಯುತ್ತಿದೆ. ಇದುಜನಸಾಮಾನ್ಯರಿಗೆ ವಿಶೇಷವೆನಿಸುವುದಷ್ಟೇ. ಏಕೆಂದರೆ, ಆ ವಿಜ್ಞಾನವನ್ನು ಅರಿಯುವಷ್ಟು ಅವರ ಬುದ್ಧಿಯು ಶ್ರೀಮಂತವಾಗಿಲ್ಲ. ನೀವು ವಿಜ್ಞಾನಿಗಳನ್ನು ಕುರಿತು, "ಓಹೋ! ಅವರು ದೇವರು!"ಎಂದು ಅಚ್ಚರಿಪಡುತ್ತೀರಾ? ನೀವೇನು? ಅವರಿಗೆ ಶಿರ ಬಾಗುವಿರಾ? ಅವರು ತಮ್ಮ ಕಾಯಕ ಮಾಡಿಯೇ ಮಾಡುತ್ತಾರೆ. ಪವಾಡಗಳೂ ಸಹ ನಡೆದೇ ಇವೆ. ಅಲ್ಲವೇನು ಮತ್ತೆ? ಅವರು ಯಾವ ನಿಯತಿಯನ್ವಯ ಈ ಪವಾಡಗಳನ್ನು ಎಸಗುವರೆಂಬುದು ನಿಮಗೆ ತಿಳಿದಿದೆಯಾದ್ದರಿಂದ, ಅವರು ನಿಮಗೆ ಅತಿ ಮಾನವರೆನಿಸರು. ಆ ಕುರಿತು ನಿಯಮಗಳಿವೆ. ಅದರಂತೆ ಅವರು ಮಾಡುತ್ತಾರೆ. ಅಜ್ಞ ಜನರು ಅದೊಂದು ಶಕ್ತಿಯೆಂದು ತಿಳಿಯುತ್ತಾರೆ. ಆದರೆ, ಅದು ನಿಮ್ಮ ಪ್ರಜ್ಞೆಯ ಶಕ್ತಿಯಷ್ಟೇ. ಹೀಗೆ, ಅದೇನೂ ಅಂಥ ಶಕ್ತಿಯೇ ಅಲ್ಲ. ವಿಜ್ಞಾನವು ಹುಟ್ಟಿಸಿದ ಶಕ್ತಿಗಳಂತೆಯೇ ಈ ಶಕ್ತಿಗಳೂ ಇವೆ. ಬಹಳವಾದರೆ, ಅದು ಸ್ವಲ್ಪ ಉಚ್ಚತರದ ವಿಜ್ಞಾನವಷ್ಟೇ. ಮತ್ತೇನೂ ಅಲ್ಲ.

ಈ ಶಕ್ತಿಗಳಿಂದ ಆ ಪವಾಡಕರ್ತನಿಗೇನೂ ಸಿಕ್ಕುವುದಿಲ್ಲ. ಒಂದು ವೇಳೆ, ನೀವು ಅವನಿಗೆ, "ನಿನ್ನ ಮನವನ್ನೇನಾದರೂ, ರೂಪಾಂತರಿಸಿದೆಯಾ? ಎಂದು ಕೇಳಿದರೆ, ಅವನು ಅದನ್ನು ತಿಳಿಯ ಹೋಗುವುದಿಲ್ಲ. ಅವನು ದೇವರ ಸಾನ್ನಿಧ್ಯ ಕುರಿತು ಅರಿಯನು. ಅವನು ಹೀಗೆಯೇ ಇಂಥ ಸಂಗತಿಗಳನ್ನು ಯಾವಾಗಲೂ ಮಾಡುತ್ತ ಹೋಗುವನು.

ನಾನು ಇನ್ನೊಂದು ದಿನ ಮಾನಸಿಕ ಶಕ್ತಿ ಮತ್ತು ಅವುಗಳ ಇತಿಮಿತಿಗಳನ್ನು ಕುರಿತು ಹೇಳುವೆ. ಅವು ಹೇಗೆ ಕಾರ್ಯ ಮಾಡುತ್ತವೆ? ಎಂಬುದನ್ನು ತಿಳಿಸುವೆನು. ಆದರೆ, ಅವುಗಳನ್ನು ಪಡೆಯಲು ನಾನು ಹೇಳುವುದಿಲ್ಲ. ಏಕೆಂದರೆ, ಅದು ಒಳ್ಳೆಯದಲ್ಲ, ಆದರೆ, ಅಲ್ಲಿ ಏನಿದೆಯೆಂಬುದನ್ನು ತಿಳಿಸಲೆಂದು ಹೇಳುವೆ. ನೀವಿಚ್ಛಿಸಿದರೆ, ಅವುಗಳನ್ನು ಶ್ರುತಿಗೊಳಿಸಬಹುದು. ಆದರೆ, ಸೃಜನಾತ್ಮಕ ಹಾದಿಯಲ್ಲಿ ಶ್ರುತಿಗೂಡಿಸಬೇಕಾಗಿದೆಯಲ್ಲದೆ ನಿಮ್ಮ ಮಟ್ಟದಲ್ಲಿ ಅಲ್ಲ. ನೀವು ಗುರುವಿನೊಂದಿಗೆ ಶ್ರುತಿಗೊಳ್ಳಬೇಕಾದರೆ, ದೇವರೊಂದಿಗೆ ಶ್ರುತಿಗೊಳ್ಳಬೇಕಾದರೆ, ನಿಮ್ಮ ಆತ್ಮವನ್ನು (psyche) ಬಳಸುತ್ತೀರಿ. ನಿಮ್ಮ ಪ್ರಜ್ಞೆಯೊಂದಿಗೆ ಶ್ರುತಿಗೊಳ್ಳಬೇಕಾದಗ ಸಹ, ಹಾಗೆಯೇ ಮಾಡುವಿರಿ. ಆದರೆ, ಅವುಗಳನ್ನು

ಪವಾಡದಂತೆ ಬಳಸಬೇಡಿರಿ. ಕೆಲವು ಪವಾಡಗಳು, ನಿಮ್ಮ ಗುರುವಿನ ಇಲ್ಲವೆ ಪರಮಾತ್ಮನ ಕೃಪೆಯಿಂದ ಸಂಭವಿಸಿದರೆ, ಅದು ಅವನ ಶಕ್ತಿ. ನೀವೇನು ಮಾಡಬಲ್ಲಿರಿ? ಹೀಗೆ ಅಲ್ಲಿ ಅಹಂಕಾರದ ಪ್ರಶ್ನೆಯೇ ಇಲ್ಲ.

ಈ ಬಗ್ಗೆ, ಒಂದು ಕಥೆಯಿದೆ. ಒಮ್ಮೆ, ಕೆಲವು ಹಠಯೋಗಿಗಳಿದ್ದರು. ಅವರು ಎಷ್ಟೊಂದು ಶಕ್ತಿಯುತರಿದ್ದರೆಂದರೆ, ಅವರು ಖೇಚರಿಯಲ್ಲಿ ಹೋಗಬಲ್ಲವರಾಗಿದ್ದರು. ಆಗ ಅಲ್ಲಿ ರಾಮ ಠಾಕೂರ ಎಂಬ ಓರ್ವ ಮಹಾನ್, ಆದರೆ ಅಷ್ಟೇ ಸರಳ ಸಂತನಿದ್ದನು. ಅವನಿಗೇನೂ ಗೊತ್ತಿರಲಿಲ್ಲ. ಒಮ್ಮೆ, ಇವನೂ, ಮತ್ತು ಅವರೂ ಬದರೀನಾಥಕ್ಕೆ ಹೋಗುವುದಕ್ಕಾಗಿ ಋಷಿಕೇಶಕ್ಕೆ ಬಂದರು. ಮತ್ತು ರಾತ್ರಿ ಹತ್ತು ಘಂಟೆಗೆ ಹಠಯೋಗಿಗಳು, "ಓ! ಬಾಬಾ ನೀನು ಎಲ್ಲಿಗೆ ಹೋಗಬಯಸುವಿ?" ಎಂದು ಕೇಳಿದರು. "ನಾನು ಬದರೀನಾಥಕ್ಕೆ ಹೋಗಬಯಸುವೆ" ಎಂದನು, ರಾಮ ಠಾಕೂರ. "ಹಾಗಾದರೆ, ನೀನೇನು ಮಾಡುವೆ? ನಾವಂತೂ ಯೋಗಿಗಳು. ನಾವು ಖೇಚರಿ ಮೂಲಕ ರಾತ್ರಿ ಹಾರಿ ಹೋಗುತ್ತೇವೆ. ನೀನು ಬೆಳಿಗ್ಗೆ ಬಸ್ಸಿನಲ್ಲಿ ಪ್ರಯಾಣಿಸಬಹುದು" ಎಂದರು ಯೋಗಿಗಳು. ಆಗ ರಾಮ ಠಾಕೂರನು, "ಬಾಬಾ! ಅವನ ಇಚ್ಛೆಯು ಹೇಗೋ ಹಾಗೆ ಅವನೇ ನಡೆಸುವನು. ನಾನಾದರೋ ಸಾದಾ ಮನುಷ್ಯ. ನಾನು ಬಸ್ಸಿನಿಂದ ಬರುವೆ. ನೀವಂತೂ ಸಿದ್ಧರು. ನೀವು ಉನ್ನತ ಸ್ತರದಲ್ಲಿ ಹೋಗುವವರು. ಆದರೆ ನನಗದು ಸಾಧ್ಯವಿಲ್ಲ" ಎಂದು ನಮ್ರವಾಗಿ ಉತ್ತರಿಸಿದನು. 'ಹಾಗಾದರೆ; ಇದೋ ನೋಡು' ಎಂದು ಹೇಳುತ್ತ ಕೂಡಲೇ ಅವರು ಹೊರಟರು. ಆಗ ಅವನು ತನ್ನ ಗುರುವನ್ನು ಸ್ಮರಿಸುತ್ತ, ಅಳತೊಡಗಿದನು. 'ಅಯ್ಯೋ! ಈ ಜನರು ಹೊರಟು ಹೋದರು. ನಾನು ಬೆಳಿಗ್ಗೆ ಬಸ್ಸಿನಲ್ಲಿ ಹೋಗಬೇಕು. ಅದೊಂದು ಸಮಸ್ಯೆಯೇ. ಏನೇ ಇರಲಿ. ಅವರು ಹೆಚ್ಚು ಶಕ್ತಿವಂತರು. ಅದು ನಿನ್ನಿಚ್ಛೆಯೇ; ಎಂದು ನಾನು ತಿಳಿಯುವೆ." ಎಂದು ಮೊರೆಯಿಟ್ಟನು. ಮತ್ತು ಮಲಗಿಬಿಟ್ಟನು. ಅವನಿಗೆ ಎಚ್ಚರಾದಾಗ ನೋಡುತ್ತಾನೆ. ತಾನು ಬದರಿನಾಥ ದೇವಾಲಯದಲ್ಲಿ ಇದ್ದಾನೆ! ಅವನು ಋಷಿಕೇಶದಲ್ಲಿ ಮಲಗಿದನು, ಮತ್ತು ಎಚ್ಚರವಾದಾಗ, ಬದರಿನಾಥದಲ್ಲಿ ತಾನಿರುವುದನ್ನು ಕಂಡುಕೊಂಡನು. "ನಾನು ಎಲ್ಲಿರುವೆ? ಬದರೀನಾಥದಲ್ಲಿ ತಾನೇ" ಎಂದುಕೊಂಡನಾತ. ಅವನಿಗೆ ಅಚ್ಚರಿಯಾಯಿತು. ಇತ್ತ ಹಠಯೋಗಿಗಳು ಅದೇ ಆಗ ಬರಹತ್ತಿದ್ದರು. ಮತ್ತು ಅವನನ್ನು ಕಂಡರು. "ಓಹೋ! ಮುದಿಯ! ನೀನು ಅಲ್ಲಿ ಇದ್ದೆ. ಇಲ್ಲಿಗೆ ಹೇಗೆ ಬಂದೆ? ನೀನು ಅತಿವೇಗವಾಗಿ ಬಂದಿರುವೆ. ಆದರೆ, ನೀನು ಯಾವಾಗ

ಬಂದೆ? ಮತ್ತು ಹೇಗೆ ಬಂದೆ?" ಎಂದು ಯೋಗಿಗಳು ಪ್ರಶ್ನಿಸಿದರು. ಆಗ ರಾಮಾಕೂರನು, "ಓಹೋ! ಇದು ನನ್ನ ಗುರುವಿನ ಕೃಪೆ. ನಾನು ಬಂದಿರುವೆ, ಅಷ್ಟೇ. ಹೇಗೆ ಬಂದೆ? ಎಂಬುದನ್ನು ನಾನರಿಯೆ" ಎಂದನು. ನನ್ನ ಗುರುವು ಯಾವಾಗಲೂ ಈ ಕಥೆಯನ್ನು ಹೇಳುತ್ತಿದ್ದರು.

ಹೀಗೆ, ಕೆಲವರಿಗೆ ಪವಾಡಗಳು ತಾನೇ ಘಟಿಸುತ್ತವೆ. ಇನ್ನು ಕೆಲವರು ಪವಾಡಗಳನ್ನು ಮಾಡುತ್ತಾರೆ. ಪವಾಡಗಳನ್ನು ಮಾಡುವುದೇನೂ ದೊಡ್ಡ ಕಾರ್ಯವಲ್ಲ. ಅವು ತಾವೇ ಘಟಿಸಬೇಕು.

ಒಂದು ದಿನ, ರಾತ್ರಿ ನನ್ನ ಪರಮ ಗುರುವು (ಗುರುವಿನ ಗುರು) ದಿವ್ಯ ಮಾತೆಯನ್ನು ಕುರಿತು ಪದ್ಯ ಬರೆಯುತ್ತಿದ್ದರು. ಆ ಹಳೆಯ ಕಾಲದಲ್ಲಿ ಕೇವಲ ಎಣ್ಣೆ ಬತ್ತಿಯ ದೀಪಗಳಷ್ಟೇ ಇದ್ದವು. ಅವರು ಬರೆಯುತ್ತಿದ್ದಂತೆ ದೀಪವು ಆರಿತು. ಆಗ ನನ್ನ ಪರಮ ಗುರು ಬರೆಯುವುದನ್ನು ನಿಲ್ಲಿಸಿದರು. ಆದರೆ, ಹದಿನೈದು ನಿಮಿಷಗಳ ನಂತರ, ದೀಪದ ಪ್ರಕಾಶವು ತಾನೇ ಶುರುವಾಯಿತು. ಅವರಿಗೆ ತುಂಬಾ ಹರ್ಷವಾಯಿತು. ಮರುದಿನ ಬೆಳಿಗ್ಗೆ ನನ್ನ ಗುರುಗಳು ತಮ್ಮ ಗುರುವಿನ ದರ್ಶನಕ್ಕೆ ಹೋದಾಗ, "ಓಹೋ! ಅದ್ಭುತ ಘಟನೆ ಸಂಭವಿಸಿತಪ್ಪಾ!" ಎಂದರು. ಆಗ ನನ್ನ ಗುರುಗಳು "ಏನು ಸ್ವಾಮೀ! ಏನದು?" ಎಂದರು. ಅದಕ್ಕೆ ನನ್ನ ಪರಮ ಗುರುಗಳು, "ನಿನ್ನೆ ರಾತ್ರಿ ನಾನು ದಿವ್ಯ ಮಾತೆಯನ್ನು ಕುರಿತು ಕೆಲವು ಕವಿತೆಗಳನ್ನು ಬರೆಯುತ್ತಿದ್ದೆ. ಆಗ ದೀಪ ಆರಿ ಹೋಯಿತು. ಆದರೂ ಸಹ, ನಾನು ಪ್ರಕಾಶವನ್ನು ಪಡೆದೆ." ಎಂದು ಉತ್ತರಿಸಿದರು. ಅದನ್ನು ಕೇಳಿ, ನನ್ನ ಗುರುಗಳು ನಕ್ಕು "ಅಬ್ಬಾ! ನೀವು ಪವಾಡ ಪುರುಷರು! ನಿಮ್ಮಿಚ್ಛೆ ಬಂದದ್ದನ್ನು ನೀವು ಮಾಡುವಿರಿ. ಈ ಬತ್ತಿಯನ್ನು ಉರಿಸುವುದೇನು ಮಹಾ?" ಎಂದರು. ಆಗ ಅವರು ವಿವರಿಸುತ್ತ, "ಓ! ಹಾಗಲ್ಲಪ್ಪ, ಅದು. ನನ್ನ ಸ್ವ-ಇಚ್ಛೆಯಂತೆ ನಾನೇನನ್ನೋ ಸೃಷ್ಟಿಸುತ್ತೇನೆ. ಅದನ್ನು ನಾನೇ ಮಾಡುವೆ. ಆಂದ ಮೇಲೆ, ಅದೇನೂ ಪವಾಡವಲ್ಲ. ನನಗದು ಗೊತ್ತಿದೆ; ನಾನು ಮಾಡುತ್ತೇನೆ. ಆದರೆ, ನಾನೇನೂ ಮಾಡದೆ ನಡೆದ, ಇದು ಮಾತ್ರ ಮಹತ್ತಮ ಪವಾಡ. ನಾನೆಂದೂ ಇಚ್ಛಿಸಿರಲಿಲ್ಲ. ಯಾವುದೋ ಉನ್ನತ ಶಕ್ತಿಯು ನಮ್ಮ ಬಗೆಗೆ ಕಾಳಜಿವಹಿಸುತ್ತಿದೆ. ಇದುವೇ ಮಹತ್ತಮವಾದದು" ಎಂದರು.

ಆಗ, ನನ್ನ ಗುರುವು ಅಲ್ಲಿಯೇ ಕುಳಿತರು. ಅವರಿಗೆ ಹೊಸ ವಸ್ತು ಲಾಭವಾಯಿತು. ನನ್ನ ಗುರುವು ತುಂಬಾ ಚುರುಕು. ನಿಮಗೆ ಗೊತ್ತೇ? ಬಳಿಕ

ಅವರು, "ಇಂಥ ಅಮಿತ ಶಕ್ತಿ ಸಂಪನ್ನ ವ್ಯಕ್ತಿ..." ಎಂದು ಅನ್ನುತ್ತಿದ್ದಂತೆಯೇ ಆ ಪರಮ ಗುರುವು, "ಓಹೋ! ಇದು ಶಕ್ತಿಯಲ್ಲವಪ್ಪ. ಸಂಗತಿಗಳು ತಾವೇ ಘಟಿಸಬೇಕು. ನಾವು ಅವುಗಳನ್ನು ಇಚ್ಛಿಸದೆಯೇ ಘಟಿಸಬೇಕು." ಎಂದು ಮತ್ತೆ ದೃಢೀಕರಿಸಿದರು. ಆ ದಿನದಿಂದಲೇ ನನ್ನ ಗುರುಗಳು ಪವಾಡಗಳ ಬಗೆಗೆ ಸಂಪೂರ್ಣ ನಿರಾಸಕ್ತರಾದರು. "ತಾನಾಗಿಯೇ ಏನು ಘಟಿಸುವುದೋ ಅದುವೇ ಉನ್ನತವಾದುದು. ಆದ್ದರಿಂದ, ನಾವು ಗುರುಗಳಲ್ಲಿ ಶ್ರದ್ಧೆ ಇರಿಸಬೇಕಷ್ಟೇ." ಎಂದು ಹೇಳುತ್ತಿದ್ದರು. ಅದೊಂದು ಅದ್ಭುತ ವಸ್ತು! ನೀವು ಸ್ವೀಕಾರಕ್ಕೆ ಪಾತ್ರರಾದರೆ, ಅದೊಂದು ಅತಿ ಮೂಲ್ಯವಾದ ವಸ್ತುವಾಗಿದೆ! ಎಂಬುದನ್ನು ನಾನು ನಿಮಗೆ ಹೇಳಿರುವೆ. ನಿಮ್ಮ ಜೀವನದಲ್ಲಿ ನೀವೀ ಶ್ರದ್ಧೆಯನ್ನು ಪಡೆದರೆ, ಅದು ನಿಮ್ಮ ಇಡೀ ಜೀವನವನ್ನು ಅಂತರ್ಮುಖಿಗೊಳಿಸುತ್ತದೆ.

ನೀವು ನಿಮ್ಮ ತಿಳಿವಳಿಕೆಯನ್ನು ಸಂವೇದಿಸಬಲ್ಲರಾದರೆ, ಅದರ ಆಯಾಮವೇ ಪೂರ್ಣ ಬೇರೆಯಾಗುತ್ತದೆ. ಈ ತಥಾಕಥಿತ ಪವಾಡಗಳ ಕಾತರವೇ ನಿಮ್ಮೊಳಗೆ ಸುಳಿಯದು, ಅದರ ಬಗೆಗಿರುವ ಕುತೂಹಲವೂ ಅಡಗುತ್ತದೆ. ಒಂದು ವೇಳೆ, ನೀವು ಪವಾಡಗಳನ್ನು ಬೆಂಬತ್ತಿದರೆ, ನಿಮಗೆ ನಿಜವಾದ ಆಂತರಿಕ ಜೀವನವು ಲಭಿಸದು, ನಿಮಗೆಂದೂ ಮೂಲ, ಸ್ವಾಭಾವಿಕ ಜೀವನವು ಆಂತರ್ಯದಲ್ಲಿ ದೊರೆಯದು: ಜೀವನವಿಡೀ ನೀವು ಅನೇಕ ಗುರುಗಳನ್ನು ಹುಡುಕುತ್ತ ಅಲೆಯುವಿರಿ. "ಅವನು ಇದನ್ನು ಸೃಷ್ಟಿಸುತ್ತಾನೆ; ಅದನ್ನು ಸೃಷ್ಟಿಸುತ್ತಾನೆ" ಎಂದು ಮೋಹಿತರಾಗುವಿರಿ. ನೀವು ಯಾವುದೋ ಸಾಯಿ ಬಾಬಾನಲ್ಲಿಗೋ, ಮಹೇಶ ಯೋಗಿಯಲ್ಲಿಗೋ ಹೋಗುವಿರಿ. ನೀವು ಅನೇಕ ಜನರಲ್ಲಿಗೆ ಹೋಗುವಿರಷ್ಟೇ. ನಿಮ್ಮ ಜೀವನದಲ್ಲಿ ನೀವೇನೂ ಸಾಧಿಸಲಾರಿರಿ.

ಹೀಗೆ, ನಾನು ನಿಮಗೆ ಹೇಳಬಯಸುವುದೇನೆಂದರೆ, ನೀವು ಪವಾಡಗಳನ್ನು ನೋಡಿದರೂ ಸಹ, ನಿಮ್ಮಲ್ಲಿ ಯಾವುದೇ ಲವಲವಿಕೆ ಕುದುರದಿರಲಿ. ಏಕೆಂದರೆ, ಅವುಗಳೆಲ್ಲ ನಿಮ್ಮ ಸ್ತರದ ಪವಾಡಗಳಷ್ಟೇ. ಹಾಗೆ ನೋಡಿದರೆ, ಅವು ಪವಾಡಗಳೇ ಅಲ್ಲ.

ಅತಿ ಹೆಚ್ಚಿನ ಪವಾಡವೆಂದರೆ, ಜೀವನದ ರೂಪಾಂತ್ಕರಣ. ನೀವು ನಿಮ್ಮನ್ನು ಅರಿಯುವುದೇ ಉನ್ನತತಮ ಪವಾಡ. ಇದಕ್ಕಾಗಿ ನಾವು ನಮ್ಮ ಬೋಧಿಯನ್ನೂ, ನಮ್ಮ ಬುದ್ಧಿಯನ್ನೂ ಬಳಸಲೇಬೇಕು. ನಾವು ಎಲ್ಲವುಗಳನ್ನೂ ಬಳಸಬೇಕು. ಅನೇಕ ಜನರು, "ಓಹೋ! ನಿಮ್ಮ ಗುರುವು ಪವಾಡ

ಪುರುಷನಲ್ಲ. ನೀವು ಆ ಗುರುವನ್ನು— ವಿಭೂತಿ ಸೃಷ್ಟಿಸುವ, ಪುಸ್ತಕ, ರುದ್ರಾಕ್ಷಿ, ಕೈಗಡಿಯಾರಗಳನ್ನು ಸೃಷ್ಟಿಸುವ ಗುರುವನ್ನು— ಕಂಡಿರುವಿರಾ? ಅವರೊಬ್ಬ ಮಹಾ ಗುರು." ಎನ್ನುತ್ತಾರೆ. ಆದರೆ, ಅದೆಲ್ಲ ಹಾಗಲ್ಲ.

ಒಮ್ಮೆ ನಾನೊಬ್ಬ ಪವಾಡ–ಪುರುಷನನ್ನು ಕಂಡೆನು. ಮತ್ತು ಕೂಡಲೇ ನನ್ನ ಗುರುವಿನ ಬಳಿಗೆ ಬಂದೆನು. ಆದರೆ, ನನ್ನ ಸಂಸ್ಕಾರಗಳೇ ಬೇರೆಯಾಗಿದ್ದವು. ಆ ಪವಾಡಗಳು ನನ್ನ ಮೇಲಾವ ಪರಿಣಾಮವನ್ನೂ ಮಾಡದಾದವು. ಮತ್ತು ಅವುಗಳಿಂದೇನೂ ನನ್ನ ಕುತೂಹಲವು ಕೆರಳಿರಲಿಲ್ಲ. ಆದರೆ, ನಮ್ಮ ಜೊತೆಗಿದ್ದ ಇನ್ನೊಬ್ಬರ್ವನು ಬಹು ಅಚ್ಚರಿಯಿಂದ ನನ್ನ ಗುರುವಿಗೆ, "ಆಬ್ಬಾ! ನಾವು ಬಹಳ ಅದ್ಭುತ ಪವಾಡಗಳನ್ನು ಮಾಡುವ ಒಬ್ಬ ಮನುಷ್ಯನನ್ನು ಕಂಡೆವು!" ಎಂದನು. ಅದನ್ನು ಕೇಳಿ ನನ್ನ ಗುರುಗಳು ನಕ್ಕು, "ನಿಮ್ಮ ಮನಸ್ಸು ಇಷ್ಟೊಂದು ದುರ್ಬಲವಾದರೆ, ನಿಮ್ಮ ಇಡೀ ಆಧ್ಯಾತ್ಮಿಕ ಜೀವನವೇ ಹಾಳಾಗುತ್ತದೆ. ಏಕೆಂದರೆ, ನೀವು ಇಂಥ ಸಂಗತಿಗಳನ್ನೇ ಕಾಣಲು ಬೆನ್ನು ಹತ್ತುತ್ತೀರಿ. ಮತ್ತು ನಿಮಗೆ ತಥ್ಯಾವಾವುದೂ ದೊರೆಯದು" ಎಂದು ನುಡಿದರು.

೬

ಸಾಧನೆ

ಅಂತೂ ನೀವು ಪ್ರಕೃತಿಯೆಂದಾದರೂ ಕರೆಯಿರಿ.ಇಲ್ಲವೆ ಬೇರಾವ ಹೆಸರಿನಿಂದಾದರೂ ಕರೆಯಿರಿ. ಚಿತ್ ಶಕ್ತಿಯಂತೂ ಇದೆ. ಮತ್ತು ಅದನ್ನು ನೀವು ಸೀಮಿತಗೊಳಿಸಿದ್ದೀರಿ. ಇದುವೇ ನಮ್ಮ ಸ್ವಭಾವ (nature). ಆದರೆ, ನಮ್ಮೆದುರಿನ ಪ್ರಶ್ನೆಯೆಂದರೆ, ಅನುಭವಗಳ ಮೂಲಕ ನಾವು ಮಾಡಬಯಸುವ ಪ್ರಯತ್ನಗಳು, ನಮ್ಮ ಪ್ರಜ್ಞೆಯನ್ನು ಅರಿತುಕೊಳ್ಳುವುದಷ್ಟೇ ಆಗಿದೆ. ಮತ್ತು ಆ ಪ್ರಜ್ಞೆಯೂ ಸ್ಥಿತಿಶೀಲವಾಗಿಲ್ಲ. ಅದೇನೂ ಶಿಲೆಯಂತೆ ನಿರ್ಜೀವಿಯಲ್ಲ. ಆದರೆ, ಆ ಪ್ರಜ್ಞೆಯು ಆನಂದಮಯಿಯಾಗಿದೆ; ಕೃಪಾಮಯಿಯಾಗಿದೆ. ಮತ್ತು ಅನಂತ ಚೇತನದ ಗತಿಯಾಗಿದೆ. ಮತ್ತು ಅಲ್ಲಿ ಇಚ್ಛಾಶಕ್ತಿಯಿದೆ; ಜ್ಞಾನಶಕ್ತಿಯಿದೆ. ಮತ್ತು ಕ್ರಿಯಾಶಕ್ತಿಯಿದೆ, ಈ ಶಕ್ತಿಗಳು ಅಲ್ಲಿ ಉಂಟು. ಅವುಗಳ ವಿಸ್ತೃತಿಯ ಸೀಮೆ ಎಷ್ಟು? ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ನಾವು ಅವುಗಳನ್ನು ವಿಸ್ತರಿಸಬಲ್ಲೆವು. ಅವು ಎಲ್ಲಿಯ ವರೆಗೆ ಸೀಮಾ ಹೀನವಾಗಿವೆ? ಎಂಬುದನ್ನು ಸರಿಯಾಗಿ ನಾವು ತಿಳಿಯಬೇಕು. ಅದುವೇ ಸಾಕ್ಷಾತ್ಕಾರ.

ನಾವು ಯಾಂತ್ರಿಕ ಕ್ರಿಯೆಗಳನ್ನೇಕೆ ಮಾಡಬೇಕು? ಏಕೆಂದರೆ, ನಾವು ಯಾಂತ್ರಿಕ ಕ್ರಿಯೆಗಳಿಂದ ಮುಕ್ತರಾಗಲಿಕ್ಕೋಸುಗ. ಸಾಧನೆಯಲ್ಲಿಯ ಯಾಂತ್ರಿಕ ಕ್ರಿಯೆಗಳಾದ ಶ್ವಾಸ–ಉಚ್ಛ್ವಾಸ..... ಮುಂತಾದವುಗಳನ್ನೇಕೆ ನಾವು ಮಾಡಬೇಕು? ಏಕೆಂದರೆ, ನಾವು ಕೂಡಲೇ ಸಾಕ್ಷಿತ್ವವನ್ನು ಪಡೆಯಲಾರೆವು ಮನೋಗತಿಯ ಮೂಲ ತತ್ತ್ವವು ಶ್ವಾಸ–ಉಚ್ಛ್ವಾಸಗಳೊಂದಿಗೆ ಸಂಬಂಧಿಸಿದೆ. ಹೀಗೆ, ಅದು ನಮ್ಮನ್ನು ಸೀಮಿತಗೊಳಿಸುವ

ಅಭ್ಯಾಸವಲ್ಲ. ನಾವು ಅಭ್ಯಾಸವೆನ್ನುವುದು, ನಿಮ್ಮ ಮನವನ್ನೇ ಸೀಮಿತ ಗೊಳಿಸುತ್ತದೆ. ಈ ಅಭ್ಯಾಸವು ಒಂದು ದೃಷ್ಟಿಯಲ್ಲಿ ಅಭ್ಯಾಸವೇ ಅಲ್ಲವೆಂದು ನಾನು ಹೇಳಬಯಸುವೆ. ಅದು ಸೀಮೆಯಿಂದ ಮುಕ್ತಗೊಳಿಸುವ ಅಭ್ಯಾಸ ವಾಗಿದೆಯೆಂದು ನಾನು ಹೇಳುವೆ. ನೀವು ನಿಮ್ಮ ಪ್ರಯತ್ನವನ್ನು ಮಾಡಲೇ ಬೇಕು. ಅದಕ್ಕೋಸುಗ ನಾನು ನಿಮಗೆ ಸಹಾಯ ಮಾಡಬಲ್ಲೆ. ಈ ಸಹಾಯ ವನ್ನು ಬೋಧೆ ಎನ್ನುತ್ತಾರೆ. ಇನ್ನು ಈ ಕ್ರಮಗಳನ್ನು ಅನುಸರಿಸಿದಾಗಲೆಲ್ಲ ಅದೊಂದು ಯಾಂತ್ರಿಕ ಕ್ರಿಯೆಯಲ್ಲ. ಅಥವಾ ಅದೊಂದು ಯಾವುದೇ ಸಾಧಾರಣ ವಸ್ತುವಲ್ಲ. ಆದರೆ, ಅದು ಅರಿಯುವ ಕ್ರಿಯೆಯಾಗಿದೆ. ಇಲ್ಲವೆ ನಿಮ್ಮ ಮನವನ್ನು ಇನ್ನಷ್ಟು ಸ್ವಚ್ಛಗೊಳಿಸುವುದಾಗಿದೆ. ನಿಮ್ಮನ್ನು ಅಧ್ಯಯನ ಮಾಡಲು ಹಚ್ಚುವುದಾಗಿದೆ. ಬರೀ ಅಧ್ಯಯನ ಮಾಡುವುದಲ್ಲ; ಆದರೆ ವೀಕ್ಷಿಸುವುದು ಇಲ್ಲವೆ, ಆಂತರ್ಯದಲ್ಲಿ ಯಾವ ಯಾಂತ್ರಿಕತೆಯು ನಡೆದಿದೆ ಯೆಂಬುದನ್ನು ನೋಡುವುದು. ಯಾವಾಗ ನಿಮಗೆ ಯಾವ ಯಾಂತ್ರಿಕತೆ ನಡೆದಿದೆಯೆಂಬುದು ಗೊತ್ತಾಗುವುದೋ, ಆಗ ನೀವು ಅದರಿಂದ ಮುಕ್ತರಾಗು ವಿರಿ. ನೀವು ಆ ಯಾಂತ್ರಿಕತೆಯನ್ನು ಅರಿಯದಿದ್ದರೆ, ಅದರಿಂದ ಮುಕ್ತರಾಗ ಲಾರಿರಿ. ಆದ್ದರಿಂದ, ಸಾಧನೆಯಲ್ಲಿ ಅತ್ಯಂತ ಮಹತ್ವದ ಸಂಗತಿಯೆಂದರೆ, ಅಂಧ ಶ್ರದ್ಧೆಯಿಂದ ಸಾಧನೆಯನ್ನು ಅನುಸರಿಸುವುದಲ್ಲ; ಕ್ರಮೇಣ ಸೀಮಿತ ಗೊಳಿಸುವುದಿಲ್ಲ. ಮತ್ತು ಯಾಂತ್ರಿಕ ಚಟಕ್ಕೆ ಅಂಟಿಕೊಳ್ಳುವುದಿಲ್ಲ. ನೀವು ಯಾಂತ್ರಿಕ ಚಟದಂತೆ ಏನನ್ನಾದರೂ ಮಾಡಿದರೆ, ಅದು ನಿಮ್ಮ ಪ್ರಜ್ಞೆಯ ಸಂಪರ್ಕವನ್ನು ಕಳೆದುಕೊಳ್ಳುವುದು. ಏಕೆಂದರೆ, ಯಾಂತ್ರಿಕ ಚಟವೆಂದರೆ, ಅಜಾಗರೂಕತೆ. ಅಲ್ಲಿ ಅರಿವು ಇಲ್ಲ. ಅರಿವು ಇಲ್ಲದಾಗ ಅದು ಯಾಂತ್ರಿಕ ಚಟವಾಗುತ್ತದೆ. ನೀವು ರುದ್ರಾಕ್ಷಮಾಲೆಯ ಮಣಿಗಳನ್ನೆಣಿಸುವ ಮತ್ತು ಮಂತ್ರ ಪುರಶ್ಚರಣೆ ಮಾಡುವ ಅನೇಕ ಜನರನ್ನು ನೋಡಿರುವಿರಷ್ಟೇ. ಆಗ, ಮನಸ್ಸು ಅದರೊಂದಿಗೆ ಎಳ್ಳಷ್ಟೂ ಶ್ರುತಿಗೂಡಿರುವುದಿಲ್ಲ. ಅದು ಆ ಶಬ್ದ ಗಳೊಂದಿಗೆ ಸಹ ಶ್ರುತಿಗೂಡಿರುವುದಿಲ್ಲ. ಹೀಗೆ ಸಾಮಾನ್ಯವಾಗಿ ಪ್ರತಿಕ್ರಿಯೆ ಸಾಗಿರುತ್ತದೆ.

ನಾವೇಕೆ ಇಂಥ ಅಭ್ಯಾಸಗಳನ್ನು ತೆಗಳುತ್ತೇವೆ? ಏಕೆಂದರೆ, ಒಂದು ವಿಶೇಷ ಕಾಲಾವಧಿಯ ನಂತರ, ಅವು ಕೇವಲ ಯಾಂತ್ರಿಕ ಕ್ರಿಯೆಗಳಾಗಿ ಬಿಡುತ್ತವೆ.

ಇನ್ನು, ಈ ಕ್ರಿಯೆಗಳೂ ಸಹ,ತಮ್ಮ ಪಾತ್ರವನ್ನಾಡುತ್ತವೆ.ಆದರೆ, ಅವು

ಪ್ರಜ್ಞೆಯೊಂದಿಗೆ ಇಲ್ಲವೆ ಅರಿವಿನೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿರುವುದಿಲ್ಲ. ನಾವು ಪ್ರಾರಂಭದಲ್ಲಿ ಇಂಥ ಅಭ್ಯಾಸಗಳನ್ನು ಮಾಡ ಬೇಕಾಗುತ್ತದೆ. ಏಕೆ? ನಮ್ಮ ಮನವನ್ನು ಸೀಮಾರಹಿತವಾಗಿಸಲು. ಆದರೆ, ಇದಕ್ಕೆ ಪ್ರತಿಯಾಗಿ, ನಮ್ಮ ಬುದ್ಧಿಯು ಎಷ್ಟೊಂದು ಧೂರ್ತವಾಗಿದೆಯೆಂದರೆ, ಅದು ಎಲ್ಲವನ್ನೂ ಸೀಮಿತಗೊಳಿಸಿಬಿಡುತ್ತದೆ. ಒಂದು ವೇಳೆ, ನಾನು "ದೇವರು ಸರ್ವಾನುಸ್ಯೂತನಾಗಿದ್ದಾನೆ. ದೇವರು ಸತ್–ಚಿತ್–ಆನಂದವಾಗಿ ದ್ದಾನೆ." ಎಂದು ಹೇಳಿದರೆ, ನಿಮ್ಮ ಮನವು 'ಸತ್–ಚಿತ್–ಆನಂದ'ದಿಂದ ಸೀಮಿತಗೊಳ್ಳುತ್ತದೆ. ಅದಕ್ಕೆ ಆ ಪದಗಳ ಅರ್ಥ ತಿಳಿಯದಿರಬಹುದು. ಅದು ಕೇವಲ 'ಸತ್–ಚಿತ್–ಆನಂದ, ದೇವರು ಸಚ್ಚಿದಾನಂದ' ಎಂಬ ಮಾಹಿತಿ ಯನ್ನು ಸಂಚಯಿಸುತ್ತದೆ. ಅದು ಹಾಗೆಯೇ ಯಾವಾಗಲೂ ಹೇಳುತ್ತದೆ. ಆದರೆ ಸತ್ ಎಂದರೇನು? ಚಿತ್ ಎಂದರೇನು? ಮತ್ತು ಆನಂದವೆಂದರೇನು? ಎಂಬುದೇ ಅದಕ್ಕೆ ತಿಳಿಯದು. ನೀವು 'ಅದೊಂದು ಅನುಭೂತಿ' ಎಂದರೆ, ಅದೂ ಸಹ, 'ಓಹೋ! ನೀವೂ ಅನುಭವಿಸಬೇಕು'. ಎನ್ನುತ್ತದೆ. ಅಷ್ಟೇ. ಇದು ಮಾಹಿತಿ ನೀಡುವ, ಮರುಪ್ರಸಾರ ಮಾಡುವ, ಟೇಪ ರೀಕಾರ್ಡರ ಇದ್ದಂತೆ. ಇಂಥ ಮಾಹಿತಿಯಿಂದ ಯಾವುದೇ ಸಹಾಯವಾಗದು. ಆದ್ದರಿಂದ ನಿಮ್ಮ ಯಾಂತ್ರಿಕ ಅಭ್ಯಾಸಗಳು.ನಿಮ್ಮ ಬೋಧಿಗಾವ ಸಹಾಯವನ್ನೂ ನೀಡವು. ಏಕೆಂದರೆ, ಅವು ಮಾನಸಿಕ ಕ್ರಿಯಾ–ಕಲಾಪಗಳನ್ನಾಧರಿಸಿವೆ. ಆದರೆ, ನಾವೀಗ ಹೊಂದಿರುವುದು ಬೋಧಿ. ನಿಮ್ಮಲ್ಲಿ ನಿಮ್ಮ ಮನವಿದೆ. ಮತ್ತು ನಿಮ್ಮ ಬುದ್ಧಿಯಿದೆ. ಆದ್ದರಿಂದ, ನಾನು ಏನನ್ನಾದರೂ ಹೇಳುವುದಿದ್ದರೆ, ನಿಮ್ಮ ಮನಕ್ಕೆ ಹೇಳಬೇಕು. ನಿಮ್ಮ ಬುದ್ಧಿಗೆ ಹೇಳಬೇಕು. ಒಂದು ವೇಳೆ, ನಿಮ್ಮ ಬುದ್ಧಿ ಇಲ್ಲವೆ ಮನಗಳು ಪಳಗಿರದಿದ್ದರೆ, ಆಗ ನಾವೇನು ಮಾಡ ಬಲ್ಲೆವು? ಆಂತರಿಕವಾಗಿ ಅಧಿಕಾಧಿಕ ಅರಿತುಕೊಳ್ಳುವ ಅತಿ ದೊಡ್ಡ ಬುದ್ಧಿ ಜೀವಿಗಳಿರಬಹುದು. ಇಲ್ಲವೆ ಅವರು ಬುದ್ಧಿಯ ಯಾಂತ್ರಿಕತೆಯನ್ನು ಅರಿ ಯಲು ಪ್ರಯತ್ನಿಸಬಹುದು. ಆದರೆ, ಇದು ಎಲ್ಲರಿಗೂ ಸುಲಭ ಸಾಧ್ಯವಲ್ಲ. ಏಕೆಂದರೆ, ಒಬ್ಬನಿಗೆ ಅದನ್ನೆಲ್ಲ ಅರಿಯುವುದಕ್ಕಾಗಿ ವೇಳೆ ಇಲ್ಲ. ಅಥವಾ ಅವನಿಗೆ ತನ್ನೊಳಗೇ ಅರಿಯುವಂಥ ತರಬೇತಿಯೂ ಇಲ್ಲದಿರಬಹುದು. ಆಗ ಅವನೇನು ಮಾಡಬೇಕು? ಆಗ ಅವನು ತಥ್ಯವನ್ನು ಅರಿಯಲು ತಕ್ಕ ಅಧಿಕಾರಿಯಾಗನು. ಆದರೆ, ಅದು ನಮ್ಮ ಮನಕ್ಕೆ ಗೋಚರವಾಗಬಹುದು.

ಅದರಿಂದಾಗಿಯೇ, 'ಅದು ಹಾಗಲ್ಲ'; ಎಂದು ನಾನು ಹೇಳುತ್ತಿದ್ದೇನೆ. ನಿಮ್ಮ ಗುರು, (ನಿಮಗೆ ಗುರು ಶಬ್ದವು ಬೇಜಾರು ತರಿಸುವಂತಿದ್ದರೆ) ನಿಮ್ಮ ಸಹಾಯಕನು,ಇಲ್ಲವೆ ಹರ್ಷಭರಿತನು,ಆನಂದಮಯನು, ನಿಮಗೆ ತಿಳಿಯುವಂತೆ ಹೇಳಿಕೊಡುತ್ತಾನೆ. "ನಾನು ಕೇವಲ ಸಹಾಯ ಸಲ್ಲಿಸುವೆ. ನೀವು ಅರಿಯುತ್ತ ಸಾಗಿರಿ" ಎಂದವನು ಹೇಳುತ್ತಾನೆ. ಇದು ಗುರುವಿನ ಕಾರ್ಯ. ಗುರುವಿನ ಕಾರ್ಯವೆಂದರೆ, ಕೇವಲ ಕೆಲವು ಯಾಂತ್ರಿಕ ಅಭ್ಯಾಸಗಳನ್ನಷ್ಟೇ ಕೊಟ್ಟು ಬಿಡುವುದಲ್ಲ. ಆದರೆ, ಆಂತರಿಕ ಗುರುವಿನ ಸ್ಪರ್ಶ ಮಾಡಿಸುವಲ್ಲಿ, ನಿಮ್ಮನ್ನು ಸ್ವಾಧೀನಗೊಳಿಸುವಲ್ಲಿ, ಮಾರ್ಗದರ್ಶನ ನೀಡುವುದಾಗಿದೆ. ಅವನಿದನ್ನು ಮಾಡಿದಾಗಲೇ ಅವನನ್ನು ಗುರು ಎಂದು ಕರೆಯುತ್ತಾರೆ.

ಗುರುವಿನೊಂದಿಗಿನ ಸಂಬಂಧವು ಕೇವಲ ವಿಷಯಗತ ಸಂಬಂಧವಲ್ಲ. ನೀವು ಮೇಲಧಿಕಾರಿಯ ಇಲ್ಲವೆ ತಂದೆಯ ಅಣತಿಯನ್ನು ಪಾಲಿಸುವಂತಲ್ಲ ಅದು. ನೀವು ಬಹು ಕಳಕಳಿಯುಳ್ಳವರಾಗಿರಬೇಕು. ಕೇವಲ ತಲೆಬಾಗಬೇಕು; ಇತ್ಯಾದಿ ಇತ್ಯಾದಿಯಾಗಲಿ ಮತ್ತು ಗುರುವು ಅತಿ ದೊಡ್ಡವನೆಂದು ಹೇಳುತ್ತ, ತಾನು ಒಳಗೆ ಟೊಳ್ಳಾಗಿಯೇ ಉಳಿಯುವುದಾಗಲಿ, ನಿಜವಾದ ಹಾದಿಯಲ್ಲ. ಗುರುವು ಏನು ಮಾಡುತ್ತಾನೆ, ಗೊತ್ತೇ? ಅವನು ಕೆಳಗಿನ ಅವಸ್ಥೆಗೂ ಬರುತ್ತಾನೆ. ಏಕೆಂದರೆ, ಅವನೂ ಮಾನವ ಜೀವಿ ತಾನೇ? ಅವನು ನಿಮ್ಮ ತೊಂದರೆಯನ್ನು ಅರಿತುಕೊಳ್ಳುತ್ತಾನೆ. ಅವನು ಇಂಥ ಅನೇಕ ಸಮಸ್ಯೆಗಳನ್ನು ಎದುರಿಸಿರುವುದರಿಂದ, ನಿಮ್ಮ ಸಮಸ್ಯೆಗಳನ್ನೂ ಅರಿಯಬಲ್ಲನು. ಅವನೀಗ ಜಾಗ್ರತನಾಗಿದ್ದಾನೆ. ಆದ್ದರಿಂದ, ಅವನು ನಿಮ್ಮನ್ನು ಪ್ರೀತಿಸುತ್ತಾನೆ. ಅವನು ನಿಮ್ಮನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಮತ್ತು ಅರಿತುಕೊಳ್ಳುವಲ್ಲಿ ನಿಮಗೂ ಸಹಾಯ ಸಲ್ಲಿಸುತ್ತಾನೆ. "ಮಿತ್ರವರ್ಯ! ಅದು ಹಾಗಲ್ಲ. ನೀನೇನೋ ಸಮಸ್ಯೆಗಳಲ್ಲಿ ಸಿಲುಕಿಕೊಂಡಿರುವೆ. ಆದರೆ, ವಾಸ್ತವವಾಗಿ ನೀನು ಅವುಗಳನ್ನು ಚೆನ್ನಾಗಿ ತಿಳಿದುಕೊಂಡರೆ, ನೀನು ಮುಕ್ತನಾಗುವೆ." ಎಂದು ಅವನು ತಿಳಿಸಿ ಹೇಳುತ್ತಾನೆ. ಹೀಗೆ, ಅವನ ಮಮತೆಯಾಗಿದೆ. ಪ್ರೇಮವಾಗಿದೆ. ಅವನು ತನ್ನನ್ನೇ ಶ್ರುತಿಗೊಳಿಸುತ್ತಾನೆ. ಅವನೇನು ಮಾಡುತ್ತಾನೆ, ಗೊತ್ತೇ? ಅವನು ಬುದ್ಧಿಯನ್ನು ನಿಷ್ಕ್ರಿಯೆಗೊಳಿಸಲು ಪ್ರಯತ್ನಿಸುತ್ತಾನೆ. ಮತ್ತು ಅದನ್ನು ಬೋಧಿಯ ಸ್ತರಕ್ಕೊಯ್ಯುತ್ತಾನೆ. ಯಾವಾಗ ಅವನು ಬುದ್ಧಿಯನ್ನು ಬೋಧಿಯಲ್ಲಿ ಪರಿವರ್ತಿಸುವಲ್ಲಿ ಯಶಸ್ವಿಯಾಗುವನೋ, ಆ ಬಳಿಕ ಗುರುವು ಹೆಚ್ಚಿನ ಪ್ರಯತ್ನ

ಮಾಡುವ ಆವಶ್ಯಕತೆಯಿಲ್ಲ. ಏಕೆಂದರೆ, ನೀವು ಯಾವಾಗ ನಿಮ್ಮ ಬೋಧಿಯನ್ನು ಗುರುವಿನೊಂದಿಗೆ ಶ್ರುತಿಗೊಳಿಸುವಿರೋ, ಆಗ ನೀವು ಅವನಿಂದ ಸ್ವತಂತ್ರರಾಗುತ್ತೀರಿ. ಮತ್ತು ಬೋಧಿಯು ನಿಮ್ಮ ಸಹಜಾತ ವಸ್ತುವಾಗಿದೆ. ವಾಸ್ತವವಾಗಿ ಅದುವೇ ನಿಮ್ಮನ್ನು ಕರೆದೊಯ್ಯುತ್ತದೆ.

ಇನ್ನು, ನಾವು ಸಮಾಜವನ್ನು ನಿರ್ಮಿಸುವಷ್ಟು ಇಲ್ಲವೆ ಅಂಥ ಮೋಜು ಮಾಡುವಷ್ಟು ಸಾಮಾಜಿಕರಾಗಿಲ್ಲ. ಇಂಥದನ್ನೆಲ್ಲ ಮಾಡುವವರನ್ನು ಗುರುಗಳೆಂದು ಗಣನೆ ಮಾಡುವುದಿಲ್ಲ. 'ಗುರು' ಎಂಬುದು ಶುದ್ಧ ಗ್ರಹಿಕೆ. ಗುರು ಎಂದರೆ ಕೇವಲ ಶುದ್ಧ.

೭

ಶಕ್ತಿ-ಪೂಜೆ

ನಾನು ಸ್ಥೂಲ ಪೂಜೆಯನ್ನು ಹೇಗೆ ಮಾಡಬೇಕೆಂಬುದನ್ನು ವಿವರಿಸಿರುವೆ. ಸೂಕ್ಷ್ಮ ಪೂಜೆಯ ಮಾನಸಿಕ ಅವಸ್ಥೆಯನ್ನೂ ಸಹ ವಿವರಿಸಿದ್ದೇನೆ.

ಮಾತೃಕೆಗಳು ಆಂತರಿಕ ಸತ್ತೆಗಳು ಮತ್ತು ಅವು ವಿಶೇಷ ಧ್ವನಿಗಳನ್ನು ಸೂಚಿಸುತ್ತವೆಯೆಂದು ನಾನು ನಿಮಗೆ ಹೇಳಿದ್ದೇನೆ. ನಾನು 'ಇದ್ದೇನೆ' ಎಂದು ಹೇಳಿದಾಗ, ನಾನು ನನ್ನ ಇಚ್ಛೆಯನ್ನು ಬಳಸುತ್ತೇನೆ. ಆಗ ನಾನು ಇಚ್ಛೆಯನ್ನು ಬಳಸುವಾಗ, ನಾನು ಹೇಗೆ ಬಳಸುವೆನೋ, ನನಗೆ ಗೊತ್ತಿಲ್ಲ. ಆದರೆ, ಯಾವಾಗ ನಾನು ಒಂದು ವಿಶೇಷ ಶಬ್ದವನ್ನು ಆಡಲು ಬಯಸುವೆನೋ, ನಾನದನ್ನು ಉಚ್ಚರಿಸುತ್ತೇನೆ. ಮತ್ತು 'ಇದ್ದೇನೆ' ಎಂಬುದನ್ನು ಕೇಳುತ್ತೇನೆ. ಇದೊಂದು ನನ್ನೊಂದಿಗೆ ಸ್ವಭಾವತಃ ಇರುವ ಶಕ್ತಿ.

ಆದರೆ, ನಾನೀಗ ಹೇಳಬಯಸುವುದೇನೆಂದರೆ, ನಾನು 'ಇದ್ದೇನೆ' ಎಂದಾಗ, ನನ್ನ ಪ್ರಾಣ, ಇಚ್ಛೆ ಮತ್ತು 'ಇದ್ದೇನೆ' ಶಬ್ದಗಳು ಸೇರಿಕೊಂಡಿದ್ದರೆ, ಅವು ಶಕ್ತಿಯನ್ನು (energy) ಹುಟ್ಟಿಸುತ್ತವೆ. ಈಗ ನೀವಿದನ್ನು ಚೆನ್ನಾಗಿ ಅರಿಯಲು ಪ್ರಯತ್ನಿಸಿರಿ.

ಯಾವಾಗ, ಪ್ರಾಣ, ವಾಕ್ ಮತ್ತು ಮನಗಳು ನನ್ನ ಇಚ್ಛೆಯ ಮೂಲಕ ಒಂದು ವಿಶೇಷ ವ್ಯಾಪ್ತಿಯಲ್ಲಿ ಬರುವವೋ, ಆ ಕೂಡಲೇ ಅವು ಶಕ್ತಿಯಲ್ಲಿ ಪರಿವರ್ತಿತವಾಗುತ್ತವೆ.

ನಾನಿನ್ನೂ ಚಿಕ್ಕ ಹುಡುಗನಿದ್ದಾಗ, ನನ್ನ ಬಳಿ ಅತಿ ಚಿಕ್ಕ ಸೂರ್ಯಗಾಜುಗಳಿದ್ದವು. ನಾನು ಅವುಗಳನ್ನು ಸೂರ್ಯನೆದುರು ಒಯ್ದಾಗ, ಆ 'ಲೆನ್ಸು' ಗಳನ್ನು ಒಂದು ವಿಶೇಷ ರೂಪದಲ್ಲಿ ಕೇಂದ್ರೀಕರಿಸುತ್ತಿದ್ದೆ. ಅದರಿಂದ ಬೆಂಕಿಯು ಹುಟ್ಟುತ್ತಿತ್ತು. ಅದೇ ರೀತಿ, ನನ್ನ ಪ್ರಾಣ, ನನ್ನ ವಾಕ್

ಮತ್ತು ನನ್ನ ಮನಗಳು ಬೇರೆ ಬೇರೆ ವಸ್ತುಗಳಾದರೂ, ನಾನು ವೀಕ್ಷಣೆಯ ಮೂಲಕ ಇವುಗಳನ್ನು ಒಂದು ವಿಶೇಷ ಛಂದದಲ್ಲಿ ಬಳಸಿದಾಗ ಮನವು ಪ್ರಾಣದೊಂದಿಗೆ ಸಂಬಂಧಿಸುತ್ತದೆ ಮತ್ತು ನಾನೀಗ ಮಂತ್ರವನ್ನು ಪ್ರಯೋಗಿಸುತ್ತೇನೆ. ಮಂತ್ರವನ್ನು (ವಾಕ್) ಪ್ರಯೋಗಿಸಿದಾಗ, ಅಲ್ಲಿ ಒಂದು ವಿಶೇಷ ಛಂದವಿದೆ; ಅದೊಂದು ವಿಶೇಷ ಛಂದದಲ್ಲಿ ಪ್ರವಹಿಸಿದಾಗ ಏನಾಗುತ್ತದೆ? ಅವು ಒಟ್ಟು ಸೇರಿದಾಗ, ಕೂಡಲೇ ನಾನು ಆ ಮಂತ್ರದೇವತೆಯೊಂದಿಗೆ ಒಂದಾಗುತ್ತೇನೆ. ಆ ಕಾಲಕ್ಕೆ ನನಗೆ ದೇಶ ಮತ್ತು ಕಾಲಗಳ ಪ್ರಜ್ಞೆ ಮರೆತು ಬಿಡುತ್ತದೆ. ನಾನು ತುಂಬಾ ಆನಂದಮಯನಾಗುತ್ತೇನೆ. ಮತ್ತು ಆನಂದವೇ ನನ್ನಲ್ಲಿ ಶಕ್ತಿಯಾಗಿ ಕಾರ್ಯ ಮಾಡುತ್ತದೆ. ಮತ್ತು ವಾಸ್ತವವಾಗಿ, ಇದುವೇ ಜೀವನದ ಸರಿಯಾದ ಹಾದಿಯಾಗಿದೆ. ನೀವು ಆ ವಸ್ತುವನ್ನು ಪಡೆದರೆ, ನಿನ್ನ ಜೀವನವು ಗತಿಶೀಲವಾಗುತ್ತದೆ. ಮತ್ತು ನಿಮ್ಮ ಆಂತರಿಕ ಗುರುವು ಅರ್ಥಾತ್ ಗತಿಶೀಲ ಗುರುವು ನಿಮ್ಮ ಆಂತರ್ಯದಲ್ಲಿ ಜಾಗ್ರತಿ ಮಾಡುತ್ತಾನೆ. ಮತ್ತು ನೀವು ಸುಖ-ಸಂತೋಷದ ಸ್ಪಂದನಗಳ ಸರಮಾಲೆಯನ್ನೇ ಸಂವೇದಿಸುತ್ತೀರಿ. ಕೆಲವು ಸಲವಂತೂ ಅವು ತಡೆದುಕೊಳ್ಳಲಾರದಷ್ಟು ಇರಬಹುದು. ಇಂಥ ಅವಸ್ಥೆಯು ಆಂತರ್ಯದಲ್ಲಿ ಉಂಟಾಗುತ್ತದೆ. ಇದೊಂದು ಅನುಭೂತಿ. ಮಾನವನು ಇದನ್ನು ಪಡೆಯುತ್ತಾನೆ.

ಪ್ರಾಣಗಳು ಐದು ವಿಧವಾಗಿವೆ : ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನ. ನಾನು ಪ್ರಾಣದ ಸ್ವಭಾವವನ್ನು ವಿವರಿಸುವೆ.

ಪ್ರಾಣ ಎಂದರೆ ಶ್ವಾಸ ಮತ್ತು ಉಚ್ಛ್ವಾಸ. ನಾನು ವಾಯುವನ್ನು ಒಳಗೆ ತೆಗೆದುಕೊಳ್ಳುವೆ ಮತ್ತು ಹೊರಗೆ ವಿಸರ್ಜಿಸುವೆ. ಆದರೆ, ಯಾವಾಗ ವಾಯುವಿನ ಸ್ವೀಕಾರ ಮತ್ತು ವಿಸರ್ಜನೆಗಳ ಬಗ್ಗೆ ಲಕ್ಷ್ಯ ವಹಿಸುವೆನೋ, ಆಗ ನಾನು ವೀಕ್ಷಕನಾಗುವೆ. ಮೊದ ಮೊದಲು, ನಾನು ನನ್ನ ಪ್ರಯತ್ನ ಪೂರ್ವಕ, ಸ್ವೀಕಾರ ಮತ್ತು ವಿಸರ್ಜನೆ ಮಾಡುತ್ತೇನೆ. ಆದರೆ, ಇದು ಪ್ರಾಣದ ವೀಕ್ಷಣೆಯಲ್ಲ. ಆದರೆ, ನೀವು ಒಂದೆಡೆಗೆ ವೀಕ್ಷಕರಾಗಿರಬೇಕು; ಮತ್ತು ಇನ್ನೊಂದೆಡೆಗೆ ವಾಯುವನ್ನು ಸ್ವೀಕರಿಸುತ್ತಿರಬೇಕು. ನೀವು ನಿಮ್ಮ ವೀಕ್ಷಕ ಪ್ರಜ್ಞೆಯನ್ನು ಕಾಯ್ದುಕೊಂಡೇ, ವಾಯುವನ್ನು ಸ್ವೀಕರಿಸಿರಿ ಮತ್ತು ವಿಸರ್ಜಿಸಿರಿ. ಏಕೆಂದರೆ, ಪ್ರಾಣಾಯಾಮಕ್ಕಾಗಿ ಇವೆರಡೂ ಅವಶ್ಯವಾಗಿವೆ. ಇಲ್ಲವಾದರೆ, ನಿಮ್ಮ ಪ್ರಾಣವು ಸರಿಯಾಗಿರದು. ವೀಕ್ಷಕನ ಪ್ರಜ್ಞೆಯೂ ಅಲ್ಲಿರಬೇಕು. ಮತ್ತು ನೀವು ವೀಕ್ಷಕರಾದಾಗ, ನಿಮ್ಮ ಮನವು ನಿಮ್ಮಿಂದ ಪರೆ

ಯಾಗದು. ಆ ಮೊದಲು ಅದು ಅದೃಶ್ಯ ಸಂಚುಖೋರನಂತೆ ತನ್ನ ಯಾವುದೋ ಸಂಚು ಹೂಡುತ್ತಿರುತ್ತದೆ. ನೀವು ವೀಕ್ಷಕರಾದ ಕೂಡಲೇ, ಅದು "ಕ್ಷಮಿಸಿ ನನ್ನನ್ನು" ಎನ್ನುತ್ತದೆ. ಅದು ನಿಮ್ಮೆದುರು ಪಾರದರ್ಶಕವಾಗುತ್ತದೆ. ಅದು ನಿಮಗರಿಯದಂತೆ ಕಾರ್ಯ ಮಾಡುತ್ತಿರುತ್ತದೆ. ಆದರೆ ನೀವು 'ನಾನು ಮಾಡುತ್ತಿದ್ದೇನೆ' ಎಂದು ತಿಳಿಯುತ್ತೀರಿ. ವಾಸ್ತವವಾಗಿ ನಿಮ್ಮ ಮನವೇ ಈ ಎಲ್ಲವನ್ನೂ ಮಾಡುತ್ತಿದೆ. ನೀವು ನಿಮ್ಮ ಪ್ರಾಣವನ್ನು ವೀಕ್ಷಿಸಿದಾಗ, ನಿಮ್ಮ ಪ್ರಾಣವು ಮನದೊಂದಿಗೆ ಸಂಬಂಧಿಸಿರುವುದರಿಂದ,ನಿಮ್ಮ ಮನವು ಸಹ, ಅದೇ ರೀತಿ ಚಲಿಸುತ್ತದೆ. ಇದುವೇ ನೀವು ಮಾಡಬೇಕಾದ ಕರ್ತವ್ಯ.

ಇನ್ನು, ಅನಂತರ ನೀವೇನು ಮಾಡುವಿರಿ? ನೀವು ನಿಮ್ಮ ಗುರುವಿನ ಮೂಲಕ ಪಡೆದ ಶಕ್ತಿಯನ್ನು, ಮರಳಿ ಮರಳಿ ಪಡೆಯುತ್ತ ಹೋಗುತ್ತೀರಿ. ಅದುವೇ ಮಂತ್ರ ಪುರಶ್ಚರಣೆ. ಒಂದೆಡೆಗೆ ಮಂತ್ರವು ಮನವನ್ನು ರೂಪಾಂತೃಕರಿಸುತ್ತದೆ. ಮತ್ತು ಇನ್ನೊಂದೆಡೆಗೆ, ಪ್ರಾಣವನ್ನು ರೂಪಾಂತ್ರಕರಿಸುತ್ತದೆ. ಇನ್ನು ಯಾವಾಗ ನೀವು ಒಂದು ವಿಶೇಷ ಛಂದ ಇಲ್ಲವೆ ಸಮನ್ವಯವನ್ನು ಪಡೆಯುವಿರೋ, ಆಗ ಅದು ಕಾರ್ಯಶೀಲವಾಗುತ್ತದೆ. ಆ ಕಾಲಕ್ಕೆ ನಿಮಗೆ ಕೂಡಲೇ ವಿಸ್ಮೃತಿಯುಂಟಾಗುತ್ತದೆ. ಆಗ ನೀವು ಕೇವಲ ವೀಕ್ಷಕರಾಗುವಿರಿ. ಆ ಬಳಿಕ, ನಿಮ್ಮಲ್ಲಿ ಬಾಹ್ಯ ಕ್ರಿಯಾ ಸಂಬಂಧವಿರದು. ಕ್ರಿಯೆಯಲ್ಲವೂ ಆಂತರ್ಯದಲ್ಲಿಯೇ ಸಾಗುತ್ತದೆ ಮತ್ತು ಇದುವೇ ನಿಜವಾದ ಪೂಜೆ. ಇದು ಆಂತರಿಕ ಪೂಜೆ. ಇದೂ ಪೂಜೆಯ ಒಂದು ರೂಪ.

ಅನಂತರ, ನಿಮಗೇನಾದರೂ ಅನುಭವ ಇಲ್ಲವೆ ಇತರ ವಸ್ತು ಲಾಭವಾದರೆ, ಅವೆಲ್ಲವನ್ನೂ ಗುರುವಿಗೆ ಇಲ್ಲವೆ ದೇವತೆಗೆ ಸಮರ್ಪಿಸತಕ್ಕದ್ದು. ಹಾಗೆಂದರೇನು? "ಅಯ್ಯಾ! ಇದು ನಿನ್ನ ಕೃಪೆ. ನಾನು ಪಡೆದುದು ನನ್ನದಲ್ಲ." ಎನ್ನುವ ಭಾವವಿರಬೇಕು. ಒಂದೆಡೆಗೆ ಮನವು, "ಅದೆಲ್ಲ ನಿನ್ನದೇ ಅರ್ಜಿತ;" ಎಂದು ಹೇಳುತ್ತಿರುತ್ತದೆ. ಆದರೆ, ನೀನು ಮಾತ್ರ, "ಇಲ್ಲ; ಇಲ್ಲ. ಇದು ನನ್ನ ಅರ್ಜಿತವಲ್ಲ. ನಾನೇನೂ ಅರ್ಜಿಸಿಲ್ಲ. ಕೃಪಾ ಮಾತ್ರದಿಂದ ನನಗಿದು ಲಭ್ಯವಾಗಿದೆಯಷ್ಟೇ" ಎಂಬ ಭಾವ ಹೊಂದಿರಬೇಕು.

ಇದನ್ನೇ ಸೂಕ್ಷ್ಮ ಉಪಾಸನೆ; ಸೂಕ್ಷ್ಮ ಪೂಜೆ, ಎನ್ನುತ್ತಾರೆ. ಇದರಲ್ಲಿ ಮೂರು ಅಂಶಗಳಿವೆ: ಬೌದ್ಧಿಕ ಶ್ರುತಿಗೊಳಿಸುವಿಕೆ, ಭಾವ ಮಾರ್ಗ (ಭಾವ

ಮತ್ತು ಮಹಾ ಭಾವ) ಮತ್ತು ಪ್ರಾಣ–ಮನಗಳ ಯೋಗಮಾರ್ಗ. ಇವೆಲ್ಲವುಗಳನ್ನೂ ತಾಂತ್ರಿಕ ರೀತಿಯಲ್ಲಿ ಸಂಯೋಜಿಸಲಾಗಿದೆ. ತಾಂತ್ರಿಕರು ತುಂಬಾ ವೈಜ್ಞಾನಿಕವಾಗಿ, ಈ ಮೂರನ್ನೂ ನಿಮ್ಮ ಆಂತರಿಕ ಪ್ರಜ್ಞೆಗೋಸುಗ ಹೊಂದಿಸಿದ್ದಾರೆ. ಮತ್ತು ಇದು ನಿಮ್ಮ ಆನಂದದೊಂದಿಗೆ ಸಂಬಂಧಿಸಿದೆ. ವಾಸ್ತವವಾಗಿ ನೀವು ಆಂತರಿಕ ಸುಖವನ್ನು, ಆನಂದವನ್ನು ವಿಷಯಗಳಿಲ್ಲದೆ ಪಡೆಯಬೇಕು. ಅದಕ್ಕಾಗಿ ಪೂಜೆ ಮಾಡಿರೆಂದು ನಾನು ಹೇಳುವೆ. ವಿಷಯಗಳೊಂದಿಗೆ ನಾವು ಯಾವಾಗಲೂ ಸುಖದಲ್ಲಿ ಇದ್ದೇ ಇರುತ್ತೇವೆ. ನೀವು ನನಗೆ ರೊಟ್ಟಿ ಕೊಡಿರಿ. 'ಓ ಅದೆಷ್ಟು ಚೆನ್ನಾಗಿದೆ!" ಎಂದು ಖುಷಿ ಪಡುತ್ತೇನೆ. ಆದರೆ, ಅದಿಲ್ಲದೆ, ಒಂದು ವೇಳೆ, ಸುಖ ಪಡೆಯಬಲ್ಲೆನಾದರೆ, ನಿಜವಾಗಿಯೂ ನಾನಿನ್ನೂ ಹೆಚ್ಚು ಪ್ರಬಲನಲ್ಲವೇ? ಅದನ್ನೇ ಆನಂದವೆನ್ನುತ್ತಾರೆ.

ಇನ್ನು ಆ ಆನಂದವನ್ನೇ ಶಕ್ತಿ ಎನ್ನುತ್ತಾರೆ. "ದೇವೀ ಮಾಲೆ"ಯಲ್ಲಿ (ಅದೊಂದು ಪದ್ಧತಿ) ಆದೇ ಸೂಕ್ಷ್ಮ ಶಕ್ತಿಯನ್ನು, 'ಶಕ್ತಿ ಕಾಲ ಸಂಕರ್ಷಣೇ' ಎಂದು ಕರೆದಿದ್ದಾರೆ. ಮತ್ತು ಮಹಾದಾಮಳದಲ್ಲಿ 'ಪರಮಾ' ಎಂದು ಕರೆಯಲಾಗಿದೆ. ಇದೆಲ್ಲ ಶಾಕ್ತ ಪದ್ಧತಿಗಳ ಮಾತಾಯಿತು. ಇನ್ನೊಂದು ಪದ್ಧತಿಯಲ್ಲಿ ಇದನ್ನೇ 'ಪುರುಷಾಸ್ತ್ರ' ಎನ್ನಲಾಗಿದೆ. ಮತ್ತೊಂದರಲ್ಲಿ 'ಮಾತೃ ಸಂಭವ' ಅರ್ಥಾತ್ ಗತಿಶೀಲ ಮಾತೃಶಕ್ತಿ; ನಿತ್ಯವಾಗಿರುವ ಮಾತೃಶಕ್ತಿ, ಎನ್ನಲಾಗಿದೆ. ಅದೇ ಶಕ್ತಿಯನ್ನು ತಮ್ಮ ತಮ್ಮ ರೀತಿಯಲ್ಲಿ ಸೂಚಿಸುವ ಮೂರು ಪದ್ಧತಿಗಳಿವೆ. ಶಾಕ್ತ ಪದ್ಧತಿಗಳಲ್ಲಿ, ಯಾಮಳ ಪದ್ಧತಿ, ದಾಮಳ ಪದ್ಧತಿ ಮತ್ತು ಮಾತೃಕ ಪದ್ಧತಿ. ಈ ವಿಜ್ಞಾನವನ್ನು ಕುರಿತು ವಿಭಿನ್ನ ಪದ್ಧತಿಗಳು ವಿಕಸಿಸಿವೆ. ಅವು ಇದನ್ನಿಂತು ವಿವರಿಸುತ್ತಿವೆ.

ಆದರೆ, ವಾಸ್ತವವಾಗಿ, ಅತ್ಯಂತ ಮಹತ್ತ್ವದ ವಸ್ತುಗಳೆಂದರೆ, ನಿಮ್ಮ ಮನಸ್ಸು ಮತ್ತು ಪ್ರಾಣ; ಮತ್ತು ಅವು ವಿಷಯಗತ ಹಾದಿಯಲ್ಲಿ ಕ್ರಿಯಾನ್ವಿತವಾಗಿರುವದು. ಇನ್ನು ಅವುಗಳೀಗ ಅಂತರ್ಮುಖಿಯಾಗಿವೆ. ಈಗ ನಿಮ್ಮ ಆಂತರ್ಯದ ಅನುಭವಕ್ಕೆ ಮೊದಲಾಗುತ್ತದೆ. ಆಂತರಿಕ ಅನುಭವಗಳಾವವು? ನಿಮ್ಮ ಭಾವಗಳು ಶುದ್ಧವಾಗುತ್ತವೆ. ಒಂದೆಡೆಗೆ ನೀವು ತಾಯಿಯಾಗುತ್ತೀರಿ. ಇನ್ನೊಂದೆಡೆಗೆ ನೀವು ಮಗುವಾಗುತ್ತೀರಿ. ನಿಮ್ಮ ಬುದ್ಧಿಯು ಶುದ್ಧವಾದಂತೆಲ್ಲ ಸೃಜನಶೀಲ ವಸ್ತು ಲಾಭವು ನಿಮಗಾಗತೊಡಗುತ್ತದೆ. ನೀವು ಸ್ಪಂದನಗಳನ್ನು ಸಂವೇದಿಸುವಿರಿ. ಜಗತ್ತು ಹೇಗಿದೆ? ಅದು ಹೇಗೆ ಸೃಷ್ಟವಾಯಿತು?

ಜ್ಯೋತಿಷ್ಕ ಪುಂಜಗಳೇನು? ನಿಮ್ಮ ಮನಸ್ಸು ಇವೆಲ್ಲವುಗಳನ್ನು ಅರಿಯಲು ಪ್ರಯತ್ನಿಸುತ್ತದೆ. ನೀವು ಅಂತರ್ಯದಲ್ಲಿಯೇ ಇವುಗಳ ಜ್ಞಾನೋಪಲಬ್ಧಿಯನ್ನು ಪಡೆಯುತ್ತೀರಿ.

ಅದೇ ರೀತಿ, ನಿಮ್ಮ ಮನವು ಗತಿಶೀಲವಾಗುತ್ತದೆ. ಮನವು ಗತಿಶೀಲವಾಗಹತ್ತಿದಾಗ, ನಾವು ಅದನ್ನು ಪ್ರಾಪಂಚಿಕ ವಿಷಯಗಳಿಗಾಗಿ ಬಳಸಕೂಡದು. ಹಾಗೆ ಬಳಸಿದರೆ ಏನಾಗುತ್ತದೆ? ಅದರ ಶಕ್ತಿ ಹ್ರಾಸವಾಗುತ್ತದೆ. ಆದ್ದರಿಂದ ನಾವದನ್ನು ಸಮರ್ಪಿಸಿ ಬಿಡಬೇಕು. ಏಕೆಂದರೆ, ಮನವು ಇನ್ನೂ ಕ್ರಿಯಾಶೀಲವಾಗಿದ್ದು ಕೆಳಕ್ಕೆ ಹೋಗಬಯಸುತ್ತದೆ. ಆಗ ಶಕ್ತಿಯು ಕದಡುತ್ತದೆ. ಮತ್ತು ಅದು ಧೂಳಿಯಂತೆ ಕ್ಷುದ್ರವಾಗುತ್ತದೆ. ಯಾವುದರಿಂದ? ಪ್ರಾಪಂಚಿಕ ವಿಷಯಗಳಿಂದ, ಆದ್ದರಿಂದ ನಾವದನ್ನು ಆ ರೀತಿ ಬಳಸಕೂಡದು. ನಾವು ಅದರ ಆ ದಿಶೆಯಲ್ಲಿನ ಬಳಕೆಯನ್ನು ಸಂಪೂರ್ಣ ನಿಲ್ಲಿಸತಕ್ಕದ್ದು. ನಾವು ಹೆಚ್ಚು ಹೆಚ್ಚು ಸ್ವಚ್ಛವಾಗಬೇಕು. ಮತ್ತು ಆ ಕೂಡಲೇ ನನ್ನ ಇಚ್ಛೆಯಿಲ್ಲದೆ ಸಂಗತಿಗಳು ಘಟಿಸಬೇಕು. ನಾನೇನನ್ನೂ ಚಿಂತಿಸುವುದಿಲ್ಲ. ನಾನಿಲ್ಲಿ ಹೀಗೆ ಕುಳಿತು ಏನನ್ನೂ ವಿಚಾರಿಸುತ್ತಿಲ್ಲವೆಂದು ತಿಳಿಯಿರಿ. ಕೂಡಲೇ, ನಾನು ಅಂಟೋಯಿನ್ ಏನನ್ನೋ ಮಾಡುತ್ತಿರುವುದನ್ನು ನೋಡುತ್ತೇನೆ. ಅದು ಸರಿ. ಆದರೆ, ನಾನು "ಅಂಟೋಯಿನನು ಏನು ಮಾಡುತ್ತಿರಬಹುದು?" ಎಂದು ವಿಚಾರಿಸಕೂಡದು. ನಾನು ನನ್ನ ಶಕ್ತಿಯನ್ನು ಬಳಸಕೂಡದು. ಕೂಡಲೇ 'ಆ ಮನುಷ್ಯನು ಏನು ಮಾಡುತ್ತಿರಬಹುದು?" ಎಂಬುದನ್ನು ನಾನು ನೋಡಬಲ್ಲೆ. ಆದರೆ, ನಾವು ನಮ್ಮ ಶಕ್ತಿಯನ್ನು ಬಳಸಕೂಡದು. ಏಕೆ? ಎಂದು ನೀವು ಕೇಳಬಹುದಲ್ಲವೇ? ನೀವು ಇತರರ ಹಿಂದಿನ ಜನ್ಮಗಳನ್ನು ಕುರಿತು ಕೇಳಬಾರದು. ಅದು ಸತ್ಯ. ಅದನ್ನು ಅರಿಯುವುದೂ ಒಂದು ಶಕ್ತಿ, ಅದು ತಪ್ಪೆಂದು ನಾನೆಂದೂ ಹೇಳುವುದಿಲ್ಲ. ಆದರೆ, ಹಾಗೆ ಕೇಳಿದರೆ ನನಗೆ ಸಿಟ್ಟು ಬರುತ್ತದೆ. ಏಕೆ? ಏಕೆಂದರೆ, ನೀವು ನಮ್ಮ ಶಕ್ತಿಯನ್ನು ಬಳಸಕೂಡದು. ಏನೇ ಇರಲಿ; ಅದು ಶಕ್ತಿ; ಅದನ್ನು ಇಂಥದಕ್ಕಾಗಿ ಬಳಸಕೂಡದು. ಏಕೆಂದರೆ, ನೀವು ಅದನ್ನಿನ್ನೂ ಹೆಚ್ಚು ಹೆಚ್ಚಾಗಿ ಶುದ್ಧೀಕರಿಸಬೇಕಾಗಿದೆ. ಏಕೆಂದರೆ, ನನ್ನ ಮನವು ನಡುವೆ ನುಸುಳಬಾರದೆಂದು ನನ್ನ ಇಚ್ಛೆ. ಹಾಗೆ ನುಸುಳಿತೋ, ಅದು ಕುತೂಹಲಕಾರಿಯಾಗುತ್ತದೆ.ಆ ಮೇಲೆ, ನೀವು ಇತರರಿಗೆ ಸಹಾಯ ಮಾಡುತ್ತೀರಿ. ಹೀಗಾಗಿ, ಆ ಶಕ್ತಿಯು ನಿಮಗೆ ಸಹಾಯಕಾರಿಯಾಗುವುದಿಲ್ಲ. ಇತರರಿಗೆ ಕೆಳಮಟ್ಟದಲ್ಲಿ ಸಹಾಯ ನೀಡಬಹುದು. ನಿಮ್ಮಲ್ಲಿ

ನಾಲ್ಕು ನೂರು ರೂಪಾಯಿ ಹಣ ಇದೆಯೆಂದು ತಿಳಿಯಿರಿ. ನೀವು ಆ ಹಣವನ್ನೆಲ್ಲ ಕೊಟ್ಟು ಬಿಡುತ್ತೀರಿ. ಮತ್ತು ಬೇರಾವ ಧನಮೂಲವೂ ನಿಮಗೆ ಇರದು; ಕೂಡಲೇ ಹಣ–ನೀಡಿಕೆಯು ನಿಂತೇ ಹೋಗುತ್ತದೆ. ಆಗ ನೀವೇನು ಮಾಡುವಿರಿ? ಆದ್ದರಿಂದ, ಸಾಮಾನ್ಯವಾಗಿ ಆಂತರ್ಯದ ಗುರುಗಳು ಮತ್ತು ಅಂತ್ಯಂತ ಕಟ್ಟುನಿಟ್ಟಿನ ಗುರುಗಳು, ಈ ಶಕ್ತಿಯ ಬಳಕೆಯನ್ನು ನಿಷೇಧಿಸುತ್ತಾರೆ. ನಿಮ್ಮ ಅನುಭೂತಿಗಳು ನಿಮ್ಮ ಸ್ವಂತದವಲ್ಲವೆಂದೇನೂ ಅದರ ಅರ್ಥವಲ್ಲ. ಅವು ಮೂಲತಃ ನಿಮ್ಮವೇ. ಅವು ನೈಜವಾದವುಗಳೇ. ನಿಮ್ಮನ್ನು ಕೌತುಕಪ್ರಿಯತೆಯಿಂದ ಪರಾಙ್ಮುಖಗೊಳಿಸಲು, ನೀವು "ನಾನೇನೂ ಅಲ್ಲ" ಎಂದೆನಿಸುವಂತೆ ಮಾಡಲು, ನಾವು ಹೀಗೆ ಮಾಡಬೇಕಾಗುತ್ತದೆ. ನಾನು ತುಂಬಾ ವಿದ್ಯಾವಂತನಾದೇನೆಂದೂ, ಹೆಚ್ಚಿನ ಪದವಿ–ಪ್ರಶಸ್ತಿ ಪಡೆದೆನೆಂದೂ ತಿಳಿಯಿರಿ. ಆಗ ನನ್ನಲ್ಲಿ ಅಹಂಕಾರ ಮೊಳೆಯುತ್ತದೆ. ಆಗ ಬುದ್ಧಿ ನಿಂತು ಬಿಡುತ್ತದೆ. ಇದಕ್ಕೆ ಪ್ರತಿಯಾಗಿ ನಾನು ಜೀವವಿಡೀ ವಿದ್ಯಾರ್ಥಿಯಾದರೆ,ನನ್ನ ಬುದ್ಧಿಯು ಸದಾ ಹರಿಯುವ ಹೊನಲಾಗುತ್ತದೆ. ಅಲ್ಲವೇನು ಮತ್ತೆ? ಅದೇ ರೀತಿ, ನಾವು ಯಾವಾಗಲೂ ಉತ್ತಮ ಜ್ಞಾನಗ್ರಾಹಿಗಳಾಗತಕ್ಕದ್ದು. 'ನಾನು ಇದನ್ನು ಪಡೆದಿದ್ದೇನೆ' ಎಂದು ಯಾವಾಗಲೂ ಭಾವಿಸಕೂಡದು. ಹೀಗೆ ಆಧ್ಯಾತ್ಮಿಕ ಹಾದಿಯಲ್ಲಿ ಆಂತರಿಕ ಸರಳತೆಯು ತುಂಬಾ ಮಹತ್ವದ್ದಾಗಿದೆ. ನಾವು ಯಾವಾಗಲೂ ದಿವ್ಯ ಮಾತೆಯನ್ನು ಸ್ಮರಿಸಬೇಕು. "ಓಹೋ! ಇದೆಲ್ಲ ಅವಳ ಕೃಪೆ." ಎಂಬ ಭಾವವಿರಬೇಕು. ನಾವು ಜನರಿಗೆ ಹಿತ ಮಾಡಬಯಸಿದರೂ ನಾವೇ ಏನನ್ನೂ ಮಾಡಲಾರೆವು. ನಿಮಗೆ ಸಿದ್ಧಿಲಾಭವಾದರೆ, ನೀವು ಕೇವಲ ಉಪಕರಣ ಮಾತ್ರರಾಗುತ್ತೀರಿ. 'ನಾನು ಏನನ್ನಾದರೂ ಮಾಡುತ್ತಿರುವೆ' ಎಂದು ನೀವು ತಿಳಿಯುವುದಿಲ್ಲ. ಪ್ರತಿಯಾಗಿ, "ನಾನು ದಿವ್ಯ ಮಾತೆಯ ಮತ್ತು ನನ್ನ ಗುರುವಿನ ಉಪಕರಣ ಮಾತ್ರ. ಅದರ ಹೊರತು, ನಾನೇನೂ ಅಲ್ಲ." ಎಂದು ತಿಳಿಯುವಿರಿ. ಒಂದು ವೇಳೆ, ನಾನು "ನಾನೇ ಕೆಲವೊಂದನ್ನು ಮಾಡುವೆ" ಎಂದು ತಿಳಿದರೆ, ನಾನು ಅಹಂಕಾರಿಯಾಗಿರುವೆನೆಂದೇ ಅರ್ಥ. ಆಗ ನನ್ನ ಕಾರ್ಯವು ಸರಿಯಾಗಿ ಸಾಗದು; ನನಗೆ ಸಂತೋಷವೂ ಇರದು. ಹೀಗೆ, ಇದೆಲ್ಲ ಆಂತರಿಕ ಮಾನಸಿಕ ತಿಳಿವಳಿಕೆಯಷ್ಟೇ. ನೀವು ಈ ಸಂಗತಿಗಳನ್ನು ತಿಳಿದಿರಬೇಕು. ಇದು ಪೂಜೆಯೇ. ನೀವು ನಿತ್ಯ ಮಾಡುವ ಯಾಂತ್ರಿಕ ಕ್ರಮವಷ್ಟೇ ಪೂಜೆಯಲ್ಲ. ನೀವು ಮಾಡಬೇಕಾದುದು, ಹಾಗೆ ಅಲ್ಲವೇ ಅಲ್ಲ. ಪೂಜೆಯು ಯಾಂತ್ರಿಕ ಕ್ರಮವಲ್ಲ. ಯಾಂತ್ರಿಕ ಕ್ರಮವು

ಪಶುವಿನ ಕ್ರಮವಷ್ಟೇ. ಅದನ್ನು ಪಾಶವಾಚಾರ ಎನ್ನುತ್ತಾರೆ. ಅಂದರೆ, ಅಂಥದನ್ನು ಪಶು ಮಾಡುತ್ತದೆ ಎಂದರ್ಥ. ನೀವು ಇನ್ನಷ್ಟು ಉನ್ನತರಾಗಬೇಕು. ಆಗ "ನಾನು ಏನು ಮಾಡುತ್ತಿದ್ದೇನೆ?" ಎಂದು ನೀವು ವಿಚಾರಿಸತೊಡಗುತ್ತೀರಿ. ನೀವು ಜಾಗರೂಕರಾಗಬೇಕು ಮತ್ತು ಊರ್ಧ್ವ ಗತಿಯಲ್ಲಿ ಸಾಗಬೇಕು. ಮತ್ತು ನೀವು ಯಾವಾಗಲೂ ನಿಮ್ಮ ಗುರುವು ನಿರ್ದೇಶಿಸಿದ ಕಟ್ಟುಪಾಡುಗಳಿಗೊಳಪಟ್ಟು ಕಾರ್ಯ ಮಾಡಬೇಕು. ಆಂತರಿಕವಾಗಿ ತುಂಬಾ ಹರ್ಷಿತರಾಗಿರಬೇಕು. ಏಕೆಂದರೆ, ಅದು ನಿಮಗೆ ಒಳ್ಳೆಯದು. ನಿಮಗೆ ಯಾವನೋ ಒಬ್ಬನು ಒಂದು ಬಂದೂಕು ಕೊಟ್ಟನೆಂದೂ ಅದರಿಂದ, ನೀವು ಸಣ್ಣ ಪ್ರಾಣಿಯೊಂದನ್ನು ಕೊಲ್ಲಬಯಸುತ್ತೀರಿ, ಎಂದೂ ತಿಳಿಯಿರಿ. ಆಗ ನಿಮಗೆ ಬಂದೂಕು ಕೊಟ್ಟವನು, "ನೀನೆಂಥ ಮೂರ್ಖನಪ್ಪ! ಬಂದೂಕನ್ನು ನಿನ್ನ ಬಳಿ ಇಟ್ಟುಕೋ. ನೀನು ಅಪಾಯಕ್ಕೀಡಾದಾಗ, ಅದನ್ನು ಆತ್ಮ ರಕ್ಷಣೆಗೆ ಉಪಯೋಗಿಸು" ಎಂದು ಹೇಳುತ್ತಾನೆ.

ಅದೇ ರೀತಿ, ಶಕ್ತಿಯನ್ನು ಕ್ಷುದ್ರ ವಿಷಯಗಳಿಗಾಗಿ ಬಳಸಬಾರದು. ಒಬ್ಬರಿಗೆ ಕಾಯಿಲೆ ಆಗುತ್ತದೆ. ಇನ್ನೊಬ್ಬನಿಗೆ ಮೈಯಲ್ಲಿ ಸ್ವಸ್ಥವಿಲ್ಲ. ಅವರನ್ನು ಗುಣಪಡಿಸುವಂಥ ಕ್ಷುದ್ರ ಕಾರ್ಯಗಳಲ್ಲಿ ನಾವದನ್ನು ಬಳಸಕೂಡದು. ನಾವು ನಮ್ಮ ಇಚ್ಛೆಯನ್ನು ಕುದುರಿಸಿ, ಅದನ್ನು ಅಧಿಕಾಧಿಕ ಪ್ರಬಲಗೊಳಿಸಬೇಕು.

ಹೀಗೆ, ಉನ್ನತ ಗುರುವು ಆ ಶಕ್ತಿಯನ್ನು ಬೀಗ ಹಾಕಿ ಇಡುತ್ತಾನೆ. ನೀವು ಮರಳಿ ಅದನ್ನು ಬಳಸಿದರೆ ತೀರಿತು; ಅವರು ಪುನಃ ಬೀಗ ಜಡಿದು ಬಿಡುತ್ತಾರೆ. ಏಕೆ? "ಓಹೋ! ಅವನು ತನ್ನ ಶಕ್ತಿಯನ್ನು ಹಾಳು ಮಾಡುತ್ತಾನೆ" ಎಂದು ಗುರುವು ಅದನ್ನು ಕೂಡಲೇ ತಡೆಯುತ್ತಾನೆ.

ಆಂತರಿಕ ಉಪಾಸನೆಯು ಮನ, ಪ್ರಾಣ ಮತ್ತು ವಾಕ್‌ಗಳನ್ನು ನಿಯಂತ್ರಿಸಿ ಬಳಸುವುದಾಗಿದೆ. ಬಾಹ್ಯ ಉಪಾಸನೆಯಲ್ಲಿ ದ್ವೈತವಿದೆ. ನೀವು ಉಪಾಸಿಸುತ್ತೀರಿ ಅಂದ ಮೇಲೆ, ನೀವು ಅಲ್ಲಿರುವಿರಿ. ಇನ್ನು ಕರ್ತವ್ಯವು ವಿಭಿನ್ನವಿರುತ್ತದೆ. ಆಂತರಿಕ ಉಪಾಸನೆಯಲ್ಲಿ ನೀವು ಅವಳಿ-ಜವಳಿಯಂತಾಗುತ್ತೀರಿ. ನೀವು ನಿಮ್ಮನ್ನೇ ಬದಲಿಸಿಕೊಳ್ಳುತ್ತೀರಿ. ಅ ಮತ್ತು ಬ ಒಟ್ಟಾಗಿ ಸೇರುತ್ತಾರೆ. ಮತ್ತು ಅ ಮತ್ತು ಬ ಒಂದಾಗುತ್ತಾರೆ. ಆದರೂ ಅ-ಪ್ರತ್ಯೇಕವಿರುತ್ತಾನೆ. ಅ ಮತ್ತು ಬ ಇಬ್ಬರೂ ಒಂದೇ. ಹೀಗೆ, ನೀವು ಆಧ್ಯಾತ್ಮಿಕ ತ್ರಿಕೋಣದಲ್ಲಿ ಬರುತ್ತೀರಿ. ಈಗ ನಿಮ್ಮ ಉಪಾಸನೆಯು ಆಂತರಿಕವಿದೆ. ನಿಮ್ಮ ಅರ್ಪಣೆಯೂ ಆಂತರಿಕವಾಗಿಯೇ ಇದೆ. ನೀವು ಏನನ್ನಾದರೂ ಮಾಡುತ್ತಿದ್ದರೆ, ನಿಮಗೆ ತುಂಬಾ ಆನಂದವಾಗುತ್ತದೆ. ಆದರೆ, ಅದನ್ನು ತೋರಗೊಡುವುದಿಲ್ಲ. ಅದರ ಅಗತ್ಯವೂ ಇರದು. ಅದು ಕೂಡಲೇ ಆಂತರಿಕವಾಗಿ ಉಳಿಯುತ್ತದೆ.

ಹೀಗೆ, ಎಲ್ಲ ಸಮಾಂತರ ಕ್ರಮಗಳೂ ಆಂತರ್ಯದಲ್ಲಿಯೇ ನಡೆಯುತ್ತವೆ. ಮತ್ತೆ ಏನಾಗುತ್ತದೆ? ನಿಮ್ಮ ಮನಸ್ಸು, ನಿಮ್ಮ ಪ್ರಾಣ-ಇವಗಳೆಲ್ಲ ಆನಂದ ನೀಡುತ್ತವೆ. ಮತ್ತು ಆನಂದ ಶಕ್ತಿಯಲ್ಲಿ ಪರಿವರ್ತಿತವಾಗುತ್ತವೆ. ಆ ಆನಂದ ಶಕ್ತಿಯು ಇನ್ನಷ್ಟು ವಿಕಸಿತವಾದಾಗ, ಸತ್-ಚಿತ್-ಆನಂದವಾಗುತ್ತದೆ. ಕ್ರಿಯೆಯು ಕ್ರಿಯಾಶಕ್ತಿಯಾಗಿ, ಜ್ಞಾನವು ಜ್ಞಾನಶಕ್ತಿಯಾಗಿ, ಇಚ್ಛೆಯು ಇಚ್ಛಾಶಕ್ತಿಯಾಗಿ ಪರಿವರ್ತಿತವಾಗುತ್ತವೆ. ಹೀಗೆ, ಈ ಇಚ್ಛೆಯು ಹೆಚ್ಚು ಹೆಚ್ಚಾಗುತ್ತದೆ, ಅದು ಹೇತುರಹಿತವಾಗುತ್ತದೆ. ಅದು ಆನಂದವಾಗುತ್ತದೆ. ಮತ್ತು ಈ ಆನಂದವೇ ಒಂದೆಡೆಗೆ ಚೈತನ್ಯವಾಗಿರುತ್ತದೆ. ಇನ್ನೊಂದೆಡೆಗೆ ಪ್ರೇಮವಾಗುತ್ತದೆ. ಎರಡೂ ಅಲ್ಲಿ ಜೊತೆ ಜೊತೆಯಾಗಿ ಕ್ರಿಯಾನ್ವಿತವಾಗುತ್ತವೆ.

ನಿಮಗೆ ಈ ವಸ್ತು ಲಾಭವಾಯಿತೆಂದರೆ, ಮೊದಲು ನೀವು ಶ್ವಾಸ-ಉಚ್ಛ್ವಾಸದ ಅದ್ಭುತ ರೀತಿಯನ್ನು ನಿಮ್ಮೊಳಗೇ ಕಂಡುಕೊಳ್ಳುತ್ತೀರಿ. ಇದನ್ನೇ ತುತಿ (Tuti) ಎನ್ನುತ್ತಾರೆ. ನೀವು ಒಂದು ವಿಶೇಷ ಗತಿಯನ್ನು ಪಡೆಯುತ್ತೀರಿ. ನೀವು ಈ ಗತಿಯನ್ನು ಕುರಿತು ಜಾಗ್ರತರಾಗಿದ್ದರೆ, ಕೂಡಲೇ ನೀವು ಆಂತರ್ಯದಲ್ಲಿ ದೇಶ, ಕಾಲಗಳನ್ನು ಮರೆತುಬಿಡುತ್ತೀರಿ. ಇದನ್ನೇ 'ಪ್ರಥಮಮ್ ತುತಿ' ಎನ್ನುತ್ತಾರೆ. ಅರ್ಥಾತ್ ಪ್ರಜ್ಞೆಯ ಪ್ರಥಮ ಸೂಕ್ಷ್ಮ ಗತಿ. ಇದನ್ನು ಅಭಿನವ ಗುಪ್ತನು 'ತಂತ್ರ'ದಲ್ಲಿ ವಿವರಿಸಿದ್ದಾನೆ. 'ಯಾವಾಗ ನಾನು ಸರ್ವಾನುಸ್ಯೂತ ಪ್ರಜ್ಞೆಯಾಗುವೆನೋ, ಮತ್ತು ನಾನೇ ಸಕಲ ವಿಶ್ವವೆಂದು ಅರಿಯುವೆನೋ, ಆಗ ನಾನು ಒಂದಾಗುತ್ತೇನೆ "ನಾನು ಪೂರ್ಣವಾಗಿ ಈಶ್ವರನಾಗುತ್ತೇನೆ." ಎಂದು ಅವನು ಹೇಳಿದ್ದಾನೆ. ಏಕೆಂದರೆ, ಇಡೀ ವಿಶ್ವದೊಂದಿಗೆ ನಾನು ಏಕೀಭವಿಸುತ್ತೇನೆ. ಈಗ ನಾನು ಯಾವುದೋ ಚಿಕ್ಕ ಸ್ಥಾನದಲ್ಲಿ ಕಾರ್ಯ ಮಾಡುತ್ತಿರುವ ಆ 'ಅ'ನಲ್ಲ. ಸದಾ ತಾದಾತ್ಮ್ಯ ಶಿಹೊಂದಿದ ಏಕ ಪ್ರಜ್ಞೆಯೇ ಆಗುವೆ. ಆ ಕಾಲಕ್ಕೆ ವಿಶ್ವದೊಂದಿಗೆ ಸಂಪೂರ್ಣವಾಗಿ ಒಂದಾಗುತ್ತೇವೆ. ಆ ಕಾಲಕ್ಕೆ ನಮ್ಮೊಳಗೆ ಇಡೀ ಸೃಷ್ಟಿಯು ಆಗುತ್ತಿರುವುದನ್ನು ಕಾಣುತ್ತೇವೆ ಮತ್ತು ಸರ್ವ ಅಭಿವ್ಯಕ್ತಿಯೂ ನಮ್ಮೊಳಗೇ ಇದೆ. ನಾವೇ ಸ್ವಯಂ ಸೃಷ್ಟಿಸುತ್ತೇವೆ. ಮತ್ತು ಆ 'ತಾನು' ಅಹಂಕಾರವಲ್ಲ.

ಏಕೆಂದರೆ ನಮ್ಮ ನಿಮ್ಮ ಕ್ಷಮತೆಗಳಲ್ಲಿ ನಮಗೆ ದೇಶ ಕಾಲದ ಪ್ರಜ್ಞೆ ಇರುವುದಿಲ್ಲ. ಆಗ ನಾವು ಜಗತ್ತಿನ ಹಿತವನ್ನು ಭಾವಿಸಿದರೆ, ಅದು ಇಚ್ಛಾಶಕ್ತಿಯಷ್ಟೇ. ನಮ್ಮ ವ್ಯಷ್ಟಿಗತ ಇಲ್ಲವೆ ವ್ಯಕ್ತಿಗತ ವಸ್ತುಗಳನ್ನು ಹೊಂದದಿರುವುದನ್ನೇ ಪ್ರಥಮ ತುತಿ ಎನ್ನುತ್ತಾರೆ. ಮತ್ತು ಈ ಆನಂದ ಶಕ್ತಿಯು ಇಚ್ಛಾ ಶಕ್ತಿಯಾಗುತ್ತದೆ. ಇನ್ನು ಆ ಇಚ್ಛಾಶಕ್ತಿಯನ್ನೇ ಪ್ರಥಮ ಸ್ಪಂದವೆನ್ನುತ್ತಾರೆ. ಅನಂತ ಸ್ಪಂದನಗಳಿವೆ. ಪ್ರಥಮ ಸ್ಪಂದವೆಂದರೆ ದೇಶ ಮತ್ತು ಕಾಲ ಪ್ರಜ್ಞೆಗಳಿಲ್ಲದಾಗಿನ ಸ್ಪಂದನ. 'ನಾನು ಆ ಅಸ್ತಿತ್ವವಾಗಿದ್ದೇನೆ' ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ ಅದನ್ನೇ 'ಆದ್ಯ ಸ್ಪಂದ' ಎಂದು ಕರೆಯುತ್ತಾರೆ. ಅದೇ ಇಚ್ಛಾ ಶಕ್ತಿಯಾಗಿದೆ. ಅದು ನಮ್ಮ ಆಂತರ್ಯದ ಗತಿಯಾಗಿದೆ. ಈ ಗತಿಯು ನಮ್ಮೊಳಗೆ ಸದಾಕಾಲ ನಡೆದಿರುತ್ತದೆ. ನಾನು ಈ ಪೂರ್ವದಲ್ಲಿ ನಿಮಗೆ ಹೇಳಿರುವಂತೆ, ವಾಮ, ಜ್ಯೇಷ್ಠ ಮತ್ತು ರೌದ್ರಿಗಳ ತ್ರಿಕೋಣವಿದೆ. ಮತ್ತು ಕೇಂದ್ರದಲ್ಲಿ ಕೌಲಿಕೀ ಶಕ್ತಿ ಇದೆ. ಇದನ್ನು ಕೌಲಿಕೀ ಶಕ್ತಿಯೆಂದೇ ಕರೆಯುತ್ತಾರೆ. ಕೌಲಿಕೀ ಎಂದರೆ ವಿಶ್ವದ ಕೇಂದ್ರದಲ್ಲಿ ಕ್ರಿಯಾನ್ವಿತವಾದ ಶಕ್ತಿ. ಮತ್ತು ಈ ಕೌಲಿಕೀ ಶಕ್ತಿಯೇ ಉಚ್ಚತಮ ಕುಂಡಲಿನೀಯಾಗಿದೆ. ಅದು ಸೂಕ್ಷ್ಮ ಕುಂಡರಿನೀ ಆಗಿದೆ. ಅದು ಜಾಗ್ರತವಾದಾಗ, ನಾಭಿ ಚಕ್ರದಿಂದ ಊರ್ಧ್ವಕ್ಕೆ ಚಲಿಸುತ್ತದೆ. ಮತ್ತು ಮೇಲೆ ಹೋಗಿ ಸಹಸ್ರಾರವನ್ನು ತಲುಪುತ್ತದೆ. ಅದು ಚಲಿಸಿದಂತೆಲ್ಲ ನಮ್ಮ ಶರೀರವೂ ಚಲಿಸುತ್ತದೆ. ಕೇವಲ ಈ ಸ್ಥೂಲ ಶರೀರವಷ್ಟೇ ಅಲ್ಲ; ಇನ್ನೂ ಎರಡು ಬಿಂದುಗಳು ಒಳಗೆ ಚಲಿಸುತ್ತಿರುತ್ತವೆ. ಮೇಲಾಗಿ, ನಮ್ಮ ಪ್ರಜ್ಞೆಯೂ ಸಹ ಕಾರ್ಯಾನ್ವಿತವಾಗಿರುತ್ತದೆ.

ಆ ಎರಡು ಬಿಂದುಗಳಾವವು? ಒಂದಕ್ಕೆ ಶಿವ ಎನ್ನುತ್ತಾರೆ. ಇನ್ನೊಂದಕ್ಕೆ ಶಕ್ತಿ ಎನ್ನುತ್ತಾರೆ. ಅವೆರಡೂ ಒಂದೆಡೆ ಸೇರುತ್ತವೆ. ವಾಮಾಚಾರ ತಂತ್ರದಲ್ಲಿ ಈ ಮಿಲನವನ್ನು ಚರಮ ಮಖಿರ ಇಲ್ಲವೆ ಮೈಥುನವೆನ್ನುತ್ತಾರೆ. ಅದು ಸಾಂಕೇತಿಕವಾಗಿವೆ. ಜನರು ಅದನ್ನು ಲೈಂಗಿಕ ಕೂಟವೆನ್ನುತ್ತಾರೆ. ಅದು ಹಾಗಲ್ಲ. ಇವುಗಳೆರಡೂ ನಿಮ್ಮಲ್ಲಿಯ ಎರಡು ತುತ್ತ ತುದಿಯ ಬಿಂದುಗಳು. ಅವುಗಳ ಮಿಲನವಾದಾಗ ಅದಕ್ಕೆ ಚರಮ ಮಖಿರವೆನ್ನುತ್ತಾರೆ. ಅವು ಸಂಗತವಾಗಿವೆ. ಅವು ಕೂಡಲೇ ಮಿಲನವಾಗುತ್ತವೆ. ಅವುಗಳ ಕೂಟವಾದ ಕೂಡಲೇ ಪ್ರಕ್ರಿಯೆಯು ಊರ್ಧ್ವಮುಖಿಯಾದರೆ, ಆ ಕಾಲಕ್ಕೆ ಇಚ್ಛಾ, ಜ್ಞಾನ ಮತ್ತು ಕ್ರಿಯೆಗಳು ತ್ರಿಕೋಣವನ್ನು ನಿರ್ಮಿಸುತ್ತವೆ. ಮತ್ತು ಆ ತ್ರಿಕೋಣವು ನಮ್ಮೊಡನಿದೆ. ಆಗ ಜ್ಯೇಷ್ಠ, ಕೌದ್ರೀ ಮತ್ತು ವಾಮ ಎಂಬೀ ಶಕ್ತಿಗಳು

ಕ್ರಿಯಾಶೀಲವಾಗುತ್ತವೆ. ಮತ್ತು ಈ ಮೂರು ಶಕ್ತಿಗಳೂ ನಮ್ಮೊಳಗೇ ಇವೆ. ನಾನು ಅವುಗಳನ್ನು ವೀಕ್ಷಿಸಿದಾಗ, ಅದೂ ಒಂದು ಅನುಭೂತಿಯೇ ಆಗುತ್ತದೆ. ಮತ್ತು ನಾನು ಆಡ್ಡ ಒರಗಿ, ನನ್ನ ಬಾಹ್ಯ ಪ್ರಕ್ರಿಯೆಗಳೆಲ್ಲ ನಿಂತು ಹೋದವೆಂದು ಊಹಿಸಿದರೆ, "ಓಹೋ! ನನ್ನ ನಿತ್ಯ ಸಂಗಾತಿಯು, ದಿವ್ಯ ಮಾತೆಯು ನನ್ನೊಡನೆ ಇದ್ದಾಳೆ. ಅವಳು ಎಂದೆಂದಿಗೂ ನನ್ನೊಡನೇ ರೂಪಧಾರಿಯಾಗಿಯೇ ಇರುವಳು" ಎಂಬ ಸಂವೇದನೆ ನನಗಾಗುತ್ತದೆ. ಇನ್ನು, ಅವಳ ರೂಪವು ಎಷ್ಟೊಂದು ವಿಶೇಷವಾಗಿರುವುದೆಂದರೆ, ಅವಳು ಒಬ್ಬಳೇ ಇದ್ದಾಳೆ. ಆದರೂ ಅವಳಿಗೆ ಅನೇಕ ರೂಪಗಳಿರಬಹುದಷ್ಟೇ. ಅರ್ಥಾತ್ ಅನೇಕತೆಯಲ್ಲಿಯೇ ಏಕತೆ ಇದೆ. ನೀನು ಈ ಉಡುಪಿನಲ್ಲಿ ಬಂದಾಗ, ನೀನು ಅಲೆಥ್. ನೀನು ಬೇರೆ ಉಡುಪಿನಲ್ಲಿ ಬಂದಾಗಲೂ ನೀನು ಅಲೆಥ್‌ನೇ. ಈಗ ಅಂಟೊಯಿನ ಪೋಷಾಕು ಬದಲಿಸಿದ್ದಾನೆ. ಈಗವನು ಧೋತರ ಉಟ್ಟಿದ್ದಾನೆ. ಆದರೂ ಅವನು ಅಂಟೋಯಿನನೇ. ಅವನು ಚೀನೀಯ ಉಡುಪಿನಲ್ಲಿದ್ದರೂ ಅಂಟೋಯಿನನೇ ಇರುತ್ತಾನೆ. ಅವನು ಪರ್ಸಿಯನ್ ಉಡುಪಿನಲ್ಲಿರಲಿ; ಆಗಲೂ ಅವನು ಅಂಟೋಯಿನನೇ. ಉಡುಪು ಬೇರೆ ಬೇರೆ ಇರಬಹುದು, ಆದರೆ ಅವನ್ನು ಧರಿಸುವ ಅಂಟೋಯಿನ ಒಬ್ಬನೇ. ಅದೇ ರೀತಿ, ದಿವ್ಯ ಮಾತೆಯು ಫ್ರೆಂಚ್ ಮಹಿಳೆಯಾಗಿರಬಹುದು. ಅವನು ಪರ್ಸಿಯನ್ ಮಹಿಳೆಯಂತೆಯೂ ತೋರಬಹುದು. ಮತ್ತೆ ಹಿಬ್ರೂ ಮಹಿಳೆಯಂತೆಯೂ ಕಾಣಬಹುದು. ಆದರೆ, ನೀವು ಆಂತರಿಕ ಪ್ರಜ್ಞೆಯತ್ತ ವೀಕ್ಷಿಸಿದರೆ, ಅವಳೆನ್ನ ದಿವ್ಯ ಮಾತೆಯೆಂದು ನಿಮಗೆ ಸಂತೋಷವಾಗಲೇಬೇಕು. ಅಂದ ಮೇಲೆ, ಮಹತ್ತ್ವಪೂರ್ಣವಾದುದು ಪ್ರಜ್ಞೆಯೇ ಹೊರತು ರೂಪವಲ್ಲ. ಆದರೆ, ಬಾಹ್ಯಿಕ, ಶಾರೀರಿಕ ಮಟ್ಟದಲ್ಲಿ ನಾವು ರೂಪಕ್ಕೆ ತುಂಬಾ ಮಹತ್ತ್ವ ನೀಡುತ್ತೇವೆ. ಹೀಗೆ, ನಾವು ನಮ್ಮ ಕಲ್ಪನೆಯನ್ನು ಹೊಂದಿದ್ದೇವೆ. ಇದಕ್ಕೆ 'ಖಾನ' ಎನ್ನುತ್ತಾರೆ. ಅವಳಿಗೆ ನಾಲ್ಕು ಹಸ್ತಗಳಿರಬೇಕು. ಅವಳು ಹೀಗಿರಬೇಕು; ಹಾಗಿರಬೇಕು. ಅವಳು ಸಿಂಹದ ಮೇಲೆ ಆಸೀನಳಾಗಿರಬೇಕು. ಆದರೆ, ಆಂತರ್ಯದಲ್ಲಿ ಹೋದಂತೆ ಅವಳು ತೀರ ಸರಳ ಮಹಿಳೆಯಂತಿರಬಹುದು. ಅವಳು ಮುಗ್ಧ ಹಸುಳೆಯಾಗಿರಬಹುದು. ಕುಮಾರಿಯಾಗಿರಬಹುದು. ಒಂದು ವೇಳೆ, ನೀವು ನೋಡಬಲ್ಲಿರಾದರೆ, "ಓಹೋ! ಅವಳು ನನ್ನ ಮಾತೆ' ಎಂದು ಗುರುತಿಸುತ್ತೀರಿ. "ಓಹೋ! ಅವನು ನನ್ನ ಪುತ್ರ" ಎನ್ನುತ್ತಾಳವಳು. ನೀವು ಭಾವಿಸಬಲ್ಲಿರಾದರೆ, ಅವಳು ನಿಶ್ಚಯವಾಗಿಯೂ

ದಿವ್ಯ ಮಾತೆ, ಎಂದು ನಾನು ದೃಢವಾಗಿ ಹೇಳುವೆ. ಹೀಗೆ ನೀವು ಅರಿತು ಕೊಳ್ಳಿರಿ. ಬೋಧಿಯಲ್ಲಿ ನೆಲೆಸಿರಿ. ತರ್ಕ-ಯುಕ್ತಿಗಳ ವಿಶ್ಲೇಷಣೆಯ ಗೊಡವೆಗೆ ಹೋಗಬೇಡಿರಿ. ಹಾಗಾದರೆ, ನೀವು ಅನುಭೂತಿಯನ್ನು ಪಡೆಯ ಲಾರಿರಿ. ಇಲ್ಲವೆ ಆನಂದವನ್ನು ಪಡೆಯಲಾರಿರಿ. ಜೀವನಾನಂದವನ್ನು ಸವಿಯಲಾರಿರಿ. ಈ ಸಂಗತಿಗಳನ್ನು ಅರಿಯಲು ನಿಮ್ಮ ಬುದ್ಧಿಯನ್ನು ಉಪಕರಣವನ್ನಾಗಿ ಮಾಡಿಕೊಳ್ಳಿರಿ. ನೀವು ಉನ್ನತ ವಿಷಯಗಳನ್ನು ಅರಿತುಕೊಳ್ಳಲು ನಿಮ್ಮ ಬುದ್ಧಿಯ ಸಹಾಯವನ್ನು ಪಡೆಯಿರಿ. ನೀವಿದನ್ನು ಏಣಿಯಾಗಿ ಮಾಡಿಕೊಳ್ಳಿರಿ. ಏನನ್ನಾದರೂ ನೋಡುವ ತವಕದಿಂದ ಯಾವಾಗಲೂ ಏಣಿಯೇರಬೇಡಿರಿ. ಹಾಗಾದರೆ, ನಿಮಗೇನೂ ಕಾಣಬರದು. "ಊರ್ಧ್ವಕ್ಕೆ ಹೋಗು. ಇನ್ನೂ ಊರ್ಧ್ವಕ್ಕೆ, ಬುದ್ಧಿಯನ್ನು ಅತಿಶಯಿಸು. ಆಗ ನೀನು ದರ್ಶನಿಕ ದೃಷ್ಟಿಯನ್ನು ಪಡೆಯುವೆ. ಈ ವಿಷಯಗಳನ್ನರಿತು ಕೊಳ್ಳಲು ಬುದ್ಧಿಯ ಸಹಾಯ ಪಡೆ." "ಇದು ಸಾಧ್ಯವೇ?" ಎಂಬ ಹಿಂಜರಿತದ ಭಾವನೆಯನ್ನು ಅದುಮಿರಿ. ಬುದ್ಧಿಗೆ "ಅಲ್ಲಿಯೇ ಇರು ನಾನು ಸ್ವಲ್ಪ ಒಳಗೆ ಹೋಗಬಯಸುವೆ. ಬಳಿಕ ಬರುವೆ. ದಯವಿಟ್ಟು ಕ್ಷಮಿಸು" ಎಂದು ಹೇಳಿ, ಆಂತರ್ಯದಲ್ಲಿ ಪ್ರವೇಶಿಸಿರಿ. ನೀವು ಮರಳಿ ಬಂದಾಗ ನಿಮ್ಮ ತಥಾಕಥಿತ ಗೆಳೆಯನು ವೈರಿಯಾಗಿ ಬಿಟ್ಟಿರುತ್ತಾನೆ. ನಿಮಗಾವ ಸಂದೇಹವೂ ಉಳಿದಿರುವುದಿಲ್ಲ. ಅವನೂ ಕಣ್ಮರೆಯಾಗಿರುತ್ತಾನೆ. ಅವನೊಂದು ಭೂತವಷ್ಟೇ. ಅವನು ದುಷ್ಟ ಮಾತ್ರ.

ಹೀಗೆ, ಈ ಉನ್ನತ ಅವಸ್ಥೆಯೇ ಬೋಧಿಯಾಗಿದೆ. ನೀನು ಹೀಗೆ ವಿಚಾರ ಮಾಡಿದರೆ, ನಿನ್ನ ಮನವು ಗತಿಶೀಲವಾಗುತ್ತದೆ. ಆಧ್ಯಾತ್ಮಿಕವಾಗು ತ್ತದೆ. ನಿನ್ನ ತಿಳಿವಳಿಕೆಯ ರೀತಿಯು ಆಧ್ಯಾತ್ಮಿಕವಾಗುತ್ತದೆ. ನಿನ್ನ ವೈಯಕ್ತಿಕ ವಸ್ತುವೂ ಆಧ್ಯಾತ್ಮಿಕವಾಗುತ್ತದೆ. ನೀನು ಸಾಧಾರಣ ಮನುಷ್ಯ ನಿರಬಹುದು. ನೀನೊಬ್ಬ ಇಂಜಿನಿಯರನಿರಬಹುದು. ನೀನೋರ್ವ ಗೃಹಿಣಿ ಯಿರಬಹುದು. ಆದರೂ ನೀನು ಸಾಧಾರಣನೇನಲ್ಲ. ಏಕೆಂದರೆ, ನಿಮ್ಮ ಮನಸ್ಸು, ನಿಮ್ಮ ತಿಳಿವಳಿಕೆ, ನಿಮ್ಮ ಕಲ್ಪನೆ, ಇವುಗಳೆಲ್ಲವೂ ಸಾಧಾರಣ ಮಾನವನಿಗಿಂತ ಪೂರ್ಣ ವಿಭಿನ್ನವಾಗಿವೆ. ನೀವು ಸ್ವಾಮೀಜಿಗಳ ಉಡುಪು ಧರಿಸಿರಬಹುದು. ಆದರೆ, ನೀವು ಸ್ವಾಮೀಜಿಗಳಿಗಿಂತ ಎಷ್ಟೋ ಶ್ರೇಷ್ಠ ರಾಗಿರುವಿರಿ. ಒಂದು ವೇಳೆ, ಸ್ವಾಮಿಗಳಾದವರು ಈ ಆಂತರಿಕ ಸಂಪಾದನೆ ಯನ್ನು ಹೊಂದಿದ್ದರೆ, ಅವರು ಸ್ವಾಮೀಜಿಗಳ ಉಡುಪು ಧರಿಸಿದರೆ, ಅಡ್ಡಿ

ಇಲ್ಲ; ಆದರೆ, ಕೇವಲ ಉಡುಪು ಮಾತ್ರವಿದ್ದರೆ,..... ಏನು ಪ್ರಯೋಜನ? ಈಗ ಒಬ್ಬನು ರಾಜನ ಉಡುಪು ಧರಿಸುವನೆಂದು ತಿಳಿಯಿರಿ. ಒಂದು ವೇಳೆ, ಅವನಿಗೆ ಸಾಮ್ರಾಜ್ಯವೇ ಇಲ್ಲದಿದ್ದರೆ ಆ ಉಡುಪಿನಿಂದಾವ ಪ್ರಯೋಜನ ವಾದೀತು? ಅದೇ ರೀತಿ, ಒಂದು ವೇಳೆ, ರಾಜನ ಉಡುಪು ಧರಿಸಿದ ರಾಜನಿದ್ದರೆ, "ಓ! ಅವನು ರಾಜ-ಪೋಷಾಕನ್ನು ಧರಿಸುತ್ತಿಲ್ಲ. ಅವನು ರಾಜಂತೂ ಸರಿಯೇ. ಅವನು ತನಗಿಚ್ಛೆ ಬಂದಂತೆ ಏನನ್ನೇ ಧರಿಸಲಿ; ಪರವಾಯಿಲ್ಲ" ಎನ್ನುತ್ತಾರೆ, ಜನ.

ಅದೇ ರೀತಿ, ಆಂತರಿಕ ಸಂತೋಷವನ್ನು ಅರಿತುಕೊಳ್ಳಲು ಪ್ರಯತ್ನಿಸಿರಿ. ಅದು ಸೂಕ್ಷ್ಮ ಪೂಜೆಯಲ್ಲಿದೆ. ಅದು ಭಾವಾತ್ಮಕವಾಗಿದೆ. ಅದು ನೀವು ಅರ್ಪಿಸಿದ ಶುದ್ಧ ಭಾವವಾಗಿದೆ. ಅವೆಲ್ಲವೂ ಆಂತರ್ಯದಲ್ಲಿ ಕಾರ್ಯೋನ್ಮುಖ ವಾಗಿವೆ. ಇದನ್ನೇ ಭಾವ ಪೂಜೆ ಎನ್ನುತ್ತಾರೆ. ಹೀಗೆ ಅವುಗಳನ್ನು ಮಾನ ಸಿಕ ಪೂಜೆ ಮತ್ತು ಭಾವ ಪೂಜೆ ಎಂದು ಕರೆಯುತ್ತಾರೆ. ಅವೆರಡೂ ಇವೆ. ಮಾನಸಿಕ ಪೂಜೆಯೆಂದರೆ, ಮಾನಸಿಕ ಮಟ್ಟದ ಪೂಜೆ. ಇನ್ನು ಭಾವ ಪೂಜೆ ಯೆಂದರೆ, ಮಾನಸಿಕ ಪೂಜೆಗಿಂತಲೂ ಉನ್ನತವಾದುದು. ಅದು ಆಂತರ್ಯ ದಲ್ಲಿಯೇ ಘಟಿಸುತ್ತದೆ. ಅದನ್ನು ಸ್ವಪ್ನ ದರ್ಶನಗಳಲ್ಲಿ ಗುರುತಿಸಬಹುದು. ಸ್ವಪ್ನ ದರ್ಶನಗಳು ನಮ್ಮ ತಿಳಿವಳಿಕೆಯ ಪ್ರತಿಫಲನದಂತಿವೆ. ಅವುಗಳು ನಮಗೆ ಆಂತರಿಕವಾಗಿ ಸಹಾಯ ನೀಡುತ್ತವೆ.

ಹೀಗೆ, ಆಂತರಿಕವಾಗಿ ಅರಿತುಕೊಳ್ಳುತ್ತ ಹೋಗಿರಿ ಮತ್ತು ನಿಮ್ಮಲ್ಲಿ ಆತ್ಮ ವಿಶ್ವಾಸವನ್ನೂ ಇರಿಸಿಕೊಳ್ಳಿರಿ. ಮತ್ತು ಈ ಉನ್ನತ ತಥ್ಯಗಳು ನಿಮ್ಮೊಳಗೆ ಕ್ರಿಯಾನ್ವಿತವಾಗಬೇಕು. ನೀವು ಈ ಸಂಗತಿಗಳನ್ನು ಸರಿಯಾಗಿ ಶ್ರವಣ ಮಾಡದ ಹೊರತು, ಅವು ನಿಮ್ಮ ಮೆಚ್ಚುಗೆ ಪಡೆಯಲಾರವು. ಇವು ನಿಮಗೆ ಮೆಚ್ಚುಗೆಯಾದುದರ ಅರ್ಥವೇ ನೀವು ಸುದೈವಿಗಳು; ನಿಮ್ಮೊಳಗೆ ಏನೋ ತೆರೆಯುತ್ತಿದೆ; ಎಂದು. ಹೀಗಿಲ್ಲದೆ ಹೋದರೆ, ಇಂಥ ಸಂಗತಿಗಳು ಯಾರಿಗೂ ಸೇರಿಕೆಯಾಗವು. ಒಳ್ಳೆಯ ಸಂಗತಿಗಳು ನಿಮಗೆ ಮೆಚ್ಚುಗೆ ಯಾಗುತ್ತಿವೆ; ಎನ್ನುವುದರ ಅರ್ಥವೆಂದರೆ, ನಿಮ್ಮಲ್ಲಿ ಸತ್ತ್ವಗುಣವು ಜಾಗ್ರತ ವಾಗಿದೆ. ನಿಮ್ಮ ಸತ್ತ್ವ ಗುಣವು ಕ್ರಿಯಾಶೀಲವಾಗಿದೆ. ಆದ್ದರಿಂದ, ಇವು ನಿಮಗೆ ಸೇರಿಕೆಯಾಗುತ್ತವೆ. ಹೀಗೆ, ನೀವು ಉಜ್ಜ್ವಲ ಜೀವಿಗಳು! ದಿವ್ಯ ಮಾತೆಯ ಕೃಪೆಯಿಂದ ನೀವು ಇಲ್ಲಿರುವಿರಿ. ನೀವಾದರೋ ಅಲ್ಲಿಯ ವಿದೇಶ ದವರು. ನಾನಾದರೋ ಇಲ್ಲಿಯವನು, ನಮಗಾವ ಪ್ರಾಪಂಚಿಕ ಸಂಬಂಧ

ವಿಲ್ಲ. ಪ್ರಾಪಂಚಿಕ ಸಂಬಂಧದ ದೃಷ್ಟಿಯಿಂದ ನಾನು ನೀವು ದೂರ, ಸುದೂರ. ಆದರೆ, ಆಧ್ಯಾತ್ಮಿಕ ಸಂಬಂಧದಲ್ಲಿ ನಮ್ಮ ಪ್ರಯಾಣವೇನೂ ಹೊಸತಲ್ಲ. ನಾವು ಅನೇಕಾನೇಕ ಜನ್ಮಗಳಿಂದ ಜೊತೆಗೂಡಿ ಸಾಗಿದ್ದೇವೆ. ನೀವು ಮೊದಲು ನಮ್ಮನ್ನು ಭೆಟ್ಟಿಯಾಗಿದ್ದೀರಿ. ಮರಳಿ, ಈಗ ನಾವು ಜೊತೆ ಪ್ರಯಾಣ ಪ್ರಾರಂಭಿಸಿದ್ದೇವೆ. ನೀವು ನಿಮ್ಮ ಪೂರ್ವ ಜನ್ಮದಲ್ಲಿ ಮಾಡಿದುದನ್ನೇ ಮತ್ತೆ ಮಾಡುತ್ತಿದ್ದೀರಿ. ನಾವು ಪುನಃ ಮಾಡಬೇಕು. ಏಕೆಂದರೆ, ನಮ್ಮ ಆಂತರಿಕ ಪಯಣವು ಜೊತೆಯಾಗಿ ಪ್ರಾರಂಭವಾಗಿದೆ, ಎಂಬುದನ್ನು ನೆನಪಿಡಿರಿ. ನಾವು ಜೊತೆಯಾಗಿ ಸಾಗಿದ್ದೇವೆ. ನಮ್ಮ ಆಂತರಿಕ ಯಾತ್ರೆಯೇ ಹಾಗಿದೆ. ಇಲ್ಲವಾದರೆ, ಈ ವಸ್ತುಗಳಿಗಾಗಿ ಪ್ರತಿಯೊಂದು ಆತ್ಮಕ್ಕೆ ಆಕರ್ಷಣೆ ಇರುತ್ತಿರಲಿಲ್ಲ. ಏಕೆಂದರೆ, ನಾವು ಲೌಕಿಕ ಮೂಲ್ಯಗಳಿಗಾಗಿ ಕಾರ್ಯ ಮಾಡುತ್ತಿರುವುದಿಲ್ಲ. ನಾವು ಅಂಥ ವಿಷಯಕ್ಕಾಗಿ ಜೊತೆಗೂಡಿಲ್ಲ. ಹಾಗಾದರೆ, ನಾವು ಯಾವುದಕ್ಕಾಗಿ ಜೊತೆಗೂಡಿದ್ದೇವೆ? ನಮ್ಮೊಡನೆ ಸದಾ ಇರುವ ದಿವ್ಯ ಮಾತೆಯ ಆನಂದವನ್ನು ಅರಿಯುವುದಕ್ಕಾಗಿ, ನಾವು ಪ್ರತಿಯೊಬ್ಬರೂ ನಮ್ಮ ಗತಿಶೀಲ ಭಾವನೆಗಳಲ್ಲಿ ಮುಳುಗಿದ್ದೇವೆ. ಈ ಸಂಗತಿಗಳನ್ನು ಅರಿತುಕೊಳ್ಳುವ ನೀವು ತುಂಬಾ ಭಾಗ್ಯಶಾಲಿಗಳು! ಇದುವೇ ನಿಜವಾದ ಜೀವನ. ಇದುವೇ ನಿಜವಾದ ಅರಿವು. ಇದುವೇ ನಿಜವಾದ ಆನಂದವು. ಮತ್ತು ಈ ಆನಂದವು ನಮ್ಮೊಂದಿಗಿದೆ.

ಈ ಆನಂದ ಶಕ್ತಿಯು ಕೇಂದ್ರದಲ್ಲಿದೆ; ಎಂದು ನಾನೀಗಾಗಲೇ ಹೇಳಿರುವೆ. ಮತ್ತು ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳೂ ಸಹ ಅಲ್ಲಿವೆ. ಮತ್ತು ಶುದ್ಧ ಭಾವನೆಗಳು ಆನಂದ ಶಕ್ತಿಯೊಂದಿಗೆ ಸಂಬಂಧಿಸಿವೆ. ನಮ್ಮ ಶುದ್ಧ ಪ್ರಾಣವೂ ಸಹ, ಆನಂದದೊಂದಿಗೆ ಸಂಬಂಧಿಸಿದೆ. ನಮಗೆ ಸ್ವಲ್ಪ ಸುಳಿವು ಸಿಕ್ಕೊಡನೆ, ನಾವು ಕೂಡಲೇ ಆಂತರ್ಯದಲ್ಲಿ ಆನಂದ ಶಕ್ತಿಯಲ್ಲಿ ಪ್ರವೇಶಿಸಬೇಕು. ಇನ್ನು, ಯಾವಾಗ ನೀವು ಈ ಆನಂದ ಶಕ್ತಿಯನ್ನು ಆಂತರ್ಯದಲ್ಲಿ, ವಿಷಯರಹಿತರಾಗಿ ಇರಿಸಿಕೊಳ್ಳಬಲ್ಲಿರೋ, ಆ ಕ್ಷಣವೇ ಅದು ಚೈತನ್ಯ ಶಕ್ತಿ ಎನಿಸುತ್ತದೆ. ನೀವಿದನ್ನು ಯಾವಾಗಲೂ ಭಾವಿಸಿಕೊಳ್ಳುತ್ತಿದ್ದರೆ, ಅದು ಸತ್ ಎನಿಸುತ್ತದೆ. ಸತ್ ಚಿತ್, ಆನಂದಗಳೆಲ್ಲ ಕೂಡಿಯೇ ಇರುತ್ತವೆ. ಇದನ್ನೇ ನಾವು ಶಿವಾನಂದ ಎನ್ನುತ್ತೇವೆ. ಅದನ್ನೇ ನಾವು ಬ್ರಹ್ಮಾನಂದ ಎನ್ನುತ್ತೇವೆ. ಅದನ್ನೇ ನಾವು ವಿಜ್ಞಾನಾನಂದ ಎನ್ನಲಿ, ಲೀಲಾನಂದ ಎನ್ನಲಿ, ಯಾವದೇ ಆನಂದವೆನ್ನಲಿ, ಇವೆರಡೂ ಅಲ್ಲಿವೆ. ಓರ್ವ ಯೋಗಿಯೂ

ಹೇಳುತ್ತಾನೆ: "ನಾನು ಯಾರಿಗೆ ಮಣಿದು ಶಿರಬಾಗುವೆನೋ... ಆಗ ಆತ್ಮದಲ್ಲಿ ಆನಂದವೆಲ್ಲಿದೆ?" ಆನಂದವು ನನ್ನಲ್ಲಿ ಸದಾ ಸ್ಪಂದನದ ರೂಪದಲ್ಲಿ ಕ್ರಿಯಾಶೀಲವಾಗಿದೆ. ಇದಕ್ಕೂ ಮುಂದೆ– ನಾನೇನು ಹೇಳಲಿ– ಯಾವನು ಶಿವನೋ, ಅವನು ಅವಿಚ್ಛೇದ್ಯ ಪ್ರಜ್ಞೆಯಾಗಿದ್ದಾನೆ. ನಾವು ಸೂಕ್ಷ್ಮ ಶಕ್ತಿಯೆಂದು ಕರೆಯುವ ಅಂತರ್ಮುಖೀ ಶಕ್ತಿಯು ಎರಡು ವಿಭಾಗಗಳನ್ನು ಹೊಂದಿದೆ. ಒಂದು ವಿಭಾಗದ ಹೆಸರು ಶಿವ. ಇನ್ನೊಂದರ ಹೆಸರು ಶಕ್ತಿ. ಕೇಂದ್ರವು ಶಿವ. ಇನ್ನು ಪರಿಧಿಯು, ಅಭಿವ್ಯಕ್ತಗೊಳ್ಳುವುದು ಯಾವುದೋ ಅದು, ಶಕ್ತಿ ಎನಿಸುತ್ತವೆ. ಒಂದು ಸ್ಥಿತಿಶೀಲವಾಗಿದೆ; ಎರಡನೆಯದು ಗತಿಶೀಲವಾಗಿದೆ. ಒಂದಕ್ಕೆ ಪ್ರಕಾಶವೆನ್ನುತ್ತಾನೆ; ಇನ್ನೊಂದಕ್ಕೆ ವಿಮರ್ಶವೆನ್ನುತ್ತಾರೆ. ಇವೆರಡೂ ಆಂತರ್ಯದಲ್ಲಿ ಜೊತೆಯಾಗಿಯೇ ಚಲಿಸುತ್ತಿವೆ. ಮತ್ತು ಇವುಗಳು ಸದಾ ಚಲಿಸುತ್ತವೆ. ಮತ್ತು ನೀವು ಇವುಗಳನ್ನು ಅರಿಯಬೇಕು. ನಿಮ್ಮ ಬುದ್ಧಿಯನ್ನು ಬೋಧಿಯನ್ನು ಅರಿಯಲಿಕ್ಕಾಗಿ, ನಿಮ್ಮ ಮನವನ್ನು ಆಧ್ಯಾತ್ಮಿಕ ಸಂಗತಿಗಳನ್ನು ಅರಿಯಲಿಕ್ಕಾಗಿ, ನಿಮ್ಮ ಎಲ್ಲ ಇಂದ್ರಿಯಗಳನ್ನು ಉನ್ನತ ವಸ್ತುಗಳನ್ನು ಅರಿಯಲಿಕ್ಕಾಗಿ ಬಳಸುವುದಕ್ಕೇ ಆಂತರಿಕ ಪೂಜೆ ಎನ್ನುತ್ತಾರೆ. ಯಾವಾಗ ನೀವು ಆ ವಸ್ತುಗಳನ್ನು ಸೂಕ್ಷ್ಮ ಹಾದಿಯಲ್ಲಿ, ಯಾವಾಗಲೂ, ದಿನದ ಇಪ್ಪತ್ತುನಾಲ್ಕು ಘಂಟೆಗಳವರೆಗೂ, ಬಳಸತೊಡಗುವಿರೋ, ಆಗ ಚಿಂತನ–ಚಕ್ರವು ಮಹತ್ತ್ವದ ವಸ್ತುಗಳಿಗಾಗಿ ಧಾವಿಸುತ್ತಿದೆ. ಇದನ್ನೇ ನಿತ್ಯ ಆಂತರಿಕ ಭಕ್ತಿ ಎನ್ನುತ್ತಾರೆ.

ಯಾವಾಗ ನಿತ್ಯ, ಆಂತರಿಕ ಭಕ್ತಿಯು ಇರುವುದೋ, ಆಗ ವಿಸ್ಮೃತಿಯ ಪ್ರಶ್ನೆಯೇ ಇಲ್ಲ. ಆಗ ಕಾಲವು ನಿಮ್ಮನ್ನೆಂದೂ ಕದಡಲಾರದು. ದೇಶವೂ ಕಲಕಲಾರದು. ಬಾಂಬುಗಳಿರಬಹುದು. ನೀವು ಕುಳಿತಿದ್ದರೆ, ಅವು ನಿಮ್ಮನ್ನು ಕದಲಿಸಲಾರವು. ಒಂದು ವೇಳೆ, ಜನಮಂದಿಯು, ಕೂಗಾಡಿದರೆ, ಚೀರಾಡಿದರೆ, ನೀವೆಂದೂ ಕದಲಲಾರಿರಿ. ಏಕೆಂದರೆ, ನೀವು ಯಾವಾಗಲೂ ಆಂತರ್ಯದಲ್ಲಿ ಸಂಪರ್ಕ ಹೊಂದಿದ್ದೀರಿ. ನೀವು ನಿಮ್ಮ ಆಂತರ್ಯದೊಂದಿಗೆ ಒಂದಾಗಿದ್ದೀರಿ. ಮೊದ–ಮೊದಲು ತೊಂದರೆಯ ಪ್ರಶ್ನೆ ಇರುತ್ತದೆ. ನಾನು ಅಂಟೋಯಿನನನ್ನು ನೋಡುವಲ್ಲಿ ನನ್ನನ್ನಾರೂ ಕದಡಲಾರರು. ನಾನು ಇಲ್ಲಿರುವೆ. ನನ್ನ ದೃಷ್ಟಿ ಅಲ್ಲಿ ಇದೆ. ಯಾರೂ ಕದಡಲಾರರು. ನನ್ನ ಮನವೂ ಸಹ ಕದಡಲಾರದು. ಏಕೆಂದರೆ, ಅವನು ಯಾವಾಗಲೂ ಉಪಸ್ಥಿತನಿದ್ದಾನೆ. ಅವನು ನನ್ನೆದುರು ಉಪಸ್ಥಿತನಿದ್ದಾನೆ. ಅದೇ ರೀತಿ, ನಿಮ್ಮ ಆಂತರಿಕ ರೂಪ, ನಿಮ್ಮ ಆಂತರಿಕ ಪ್ರಜ್ಞೆಯು ಯಾವಾಗ ಶಾಶ್ವತ ಆಸನವನ್ನು ಪಡೆಯುವುದೋ,

ಯಾವಾಗ ಸಾಧಕನು ಪ್ರತಿಷ್ಠಾಪಿತನಾಗುವನೋ, ಆಗ ಕಾಲ ಮತ್ತು ದೇಶಗಳು ಅವನನ್ನು ಕದಡಲಾರವು. ಅದು ಯಾವಾಗಲೂ ನಿಮ್ಮೊಂದಿಗೇ ಇರುತ್ತದೆ. ಮತ್ತು ನಿಮ್ಮ ಅನುಭೂತಿಯೂ ನಿಮ್ಮೊಂದಿಗೇ ಇರುತ್ತದೆ. ನೀವು ನಿಮ್ಮ ಅಸ್ತಿತ್ವವನ್ನು ಎಂದೂ ಅಲ್ಲಗಳೆಯಲಾರಿರಿ. ಅದೇ ರೀತಿ, ದಿವ್ಯ ಮಾತೆಯ ಗತಿಶೀಲ ಸಾನ್ನಿಧ್ಯವೂ ಸಹ, ನಿಮ್ಮೊಂದಿಗಿದೆ. ಮತ್ತು ಅದು ಎಂದೆಂದಿಗೂ ನಿಮ್ಮೊಂದಿಗೆ ಪ್ರವಹಿಸುತ್ತದೆ. ನೀವು ವಿಮಾನದಲ್ಲಿ ಇರಬಹುದು; ನೀವು ಇಂಜಿನಿಯರಿಂಗ ಕಾರ್ಯ ಮಾಡುತ್ತಿರಬಹುದು; ಬೇರಾವುದಾದರೂ ಬೌದ್ಧಿಕ ಕ್ರಿಯೆಯಲ್ಲಿ ತೊಡಗಿರಬಹುದು; ನೀವು ನಿಮ್ಮ ಮಿತ್ರರೊಂದಿಗೆ ಕೂಡಿಕೊಂಡಿರಬಹುದು. ಆಗ ಸಹ, ಆ ಮಾತೆಯ ಸಾನ್ನಿಧ್ಯವು ನಿಮ್ಮೊಂದಿಗಿರುತ್ತದೆ. ಅದು ನಿಮ್ಮನ್ನು ಪ್ರೇರೇಪಿಸುತ್ತಿರುತ್ತದೆ. ಅದು ಯಾವಾಗಲೂ ಅಂತ ಜ್ಯೋತಿಯಂತೆ, ಸುಪ್ರಬುದ್ಧವಾಗಿ ಇರುತ್ತದೆ. ಮತ್ತು ಆ ವಸ್ತುಗಳು ನಿಮ್ಮೊಳಗೇ ಇರುವುದರಿಂದ, ನಿಮಗೆ ತುಂಬಾ ಸಂತೋಷವಾಗುತ್ತದೆ. ಇಂಥ ವಸ್ತು ಲಾಭವು ಆಗಿಯೇ ತೀರುತ್ತದೆ.

ಅ

ದಿವ್ಯ ಮಾತೆಯ ಪೂಜೆ ಅಥವಾ ಶಕ್ತಿ-ಪೂಜೆ

ಭಾರತೀಯ ಸಂಪ್ರದಾಯದಲ್ಲಿ ಶಕ್ತಿ ಎಂಬ ಶಬ್ದವಿದೆ. ಯಾವುದೇ ಮತಧರ್ಮವಿರಲಿ; ಯಾವುದೇ ಆಧ್ಯಾತ್ಮಿಕ ಇಲ್ಲವೆ ದಾರ್ಶನಿಕ ಅಭ್ಯಾಸವಿರಲಿ, ಭಾರತದಲ್ಲಿ ಈ ಶಬ್ದವು ತುಂಬಾ ಜನಪ್ರಿಯವಿದೆ. ಉದಾಹರಣಾರ್ಥ; ನ್ಯಾಯ–ವೈಶೇಷಿಕ ದರ್ಶನದ ಪದ್ಧತಿಯನ್ನೇ ತೆಗೆದುಕೊಳ್ಳಿರಿ. ಅವರು ಸಹ, ಶಕ್ತಿಯನ್ನು ಒಪ್ಪಿಕೊಳ್ಳುತ್ತಾರೆ. ಶಕ್ತಿ ಎಂದರೇನು? ಶಬ್ದಗಳಲ್ಲಿ ಒಂದು ಶಕ್ತಿ ಇದೆ; ಎಂದವರು ಹೇಳುತ್ತಾರೆ. ನಾವು ಶಬ್ದವನ್ನು ಬಳಸಿದಾಗ, ನಾವು ಬರೀ ಅರ್ಥ ಮಾಡಿಕೊಳ್ಳುತ್ತೇವೆ. ಶಬ್ದಗಳು ಅರ್ಥ ನೀಡುತ್ತವೆ. ಪಠಣವೂ ಒಂದು ರೀತಿಯ ಶಕ್ತಿಯೇ. ಇದು ತಿಳಿಸುವಂತೆ ಮೂಡುತ್ತದೆ. ನಾವು ಶಬ್ದಗಳನ್ನೇ ಬಳಸದಿದ್ದರೆ, ಜ್ಞಾನವನ್ನು ಅರಿಯುವುದೆಂತು?

ಅವರು ಹೇಳುವುದು ಹೀಗೆ: ನಾನೊಂದು ವಿಶೇಷ ಶಬ್ದವನ್ನು ಉಪಯೋಗಿಸುತ್ತೇನೆ. ಯಾವುದೇ ಭಾಷೆಯಲ್ಲಾಗಲಿ, ಆ ಶಬ್ದವು ಒಂದು ಅರ್ಥವನ್ನು ಸೂಚಿಸುತ್ತಿದೆ. ನಾವು ಶಬ್ದಕ್ಕೆ ನೀಡುವ ಅರ್ಥವು ಯೋಗ–ರೂಢವಾಗಿರುತ್ತದೆ. ಅದೊಂದು ಪ್ರಕಾರದ ವಿಶೇಷ ಸಾಂಪ್ರದಾಯಿಕ ಅರ್ಥವನ್ನು ನೀಡುತ್ತದೆ. ರೂಢಿ ಇಲ್ಲವೆ ಸಂಪ್ರದಾಯದ ಶಬ್ದಗಳ ಮೂಲಕ ವಿಶೇಷ ಪ್ರಕಾರದ ಜ್ಞಾನವನ್ನು ನೀಡುತ್ತದೆ. ಉದಾಹರಣೆಗೆ ನೋಡಿರಿ: ನಾನು ಇದನ್ನು 'ಚೀಲ' ಎನ್ನುತ್ತೇನೆ. ಕೂಡಲೇ ನಾನು ಏನೆಂದು ಕರೆದನೋ, ಅದನ್ನು ಅರಿತುಕೊಳ್ಳಬಲ್ಲೆನು. ಒಂದು ವೇಳೆ, ನಾನು 'ಗಿಡ' ಎಂಬ ಶಬ್ದವನ್ನು ಉಚ್ಚರಿಸಿದರೆ, ಕೂಡಲೇ ಆ ಶಬ್ದವು ನನಗೆ ಗಿಡ ಎಂದರೆ ಹೀಗೆ-ಹೀಗೆ ಇರುವ ವಸ್ತು ಎಂಬ ಅರ್ಥ ನೀಡುತ್ತದೆ. ಇದು ಎಲ್ಲ ಭಾವಗಳಿಗೂ ಅನ್ವಯಿಸುತ್ತದೆ. ಹೀಗೆ, ಶಬ್ದ ಮತ್ತು ಅದರ ವರ್ಥದಲ್ಲಿ ಒಳ್ಳೇ ಸಮನ್ವಯಾ

ತ್ಮಕ ಗ್ರಹಿಕೆ ಇಲ್ಲವೆ ಸಂಬಂಧವಿದೆ. ನಿಜ ಹೇಳುವುದೆಂದರೆ: ಮಾನವನು ಸುದೈವಿ. ಆವನು ಸಾಂಕೇತಿಕ ಸಂಪ್ರದಾಯವಾದ ಭಾಷೆಯನ್ನು ಬಳಸುತ್ತಿದ್ದಾನೆ. ಅದು ಫ್ರೆಂಚ್, ಆಂಗ್ಲ ಇಲ್ಲವೆ ಗ್ರೀಕ ಹೀಗೆ ಯಾವುದೊಂದಿರಬಹುದು. ಮಾನವನು ಶಬ್ದಗಳನ್ನು ಬಳಸುತ್ತಿದ್ದಾನೆ ಮತ್ತು ಅವುಗಳನ್ನು ಅರ್ಥೈಸುತ್ತಿದ್ದಾನೆ ಮತ್ತು ಅರಿತುಕೊಳ್ಳುತ್ತಿದ್ದಾನೆ. ಅಂದಮೇಲೆ, ಅವನು ಎಷ್ಟೊಂದು ಸುದೈವಿ! ಮಾನವನು ಭಾಷೆಯ ಮೂಲಕ ಸಾಂಪ್ರದಾಯಿಕನಾಗಿದ್ದಾನೆ. ಇಂಥ ಭಾಷೆಯು ನಮ್ಮ ಭಾವನೆಗಳೊಂದಿಗೆ, ವಿಚಾರಗಳೊಂದಿಗೆ ವೈಜ್ಞಾನಿಕವಾಗಿ ಸಂಬಂಧಿಸಿದೆ. ಉದಾಹರಣೆಗೆ ಪ್ರಾಣಿಗಳನ್ನೇ ತೆಗೆದುಕೊಳ್ಳಿರಿ. ಅವುಗಳೂ ಸಹ, ನಿಸ್ಸಂದೇಹವಾಗಿ, ಸಾಂಪ್ರದಾಯಿಕವಾಗಿವೆ. ಆದರೆ ಅವುಗಳ ರೂಢಿ-ಸಂಪ್ರದಾಯಗಳು, ತಮ್ಮ ಭಾವ ಮತ್ತು ವಿಚಾರಗಳನ್ನು ಸರಿಯಾಗಿ ವ್ಯಕ್ತಪಡಿಸುವಷ್ಟು ಯಥಾರ್ಥವಾಗಲಿ, ವೈಜ್ಞಾನಿಕವಾಗಲಿ ಇಲ್ಲ. ಏಕೆಂದರೆ ಅವಿನ್ನೂ ವಿಕಾಸಗೊಂಡಿಲ್ಲ. ಆದ್ದರಿಂದ, ಮಾನವನು ಭಾಷೆಯ ಮೂಲಕ ಪಡೆದ ಸಾಂಪ್ರದಾಯಿಕ ಶಕ್ತಿಯು ವೈಶೇಷಿಕರು ಹೇಳುವಂತೆ ಶಕ್ತಿಯೇ ಆಗಿದೆ. ನೀವು ನಿಮ್ಮ ಭಾಷೆಯಲ್ಲಿ ಏನು ಮಾಡುತ್ತೀರಿ? ನೀವು ಶಬ್ದಗಳನ್ನು ಬಳಸುವಿರಷ್ಟೇ. ಆ ಶಬ್ದಗಳು ಯಾವುದರಿಂದ ಸಂಯುಕ್ತವಾಗಿವೆ? ಅಕ್ಷಮಾಲೆಯ ಅಕ್ಷರಗಳಿಂದ ತಾನೇ? ಅ, ಆ, ಇ, ಈ..... ಏನೇ ಇರಲಿ; ಅಲ್ಲಿ ವಿಶೇಷ ವಿಶೇಷ ಧ್ವನ್ಯಾತ್ಮಕ ಘಟಕಗಳಿವೆ. ಇವುಗಳನ್ನು ನಾವು ಅಕ್ಷರಗಳೆನ್ನುತ್ತೇವೆ. ನೀವು ಈ ಅಕ್ಷರಗಳನ್ನು ಜೋಡಿಸಿದರೆ, ಶಬ್ದವಾಗುತ್ತದೆ. ಈ ಶಬ್ದಗಳನ್ನು ಜೋಡಿಸಿದರೆ ವಾಕ್ಯವಾಗುತ್ತದೆ. ನೀವು ಅನೇಕ ವಾಕ್ಯ–ಗುಂಪುಗಳನ್ನು ಸೇರಿಸಿದರೆ, ಅದು ನಿಮ್ಮ ಎಲ್ಲ ಭಾವಾತ್ಮಕ ಚಿಂತನೆ, ಮನಸ್ತಾತ್ತ್ವಿಕ ಚಿಂತನೆ ಮತ್ತು ಸಂಪರ್ಕ ವಿಧಾನಗಳನ್ನು ಒಳಗೊಳ್ಳುತ್ತದೆ. ಮತ್ತು ಆದರಿಂದ ಇಡೀ ವಿಶ್ವದೊಂದಿಗೆ ಸಂಪರ್ಕವೇರ್ಪಡುತ್ತದೆ. ನಾವು ಇಂಥ ಭಾಷೆಯನ್ನು ಬಳಸುತ್ತೇವೆ. ನಾವು ಭಾವಗಳನ್ನು ಸಂವೇದಿಸುತ್ತೇವೆ. ನಾವು ವಿಚಾರಗಳನ್ನು ಹುಟ್ಟು ಹಾಕುತ್ತೇವೆ ಮತ್ತು ಪುಸ್ತಕ ಬರೆಯುತ್ತೇವೆ. ಹೀಗೆ ಅನೇಕ ಗ್ರಂಥಗಳನ್ನು ಬರೆಯಲಾಗಿದೆ. ನಾವು ಓದಿಯೇ ಓದುತ್ತೇವೆ. ನಾವು ಸಂಪರ್ಕ ಹೊಂದುತ್ತೇವೆ. ನಾವು ಉಪಯೋಗಿಸುವ ಒಂದು ಶಕ್ತಿ ಪ್ರಕಾರವಿದು. ಅಲ್ಲವೇನು ಮತ್ತೆ?

ಅಂತೂ ಶಕ್ತಿ ಎಂದರೇನು? ಯಾವುದೊಂದು ವಿಶೇಷ ಅಂಶವನ್ನು ಪ್ರೇರೇಪಿಸಿ, ಅದನ್ನು ಕ್ರಿಯಾನ್ವಿತಗೊಳಿಸುವುದೇ ಶಕ್ತಿಯಾಗಿದೆ. ಶಕ್ತಿ

ಎಂದರೆ, ಪ್ರೇರೇಪಿಸಲು ಇಲ್ಲವೆ ಅಭಿವ್ಯಕ್ತಗೊಳಿಸಲು ಇಲ್ಲವೆ ಪ್ರಕಟಗೊಳಿಸಲು ಇಲ್ಲವೆ ಪರಿಣಾಮ–ರೂಪ ತಾಳಲು ಯಾವುದು ಕಾರಣವಾಗುವುದೋ, ಅದುವೇ ಶಕ್ತಿ. ನಾವು ಇನ್ನಷ್ಟು ನಿರ್ದಿಷ್ಟವಾಗಿ ಹೇಳಬಯಸುತ್ತೇವೆ.

ಶಕ್ತಿ ಎಂದರೇನು? ಕ್ರಿಯಾನ್ವಿತವಾದ ಬಲ. ಅದು ಸ್ಥಿತಿಶೀಲವಲ್ಲ. ಅದು ಕ್ರಿಯಾಶೀಲವಾಗಿದೆ. ಉದಾಹರಣೆಗೆ, ಒಂದು ಬೀಜವನ್ನೇ ನೋಡಿರಿ: ಬೀಜದಲ್ಲಿ ವೃಕ್ಷವಾಗುವ ಸಂಭಾವ್ಯತೆಯಿದೆ. ಅದಕ್ಕೆ ಹಿತಕರ ಪರಿಸರವಿದ್ದರೆ, ಅದು ಗಿಡವಾಗುತ್ತದೆ. ಅದನ್ನು ಒಂದು ವಿಶೇಷ ಕಾಲದಲ್ಲಿ ಊರಿದರೆ, ಅದು ಮೊಳಕೆಯೊಡೆಯುತ್ತದೆ. ಆ ಬಳಿಕ, ಎಲೆ ಬಿಡುತ್ತದೆ. ಅನಂತರ ಹೂವು ಮತ್ತೆ ಹಣ್ಣು ಆಗುತ್ತವೆ. ಹೀಗೆ, ಯಾವುದು ಕೇವಲ ಬೀಜವಾಗಿದ್ದಿತೋ, ಅದು ವೃಕ್ಷವಾಗುತ್ತದೆ. ಅರ್ಥಾತ್, ಬೀಜವು ಸಾರ ರೂಪ. ಇಲ್ಲವೆ ವಿಶೇಷ ಪರಿಸರ ಒದಗಿದರೆ, ಗಿಡವಾಗಿ ಬೆಳೆಯಬಲ್ಲ, ಕೇಂದ್ರೀಕೃತ ಶಕ್ತಿಯೇ ಆಗಿದೆ, ಬೀಜ. ಅರ್ಥಾತ್ ಶಕ್ತಿಯಲ್ಲಿ ಎರಡು ವಿಧಗಳುಂಟು. ಒಂದು ಗುಪ್ತ ಶಕ್ತಿ; ಇನ್ನೊಂದು ವ್ಯಕ್ತ ಶಕ್ತಿ. ಶಕ್ತಿಯನ್ನು ಇನ್ನೊಂದು ಬಗೆಯಾಗಿ ಎರಡು ಪ್ರಕಾರವಾಗಿ ವರ್ಗೀಕರಿಸಬಹುದು. ಒಂದು ನಿಸರ್ಗಕ್ಕೆ ಅಧೀನವಾದ ಪ್ರಕೃತಿ ಶಕ್ತಿ. ಇನ್ನೊಂದು ಆತ್ಮ ಶಕ್ತಿ. ಪ್ರಕೃತಿ ಶಕ್ತಿ ಎಂದರೆ ಸ್ವಭಾವದೊಂದಿಗೆ ಪ್ರವಹಿಸುವ ಶಕ್ತಿ.ನಾವು ನಿಸರ್ಗ ಎಂದು ಕರೆಯುವುದೇ ಇದು. ಅಂದರೆ ನಾವು ನಿಯಂತ್ರಿಸಲಾರದುದನ್ನೂ ಸಹ ಮಾಡುವ ಬಲವೇ ಅದು. ಉದಾಹರಣೆಗೆ– ಮಳೆ. ನಾವದನ್ನು ನಿಯಂತ್ರಿಸಲಾರೆವು. ಮೋಡಗಳಾಗುತ್ತವೆ; ಮಳೆ ಸುರಿಯುತ್ತದೆ. ವಾತಾವರಣವು ಬಹು ಬಗೆಯಾಗಿದೆ ಮತ್ತು ಬಹು ವಿಧದಿಂದ ಪ್ರಭಾವವನ್ನು ಬೀರುತ್ತಿದೆ. ಇದನ್ನೇ ಪ್ರಕೃತಿ ಶಕ್ತಿ ಎನ್ನುತ್ತಾರೆ. ಇನ್ನು ಪ್ರಕೃತಿ ಶಕ್ತಿಯೂ ಎರಡು ವಿಧವಿದೆ. ಒಂದು ವ್ಯಷ್ಟಿ ಪ್ರಕೃತಿ ಇನ್ನೊಂದು ಸಮಷ್ಟಿ ಪ್ರಕೃತಿ. ವ್ಯಷ್ಟಿ ಪ್ರಕೃತಿ ಎಂದರೆ ವೈಯಕ್ತಿಕ ಶಕ್ತಿ. ನೀವು ಹೊಂದಿರುವ ನಿಮ್ಮ ಸ್ವಭಾವದಂತೆ. ನಾವು ವಿಭಿನ್ನ ಸ್ವಭಾವಗಳನ್ನು ಹೊಂದಿದ್ದೇವೆ. ಮತ್ತು ನಾವು ಸಮಷ್ಟಿ ಸ್ವಭಾವದಿಂದಲೂ ಸಂಪರ್ಕ ಹೊಂದಿದ್ದೇವೆ. ಒಬ್ಬನು ಮಾನವನಾಗಿ, ಭಾವಗಳನ್ನು ಹೊಂದಿದ್ದಾನೆ; ಮನವನ್ನು ಹೊಂದಿದ್ದಾನೆ. ಹೀಗೆ ಪ್ರತಿಯೊಬ್ಬನೂ ಹೊಂದಿದ್ದಾನೆ. ಆದರೆ, ಅಲ್ಲಿ ಒಂದು ಏಕತೆಯೂ ಇದೆ. ಮತ್ತು ಇದನ್ನೇ ಸಮಷ್ಟಿ ಎನ್ನುತ್ತೇವೆ. ಹೀಗೆ, ವಿಶೇಷ ಶಕ್ತಿ ಇಲ್ಲವೆ ಪ್ರಕೃತಿಯೂ ಇದೆ. ಸಮಷ್ಟಿ ಪ್ರಕೃತಿ ಶಕ್ತಿಯೂ ಇದೆ.

ಪ್ರಕೃತಿಯು ಶಕ್ತಿಯಾಗಿದೆ. ಯಾವ ಶಕ್ತಿ? ಅದು ಶುದ್ಧ ಶಕ್ತಿಯಲ್ಲ.

ಏಕೆಂದರೆ, ಅದು ಆತ್ಮನ ಅಂಕಿತದಲ್ಲಿಲ್ಲ. ಅದು ತನ್ನಷ್ಟಕ್ಕೆ ತಾನೇ ಕಾರ್ಯ ಮಾಡುತ್ತದೆ. ಎಲ್ಲವೂ ಅದರ ಗರ್ಭದಿಂದಲೇ ಹುಟ್ಟುತ್ತದೆ.

ತಾತ್ಪರ್ಯವೇನೆಂದರೆ– ಶಕ್ತಿಯಲ್ಲಿ ಕೆಲವು ಕ್ರಮಗಳಿವೆ. ಆಗ ಅದನ್ನೂ ಕೆಲವೊಮ್ಮೆ ಪ್ರಕೃತಿ ಎಂದೂ, ಕೆಲವೊಮ್ಮೆ ಮಾಯೆ ಶಕ್ತಿಯೆಂದೂ, ಕೆಲವೊಮ್ಮೆ ಶುದ್ಧ ಶಕ್ತಿಯೆಂದೂ, ಕೆಲವೊಮ್ಮೆ ನೈಸರ್ಗಿಕ ಶಕ್ತಿಯೆಂದೂ, ಮಾಂತ್ರಿಕ ಶಕ್ತಿಯೆಂದೂ, ಶುದ್ಧ ಗತಿಶೀಲ ಶಕ್ತಿ ಇಲ್ಲವೆ ಎನೆರ್ಜಿ ಎಂದೂ ಕರೆಯುತ್ತಾರೆ. ಅವು ವ್ಯಷ್ಟಿ ಪ್ರಜ್ಞೆಯಲ್ಲಿಯೂ ಕಾರ್ಯ ಮಾಡುತ್ತವೆ. ಸಮಷ್ಟಿ ಪ್ರಜ್ಞೆಯಲ್ಲಿಯೂ ಕಾರ್ಯ ಮಾಡುತ್ತವೆ. ಆದರೆ ಚೈತನ್ಯದ ಆಧಿಪತ್ಯವೇನೂ ಇರದು. ಆಗ, ಅದಕ್ಕೆ ಪ್ರಕೃತಿ ಎಂದೇ ಕರೆಯುತ್ತಾರೆ. ಯಾವಾಗ ಚೈತನ್ಯದ ಆಧಿಪತ್ಯವಿರುವುದೋ, ಆಗ ಅದಕ್ಕೆ ಪ್ರಕೃತಿ ಎಂದು ಕರೆಯುವುದಿಲ್ಲ. ಆದರೆ ಚೈತನ್ಯಶಕ್ತಿ ಎಂದು ಹೆಸರಿಸುತ್ತೇವೆ. ಅಥವಾ ಒಂದನ್ನು ಜಡ ಶಕ್ತಿ ಎಂದೂ ಇನ್ನೊಂದನ್ನು ಚೈತನ್ಯ ಶಕ್ತಿಯೆಂದೂ ಕರೆಯಬಹುದು. ಜಡ ಶಕ್ತಿಯು ವ್ಯಷ್ಟಿಗತವಿರಬಹುದು; ಸಮಷ್ಟಿಗತವಿರಬಹುದು. ಅದೇ ರೀತಿ; ಚೈತನ್ಯ ಶಕ್ತಿಯೂ ಸಹ ವ್ಯಷ್ಟಿಗತವಿರಬಹುದು ಇಲ್ಲವೆ ಸಮಷ್ಟಿಗತವಿರಬಹುದು. ಹೀಗೆ ಇದೇ ರೀತಿ, ಇಡೀ ವಿಶ್ವದಲ್ಲಿ, ನೀವು ಏನನ್ನೇ ತೆಗೆದುಕೊಳ್ಳಿರಿ, ಅಲ್ಲಿ ಎರಡು ಶ್ರೇಣಿಗಳಿವೆ. ಒಂದು ವ್ಯಷ್ಟಿ. ಇನ್ನೊಂದು ಸಮಷ್ಟಿ. ಏನೇ ಆಗಲಿ; ಎಲ್ಲೆಡೆ ಏಕವಸ್ತುವೇ ಇದೆ. ನೀವು ವ್ಯಷ್ಟಿ ಪ್ರಕೃತಿಯನ್ನು ನೋಡುತ್ತಿದ್ದರೆ, ಅಲ್ಲಿ ಸಮಷ್ಟಿಯೂ ಇದೆ. ವ್ಯಷ್ಟಿ ಎಂದರೆ ವೈಯಕ್ತಿಕ; ಸಮಷ್ಟಿ ಎಂದರೆ ಸಾಮೂಹಿಕ.

ಈಗ ನಾನು ಜಡ ಶಕ್ತಿ ಮತ್ತು ಚೈತನ್ಯ ಶಕ್ತಿಗಳ ನಡುವೆ ಇರುವ ಭೇದವನ್ನು ಕುರಿತು ಸ್ಪಷ್ಟೀಕರಿಸುವೆ. ಚಿತ್ ಶಕ್ತಿಯು ಇಚ್ಛೆ, ಜ್ಞಾನ, ಕ್ರಿಯೆಗಳ ಮೂಲಕ,ಆಧಿಪತ್ಯ ನಡೆಸುವುದೆಂದು ನಾನು ಹೇಳಿದ್ದೇನೆ. ಇವುಗಳನ್ನೇ ಇಚ್ಛಾ ಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾ ಶಕ್ತಿಗಳೆನ್ನುತ್ತಾರೆ. ಇದುವೇ ಚಿತ್ ಶಕ್ತಿ.

ಶುದ್ಧ ಪ್ರಜ್ಞೆಯು ನಿರಪೇಕ್ಷ ಸತ್ತೆಯಾಗಿದೆ. ಇದಾವ ಜಡ ಶಕ್ತಿಯ ನಿಯಂತ್ರಣದಲ್ಲಿಯೂ ಇಲ್ಲ. ಮತ್ತು ಜಡ ಶಕ್ತಿಯು ಗುಣಗತವಾಗಿದೆ. ಗುಣವು ಪ್ರಧಾನವಾದರೆ, ಅದು ಪ್ರಭಾವ ಬೀರುತ್ತದೆ. ಗುಣಗಳು ಮೂರು. ಸತ್ತ್ವ ರಜಃ ಮತ್ತು ತಮಃ. ಈ ಎರಡು ಪ್ರಕಾರದ ಶಕ್ತಿಗಳಲ್ಲಿ ತುಂಬಾ ಮಹತ್ವದ ಭೇದವಿದೆ. ಒಂದು ಜಡ ಶಕ್ತಿ. ಇದು ಗುಣಗಳ ಮೂಲಕ ಕ್ರಿಯಾನ್ವಿತವಾಗುತ್ತದೆ. ಮತ್ತು ಈ ಗುಣಗಳು ಕರ್ಮ ಮತ್ತು ಸಂಸ್ಕಾರಗಳಿಗೆ ಸಂಬಂಧಿಸಿವೆ. ಇನ್ನೊಂದು ಚಿತ್ ಶಕ್ತಿ. ಅಂದರೆ ಇಚ್ಛೆ, ಜ್ಞಾನ ಮತ್ತು ಕ್ರಿಯಾ ಶಕ್ತಿಗಳು. ಇವು ಸಂಪೂರ್ಣ ಸ್ವತಂತ್ರವಿವೆ. ಇವು ಕರ್ಮ ಮತ್ತು ಸಂಸ್ಕಾರಗಳಿಗೆ ಸಂಬಂಧಿಸುವ ಪ್ರಶ್ನೆಯೇ ಇಲ್ಲ. ಆದರೆ ಇವು ಏನನ್ನು ಅವಲಂಬಿಸಿವೆ? ಗತಿಶೀಲ ಆನಂದವನ್ನು ಮಾತ್ರ; ಆದರೆ ಕರ್ಮ ಮತ್ತು ಸಂಸ್ಕಾರಗಳನ್ನಲ್ಲ.

ನಾವು ಈ ವಿಶ್ವವನ್ನು ನೋಡುತ್ತೇವೆ. ಏಕೆಂದರೆ, ಇದು ಜಡ ಶಕ್ತಿಯಲ್ಲದೆ ಬೇರೇನಲ್ಲ. ಇದನ್ನು ನಾವು ಜಡ ವಸ್ತು ಎನ್ನುತ್ತೇವೆ. ಇದು ಜಡವಲ್ಲದೆ ಬೇರೇನಲ್ಲ; ಎಂದು ನಾನು ದೃಢಪಡಿಸುತ್ತೇನೆ. ಏಕೆಂದರೆ, ಇದರಲ್ಲಿ ಪ್ರಜ್ಞೆ ಇಲ್ಲ. ಮಾನವನು ಮಾತ್ರ ಜಾಗ್ರತನಾಗಿದ್ದಾನೆ. ಇಡೀ ವಿಶ್ವವು ಏನೂ ಅಲ್ಲ, ಎಂದು ನಾವು ಹೇಳುತ್ತೇವೆ. ವಾಸ್ತವವಾಗಿ, ವಿಜ್ಞಾನವೂ ಸಹ, ಜಗತ್ತು ಪರಮಾಣುಗಳ ಸಾಮೂಹಿಕ ವಿಕತೆಯ ಹೊರತು ಬೇರೇನೂ ಅಲ್ಲ ವೆಂದು ಸಾರುತ್ತದೆ. ಅಥವಾ ನಾವು ವಿಶ್ವದ ಇಲೆಕ್ಟ್ರಾನ, ಪ್ರೋಟೋನ, ಮತ್ತು ನ್ಯೂಟ್ರೋನ ಅಲ್ಲದೆ ಬೇರೇನೂ ಅಲ್ಲ; ಎಂದು ಹೇಳಬಹುದು. ಅದು ಅಣವಿಕವಾಗಿದೆ. ಅದು ಇಲೆಕ್ಟ್ರಾನ, ಪ್ರೋಟೋನ ಮತ್ತು ನ್ಯೂಟ್ರೋನಗಳಿಂದ ನಿರ್ಮಿತವಾಗಿದೆ. ಹೀಗೆ, ಅದರಲ್ಲಿ ಚೈತನ್ಯವಿರುವ ಪ್ರಶ್ನೆಯೇ ಉದ್ಭವಿಸದು. ಆಧುನಿಕ ವಿಜ್ಞಾನವೂ ಸಹ ಇದನ್ನೇ ಹೇಳುತ್ತದೆ. ಆದರೆ, ಅಲ್ಲಿ ಕ್ರಿಯೆ ಮತ್ತು ಚಲನೆಗಳಿವೆಯೆಂದು ವಿಜ್ಞಾನಿಗಳು ಹೇಳುತ್ತಾರೆ. ಇಲೆಕ್ಟ್ರಾನ, ಪ್ರೋಟೋನ, ನ್ಯೂಟ್ರೋನಗಳಲ್ಲಿ ಗತಿಯಂತೂ ನಡೆದೇ ಇದೆ. ಇದನ್ನೇ ನಾವು ಅಣವಿಕ ಪ್ರಜ್ಞೆ, ಅಣವಿಕ ವಸ್ತು ಎನ್ನುತ್ತೇವೆ. ಆದರೆ, ಅದು ತನ್ನನ್ನು ಕುರಿತು ಪ್ರಜ್ಞಾವಂತವಾಗಿಲ್ಲ. ತಾನು ಯಾವುದರಿಂದ ಆಗಿದ್ದೇನೆ? ಎಂಬುದನ್ನು ಅದು ಅರಿಯದು. ಆದರೆ, ನಮ್ಮ ಜಡ ಪ್ರಜ್ಞೆಯೊಂದಿಗೆ ಇಂಥ ಪ್ರಜ್ಞೆಯೊಂದು ಸೇರಿಕೊಂಡಿದೆ. ಹೀಗೆ ಮಾನವನು ತನ್ನ ಪ್ರಜ್ಞೆ ಕುರಿತು ಜಾಗ್ರತನಾಗಿದ್ದಾನೆ. ಹೀಗೆ, ಎರಡು ಚರಮ ಬಿಂದುಗಳಿವೆ. ಒಂದು ಚರಮ ಜಡ; ಮತ್ತು ಇನ್ನೊಂದು ಚರಮ 'ಚೈತನ್ಯ'. ಇವೆರಡೂ ವಿಶ್ವದ ಕೇಂದ್ರದಲ್ಲಿ ಕ್ರಿಯಾಶೀಲವಾಗಿವೆ. ಮತ್ತು ಇವೆರಡೂ ಶಕ್ತಿಗಳಾಗಿವೆ. ಒಂದು ಪ್ರಕೃತಿ ಮತ್ತು ಇನ್ನೊಂದು ಚೈತನ್ಯ ಶಕ್ತಿ. ಇವೆರಡೂ ಕ್ರಿಯಾಶೀಲವಾಗಿವೆ. ಮತ್ತು ಇಡೀ ವಿಶ್ವವು ಚಲಿಸುತ್ತದೆ.

ಮಾನವನು ಎಷ್ಟೊಂದು ಸುದೈವಿಯಾಗಿರುವನೆಂದರೆ, ಅವನು ಇವುಗಳೆರಡನ್ನೂ ತನ್ನಲ್ಲಿಯೇ ವೈಯಕ್ತಿಕವಾಗಿ ಪಡೆದಿದ್ದಾನೆ. ಅವನು ತನ್ನನ್ನು

ಕುರಿತು ಚಿಂತಿಸಿದರೆ, ಅದು ಜಡವೇ ಆಗಿದೆ. ಅವನು ಸೂಕ್ಷ್ಮದತ್ತ ನಡೆದರೆ, ಅದು ಚೈತನ್ಯವಾಗಿದೆ. ಮತ್ತು ಚೈತನ್ಯದ ಮೇಲೆ ಜಡದ ಅಧ್ಯಾಸವಾಗಿದೆ. ಶಂಕರಾಚಾರ್ಯರು ಜಡ ಪ್ರಜ್ಞೆಗೆ ಮಾಯೆ ಎನ್ನುತ್ತಾರೆ. ಮಾನವನು ಈ ಅಧ್ಯಾಸದಿಂದ ಕೂಡಿದ್ದಾನೆ; ಎಂದು ಅವರು ಹೇಳುತ್ತಾರೆ. ಮಾನವನಿಗೆ ತನ್ನ ಚೈತನ್ಯದ ಅರಿವಿಲ್ಲ. ವಾಸ್ತವವಾಗಿ ಚೈತನ್ಯವು ಅವನಲ್ಲಿ ಕ್ರಿಯಾಶೀಲವಾಗಿದೆ. ಆದರೆ, ಅವನು ತಿಳಿಯುವುದೇನು? ಜಡವೇ ಕ್ರಿಯಾಶೀಲವಾಗಿದೆ; ಎಂದು. ಹೀಗೆ, ಅವನು ಹೇಳುತ್ತಾನೆ "ಓಹೋ! ನನ್ನ ಕಣ್ಣು ನೋಡುತ್ತಿವೆ. ನನ್ನ ಕಿವಿ ಕೇಳುತ್ತಿವೆ..." ಎಂದು. ಇನ್ನೊಬ್ಬನು, "ಅಯ್ಯೋ! ನಾನು ಕುರುಡ; ಕಾಣಲಾರೆ; ನಾನು ಕಿವುಡ; ಕೇಳಲಾರೆ" ಎಂದು ತಿಳಿಯುತ್ತಾನೆ. ವಾಸ್ತವವಾಗಿ, ನಮ್ಮ ಕಣ್ಣುಗಳೇನೊ ನೋಡುವುದಿಲ್ಲ. ಚೈತನ್ಯವೇ ನೋಡುತ್ತಿದೆ. ಆದರೆ, 'ನಾನು ಕುರುಡ' ಎಂಬುದು ಕೇವಲ ಅಧ್ಯಾಸವಷ್ಟೇ. ಚೈತನ್ಯವಂತೂ ಕುರುಡಲ್ಲವಲ್ಲ?

ಹೀಗೆ, ಇಂಥ ಜಡ ಮತ್ತು ಚೈತನ್ಯಗಳನ್ನು ಜೊತೆಗೂಡಿಸುವ ಶಕ್ತಿಯೊಂದು ಇದೆಯಲ್ಲದೆ, ಅದುವೇ ಅಧ್ಯಾಸವನ್ನು (Super-imposition) ಉಂಟು ಮಾಡುತ್ತದೆ. ಅದಕ್ಕೆ ಮಾಯಾ ಶಕ್ತಿ ಎನ್ನುತ್ತಾರೆ. ಮಾಯಾ ಶಕ್ತಿಯು ಒಂದರ ಮೇಲೆ ಇನ್ನೊಂದನ್ನು ಇರಿಸುತ್ತದೆ. ಅಧ್ಯಾಸವನ್ನು ಉಂಟುಮಾಡುತ್ತದೆ. ಅಂದ ಮೇಲೆ, ಈಗ ನಾವೇನು ಮಾಡಬೇಕು? ವಾಸ್ತವವಾಗಿ ನಾವು ಕ್ರಿಯಾಶೀಲರಾಗಿದ್ದೇವೆ. ಅಲ್ಲಿ ನಮ್ಮ ಶಕ್ತಿಯೂ ಇದೆ. ಆದರೆ, ಜಡವು ಕ್ರಿಯಾಹೀನವಾಗಿದೆ. ಹೀಗೆ, ಅದು, "ನಾನು ಯಾರೆಂದು ನನಗೆ ಗೊತ್ತಿಲ್ಲ. ನಾನು ಸತ್–ಚಿತ್–ಆನಂದಕ್ಕಿಂತ ತೀರ ಬೇರೆ ಇದ್ದೇನೆ. ಸತ್–ಚಿತ್–ಆನಂದವೆಂದರೇನು? ಎಂಬುದನ್ನು ನಾನರಿಯೆ" ಎನ್ನುತ್ತದೆ. ಜಡಕ್ಕಂಟಿದ ಪ್ರಜ್ಞೆ–ದೇಹಾತ್ಮಬುದ್ಧಿ. ಆದ್ದರಿಂದ, ಶಂಕರಾಚಾರ್ಯರು ಹೇಳುತ್ತಾರೆ: ಜನ್ಮ ಜನ್ಮಾಂತರದಿಂದ ಎರಡೂ ಸೇರಿಕೊಂಡು ಬಂದಿವೆ. ಹೀಗೆ ಅಧ್ಯಾಸವಾಗಿದೆ. ಅವರಿನ್ನೂ ಹೇಳುವುದೇನೆಂದರೆ: "ಜಡಶಕ್ತಿಯೊಂದಿದೆ. ಅದು ಪುರುಷನನ್ನು ತನ್ನ ಕೈವಶಪಡಿಸಿಕೊಳ್ಳುತ್ತದೆ. ಮತ್ತು ಅವನನ್ನು ಕ್ರಿಯಾಶೀಲನನ್ನಾಗಿ ಮಾಡುತ್ತದೆ. ಈಗ ನಾವು ವಿವೇಕದ ಮೂಲಕ, ಈ ಜಡವು ಪುರುಷನಿಂದ ಪೂರ್ಣವಾಗಿ ವಿಭಿನ್ನ; ಎಂದು ವಿಂಗಡಿಸಿ ತಿಳಿಯಬೇಕು" ಎಂದು. ಅರ್ಥಾತ್, ಅವರು ಜಡದ ಶಕ್ತಿಯನ್ನು ಪ್ರಕೃತಿ ರೂಪದಲ್ಲಿ ಒಪ್ಪುತ್ತಾರೆ. ಅದು ಪುರುಷನನ್ನು ತನ್ನ ಕೈವಶ ಮಾಡಿಕೊಂಡು, ಅವನನ್ನು

ಕುಣಿಸುವಷ್ಟರ ಮಟ್ಟಿಗೆ ಶಕ್ತಿಸಂಪನ್ನವಾಗಿದೆ; ಎಂದಂತಾಯಿತು. ಶಂಕರರೇ ಇರಲಿ, ಸಾಂಖ್ಯರೇ ಇರಲಿ, ಯಾರಾಗಲೊಲ್ಲರೇಕೆ, ಎಲ್ಲರೂ ಆತ್ಮನಲ್ಲಿ ಮಾತ್ರ, ಸುಖವಾಗಲಿ, ಅಥವಾ ದುಃಖವಾಗಲಿ ಇಲ್ಲದಿರುವಾಗಲೂ ಸಹ, ಸುಖ–ದುಃಖಿಗಳನ್ನು ಉಂಟು ಮಾಡುವ ಜಡಶಕ್ತಿಯೊಂದಿದೆ; ಎಂದು ಹೇಳುತ್ತಾರೆ.

ಇದೊಂದು ಅದ್ಭುತ ವಸ್ತುವೇ ಸರಿ. ಅದು ನಡೆದೇ ಇದೆಯೆಂಬುದಂತೂ ಸತ್ಯವೇ. ಆದರೆ ನಾವು ಇದನ್ನೆಲ್ಲ ಅರಿತುಕೊಳ್ಳಬೇಕು. ಇವುಗಳೆಲ್ಲ ಆಂತರ್ಯದಲ್ಲಿಯೇ ಉಂಟು. ಇವು ಹೀಗೆಯೇ ಸಾಗಿವೆ. ಈಗ, ಒಂದು ಪ್ರಶ್ನೆಯು ಏಳುತ್ತದೆ. ಇರುವ ವಿಷಯವು ಹೀಗಿದ್ದ ಮೇಲೆ, ಶಕ್ತಿಯನ್ನೇಕೆ ಪೂಜಿಸಬೇಕು? ಅವಳು ಜಡವಿದ್ದರೆ, ನಮ್ಮನ್ನು ಜಡದೊಂದಿಗೆ ಕೂಡಿಸುತ್ತಾಳೆ, ನಮ್ಮ ಮೇಲೆ ಪ್ರಾಧಾನ್ಯ ತೋರುತ್ತಾಳೆ. ಸುಖ–ದುಃಖಗಳತ್ತ ಕರೆದೊಯ್ಯುತ್ತಾಳೆ. ಅಂದ ಮೇಲೆ, ನಾವು ಶಕ್ತಿಯನ್ನೇಕೆ ಪೂಜಿಸಬೇಕು? ಎಂಬ ಪ್ರಶ್ನೆಯು ನಮ್ಮೆದುರು ಬರುತ್ತದೆ.

ಒಂದು ವೇಳೆ, ಅತ್ಯಂತ ಮಹತ್ತ್ವದ ಜಡ ಶಕ್ತಿಯಾದ ಮಾಯಾ ಶಕ್ತಿ ಇಲ್ಲವೆ ಪ್ರಕೃತಿ ಶಕ್ತಿಯು (ಅದು ಜಡವಿದೆ. ಅದಕ್ಕೊಂದು ಚಕ್ರವಿದೆ. ಅದು ಹೀಗೆ ತಿರುಗುತ್ತದೆ. ನಾವೆಲ್ಲರೂ ಅದಕ್ಕಧೀನರಾಗಿ ಕಾರ್ಯ ಮಾಡುತ್ತೇವೆ.) ನಮ್ಮನ್ನು ಪ್ರಪಂಚದಲ್ಲಿ ಸೆಳೆಯುವಂತಿದ್ದರೆ, ನಮ್ಮನ್ನು ಅತ್ತ ನೂಕುವಂತಿದ್ದರೆ, ನಾವೇಕೆ ಶಕ್ತಿಯನ್ನು ಪೂಜಿಸಬೇಕು? ಈ ಸಮಸ್ಯೆಯಂತೂ ನಮ್ಮೆದುರಿಗಿದೆ.

ಆದರೆ, ನಾನು ಹೇಳುವೆ: ಶಕ್ತಿಗಳಲ್ಲಿ ಎರಡು ಪ್ರಕಾರಗಳಿವೆಯೆಂಬುದನ್ನು ತಿಳಿಯಲು ಪ್ರಯತ್ನಿಸಿರಿ. ತಾತ್ತ್ವಿಕವಾಗಿ, ಜಡಶಕ್ತಿ ಅಥವಾ ಪ್ರಕೃತಿಯು ಪುರುಷನನ್ನು ತನ್ನ ಕೈವಶಮಾಡಿಕೊಳ್ಳುವುದೆಂಬುದೇನೋ ಸರಿ. ಅದು ಕೈವಶ ಮಾಡಿಕೊಳ್ಳುವುದಿಲ್ಲವೆಂದೇನೂ ನಾನು ಹೇಳುವುದಿಲ್ಲ. ಆದರೆ, ಪ್ರತಿಯಾಗಿ, ನೀವು ಚೈತನ್ಯ ಶಕ್ತಿಯೆಂದು ಕರೆಯುವ, ಗತಿಶೀಲ ಪ್ರಜ್ಞೆಯನ್ನು ಅರಿತುಕೊಳ್ಳಬೇಕು. ಇದು ಪ್ರೇಮಮಯಿಯಾಗಿದೆ; ಕರುಣಾಮಯಿಯಾಗಿದೆ; ಆನಂದಮಯಿಯಾಗಿದೆ. ಇದು ಸತ್–ಚಿತ್ ಆನಂದವಾಗಿದೆ. ಇದು ಭಾವದಾಚೆಯ ಪೂರ್ಣವಾಗಿದೆ. ಇದು ಗತಿಶೀಲ ಶಕ್ತಿಯ ಊರ್ಧ್ವದಲ್ಲಿರುವ ಪೂರ್ಣವಾಗಿದೆ. ಇದು ನಮ್ಮ ಬುದ್ಧಿಯಲ್ಲಿದೆ; ನಮ್ಮ ಮನದಲ್ಲಿದೆ; ನಮ್ಮ ಇಂದ್ರಿಯಗಳಲ್ಲಿದೆ. ಇದು ಎಲ್ಲೆಡೆಗೆ ಕ್ರಿಯಾಶೀಲವಾಗಿದೆ. ಮೇಲಾಗಿ ನಾವು ಮಾತೃಕ ಶಕ್ತಿಯೆಂದು ಕರೆಯುವ, ಸಂಪರ್ಕ ಶಕ್ತಿಯನ್ನೂ ಹೊಂದಿದೆ.

ಇನ್ನು ಈ ಮಾತೃಕೆಗಳು ಸಹ, ಅಕ್ಷ ಮಾಲೆಯ ಅ, ಆ, ಇ, ಈ, ಉ, ಊ ಗಳಂತಿವೆ. ಸಂಸ್ಕೃತದ ದೇವನಾಗರಿ ಲಿಪಿಯಲ್ಲಿ ಅ, ಆ, ಇ, ಈ ಎಂಬ ಅಕ್ಷರ ಮಾಲೆಯ ಅಕ್ಷರಗಳನ್ನು ನಾವು ಮಾತೃಕೆಗಳೆಂದು ಕರೆಯುತ್ತೇವೆ. ಮಾತೃಕೆ ಗಳಿಂದ ಸಂಕೇತಿಸಲ್ಪಟ್ಟ ಅಂಗ ಶಕ್ತಿಗಳ ವಿಶೇಷ ಏಕತೆಯೊಂದಿದೆ. ಆ ನಲವ ತ್ತೊಂಬತ್ತು ಇಲ್ಲವೆ ಐವತ್ತು ಮಾತೃಕೆಗಳು, ಶಕ್ತಿ ಘಟಕದ (unit of power) ಅವಶ್ಯಕ ಅಂಗಗಳ ಸಂಕೇತಗಳಾಗಿವೆ.

ಇನ್ನು ಈಗ, ನಮ್ಮೆದುರಿನ ಪ್ರಶ್ನೆಯೆಂದರೆ, ಪ್ರಕೃತಿಯು ಜಡವೋ ಇಲ್ಲವೆ ಮಾಯೆಯೋ? ಎಂದು ತಾತ್ತ್ವಿಕ ಚರ್ವಿತ ಚರ್ವಣ ಮಾಡುವುದಷ್ಟೇ ಅಲ್ಲ. ಪ್ರಶ್ನೆಯು ಇದಕ್ಕಿಂತ ಪೂರ್ಣ ಭಿನ್ನವಿದೆ. ಇಡೀ ಜೀವನದಲ್ಲಿ ನಾವು ಬೌದ್ಧಿಕವಾಗಿ ಸ್ವಲ್ಪ ತಿಣಿಕಿದರೆ, ಮತ್ತು ಬೌದ್ಧಿಕವಾಗಿ ಆಟವಾಡಿದರೆ, ಜೀವ ನದ ಅಂದ ಚೆಂದಗಳನ್ನು ಕಾಣೆವು. ಸೌಂದರ್ಯವನ್ನು ಸವಿಯೆವು. ಸಾಂಖ್ಯರು ಮತ್ತು ವೇದಾಂತಿಗಳು ಮಾಡಿದಂತೆ, ನಾವು ಅತ್ಯುನ್ನತ ಬೌದ್ಧಿಕ ಕಸರತ್ತು ಮಾಡಿದರೆ, ಬೌದ್ಧಿಕ ಶಕ್ತಿಯ ಕೇಂದ್ರವನ್ನು ಪಡೆಯುತ್ತೇವೆ. ಆದರೆ, ಈ ಬೌದ್ಧಿಕ ಶಕ್ತಿಯೂ ಸಹ ಪ್ರಕೃತಿಯೇ. ಏಕೆಂದರೆ, ಬುದ್ಧಿ ತತ್ತ್ವವು ಪ್ರಕೃತಿಯ ಹುಟ್ಟುವಳಿಯಲ್ಲದೆ, ಬೇರೇನೂ ಅಲ್ಲ. ನೀವು ಸಾಂಖ್ಯ ದರ್ಶನವನ್ನು ಅಭ್ಯಸಿಸಿದರೆ, ಬುದ್ಧಿ ತತ್ತ್ವವು ಪ್ರಕೃತಿಗೆ ಅಧೀನವಾಗಿದೆಯೆಂಬುದನ್ನು ತಿಳಿಯುತ್ತೀರಿ. ಅಂದ ಮೇಲೆ, ನೀವು ಪ್ರಕೃತಿಯಿಂದ ಮುಕ್ತರಾದಂತಾಗಲಿಲ್ಲ. ಅದರ ಅರ್ಥವೇನು? ನಾನು ಆ ಪ್ರಕೃತಿಯಿಂದ ಓಡಿಹೋಗಬೇಕೇನು? ಇಲ್ಲ; ಹಾಗೇನಿಲ್ಲ. ಓಡಿ ಹೋಗಬೇಕಾದ ಅಗತ್ಯವೇನಿಲ್ಲ. ಆದರೆ, ರೂಪಾಂತರಕರಣದ ವಿಜ್ಞಾನವೊಂದಿದೆ. ಚೈತನ್ಯ ಶಕ್ತಿಯನ್ನು ಅರಿಯುವ ವಿಜ್ಞಾನವೊಂದಿದೆ. ಮತ್ತು ಅದು ನಮ್ಮೊಳಗೇ ಇದೆ. ನಾವು ಅದರೊಂದಿಗೆ ಒಂದಾಗಿದ್ದೇವೆ. ನಮ್ಮಲ್ಲಿ ಎರಡು ಅತಿರೇಕಗಳಿವೆ. ಒಂದು ಜಡ–ಪ್ರಜ್ಞೆ ಮತ್ತು ಇನ್ನೊಂದು ಚರಮ ಜೈತನ್ಯ--ಪ್ರಜ್ಞೆ. ಎರಡೂ ಸೇರಿಕೊಂಡಿವೆ.

ಕೆಲವರು ಹೇಳುತ್ತಾರೆ: "ನಿಮ್ಮಲ್ಲಿಯ ಜಡವನ್ನು ತೊರೆದುಬಿಡಿರಿ. ಮತ್ತು ಆಧ್ಯಾತ್ಮಿಕರಾಗಿರಿ". ಆಗ ಅದಕ್ಕೆ ಜೀವನ್ಮುಕ್ತಿ ಎನ್ನುತ್ತಾರೆ.

ಇನ್ನು ಕೆಲವರು ಹೇಳುವುದು ಹೀಗೆ: ನೀವು ಯಾವುದನ್ನು ಚರಮ ಪ್ರಕೃತಿ ಎಂದು ಕರೆಯುವಿರೋ, ಅದನ್ನು ನಿಮ್ಮ ಸ್ವಂತ ಪ್ರತಿಭೂ (counter-part) ಎಂದು ಗಣಿಸಲೇಬೇಡಿರಿ. ಅದೂ ಸಹ, ಚೈತನ್ಯವಲ್ಲದ ಇನ್ನೇನೂ ಅಲ್ಲ. ಇರುವ ಪ್ರಶ್ನೆಯೆಂದರೆ ಜೀವನದ ದೃಷ್ಟಿಕೋಣದ್ದು.

ಈ ಕುರಿತು, ನನ್ನ ಗುರುಗಳಾದ ಕವಿರಾಜರು ಮತ್ತು ಶ್ರೀ ಅರವಿಂದರು, ಹೇಳುವ ಪರಿ ಹೀಗೆ: ನಿನ್ನ ವ್ಯಷ್ಟಿ ಶಕ್ತಿಯಷ್ಟೇ ಇಲ್ಲ; ಆದರೆ, ಅದು ಸಮಷ್ಟಿ ಶಕ್ತಿಯೊಡನೆ ಕೂಡಿಯೇ ಇದೆ. ನೀವು ಸರ್ವ ಮಾನವೀಯ ಪ್ರಜ್ಞೆಯೊಂದಿಗೆ ಪೂರ್ಣ ಸಂಪರ್ಕ ಹೊಂದಿದ್ದೀರಿ. ಅಲ್ಲಿ ಚೈತನ್ಯ ಶಕ್ತಿಯೂ ಇದೆ; ಪ್ರಕೃತಿ ಶಕ್ತಿಯೂ ಇನೆ. ಎರಡೂ ನಿಮ್ಮೊಳಗೆ ಪ್ರವಹಿಸುತ್ತಿವೆ. ನೀವು ಎರಡೂ ತುದಿಗಳೊಂದಿಗೆ ಸಂಬಂಧ ಹೊಂದಿದ್ದೀರಿ. ಮತ್ತು ನಿಮ್ಮ ಸಾಧನವನ್ನು ನೀವಷ್ಟೇ ವೈಯಕ್ತಿಕವಾಗಿ ಮಾಡುತ್ತಿರುವಿರೆಂದು ತಿಳಿಯಬೇಡಿರಿ. ನೀವು ಯಾವಾಗಲೂ ಸಮಷ್ಟಿ ಮಾನವತೆಯೊಂದಿಗೆ ಸಂಪರ್ಕ ಹೊಂದಿರುವಿರಿ. ನಿಮ್ಮ ಪ್ರಜ್ಞೆಯು ಸಮಷ್ಟಿ ಮಾನವತೆಯೊಂದಿಗೆ ಸಂಬಂಧಿಸಿದೆ. ಅದನ್ನು ನಿರ್ಲಕ್ಷಿಸಬೇಡಿರಿ. ಮತ್ತು ಕೇವಲ ವೈಯಕ್ತಿಕ ಸ್ವಾರ್ಥಕ್ಕಾಗಿ ಸೆಣಸಬೇಡಿರಿ. ಇಲ್ಲವೆ ಈ ಪ್ರಪಂಚವನ್ನು ತೊರೆಯಬೇಡಿರಿ. ಹಾಗೆ ಮಾಡುವುದು ಜೀವನದ ಲಕ್ಷ್ಯವಲ್ಲ. ಸಮಷ್ಟಿ ಪ್ರಜ್ಞೆಯನ್ನು, ಮಾನವೀಯ ಪ್ರಜ್ಞೆಯನ್ನು, ಅರಿತುಕೊಳ್ಳಲು ಪ್ರಯತ್ನಿಸಿರಿ. ಹಾಗೆ ಮಾಡುವವನನ್ನು ಸಮಷ್ಟಿ ಜೀವಿಯೆನ್ನುತ್ತಾರೆ. ಅವನು ಈ ಜಡಶಕ್ತಿಯೊಂದಿಗೆ ಹಾಗೂ ಚೈತನ್ಯದೊಂದಿಗೆ ಸಂಬಂಧ ಹೊಂದಿದ್ದಾನೆ. ಇನ್ನು ನೀವು ಸುದೈವಿಗಳು. ನೀವು ಇವೆರಡರ ಮಧ್ಯ ಇರುವಿರಿ. ಮತ್ತು ನೀವು ಒಂದೆಡೆ ಸಮಷ್ಟಿ ಪ್ರಜ್ಞೆಯನ್ನು ಅರಿಯಲು ಪ್ರಯತ್ನಿಸಿರಿ. ಇನ್ನೊಂದೆಡೆಗೆ ಜಡವನ್ನು ಅರಿಯಲೆಳಸಿರಿ. ಮತ್ತು ಇವೆರಡನ್ನೂ ಜೋಡಿಸುವ ಪ್ರಯತ್ನ ಮಾಡಿರಿ. ಇದನ್ನೇ ಜೀವನದ ಪೂರ್ಣ ಮುಕ್ತಿ ಎಂದು ಕರೆಯುತ್ತಾರೆ. ಈಗ ಒಂದು ಪ್ರಶ್ನೆ ಏಳುತ್ತದೆ. ಅಂತೂ ಶಕ್ತಿ ಪೂಜೆ ಎಂದರೇನು?

ಈಗ ನಾವು ಎಷ್ಟು ಸುದೈವಿಗಳು! ಎಂಬುದನ್ನು ವಿವರಿಸುತ್ತಿದ್ದೆ. ನಮ್ಮ ಜಡವಸ್ತುಗಳಂತೂ ಇವೆ. (ಚೈತನ್ಯಕ್ಕೆ ಹೋಲಿಸಿದಾಗ) ಬುದ್ಧಿಯೂ ಸಹ ಜಡವೇ (matter) ನಮ್ಮ ಮನಸ್ತತ್ತ್ವ ಅಥವಾ ನಾವು ಮನಸ್ಸು ಎಂದು ಕರೆಯುವುದೂ ಸಹ ಜಡವೇ. ನಮ್ಮ ಇಂದ್ರಿಯಗಳೂ ಸಹ ಜಡವೇ. ನಾನು ನೋಡುವುದೆಲ್ಲವೂ ಜಡವೇ. ಇವೆಲ್ಲವೂ ಏನನ್ನು ಹುಟ್ಟಿಸುತ್ತವೆ? ಸಂತೋಷ, ನೋವು, ನಲಿವುಗಳನ್ನೇ ಸಾಪೇಕ್ಷಿಕವಾಗಿ ಹುಟ್ಟಿಸುತ್ತವೆ. ಆದರೆ, ನಾವು ಯಾವುದನ್ನು ಬುದ್ಧಿಯೆಂದು ಕರೆಯುವೆವೋ, ಅದೂ ಸಹ, ಸತ್–ಚಿತ್–ಆನಂದದ ಪ್ರತಿಫಲನವೇ ಆಗಿದೆ. ಹೀಗೆ, ಆನಂದವು ಜಡದ ಮೂಲಕ ಪ್ರವಹಿಸಿದಾಗ, ಅದು ಜಡದಲ್ಲಿಯೇ ಇದೆ, ಎಂದು ತೋರುತ್ತದೆ. ಆದರೆ, ವಾಸ್ತವವಾಗಿ ಅದು ಚೇತನ ಶಕ್ತಿಯ ತುತ್ತ ತುದಿಯಷ್ಟೇ. ಅರ್ಥಾತ್ ಸತ್–ಚಿತ್–

ಆನಂದದ ತುತ್ತತುದಿ.

ಈಗ ನಾವು ಶಕ್ತಿಯನ್ನು ಉಪಾಸಿಸಬೇಕು. ಉಪಾಸನೆ ಎಂದರೇನು? ಗೌಣ ಕೇಂದ್ರೀಯ ಪ್ರಜ್ಞೆಗೆ ಗುಣಗಳು (ಸತ್ತ್ವ, ರಜಃ, ತಮಃ) ಎನ್ನುತ್ತಾರೆ. ಇನ್ನು ಅದು ಯಾವುದರ ಅಧೀನವಿದೆ? ಬುದ್ಧಿ ಮತ್ತು ಅಹಂಕಾರಗಳ ಅಧೀನವಿದೆ. ಆದರೆ, ಈ ಅಹಂಕಾರವು ಜಡ ಮತ್ತು ಚೈತನ್ಯಗಳೆರಡರೊಂದಿಗೆ ಅತೀವ ಸಂಬಂಧ ಹೊಂದಿದೆ. ಮತ್ತು ಇದುವೇ ಕೂಟ–ಬಿಂದುವಾಗಿದೆ. ಇದನ್ನೇ ನಾವು ಅಹಂ (ego) ಎನ್ನುತ್ತೇವೆ.

ಜಡ–ವಸ್ತುಗಳು, ನನ್ನ ವಿಚಾರಗಳು, ನನ್ನ ಆಕಾಂಕ್ಷೆಗಳು, ಪ್ರೇಮ, ನೋವು, ನಲಿವು ಇವುಗಳೊಂದಿಗೆ ಇರುವಜಡ-ಪ್ರಜ್ಞೆಮತ್ತುಸತ್-ಚಿತ್-ಆನಂದಗಳ ನಡುವಿನ ಕೊಂಡಿಯಾಗಿದೆ ಈ ನಾನುತನ (ego). ಒಂದು ವೇಳೆ, ನೀವು ಉಪಾಸಿಸಲು ಬಯಸಿದರೆ, ನಿಮ್ಮ ನಾನುತನವನ್ನು ನಿಮ್ಮ ಅಂತರ್ ಪ್ರಜ್ಞೆಗೆ ಸಂಪೂರ್ಣ ಸಮರ್ಪಿಸಬೇಕು. 'ಸಮರ್ಪಣೆ' ಎಂದರೇನು? ಯಾವಾಗಲೂ ಗುರುವಿಗೆ ಪಾರ್ಥನೆ ಸಲ್ಲಿಸುವುದು, ಅವನು ಏನನ್ನಾದರೂ ಹೇಳಿದರೆ, 'ಅದು ಹೀಗೋ?' ಇಲ್ಲವೆ 'ಅದೇನು?' ಎಂದು ಗೊಣಗದಿರುವುದು, ಸಮರ್ಪಣೆಯಾಗಿದೆ. ಆದರೆ, ಅಹಂಕಾರದ ಜಡಾಂಶವು ಯಾವಾಗಲೂ ಕ್ರಿಯಾಶೀಲವಾಗಿರುತ್ತದೆ. ನಾವು ಯಾವಾಗಲೂ ಜಡ ಸೂಚನೆಗಳಿಗೆ ವಿಧೇಯರಾಗಕೂಡದು. ಆದರೆ, ಆಂತರಿಕ ಚೈತನ್ಯ ಶಕ್ತಿಯ ಸೂಚನೆಗಳನ್ನು ಮಾತ್ರ ಪಾಲಿಸಬೇಕು, ಬುದ್ಧಿಯ ಮೂಲಕ ಬರುವ ಸೂಚನೆಗಳು ಒಂದು ವಿಧ. ಅಲ್ಲಿ ಸಂದೇಹಗಳಿಗೆ ಇಂಬಿದೆ; ಅನೇಕ ವಿಷಯಗತ ಸು ಇಲ್ಲವೆ ಕು ಸಂಸ್ಕಾರಗಳಿವೆ, ಮನೋಭಾವಗಳಿವೆ; ಇವೆಲ್ಲವೂ ಕಾರ್ಯಶೀಲನಾಗಿವೆ. ಸತ್ತ್ವ, ರಜಃ ಮತ್ತು ತಮಃ ಗುಣಗಳ ಕಾರಣದಿಂದ ಅನೇಕ ಸಂಗತಿಗಳು ನಡೆದಿರುತ್ತವೆ. ಇನ್ನೊಂದೆಡೆ; ಸಂದೇಹಗಳಿಲ್ಲ; ಗುಣಗಳಿಲ್ಲ; ಅದು ಗುಣಾತೀತವಾಗಿದೆ; ಅದು ಗುಣಗಳನ್ನು ಅತಿಶಯಿಸುತ್ತದೆ. ಅದು ಸತ್-ಚಿತ್-ಆನಂದದೊಂದಿಗೆ ಸಂಬಂಧಿಸಿದೆ. ಅದನ್ನು ನಾನು ಬೋಧಿ ಎನ್ನುತ್ತೇನೆ. ಇದನ್ನೇ ಬೋಧಿ–ಪ್ರಜ್ಞೆ ಎನ್ನುತ್ತಾರೆ. ಇಲ್ಲಿಂದ ಬೋಧಿಯು ಶುರುವಾಗುತ್ತದೆ. ನಾವಿದನ್ನು ಬೌದ್ಧರ ರೀತಿಯಲ್ಲಿ ಪ್ರಜ್ಞಾ ಎನ್ನುತ್ತೇವೆ. ಇಂಥ ದೀಪ್ತಮಾನ ಪ್ರಜ್ಞೆಯಲ್ಲಿ ಸಂದೇಹಗಳಿರುವುದಿಲ್ಲ. ಆದರೆ, ನಿಮಗೆ ಹಲವು ಸೂಚನೆಗಳು ಬರುತ್ತವೆ. ನೀವು ನಿಮ್ಮ ಗುರುವಿನ ಸಾನ್ನಿಧ್ಯವನ್ನು ಸಂವೇದಿಸುತ್ತೀರಿ. ನಿಮ್ಮೊಳಗೆ ಉನ್ನತ ಶಕ್ತಿಯಿರುವುದನ್ನು ಸಂವೇದಿಸುತ್ತೀರಿ. ಮತ್ತು ಅದು ನಿಮ್ಮನ್ನು ನಿರ್ದೇಶಿಸುತ್ತದೆ.

ನಿಮಗೆ ಅದರ ಆನಂದ ಲಭಿಸುತ್ತದೆ. ಮತ್ತು ನಿಮ್ಮನ್ನು ಅನ್ಯಥಾ ಮಾಡಗೊಡುವುದಿಲ್ಲ. ಅರ್ಥಾತ್ 'ನೀನು ಇದನ್ನೇ ಮಾಡು' ಎಂದು ವಿಧಿಸುತ್ತದೆ.

ಮಾನವನಲ್ಲಿ ಈ ಎರಡೂ ವಸ್ತುಗಳು ಸೇರಿಸಲ್ಪಟ್ಟಿವೆ. ಅರ್ಥಾತ್ ಒಂದು ಜಡ ಜೀವನ. ಇದು ಸೀಮಿತವಾಗಿದೆ. ಇಲ್ಲಿ ಶಕ್ತಿಯೂ ಸೀಮಿತವಾಗಿದೆ. ಇನ್ನು ಇದು ಗುಣಗಳಿಗನುಸರಿಸಿ ಕಾರ್ಯ ಮಾಡುತ್ತದೆ. ಸತ್ತ್ವ ಗುಣವಿದ್ದರೆ, ಒಳ್ಳೆಯ ಸಂಗತಿಗಳನ್ನು ಕುರಿತು ವಿಚಾರಿಸುತ್ತೇವೆ. ರಜೋ ಗುಣವಿದ್ದರೆ, ನಾವು ಪೂರ್ಣ ದುಷ್ಟರಾಗುತ್ತೇವೆ. ನಾವು ರಾಕ್ಷಸರಾಗುತ್ತೇವೆ. ನಾವು ಬೇರೆಯವರನ್ನು ಕೊಲ್ಲಲು ಪ್ರಯತ್ನಿಸುತ್ತೇವೆ. ನಾವು ಪ್ರಾಬಲ್ಯ ನಡೆಸಬಯಸುತ್ತೇವೆ, "ನಾನು ಸ್ವತಃ ಗುರುವಾಗಬಯಸುತ್ತೇನೆ. ನಾನು ಇತರ ಎಲ್ಲರನ್ನೂ ಕೊಲ್ಲಬಯಸುವೆ. ಮತ್ತು ಓರ್ವನೇ ಉಳಿಯಬಯಸುವೆ. 'ನಾನೋರ್ವನೇ ಜಗತ್ತಿನಲ್ಲಿ ಅತಿ ದೊಡ್ಡ ಗುರು' ಎಂದು ಹೇಳಿಕೊಳ್ಳುತ್ತೇನೆ. ಬೇರೆಯವರಾರೂ ಬುದ್ಧಿವಂತರಲ್ಲ. ಈ ಮಹತ್ವಾಕಾಂಕ್ಷೆಗಳೇ ಕೃತಿಗಿಳಿಯುತ್ತವೆ. ಇಂಥವರು ಸನ್ಯಾಸಿಗಳ ಸೋಗಿನಲ್ಲಿರುವ, ಗುರುಗಳ ಸೋಗಿನಲ್ಲಿರುವ, ರಾಕ್ಷಸರಲ್ಲದೆ ಮತ್ತೇನಲ್ಲ. ಇಂಥವರು ಪೂರ್ಣ ದುಷ್ಟರೇ ಸರಿ. ಇಂಥ ಸಂಗತಿಗಳು ಅತಿರೇಕದ ತನಕ ಕಾರ್ಯ ಮಾಡುತ್ತವೆ, ಮತ್ತೆ ನಾವು ಕೇಂದ್ರಕ್ಕೆ ಮರಳುತ್ತೇವೆ. ನಾವು ಶಕ್ತಿಯನ್ನು ಉಪಾಸಿಸಬೇಕು. ಈ ಶಕ್ತಿ ಉಪಾಸನೆಯು ತ್ರಿಸ್ತರದಲ್ಲಿದೆ: ಸ್ಥೂಲ, ಸೂಕ್ಷ್ಮ ಮತ್ತು ಕಾರಣ. ಒಂದನೆಯದು ಸ್ಥೂಲ ಶಕ್ತಿ. ಎರಡನೆಯದು ಸೂಕ್ಷ್ಮಶಕ್ತಿ ಮತ್ತು ಮೂರನೆಯದು ಕಾರಣ ಶಕ್ತಿ. ಹೀಗೆ, ನಮ್ಮ ಆಂತರಿಕ ಪೂಜೆಯೂ ತ್ರಿವಿಧವಿದೆ; ಇದೀಗ ನಾನು ಅಹಂಕಾರದ ಬಗೆಗೆ ಹೇಳಿದೆ. ಅಹಂಕಾರವು ಸತ್ತ್ವ, ರಜಃ ಮತ್ತು ತಮಃ ಗುಣಗಳನ್ನು ಹೊಂದಿದೆ. ಅದು ಗುಣಗತವಾಗಿದೆ. ಈಗ ನಾವು ಒಳ್ಳೆಯ ಗುಣಕ್ಕೆ ಮಹತ್ತ್ವ ನೀಡಬೇಕಾಗಿದೆ. ಅದನ್ನೇ ಸತ್ತ್ವ ಗುಣವೆನ್ನುತ್ತಾರೆ. ಹೀಗೆ ಪೂಜೆಯು ಜಡವಾಗಿರುವಾಗಲೂ, ಸತ್ತ್ವ ಗುಣದಿಂದ ಆರಂಭವಾಗುತ್ತದೆ. ಏಕೆಂದರೆ, ಅದು ವರೆಗೆ ನಾನು ನನ್ನೊಳಗಿರುವ ಶುದ್ಧ ಶಕ್ತಿಯನ್ನು ಅರಿತುಕೊಂಡಿರುವುದಿಲ್ಲ.

ನಾನು ಈ ಮುನ್ನ, ಮಾತೃಕೆಗಳನ್ನು ಕುರಿತು ಹೇಳಿರುವೆನಷ್ಟೇ. ಅವುಗಳೇನು ಮಾಡುತ್ತವೆ? ಅವು ಕ್ಷಮತೆಯನ್ನು ಸೃಜಿಸಿವೆ. ಮತ್ತು ಆ ಕ್ಷಮತೆಯು ಶಕ್ತಿಯಾಗಿದೆ. ಒಂದು ವಿಶೇಷ ರೂಪ ತಾಳಿದೆ. ಅದು ಗುಣ ಸಹಿತವೂ ಇದೆ. ಗುಣಾತೀತವೂ ಇದೆ. ಆದರೆ, ಅದು ವಾಸ್ತವದಲ್ಲಿ, ನಾವು

ಅಂಬಾ, ಜ್ಯೇಷ್ಠಾ, ರೌದ್ರೀ ಎಂದು ಕರೆಯುವ ಗುಣಾತೀತವೇ ಆಗಿದೆ. ನಾವು ಅವಳನ್ನು ದಿವ್ಯ ಮಾತೆ ಎಂದು ಕರೆಯುತ್ತೇವೆ. ಅವಳಿಗೊಂದು ವಿಶೇಷ ರೂಪ ನೀಡುತ್ತೇವೆ. ಅವಳು ಸಿಂಹದ ಮೇಲೆ ಆಸೀನಳಾಗಿರುತ್ತಾಳೆ. ಅವಳು ಹಸ್ತದಲ್ಲಿ ಅನೇಕ ಆಯುಧಗಳನ್ನು ಧರಿಸಿರುತ್ತಾಳೆ. ಇಲ್ಲವೆ ಅವಳು ಕಾಳಿಯಂತೆಯೋ, ಸರಸ್ವತಿಯಂತೆಯೋ ಇರಬೇಕು. ಅವಳು ತನ್ನ ಕೈಯಲ್ಲಿ ಸುಂದರ ಮಣಿ ಮಾಲೆಯನ್ನು ಧರಿಸಿರುತ್ತಾಳೆ. ಚತುರ್ಭುಜೆಯಾಗಿದ್ದಾಳೆ. ಅವಳ ಮುಖವು ಅತಿ ಸುಂದರ. ಅವಳಿಗೆ ಕಂಠಾಹಾರ ಮತ್ತಿತರ ಆಭರಣಗಳಿವೆ. ಇವೆಲ್ಲ ಮೊದಲು ಬೇಕು. ಏಕೆಂದರೆ, ನನ್ನ ಮನವಿನ್ನೂ ಉನ್ನತ ಶಕ್ತಿಗೋಸುಗ ಅಷ್ಟೊಂದು ಶಕ್ತಿಯುತವಾಗಿರುವುದಿಲ್ಲ. ನನಗೆ ಕೇವಲ ಮಾನವೀಯ ಊಹೆಯಷ್ಟೇ ಇದೆ; ಕೇವಲ ಜಡ–ಊಹೆಯಷ್ಟೇ ನನ್ನಲ್ಲಿದೆ. ನಾನು ಈ ಜಡ ಕಲ್ಪನೆಯನ್ನೇ ಉನ್ನತ ಶಕ್ತಿಯನ್ನು ತಲುಪಲು ಮತ್ತು ತಿಳಿಯಲು ಬಳಸಬೇಕಾಗಿದೆ. ಹೀಗಾದರೆ, ನಾನೇನು ಮಾಡಬೇಕು? ನಾನು ಉಪಾಸಿಸಲು ಪ್ರಯತ್ನಿಸುವೆ. ಬಹಳವಾದರೆ, ಪ್ರಾರಂಭದಲ್ಲಿ ಅದೆಲ್ಲ ಕೇವಲ ನನ್ನ ಮಾನಸ ಸೃಷ್ಟಿ; ಎಂದು ಹೇಳಬಹುದು. ನಾವು ಮನದಲ್ಲಿಯೇ ಉಪಾಸಿಸಲು ಪ್ರಯತ್ನಿಸುತ್ತೇವೆ. ಏಕೆಂದರೆ, ಮನಸ್ಸಿಗೆ ಉಭಯ ಗುಣಗಳೂ ಇವೆ. ಒಂದೆಡೆಗೆ, ಮನವು ಪೂರ್ಣವಾಗಿ ಈ ಜಡ–ವಸ್ತುಗಳಿಂದಿಗಿದೆ. ಮತ್ತು ಇನ್ನೊಂದೆಡೆಗೆ ಈ ಮನವನ್ನೇ ನಾನು ಆಧ್ಯಾತ್ಮಿಕವಾಗಿ ಮಾಡಬೇಕಾಗಿದೆ. ಆದ್ದರಿಂದ ನಾನದನ್ನು ಸಾಧಿಸಬೇಕಾವರೆ, ಅವೇ ಮಾತೃಕೆಗಳನ್ನು ಬಳಸಬೇಕು. ಈ ಎಲ್ಲ ಮಾತೃಕೆಗಳನ್ನು ನಾನು ಸೇರಿಸಿದಾಗ, ಅವು ಮಂತ್ರಗಳಾಗುತ್ತವೆ. ಮಂತ್ರವೆಂದರೆ ಮಾತೃಕೆಗಳ ಜೋಡಣೆಯಲ್ಲದೆ ಬೇರೇನೂ ಅಲ್ಲ. ಮತ್ತು ಆ ಮಾತೃಕೆಗಳು ತುಂಬಾ ವೈಜ್ಞಾನಿಕವಾಗಿವೆ. ಏಕೆಂದರೆ, ನಮ್ಮ ಪ್ರಾಚೀನ ಋಷಿಗಳು ಆಂತರ್ಯದಲ್ಲಿ ಆಳಕ್ಕಿಳಿದಾಗ, ಅವರು ಶಕ್ತಿಯನ್ನು ದರ್ಶಿಸಬಲ್ಲವರಾಗಿದ್ದರು. ಮತ್ತು ಈ ಅವಸ್ಥೆಯಲ್ಲಿ ಆ ಶಕ್ತಿಯು ತುಂಬಾ ಛಂದೋಬದ್ಧವಾಗಿದೆ.ಋಷಿಗಳು ಛಂದ ಮತ್ತು ನ್ಯಾಸವನ್ನು ದರ್ಶಿಸಿದ್ದಾರೆ. "ಋಷಯಾ ಮಂತ್ರ ದ್ರಷ್ಟಃ" ಋಷಿಗಳು ದೇವತೆಗಳನ್ನು ದರ್ಶಿಸಬಲ್ಲವರಾಗಿದ್ದರು. ಮತ್ತು ಆ ದೇವತೆಗೆ ಒಂದು ವಿಶೇಷ ಛಂದವಿರುತ್ತಿತ್ತು. ಮತ್ತು ಆ ಛಂದವೇ ಮಂತ್ರವಾಗಿ ಮಾರ್ಪಡುತ್ತಿತ್ತು. ಮತ್ತು ಮಂತ್ರಕ್ಕೊಂದು ರೂಪವಿತ್ತು. ಹೀಗೆ ಇದನ್ನು ಪೂರ್ಣವಾಗಿ, ಋಷಿ, ಛಂದ, ಮತ್ತು ದೇವತೆ, ಎಂದು ಜೋಡಿಸಬಹುದು. ಋಷಿಯೇ ವಿಶೇಷ

ದ್ರಷ್ಟಾರನು. ಮತ್ತು ಛಂದವೆಂದರೆ ಒಂದು ಕೊಂಡಿ. ಆಂತರ್ಯದಲ್ಲಿ ಚಲಿಸುವ ತಾಳಬದ್ಧ ಗತಿ. ಇವೆಲ್ಲವೂ ನಮ್ಮ ಪ್ರಜ್ಞೆಯೊಂದಿಗೆ ಸಂಬಂಧಿಸಿವೆ. ಮತ್ತು ಅವು ಶ್ರುತಿಗೊಂಡಿವೆ. ನಮ್ಮ ಆಂತರ್ಯದೊಂದಿಗೆ ಶ್ರುತಿಗೊಂಡಿವೆ. ಇನ್ನು, ಹೀಗೆ ನಿಮ್ಮ ಗುರು ಏನು ಮಾಡುತ್ತಾನೆ? ನೀವು ಶ್ರುತಿಗೂಡಿಸಿಕೊಳ್ಳಲು ನಿಮಗೊಂದು ವಿಶೇಷ ಮಂತ್ರವನ್ನು ನೀಡುತ್ತಾನೆ. ಒಂದೆಡೆಗೆ ನೀವು ಚರಮ ಜಡ–ಪ್ರಜ್ಞೆಯೊಂದಿಗಿದ್ದೀರಿ. ಇನ್ನೊಂದೆಡೆಗೆ ನೀವು ಚರಮ ಶಕ್ತಿ, ಅರ್ಥಾತ್ ಶುದ್ಧ ಶಕ್ತಿಯೊಡನೆ ಇದ್ದೀರಿ. ಶಕ್ತಿ ಮತ್ತು ಪ್ರಕೃತಿಗಳೆರಡೂ ನಿಮ್ಮೊಂದಿಗಿವೆ. ಮತ್ತು ನಿಮ್ಮ ಗುರುವು ನಿಮಗೆ ಬಲವನ್ನು ನೀಡಿದ್ದಾನೆ. ಮತ್ತು ನಿಮಗೆ ಇಂಥ ವಸ್ತುವಿನೊಂದಿಗೆ ಸಂಪರ್ಕ ಲಾಭ ಮಾಡಿಕೊಟ್ಟಿದ್ದಾನೆ. ನೀವು ಜಡ ಜೀವನದಲ್ಲಿಯೇ ಇದ್ದರೂ, ಶಕ್ತಿಯು ಮಂತ್ರದಿಂದ ಕಾರ್ಯಾನ್ವಿತಗೊಳ್ಳುತ್ತದೆ. ಇನ್ನು ನೀವು ಮಂತ್ರದ ಪುರಶ್ಚರಣೆ ಮಾಡುತ್ತ ಹೋದರೆ, ಅದೇನು ಮಾಡುವುದು? ಅದು ಒಂದು ವಿಶೇಷ ಛಂದವನ್ನು ಒದಗಿಸುತ್ತದೆ. ಇನ್ನು ಆ ಛಂದವು ನಿಮ್ಮೊಳಗೆ ಇರುವ ಶುದ್ಧ ಶಕ್ತಿಯೊಂದಿಗೆ ಆಂತರ್ಯದಲ್ಲಿಯೇ ಸೇರಿಕೊಳ್ಳುವಂತೆ ಮಾಡುತ್ತದೆ. ಆ ಶುದ್ಧ ಶಕ್ತಿಯನ್ನು ನೀವು ಇದುವರೆಗೆ ನಿರ್ಲಕ್ಷಿಸಿದ್ದೀರಿ. ಮತ್ತೆ ಅದು ನಿಮ್ಮೊಳಗೆ ಮೆಲ್ಲ–ಮೆಲ್ಲನೆ ಕ್ರಿಯಾಶೀಲವಾಗುತ್ತ ಹೋಗುವುದೆಂಬುದನ್ನು ನೀವು ಅರಿಯಬಹುದು. ಈಗ, ಒಂದೆಡೆಗೆ ನಿಮ್ಮ ಪ್ರಾಪಂಚಿಕ ಜೀವನವು ನಡೆದಿರುತ್ತದೆ. ಮತ್ತು ಇನ್ನೊಂದೆಡೆಗೆ, ನಿಮ್ಮ ಆಧ್ಯಾತ್ಮಿಕ ಜೀವನವೂ ನಡೆದಿರುತ್ತದೆ. ನೀವದನ್ನು ಅರಿಯದಿದ್ದರೂ, ಅದು ಕಾರ್ಯ ಮಾಡುತ್ತದೆ. ಏಕೆಂದರೆ, ಅರಿತುಕೊಳ್ಳುವುದು ನಿಮ್ಮ ಬುದ್ಧಿಯ ಶೀಲವೇ ಆಗಿದೆ. ನಿಮ್ಮ ಬುದ್ಧಿಯು ಇನ್ನೂ ಅಶುದ್ಧವಿರುತ್ತದೆ. ಆದ್ದರಿಂದ, ನೀವು ಅದನ್ನು ಅರಿಯುವುದಿಲ್ಲ. ನಿಮ್ಮ ಭಾವ ಕ್ಷಮತೆಯೂ ಅಶುದ್ಧವಿರುತ್ತದೆ. ಏಕೆಂದರೆ, ಅದು ಗುಣಯುತವಾಗಿದೆ. ಆದ್ದರಿಂದ ನೀವು ಅರಿಯುವುದಿಲ್ಲ. ಅವುಗಳೆಲ್ಲ ರೂಪಾಂತರಿಕೃತವಾದ ಮೇಲೆ, ಇಲ್ಲವೆ ಶುದ್ಧವಾದ ಮೇಲೆ, ಜ್ಞಾನಾನುಭವವು ಉಂಟಾಗುತ್ತದೆ. ಹೀಗೆ, ನೀವು ಅನುಭವಗಳ ಗೊಡವೆಗೆ ಹೋಗುವುದಿಲ್ಲ. ನಾನು ಅರಿಯುತ್ತೇನೆ ಅಷ್ಟೇ. ಅದೇನೇ ಇರಲಿ. ಅದು ಅಷ್ಟು ಮಹತ್ವದ್ದಲ್ಲ. ಆದರೆ, ನೀವು ನಿಮ್ಮೊಳಗೆ ಉಪಾಸಿಸುತ್ತ ಹೋಗಿರಿ. ಕೆಲವು ಜನರು ಹೀಗೂ ಹೇಳುತ್ತಾರೆ: "ಅದು ಬಿಡಿ. ನಮ್ಮ ಗುರುಗಳೇನೋ ಹೇಳಿಕೊಟ್ಟಿದ್ದಾರೆ. ಅದೇನು ಮಾಡಬೇಕೊ? ಆ ಇನ್ನೊಬ್ಬ ಮನುಷ್ಯನು

ಅದೆಷ್ಟು ಅನುಭೂತಿ ಹೊಂದುತ್ತಿದ್ದಾನೆ?" ಕೂಡಲೇ ಅವರು ತಮ್ಮ ಗುರು ವಿಗೆ ವಿದಾಯ ಹೇಳಲಿಚ್ಛಿಸುತ್ತಾರೆ. ಮತ್ತೊಬ್ಬನ ಬಳಿಗೆ ಓಡಬಯಸು ತ್ತಾರೆ. ಆದರೆ, ಎಲ್ಲಿ ಹೋದರೂ ಅವರು ಏನನ್ನೂ ಸಾಧಿಸರು. ನೀವು ಒಂದೆಡೆಗೆ ಸಂಪೂರ್ಣ ಶ್ರದ್ಧೆಯನ್ನು ಹೊಂದಿರಿ. ಮತ್ತು ಕ್ರಮೇಣ ಮುಂದು ವರಿಯಿರಿ. ಬೇಗ ಸಿದ್ಧಿಸಬೇಕೆಂದು ಗಡಿಬಿಡಿ ಮಾಡಬೇಡಿರಿ. ಇದು ಗಡಿಬಿಡಿ ಮಾಡಿ ಪಡೆಯುವ ವಿಷಯವಲ್ಲ. ಏಕೆಂದರೆ, ಇದು ನೀವೇ ಅರಿಯದ, ಆದರೆ ನಿಮ್ಮ ಗುರುವು ಅರಿತುಕೊಂಡಿರುವ, ನಿಮ್ಮ ಆಂತರಿಕ ವಿಕಾಸವನ್ನು ಅವಲಂಬಿಸಿದೆ.

ಹೀಗೆ ನಾನು, ಶಾರೀರಿಕ ಸಾಧನೆಯು ಪೂರ್ಣವಾಗಿ ಮಂತ್ರ ಸಾಧನೆಯ ಮೇಲೆಯೇ ಅವಲಂಬಿಸಿದೆಯೆಂದು ಹೇಳಿದ್ದೇನೆ. ಮತ್ತು ನೀವು ಯಾವಾಗ ಅಹಂಕಾರವನ್ನು ಸಮರ್ಪಿಸುವಿರೋ, ಆ ಕಾಲಕ್ಕೆ ಮಂತ್ರ ಸಾಧನೆಯು ಮೆಲ್ಲನೆ ಕಾರ್ಯ ಮಾಡುತ್ತದೆ. ಇದನ್ನೇ ಮಾನಸಿಕ ಮಟ್ಟದಲ್ಲಿಯ ಶಾರೀರಿಕ ಉಪಾಸನೆ ಎನ್ನುತ್ತಾರೆ. ನೀವು ಈ ಉಪಾಸನೆಯನ್ನು ಮಾಡುತ್ತ ಮುಂದು ವರಿಯುತ್ತೀರಿ. ಆಗ ನಿಮ್ಮ ಬುದ್ಧಿಯು ಹೆಚ್ಚು ಹೆಚ್ಚಾಗಿ ಶುದ್ಧವಾಗುತ್ತ ಹೋಗುತ್ತದೆ. ನಿಮ್ಮ ಆಂತರಿಕ ಭಾವಗಳು ಅಧಿಕ ಪ್ರಧಾನವಾಗುತ್ತವೆ. ಮತ್ತು ಅವು ಶುದ್ಧವಾಗುತ್ತವೆ. ಒಂದೆಡೆಗೆ ನಿಮ್ಮ ಭಾವಗಳು ಶುದ್ಧವಾದರೆ, ಇನ್ನೊಂದೆಡೆಗೆ ನಿಮ್ಮ ಆತ್ಮಿಕ ಶಕ್ತಿಗಳೂ ಶುದ್ಧವಾಗುತ್ತವೆ. ಹೀಗೆ ಅವೆರಡೂ ಸೇರುತ್ತವೆ. ಆ ಕಾಲಕ್ಕೆ ನೀವು ನಿಮ್ಮ ಆಂತರಿಕ ಪ್ರಜ್ಞೆಯ ಅತ್ಯಂತ ಮಹತ್ವಪೂರ್ಣ ಗತಿಶೀಲ ಶಕ್ತಿಯನ್ನು ನಿಜವಾಗಿಯೂ ಅರಿತುಕೊಳ್ಳುವಿರಿ. ಇನ್ನು ನಿಮ್ಮ ಆಂತರಿಕ ಬುದ್ಧಿಯು, ವಿಶ್ವದ ರಹಸ್ಯವನ್ನು, ನಿಮ್ಮ ಜೀವನ ರಹಸ್ಯವನ್ನು, ಅವೆಲ್ಲ ಹೇಗೆ ನಡೆದಿದೆಯೆಂಬುದನ್ನು, ತಿಳಿಯಬಯಸುತ್ತದೆ. ಇದೂ ಸಹ, ದಿವ್ಯ ಮಾತೆಯ ಉಪಾಸನೆಯಲ್ಲದೆ ಬೇರೇನೂ ಅಲ್ಲ. ನಿಮ್ಮ ಬೋಧೆಯ ಮೂಲಕ, ಆಂತರಿಕ ಅರಿವಿನ ಮೂಲಕ, ಆಂತರಿಕ ವಸ್ತುಗಳನ್ನು ಅರಿತುಕೊಳ್ಳಲು ಸಹ, ನಿಮ್ಮ ಬುದ್ಧಿಯು ಬಯಸುತ್ತದೆ. ನೀವು ಮೆಲ್ಲ-ಮೆಲ್ಲನೆ, ಅಂತರ್ಯದಲ್ಲಿ ಪ್ರವೇಶಿಸಿದಾಗ, ನಿಮ್ಮ ಒಳಗೇ ಇರುವ ಪ್ರಜ್ಞೆಯು ಉನ್ನತೋನ್ನತವಾಗುತ್ತದೆ. ಅದುವೇ ನಿಮ್ಮ ಆಂತರಿಕ ಪ್ರಜ್ಞೆಯಾಗುತ್ತದೆ. ಅದು ನಿಮ್ಮ ದಿವ್ಯ ತಂದೆಯಾಗುತ್ತದೆ; ದಿವ್ಯ ಮಾತೆಯಾಗುತ್ತದೆ. ಮತ್ತೆ ಅದುವೇ ದಿವ್ಯ ಮಗುವಾಗುತ್ತದೆ. ಅದು ಜೀವನದ ದಿವ್ಯ, ಗತಿಶೀಲ ಅಸ್ತಿತ್ವವಾಗುತ್ತದೆ. ಅದುವೇ ಕ್ರಮೇಣ ವೃದ್ಧಿಸುತ್ತವೆ. ಹೀಗಾಗುವುದನ್ನೇ

ಪೂಜೆಯೆನ್ನುತ್ತಾರೆ. ಈಗ ಅಂತರಂಗದ ಪೂಜೆಗೆ ಮೊದಲಾಗುತ್ತದೆ. ನೀವು ಈ ಪೂಜೆಯನ್ನು ಮಾಡುತ್ತ ಹೋದಂತೆ, ನಿಮಗೆ ಅತ್ಯಂತ ಆನಂದವಾಗುತ್ತದೆ. ನೀವು ಈಗ ಉನ್ನತ ಸ್ತರದಲ್ಲಿ ಇರುವಿರಿ. ಆದರೂ ನಿಮ್ಮ ಮಾತೆಯನ್ನು ಪೂಜಿಸುತ್ತಿರುವಿರಿ. ನಿಮ್ಮ ಮಾತೆಯನ್ನಾರೂ ಕಾಣರು. ಅವಳು ಎಲ್ಲಿ ಇರುವುಳೆಂಬುದನ್ನಾರೂ ಕಾಣರು. ಮತ್ತು ನೀವೇನು ಮಾಡುತ್ತಿರುವಿರೆಂಬು ದನ್ನು ಸಹ ಯಾರೂ ಅರಿಯಲಾರರು. ಆದರೆ, ನಿಮ್ಮೊಳಗೆ ವೃದ್ಧಿಸುತ್ತಿರುವ ಈ ಸಂಗತಿಗಳಿಂದ ನೀವು ತುಂಬಾ ಹರ್ಷಿತರಾಗುವಿರಿ. ನಿಮ್ಮ ಜೀವನದ ದೃಷ್ಟಿಕೋನವು ಕ್ರಮೇಣ ಪರಿವರ್ತಿತವಾಗುವುದು. ಮತ್ತು ನೀವು ಏನನ್ನೂ ಹೊರಗಿನಿಂದ ಪಡೆಯದೆ,ನಿಮ್ಮೊಳಗೇ ಆನಂದಿಸುವಿರಿ. ನಾವು ಭೌತಿಕ ಸಂಪದ ವನ್ನು, ಸಾಕಷ್ಟು ಪರಿಮಾಣದಲ್ಲಿ ಪಡೆದಿರಬಹುದು. ಆದರೂ ನಮ್ಮ ಆಸೆ-ಆಕಾಂಕ್ಷೆಗಳಿಗೆ ಕೊನೆಯಿಲ್ಲ. ಆದರಿಂದ ನಮಗೆ ತೃಪ್ತಿಯಿಲ್ಲ. ಆದರೆ ಇನ್ನೊಂದೆಡೆಗೆ, ನಾವು ನಮ್ಮೊಳಗೆ ಪೂಜಿಸಿದಾಗ, ನಾವು ನಮ್ಮಲ್ಲಿಯೇ ಹರ್ಷಿಸುತ್ತೇವೆ. ಅರ್ಥಾತ್ ನಿಜವಾದ ಸಂತಸ, ನಿಜವಾದ ಆನಂದ ಎಲ್ಲಿದೆ? ಅದು ಚೈತನ್ಯದಲ್ಲಿಯೇ ಹೊರತು ಪ್ರಕೃತಿಯಲ್ಲಿ ಇಲ್ಲ. ಹೀಗೆ ನಾವು ಈ ಸಂಗತಿಗಳನ್ನು ಅರಿಯುತ್ತ ಹೋದಂತೆ, ಆದನ್ನೇ ದಿವ್ಯ ಪೂಜೆ ಎನ್ನುತ್ತಾರೆ.

ಎರಡು ಚರಮ ಶಕ್ತಿಗಳಿವೆಯೆಂದು ನಾನು ಈಗಾಗಲೇ ನಿಮಗೆ ಹೇಳಿ ರುವೆನಷ್ಟೇ. ಒಂದರ ಹೆಸರು ಪ್ರಕೃತಿ ಶಕ್ತಿ. ಮತ್ತೊಂದರ ಹೆಸರು ಚೈತನ್ಯ ಶಕ್ತಿ. ಇವೆರಡೂ ಮಾನವನಲ್ಲಿ ಕ್ರಿಯೆ ಗೆಯ್ಯುವ ಎರಡು ಚರಮ ಶಕ್ತಿಗಳು. ಮಾನವನು, ಶಕ್ತಿಯೆಂದು ಕರೆಯಲ್ಪಡುವ ಕೇಂದ್ರೀಯ ಪ್ರಜ್ಞೆಯನ್ನು ಅರಿ ಯುವ ಸುದೈವಿಯಾಗಿರುವನೆಂದು ನಾನು ನಿಮಗೆ ತಿಳಿಸಿರುವೆ. ಇಷ್ಟೇ ಅಲ್ಲ. ತಾನು ಅನುಭೂತಿ ಪಡೆಯಬಲ್ಲೆನೆಂಬುದನ್ನೂ ಅವನು ಅರಿತಿದ್ದಾನೆ. ನಾವು ಇಚ್ಛಾ ಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಯೆಂದು ಕರೆಯುವ ತ್ರಿಕೋಣವು ಯಾವಾಗಲೂ ಮಾನವನ ಒಳಗೇ ಇದೆ. ಅದು ಮಾನವನಲ್ಲಿ ಅವ್ಯಕ್ತವಾಗಿದೆ. ಅವನೂ ಅದನ್ನು ಮರೆತಿದ್ದಾನೆ. ಈಗ ಸಂಪೂರ್ಣ ಜೀವನ-ಮಾರ್ಗವೆಂದರೆ, ದಿವ್ಯ ಆನಂದವನ್ನೂ ಮತ್ತು ಆ ಪ್ರಜ್ಞೆಯನ್ನೂ ಅರಿಯುವುದೇ ಆಗಿದೆ. ಮತ್ತು ನಾವು ಒಂದು ವೇಳೆ, ಈ ಪ್ರಜ್ಞೆಯನ್ನು ಅರಿತರೆ, ಆಗ ನಾವು ಯಾವು ದನ್ನು ಪ್ರಕೃತಿ ಶಕ್ತಿ ಎಂದು ಹೆಸರಿಸಿರುವೆವೋ, ಅದರ ರೂಪಾಂತ್ರೀಕರಣವಾಗು ತ್ತದೆ. ರೂಪಾಂತ್ರೀಕರಣದ ಬಳಿಕ, ಈ ಪ್ರಕೃತಿ ಶಕ್ತಿಯೂ ಚೈತನ್ಯ ಶಕ್ತಿಯೇ ಆಗುತ್ತದೆ. ಆಗ ಜಡ ಶಕ್ತಿಯ ಮಾತೇ ಇಲ್ಲ. ಜಡಶಕ್ತಿಯು ಯಾವಾಗಲೂ

ಸಮಸ್ಯೆಗಳನ್ನು ತಂದೊಡ್ಡುತ್ತದೆ. ಅದು ಸೀಮಿತವಾಗಿದೆ. ನಮ್ಮ ಇಂದ್ರಿಯಗಳನ್ನು ಸೀಮಿತಗೊಳಿಸುತ್ತದೆ. ಅದು ನಮ್ಮ ವಿಷಯಗತ ಗ್ರಹಿಕೆಯನ್ನು ಸೀಮಿತಗೊಳಿಸುತ್ತದೆ. ಅದು ನಮ್ಮ ಬುದ್ಧಿಯನ್ನು ಸೀಮಿತಗೊಳಿಸುತ್ತದೆ. ಅದು ನಮ್ಮ ಪ್ರಜ್ಞೆಯನ್ನು ಪೂರ್ಣವಾಗಿ ದೇಹಗತವಾಗಿ ಮಾಡಿದೆ. ದೇಹವೇ ನಾನೆಂಬ ಭಾವವನ್ನು ನಾನು, ದೇಹಾತ್ಮ ಬೋಧ ಎಂದು ಕರೆಯುವೆ. ಮತ್ತು ಅದರಿಂದ ನನ್ನ ಪ್ರಜ್ಞೆಯು ತೀರ ಸೀಮಿತವಾಗಿದೆ. ಮನವು ಸಂಸ್ಕಾರಗಳನ್ನು ಹೊಂದಿದೆ. ಮತ್ತು ಈ ಸಂಸ್ಕಾರಗಳು ಕರ್ಮಗಳಿಗನುಗುಣವಾಗಿರುತ್ತವೆ. ಮತ್ತು ಇವುಗಳೆಲ್ಲವೂ ಪ್ರಕೃತಿ ಶಕ್ತಿಯ ಸಂಜಾತವಲ್ಲದೆ ಬೇರೇನಲ್ಲ. ಈ ಪ್ರಕೃತಿ ಶಕ್ತಿಯು ಪ್ರಚಂಡ ಬಲವಾಗಿದೆ. ಇದು ಲಕ್ಷಾಂತರ ವರ್ಷಗಳಿಂದ, ಅಷ್ಟೇಕೆ, ಸೃಷ್ಟಿಯ ಆದಿಯಿಂದ ಪ್ರಧಾನವಾಗಿದೆ ಮತ್ತು ಅದರ ಪರಮಾಧಿಕಾರವು ನಡೆದೇ ಇದೆ. ಪ್ರಕೃತಿ ಶಕ್ತಿಯ ಈ ಪರಮಾಧಿಕಾರದಲ್ಲಿ ಅತ್ಯಂತ ಮುಖ್ಯವಾದುದೆಂದರೆ, ದೇಶ ಮತ್ತು ಕಾಲಗಳ ಪ್ರಜ್ಞೆ. ಇದು ಪ್ರಕೃತಿ ಶಕ್ತಿಯ ಫಲಿತವಷ್ಟೇ. ಯಾವಾಗ ನಾನು ಪ್ರಕೃತಿ ಶಕ್ತಿಯಲ್ಲಿ ಸೀಮಿತಗೊಂಡು, ಅದರೊಂದಿಗೆ ತಾದಾತ್ಮ್ಯ ಹೊಂದಿದೆನೋ, ಆಗ ದೇಶ ಮತ್ತು ಕಾಲಗಳ ಪ್ರಜ್ಞೆಯೂ ಬಂದಿತು. ಈ ದೇಶ ಮತ್ತು ಕಾಲಗಳೆಂದರೆ, ಒಂದು ಬಿಂದುವು ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸುವುದೇ ಆಗಿದೆ. ಇದು ನಡೆದೇ ಇರುತ್ತದೆ. ಮತ್ತು ನಾನು ಇಲ್ಲಿಯೇ ಯಾವುದೊಂದು ವಿಶೇಷ ಬಿಂದುವಿನಲ್ಲಿ ಸ್ಥಿತಿಶೀಲನಾಗಿ ಸೀಮಿತವಾಗಿದ್ದೇನೆ. ಇನ್ನು ನಾನು ಪ್ರಜ್ಞೆಯ ಗತಿಯನ್ನು ಗಮನಿಸುವೆ. ಮತ್ತು "ನಾನು ಇಂಥ ದಿನ ಜನಿಸಿದೆ. ಇವು ನನ್ನ ಬಾಲ್ಯದ ದಿನಗಳು; ಇದು ನನ್ನ ವೃದ್ಧಾಪ್ಯದ ವಯಸ್ಸು; ಈಗ ನಾನು ದೇಹ ಬಿಡಬೇಕು. ನಾನು ಸಾಯಬೇಕು" ಎಂದು ಮುಂತಾಗಿ ಹೇಳುತ್ತೇನೆ. ಈ ಗ್ರಹಿಕೆಯು ಹಾಗೆಯೇ ಸಾಗುತ್ತದೆ. ಮತ್ತು ಕಾಲಾಗ್ನಿ ರುದ್ರ ಎಂಬ ಈ ಪ್ರಚಂಡ ಶಕ್ತಿಯು ಅಥವಾ ಗಮನ ಶಕ್ತಿಯು ನಮ್ಮ ಜೀವನವನ್ನು ಹರಣ ಮಾಡುತ್ತದೆ. ಆರ್ಥಾತ್ ನಮ್ಮ ಅಮರ ಪ್ರಜ್ಞೆಯನ್ನು ಮರ್ತ್ಯವನ್ನಾಗಿ ಮಾಡುತ್ತದೆ. ಮತ್ತು ನಾವು ಅದಕ್ಕೆ ಪೂರ್ಣ ಅಧೀನರಾಗುತ್ತೇವೆ. ಹೀಗೆ, ನಮ್ಮ ಇಡೀ ಪ್ರಜ್ಞೆಯು ಪ್ರಕೃತಿಗೆ ಅಧೀನವಾಗಿದೆ. ಪ್ರಕೃತಿಯು ಯಾವಾಗಲೂ ಆಳುತ್ತದೆ. ಆದ್ದರಿಂದ ನಾವು ದುರ್ಬಲರಾಗಿದ್ದೇವೆಂದು ಭಾವಿಸುತ್ತೇವೆ; ಮತ್ತು ನಾವು ಏನನ್ನಾದರೂ; ಮಾಡಲು ಅಸಮರ್ಥರಾಗಿದ್ದೇವೆಂದು ಭಾವಿಸುತ್ತೇವೆ. ನಾವು ಕೇವಲ ಇಂದ್ರಿಯ ಮೂಲಕ ನೋಡಬಲ್ಲೆವು; ಇಂದ್ರಿಯಗಳಿಲ್ಲದೆ ಕಾಣಲಾರೆವು.

ಮನವೇನೋ ಕ್ರಿಯಾಶೀಲವಿರಬಹುದು. ಮನವು ಒಂದು ವಿಶೇಷ ಕಲ್ಪನೆ ಹೊಂದಿರಬಹುದು. ಆದರೆ, ತನ್ನ ಸೃಷ್ಟಿಯಲ್ಲಿ ಏನಿದೆಯೋ ಇಲ್ಲವೆ ಯಾವುದಕ್ಕಾಗಿ ಅದು ತನ್ನನ್ನು ಸಕ್ಷಮವೆಂದು ತಿಳಿಯುವುದೋ, ಇಲ್ಲವೆ "ನಾನು ಇಷ್ಟು ಮಾತ್ರ ಮಾಡಬಲ್ಲೆ" ಎಂದು ತಿಳಿಯಬಲ್ಲದೋ, ಅಷ್ಟನ್ನು ಮಾತ್ರ ಮನವು ಮಾಡಬಲ್ಲದು. ಹೀಗೆ ನನ್ನ ಕಲ್ಪನೆಯು, ನನ್ನ ತಿಳಿವಳಿಕೆಯು, ನನ್ನ ಜೀವನದ ರೀತಿಯು, ಅಷ್ಟೇಕೆ, ಸರ್ವವೂ ನನ್ನ ಇಂದ್ರಿಯ–ಮೂಲಕ, ಮನದ ಮೂಲಕ ಮತ್ತು ಬುದ್ಧಿಯ ಮೂಲಕ ಮಾತ್ರ, ಅನುಭವಿಸಬಲ್ಲ ಕಲ್ಪನೆಯತ್ತ ಸಂಪೂರ್ಣವಾಗಿ ಚಲಿಸುತ್ತಿರುತ್ತದೆ. ಇಲ್ಲವೆ ಸುತ್ತುತ್ತಿರುತ್ತದೆ. ಮತ್ತು ನಾನು "ಓಹೋ. ಇದು ಸರಿ." ಎಂದು ಭಾವಿಸುವೆ. ಹೀಗೆ, ದೇವರೂ ಸಹ, ನನ್ನ ಗ್ರಹಿಕೆಯಲ್ಲಿಯೇ, ನನ್ನ ಬೌದ್ಧಿಕ ಪರಿಧಿಯಲ್ಲಿಯೇ ಇರಬೇಕು; ಎಂದು ನಾನು ಬಯಸುವೆ. ಇಲ್ಲವೆ ನನ್ನ ಅನುಭೂತಿಗಳೆಲ್ಲ ನನ್ನ ಜಡ ಇಂದ್ರಿಯಗಳ ಮೂಲಕ ಆಗಬೇಕೆಂದೂ ನನ್ನ ಬಯಕೆಯಾಗುತ್ತದೆ. "ಆಗ ಮಾತ್ರ, ನಾನು ದೇವರನ್ನು ಕಂಡೆನೆಂದು ಹೇಳಬಲ್ಲೆ. ಆಗ ಮಾತ್ರ ನಾನು ದೇವರ ಅಸ್ತಿತ್ವವನ್ನು ಒಪ್ಪುವೆ. ಆಗ ನಾನು ದೇವರು ಪ್ರಪಂಚದಲ್ಲಿ ಇರುವನೆಂದು ಸ್ವೀಕರಿಸುವೆ. ಇಲ್ಲವಾದರೆ ದೇವರೇ ಇಲ್ಲ ಹೋಗು; ಎನ್ನುವೆ. ಏಕೆಂದರೆ ನನ್ನ ಇಂದ್ರಿಯವು ಅವನನ್ನು ಕಂಡಿಲ್ಲ." ಇದು ಪ್ರಕೃತಿಯ ಫಲಿತವಷ್ಟೇ. ಪ್ರಕೃತಿಯೇ ನಮ್ಮನ್ನು ಈ ರೀತಿ ಮಾಡಿ ಇರಿಸಿದೆ.

ಈಗ, ಪ್ರಕೃತಿಯು ಪ್ರಧಾನವಾಗಿರುವ ತಥ್ಯವನ್ನು ನಾವು ಅಲ್ಲಗಳೆಯಲಾರೆವು. ಅದು ಯಾವಾಗಲೂ ಪ್ರಧಾನವಾಗಿರುತ್ತದೆ. ಮಿಲಿಯಗಟ್ಟಳೆ ವರ್ಷದಿಂದ ಅದು ಪ್ರಧಾನವಾಗಿಯೇ ಇರುತ್ತದೆ. ಇನ್ನೂ ಸಹ, ಪ್ರಧಾನವಾಗಿಯೇ ಇದೆ. ಆದರೆ ಇರುವ ಪ್ರಶ್ನೆ ಎಂದರೆ, ಇಷ್ಟೊಂದು ಬುದ್ಧಿಶಾಲಿಯಾದ ಮಾನವನು ತನ್ನ ಉನ್ನತ ಬುದ್ಧಿಯಿಂದ ಪ್ರಕೃತಿಯನ್ನು ಎದುರಿಸಿ ಹೋರಾಡಲು ಪ್ರಯತ್ನಿಸುತ್ತಿದ್ದಾನೆ. ಆಧುನಿಕ ವಿಜ್ಞಾನದ ಮೂಲಕವೂ ಸಹ, ಅವನು ಪ್ರಕೃತಿಯನ್ನು ಅಲ್ಲಗಳೆಯ ಬಯಸುತ್ತಾನೆ. ಮತ್ತು ಅವನು ಅದರಲ್ಲಿ ಹೊಸ ಹೊಸ ನಿಯಮಗಳನ್ನು ಕಂಡು ಹಿಡಿಯಲು ಬಯಸುತ್ತಾನೆ. ಉದಾ: ಸಾಪೇಕ್ಷ ತತ್ತ್ವ ಸಿದ್ಧಾಂತ, ಮೊತ್ತ ಸಿದ್ಧಾಂತ (Theory of quamtums), ಅಂತರಿಕ್ಷದಲ್ಲಿ, ಅಂತರಿಕ್ಷದಾಚೆಗೆ ಯಾನ, ರಹಸ್ಯಪುಯ ಖಗೋಳದ ಮೂಲ್ಯಗಳನ್ನು ಅರಿಯುವುದು, ಇತ್ಯಾದಿ ವಿಷಯಗಳಲ್ಲಿ ಮಾನವನು ತನ್ನ ಬುದ್ಧಿಯಿಂದ ಪ್ರಯತ್ನವನ್ನು ಮುಂದುವರಿಸಿದ್ದಾನೆ. ಅವನು

ಪ್ರಕೃತಿಗೆ ಆಹ್ವಾನ ನೀಡಬಯಸಿದ್ದಾನೆ. ಆದರೂ ಸಹ, ಅವನ ಮಾರ್ಗವು ಸೀಮಿತವಾಗಿದೆ. ಅವನ ನಿಯಮಗಳು ಸೀಮಿತವಾಗಿವೆ. ವಿಜ್ಞಾನ ಮೂಲಕ ಪ್ರಕೃತಿಯನ್ನು ಅರಿಯುವ ಅವನ ವಿಧಾನಗಳು ಸೀಮಿತವಾಗಿವೆ. ಅಂತೂ ಅವನು ಪ್ರಕೃತಿಯ ಉನ್ನತ ರಹಸ್ಯವನ್ನು ಅರಿಯುವ, ಇಲ್ಲವೆ ಜಡಶಕ್ತಿಯನ್ನು ತನ್ನ ಸ್ವಂತ ಸುಖ-ಸೌಕರ್ಯಗಳಿಗಾಗಿ ಬಳಸಿಕೊಳ್ಳುವ ದಿನವು ಬಂದೇ ಬರುತ್ತದೆ. ಅಷ್ಟೇ ಏಕೆ? ಅಂತರಿಕ್ಷದಲ್ಲಿ ನಾವು ನಮ್ಮ ಸೌಧಗಳನ್ನು ಹೊಂದಬಲ್ಲೆವು ಮತ್ತು ಅಲ್ಲಿ ಹೋಗಿ ಇರಬಲ್ಲೆವು. ನಾವು ಅಂತರಿಕ್ಷದೊಂದಿಗೆ ಸಂಪರ್ಕ ಸ್ಥಾಪಿಸಬಲ್ಲೆವು. ನಾವು ಬೇರೆ ಬೇರೆ ಗ್ರಹಗಳಿಗೆ ಹೋಗಬಲ್ಲೆವು. ನಾವು ಅವುಗಳೊಂದಿಗೆ ಸಂಪರ್ಕಿಸಬಲ್ಲೆವು. ಈ ಎಲ್ಲ ಸಂಗತಿಗಳು ಮಾನವನ ಬುದ್ಧಿಯಿಂದ ಸಾಧ್ಯವಾಗಬಲ್ಲವು. ಏಕೆಂದರೆ, ಮಾನವನ ಬುದ್ಧಿಯು ದಿನದಿಂದ ದಿನಕ್ಕೆ ಅಧಿಕಾಧಿಕ ಮೊನಚಾಗುತ್ತದೆ. ಹೀಗೆ ಇದು ಸಾಧ್ಯವಿದೆ. ಇದು ಸಾಧ್ಯವಿಲ್ಲವೆಂದು ನಾನು ಹೇಳಲಾರೆ. ಆದರೆ, ಕೊನೆಗೆ ಅಲ್ಲಿಯಾದರೂ ಏನುಂಟು? ನಾವು ನಮ್ಮ ಇದೇ ಮನವನ್ನು ಅಲ್ಲಿಗೆ ಒಯ್ಯುತ್ತೇವೆ. ಇದೇ ಬುದ್ಧಿಯನ್ನು ನಮ್ಮೊಂದಿಗೆ ಒಯ್ಯುತ್ತೇವೆ. ಆಧುನಿಕ ವಿಜ್ಞಾನದೊಂದಿಗೆ ನಮ್ಮ ಬುದ್ಧಿಯೂ ವಿಕಾಸಗೊಂಡಿದೆಯೆಂಬುದರಲ್ಲಿ ಸಂದೇಹವಿಲ್ಲ. ಆದರೆ, ಅದಿನ್ನೂ ಪ್ರಕೃತಿಯ ನಿಯಂತ್ರಣದಲ್ಲಿಯೇ ಇದೆ. ಆದು ಪ್ರಕೃತಿ ವಿಜ್ಞಾನವನ್ನು ಅಧ್ಯಯನ ಮಾಡಿದ್ದರೂ ಸಹ, ಅದರ ಗತಿ ಇಷ್ಟೇ ಇದೆ. ಹೀಗೇಕೆ? ಏಕೆಂದರೆ, ಮಾನವನು ತನ್ನ ಅಂತಃಪ್ರಜ್ಞೆಯನ್ನು ಸಂಪೂರ್ಣವಾಗಿ ದುರ್ಲಕ್ಷಿಸಿದ್ದಾನೆ. ಅದನ್ನವನು ಅರಿಯಬೇಕಾಗಿದೆ. ಆಧುನಿಕ ಮನಸ್ತತ್ತ್ವ ಶಾಸ್ತ್ರವು ತುಂಬಾ ವಿಕಾಸಗೊಂಡಿದ್ದರೂ ಸಹ,ಅದು ಭೌತ ವಿಜ್ಞಾನವನ್ನೇ ಅಪ್ಪಿಕೊಳ್ಳಲು ಯತ್ನಿಸುತ್ತದೆ. ಹೀಗೆ, ಅದು ಜಡ ವಿಜ್ಞಾನವನ್ನು ಅಪ್ಪಿಕೊಂಡರೆ, ಆಂತರ್ಯದಲ್ಲಿ ಸೀಮಿತವಾಗುತ್ತದೆ. ಹಾಗಾದರೆ, ಅದು ಉನ್ನತೋನ್ನತ ವಸ್ತುಗಳನ್ನು ಸಾಧಿಸಲಾರದು.

ಅದೇನೇ ಇರಲಿ; ನಾವು ಶಾಂತ ಮತ್ತು ಸ್ಥಿರ ಚಿತ್ತ ಹೊಂದಿದ್ದರೆ, ಮತ್ತು ನಮ್ಮನ್ನೇ ನಾವು ಅರಿಯಲು ಪ್ರಯತ್ನಿಸಿದರೆ, ಮತ್ತು ನಾವು ಆಂತರಿಕ ಜೀವನ ಮೌಲ್ಯಗಳನ್ನು ಅರಿತುಕೊಂಡರೆ, ನಮ್ಮ ಆಂತರಿಕ ಜೀವನವು ಎಷ್ಟು ಸುಂದರವಾಗಿದೆ? ಎಷ್ಟು ಉದಾತ್ತವಾಗಿದೆ! ಅದೆಷ್ಟು ಅಪಾರ ಶಕ್ತಿ ಸೌಂದರ್ಯಗಳನ್ನು ಹೊಂದಿದೆ? ಎಂಬುದನ್ನು ಅರಿಯಬಹುದು. ಇದನ್ನೆಲ್ಲ ಅರಿತಾಗ ಮಾತ್ರ, ನಮ್ಮ ಜೀವನವು, ಅಥವಾ ಜೀವನಾಭಿಮುಖೀ ಹಾದಿಯು ಪರಿಪೂರ್ಣವಾಗಬಹುದು.

ಇದೆಲ್ಲ ಏನು? ನಾವು ಯಾವಾಗ ನಮ್ಮ ಅಂತಃಪ್ರಜ್ಞೆಯನ್ನು ಅರಿತುಕೊಳ್ಳುವೆವೋ, ಮತ್ತು ಅದರ ಸ್ವಭಾವವನ್ನು, ಭಾವ-ಮೂಲವನ್ನು, ಸದ್ಗುಣಗಳ ಮೂಲವನ್ನು ಅರಿತುಕೊಳ್ಳುವೆವೋ, ಆಗ ಅದನ್ನೇ ಪೂಜೆ ಎನ್ನುತ್ತಾರೆ. ಅದಿಷ್ಟೇ ಅಲ್ಲ. ನಾವು ಈ ಸತ್ತ್ವಗುಣವನ್ನೂ ಅತಿಶಯಿಸಿದರೆ, ಅದೆಂಥ ಅದ್ಭುತ ವಸ್ತು! ಅದನ್ನೇ ಜೀವನದ ಚರಮ ಮತ್ತು ಪರಮ ಲಕ್ಷ್ಯವೆಂದು ಕರೆಯಬಹುದು. ಇಲ್ಲವೆ ನಿಮ್ಮೊಳಗಿನ ಉಚ್ಚತಮ ಶಕ್ತಿ ಕ್ಷಮತೆಗಳ ಸಂಪಾದನೆ ಎಂದೂ ಕರೆಯಬಹುದು. ಒಟ್ಟಾರೆ, ಆ ಉಚ್ಚತಮ ಶಕ್ತಿಯನ್ನೇಕೆ ಪಡೆಯುವುದು? ಏಕೆಂದರೆ, ಅದರೊಂದಿಗೆ ಒಂದಾಗಲಿಕ್ಕಾಗಿ; ಅದರೊಂದಿಗೆ ಶ್ರುತಿಗೂಡಲಿಕ್ಕಾಗಿ.

ನಾನೀಗ ಶಕ್ತಿ ಸಾಧನೆಯನ್ನು ಕುರಿತು ಇನ್ನಷ್ಟು ಹೇಳ ಬಯಸುವೆ. ನಾನು ಈ ಮುನ್ನ, ಸ್ಥೂಲ, ಸೂಕ್ಷ್ಮ, ಮತ್ತು ಕಾರಣ ಎಂಬ ಮೂರು ವಸ್ತುಗಳಿವೆಯೆಂದು ಹೇಳಿದ್ದೇನಷ್ಟೇ. ಇವುಗಳೇ ಸ್ಥೂಲ ಶಕ್ತಿ, ಸೂಕ್ಷ್ಮ ಶಕ್ತಿ ಮತ್ತು ಕಾರಣ ಶಕ್ತಿಗಳಾಗಿವೆ. ತಾಂತ್ರಿಕ ಭಾಷೆಯಲ್ಲಿ, ಇಚ್ಛಾಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾಶಕ್ತಿಗಳೆಂದೂ ನಾನು ಹೇಳಿರುವೆ. ಯಾವಾಗ ಮಾನವನು ಜಡಶಕ್ತಿಯಿಂದ, ಪ್ರಕೃತಿಯಿಂದ ಮುಕ್ತನಾಗುವನೋ, ಆಗ ಇವುಗಳ ಮಿಣುಕು ನೋಟವನ್ನು ತನ್ನೊಳಗೆ ಪಡೆಯುತ್ತಾನೆ. ಇನ್ನು ಯಾವಾಗ ಅವನು ಸಂಪೂರ್ಣವಾಗಿ ಬೇರೆಯೇ ಆಗುವನೋ, ಆಗ ಆ ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳು ಜಡ ಶಕ್ತಿಯಾಗಿ ಕಾರ್ಯ ಮಾಡುತ್ತವೆ. ಮತ್ತು ಅಧೋಮುಖೀ ಗತಿಯು ಒಂದು ಬಿಂದುವಿನಿಂದ ಇನ್ನೊಂದರತ್ತ ಶುರುವಾಗುತ್ತದೆ. ಮತ್ತು ಇದು ವಿಷಯಗತ ಪ್ರಜ್ಞೆಯತ್ತ ಸಾಗುತ್ತದೆ. ಅಮೇಲೆ, ಕೂಡಲೇ, ಅದು ನಮ್ಮ ಜಾಗ್ರತ ಶಕ್ತಿಯ ಮೂಲಕ (ನಾವಿದನ್ನು ಕುಂಡಲಿನಿಯ ಜಾಗ್ರತಿ ಎನ್ನುತ್ತೇವೆ.) ಮರಳಿ ಕೇಂದ್ರದತ್ತ ಹೊರಳುತ್ತದೆ. ಅದು ಒಳ್ಳೇ ಆಳಕ್ಕೆ ಧಾವಿಸುತ್ತದೆ ಮತ್ತು ಪೂರ್ಣ ವರ್ತುಲಾಕಾರ ತಾಳುತ್ತದೆ. ಹೀಗೆ ನಿಮ್ಮ ಪ್ರಜ್ಞೆಯು ನಿಮ್ಮ ಸ್ವ-ರೂಪದೊಂದಿಗೆ ಸೇರುತ್ತದೆ. ಆಗ ನೀವು ಅಲ್ಲಿ ಸುಂದರವಾದ ಇಚ್ಛಾ, ಜ್ಞಾನ, ಕ್ರಿಯೆಗಳ ತ್ರಿಕೋಣವನ್ನು ಕಂಡುಕೊಳ್ಳುತ್ತೀರಿ. ಅದು ಇಚ್ಛಾ ಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾಶಕ್ತಿಗಳಲ್ಲಿ ಪರಿವರ್ತಿತವಾಗುತ್ತದೆ. ನಿನ್ನೆ ನಾನು ಶಕ್ತಿಯ ಸೂಕ್ಷ್ಮ ಉಪಾಸನೆಯನ್ನು ಕುರಿತು ಹೇಳಿದೆ. ನೀವು ಯಾವಾಗ ನಿಮ್ಮ ಅಹಂಕಾರವನ್ನು ಸಂಪೂರ್ಣವಾಗಿ ಸಮರ್ಪಿಸುವಿರೋ, ಮತ್ತು ಯಾವಾಗ ನಿಮ್ಮ ಪ್ರಜ್ಞೆಯು ಪೂರ್ಣವಾಗಿ ಮಗುವಿನಂತೆ

ಆಗುವುದೋ, ಆಗ ಅದೇ ಶಕ್ತಿಯ ಸೂಕ್ಷ್ಮ ಉಪಾಸನೆ ಎನಿಸುತ್ತದೆ. ಯಾವಾಗ ನೀವು ಹೇತುಗತವಾದ ನಿಮ್ಮ ಬಾಹ್ಯ ಭಾವಗಳನ್ನು ನಿಲ್ಲಿಸುವಿರೋ, ಮತ್ತು ಅವುಗಳನ್ನು ಆಂತರ್ಯದತ್ತ ಶ್ರುತಿಗೊಳಿಸುವಿರೋ, ಆಗ, ಶಕ್ತಿಯೇ ಕೇಂದ್ರವಾಗುತ್ತದೆ. (ಅದನ್ನು ಅಂಬಾ ಎನ್ನುತ್ತಾರೆ.) ಮತ್ತು ಆಗ ತ್ರಿಕೋಣದ ಬಿಂದುಗಳು ವಾಮ, ಜ್ಯೇಷ್ಠಾ ಮತ್ತು ರೌದ್ರಿಗಳಾಗುತ್ತವೆ. ಅರ್ಥಾತ್, ಯಾವಾಗ ಇಡೀ ವಿಶ್ವವೇ ಉತ್ಸಾರಿತವಾಗುವುದೊ, ಅಭಿವ್ಯಕ್ತವಾಗುವುದೋ, ಅಂಥ ಬಿಂದುವು, ಉತ್ಸವು, ನಿಮ್ಮೊಳಗೇ ಇರುತ್ತದೆ. ಅರ್ಥಾತ್ ನಿಮ್ಮ ಸಮಸ್ತ ವಿಚಾರಗಳು, ನಿಮ್ಮ ಸಮಸ್ತ ಬೌದ್ಧಿಕ ವಸ್ತುಗಳು, ಎಲ್ಲವೂ ನಿಲ್ಲುತ್ತವೆ. ಮತ್ತು ಆಲ್ಲಿ ನೀವು ಕೇವಲ ನಿಮ್ಮೊಳಗೆ ಪ್ರಜ್ಞೆಯೊಂದೇ ಪ್ರವಹಿಸುವುದನ್ನು ಕಂಡುಕೊಳ್ಳುತ್ತೀರಿ. ಅಲ್ಲಿ ನೀವು ನಿಮ್ಮ ಶುದ್ಧ ಅಹಂಕಾರವನ್ನೂ ನೀಗಿದರೆ, ಆಗ ಒಂದೆಡೆಗೆ ನೀವು ವಾಮಶಕ್ತಿ, ವಾಮೇಶ್ವರಿಯಾಗುತ್ತೀರಿ. ಮತ್ತು ಇನ್ನೊಂದೆಡೆಗೆ ವಾಮೇಶ್ವರಿಯ ಉಪಾಸಕರಾಗುತ್ತೀರಿ. ಹೀಗೆ, ನಿಮ್ಮ ಭಕ್ತಿಗತ ಪ್ರಜ್ಞೆಯಿಂದ ನೀವು ಈ ಸ್ಥಿತಿಯನ್ನು ಹೊಂದುತ್ತೀರಿ ಮತ್ತು ಆಗ ವಾಮೇಶ್ವರಿಯನ್ನು ಉಪಾಸಿಸುತ್ತೀರಿ. ಹೀಗೆ ನೀವು ನಿಮ್ಮಲ್ಲಿಯೇ ಅವಳನ್ನು ಅರಿಯುತ್ತ ಹೋದಂತೆ, ಕೆಲವೊಮ್ಮೆ ಈ ವಾಮೇಶ್ವರಿಯು ನಿಮಗೆ ಮಾರ್ಗದರ್ಶನ ನೀಡಿದಂತೆ ಭಾಸವಾಗುತ್ತದೆ. ಮತ್ತು ನೀವು ಅವಳನ್ನು ದರ್ಶಿಸುತ್ತೀರಿ. ಅವಳು ನಿಮಗೆ ಇಡೀ ವ್ಯಕ್ತ ವಿಶ್ವ ಮತ್ತು ವಿಜ್ಞಾನಗಳನ್ನು ಅವುಗಳ ರಹಸ್ಯಗಳನ್ನು, ಅವುಗಳ ನಿಯಮಗಳನ್ನು, ಪ್ರತಿಯೊಂದನ್ನು ಸೃಷ್ಟಿಸುತ್ತಾಳೆ. ಮತ್ತು ನೀವು ಸಹ, ಅರಿಯುತ್ತ ಹೋಗುತ್ತೀರಿ. ಮತ್ತು ಯಾವುದು ಅಶುದ್ಧವಾಗಿದ್ದಿತೋ, ಅದು ಶುದ್ಧವಾಗುತ್ತ ಹೋಗುತ್ತದೆ. ನಿಮ್ಮ ಸೀಮಿತವಾದ ಬುದ್ಧಿಯು ಬೋಧಿಯಲ್ಲಿ ರೂಪಾಂತರಗೊಳ್ಳುತ್ತದೆ. ಮತ್ತು ಮೆಲ್ಲಮೆಲ್ಲನೆ ನಿಮ್ಮ ಬುದ್ಧಿಯು ಸಂಪೂರ್ಣವಾಗಿ ಸಂದೇಹಗಳಿಂದ ಮುಕ್ತವಾಗುತ್ತದೆ. ಮತ್ತು ಕೂಡಲೇ ನೀವು ಯಾವಾಗ ವಾಮೇಶ್ವರಿ ಶಕ್ತಿಯನ್ನು ಅಪ್ಪಿಕೊಳ್ಳುವಿರೋ, ಆಗಸ್ವತಃ ವಾಮೇಶ್ವರಿಯಾಗುತ್ತೀರಿ.ಆ ಮೇಲೆ, ನಿಮ್ಮ ಆಂತರಿಕ ವ್ಯಷ್ಟಿ ಪ್ರಜ್ಞೆಯು-ಇನ್ನೂ ಸಂಪೂರ್ಣವಾಗಿ ಏಕೀಭವಿಸಿರುವುದಿಲ್ಲ. ಅಥವಾ ಪರಿಪೂರ್ಣವಾಗಿರುವುದಿಲ್ಲ. ಕಾರಣ, ನೀವು ಜ್ಯೇಷ್ಠಶಕ್ತಿಯತ್ತ ಸಾಗುತ್ತೀರಿ. ಬಳಿಕ, ಜ್ಯೇಷ್ಠಾ ಶಕ್ತಿಯೇ ನಿಮ್ಮನ್ನು ಊರ್ಧ್ವಮುಖಿಯಾಗಿ ಕರೆದೊಯ್ಯುತ್ತಾಳೆ. ಅವಳು ನಿಮ್ಮನ್ನು ಉಚ್ಚತರ ವಿಜ್ಞಾನದತ್ತ ಕರೆದೊಯ್ಯುತ್ತಾಳೆ. ಅವಳು ನಿಮಗೆ ಸಮಸ್ತ ಪ್ರಕಾರದ ಅಂತಃಪ್ರಜ್ಞೆ ಮತ್ತು ವಸ್ತುಗಳನ್ನು ನೀಡು

ತ್ತಾಳೆ. ಮತ್ತು ಯಾವಾಗ ನೀವು ಅವಳೊಂದಿಗೆ ಒಂದಾಗುವಿರೋ, ಆಗ ನೀವೇ ಜ್ಯೇಷ್ಠಾ ಶಕ್ತಿಯಾಗುವಿರಿ. ಅಲ್ಲಿ ನಿಮ್ಮ, ಅಪ್ಪುಗೆಯಂಶೂ ಇದ್ದೇ ಇದೆ. ಆದರೆ, ನಿಮ್ಮ ಪ್ರಜ್ಞೆಯು ಇನ್ನೂ ಪರಿಪೂರ್ಣವಾಗಿರುವುದಿಲ್ಲ. ಹೀಗೆ ನೀವು ಮುಂದೆ ರೌದ್ರಿ ಶಕ್ತಿಯೆಡೆಗೆ ಹೋಗುತ್ತೀರಿ. ನಿಮ್ಮ ಇಚ್ಛೆ, ಜ್ಞಾನ ಗಳೆರಡೂ ತುಂಬಾ ಶಕ್ತಿಯುತವಾಗುತ್ತವೆ. ಆಗ ಈ ವಾಮೇಶ್ವರಿ ಮತ್ತು ಜ್ಯೇಷ್ಠಾರ ಬಲವು ಕ್ರಿಯೆಯಾಗುತ್ತದೆ. ಆ ಕಾಲಕ್ಕೆ ನೀವು ಶಕ್ತಿಯನ್ನು ಸಂಪಾದಿಸುತ್ತೀರಿ. ಆ ಕಾಲಕ್ಕೆ ಇದು ವರೆಗೆ ಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟ ಕ್ರಿಯೆಯಲ್ಲ ಹೆಚ್ಚು ಬಲಯುತವಾಗುತ್ತದೆ. ಆದರೆ ನೀವು ಅಹಂಕಾರ ಪೂರಿತರಾಗಿರುವುದಿಲ್ಲ. ನಾನು ಇಷ್ಟೊಂದು ಶಕ್ತಿ ಪಡೆದಿರುವೆ' ಎಂದು ಭಾವಿಸುವುದಿಲ್ಲ. ಏಕೆಂದರೆ, ಮತ್ತೆ ನೀವು ಈ ಜ್ಞಾನ ಹಾಗೂ ಇಚ್ಛೆಗಳೆರಡನ್ನೂ ಸಮರ್ಪಿಸುತ್ತೀರಿ. ನೀವು ನಿಮ್ಮ ಗತಿಶೀಲ ಆಸೆಯನ್ನೂ, ಗತಿಶೀಲ ಇಚ್ಛೆಯನ್ನೂ ಮತ್ತು ಗತಿಶೀಲ ಆಂತರಿಕ ಜ್ಞಾನವನ್ನೂ–ನೀವು ಉನ್ನತ ಬೋಧಿ ಎಂದು ಯಾವುದನ್ನು ಕರೆಯುವರೋ ಅದನ್ನೂ–ದಿವ್ಯ ಮಾತೆಗೆ ಸಮರ್ಪಿಸುತ್ತೀರಿ. ಆ ಕಾಲಕ್ಕೆ ಅವಳನ್ನು ರೌದ್ರಿ ಎಂದು ಕರೆಯುತ್ತೀರಿ. ಆ ಕಾಲಕ್ಕೆ ನೀವೇ ರೌದ್ರಿಯಾಗಿದ್ದರೂ, ನೀವು ಅವಳನ್ನು ಇನ್ನೂ ಉಪಾಸಿಸುತ್ತೀರಿ. ಆ ಪೂಜೆಯು ಪೂರ್ಣವಾಗಿ ಆಂತರ್ಯದಲ್ಲಿಯೇ ನಡೆಯುತ್ತದೆ. ಒಳಗೆ ಏನು ನಡೆದೆಯೆಂಬುದನ್ನು ಯಾರೂ ನೋಡರು. ಈಗ ನಿಮ್ಮ ಮನವು ಸಹ, ದಂಗೆ ಏಳದು. ಏಕೆಂದರೆ, ಈಗ ಉನ್ನತ ಮನವಿರುತ್ತದೆ. ಮನವು ಉನ್ನತ ಮನ ಮತ್ತು ನಿಮ್ನ ಮನ ಎಂದು ವಿಂಗಡಿತವಾಗಿರುತ್ತದಷ್ಟೇ, ಉನ್ನತಮನವು ಗತಿಶೀಲವಾಗಿರುತ್ತದೆ. ಅದು ಯಾವಾಗಲೂ ಆಂತರ್ಯದಲ್ಲಿ ಕ್ರಿಯಾನ್ವಿತವಾಗಿರುತ್ತದೆ. ಇದಲ್ಲದೆ ಉನ್ನತ ಮನವು ಪೂರ್ಣವಾಗಿ ಕಾರ್ಯ-ಕಾರಣ ತತ್ತ್ವವನ್ನು ಮೀರುತ್ತದೆ. ಮತ್ತು ಶಕ್ತಿಯನ್ನು ಸ್ವೀಕರಿಸುವ ಆ ಉನ್ನತ ಮನವನ್ನು ನಾವು ಒಂದು ದೃಷ್ಟಿಯಿಂದ ಮನ ಎಂದು ಕರೆದರೂ, ಅದು ಪೂರ್ಣ ಗತಿಶೀಲ ಸತ್ತೆಯೇ ಆಗಿದೆ. ಅದು ಸರ್ವ ಪ್ರಕಾರದ ತಿಳಿವಳಿಕೆಗಳನ್ನು ಹೊಂದಿದೆ. ಮತ್ತು ಅದು ತನ್ನಲ್ಲಿಯೇ ದೃಢೀಕರಿಸಲ್ಪಡುತ್ತದೆ. ನೀವು ವಾಸ್ತವವಾಗಿ ರೂಪಗಳನ್ನು ನೋಡುತ್ತೀರಿ. ಆದರೆ, ಅವು ನೈಜ ಘನವಸ್ತುಗಳೆಂದು ನಿಮಗನಿಸುವುದಿಲ್ಲ. ವಾಸ್ತವವಾಗಿ, ಅವುಗಳು ಸಘನವಾಗಿಯೇ ಇರುತ್ತವೆ. ನಿಮ್ಮ ಇಂದ್ರಿಯ ಮೂಲಕ ನೋಡಿದುದಷ್ಟೇ ಸಘನವೆಂದು ನಿಮ್ಮ ಅನಿಸಿಕೆ. ನಿಜವಾಗಿ ಅದೇನೂ ಸಘನವಲ್ಲ. ಅದು ತೋರಿಕೆ ಮಾತ್ರ. ಅದು ಮಾಯೆಯಷ್ಟೇ,

ವಾಸ್ತವವಾಗಿ, ನಾವು ಮನದ ಮೂಲಕ ಶುದ್ಧ ಮನದ ಮೂಲಕ, ಉನ್ನತ ಮನದ ಮೂಲಕ ಯಾವುದನ್ನು ಗ್ರಹಿಸತ್ತೇವೆಯೋ ಅದು ಸ್ಫುರಣೆ ಎನಿಸುತ್ತದೆ. ಅಲ್ಲಿ ನಿಮಗೆ ದರ್ಶನಗಳಾಗುತ್ತವೆ. ಅಲ್ಲಿ ನೀವು ಬೋಧಿಯನ್ನು ಪಡೆಯುತ್ತೀರಿ. ಅದುವೇ ನಿಜವಾದ ಅನುಭೂತಿ, ಪ್ರಾರಂಭದಲ್ಲಿ ನೀವು ಅವುಗಳನ್ನು ಪಡೆದಾಗ, ಒಂದುವೇಳೆ, ನಿಮ್ಮ ಉಪಕರಣವು ಪರಿಶುದ್ಧವಾಗಿರದಿದ್ದರೆ, ಆಗ ಅಹಂಕಾರದ ಸ್ಪರ್ಶವಾಗುತ್ತದೆ. ಆಗ ನಿಮ್ಮ ಅಹಂಕಾರವು ಇನ್ನೂ ಅಧಿಕ ಪ್ರಾಬಲ್ಯವಾಗದಿರದು. ನೀವು ನಿಮ್ಮೊಳಗೇ ಹೋರಾಡುತ್ತೀರಿ. ಮತ್ತು ನಿಮ್ಮಲ್ಲಿ, ನಿಮ್ಮ ದೇಹದಲ್ಲಿ, 'ನಾನು ತುಂಬಾ ಪ್ರಬಲನಾಗಿರುವೆ. ತುಂಬಾ ಶ್ರೇಷ್ಠನಾಗಿರುವೆ" ಎಂಬುದನ್ನು ಕಂಡುಕೊಳ್ಳುತ್ತೀರಿ. ಹೀಗೆ, ನೀವು ಯಾವಾಗಲೂ ನಿಮ್ಮ ಅಹಂಕಾರವನ್ನು ಕುರಿತು ಹೆಚ್ಚು ಹೆಚ್ಚು ವಿಚಕ್ಷಣಕರಾಗಿರಬೇಕು. ಇನ್ನಷ್ಟು ವಿಚಕ್ಷಣಕರಾಗಬೇಕು. ನೀವು ಯಾವಾಗಲಾದರೂ ನಿಮ್ಮ ಅಹಂಕಾರವನ್ನು ಮರುಳುಗೊಳಿಸಲು ಕೆಳಕ್ಕಿಳಿದರೆ, ಆಗ, "ಇದೆಲ್ಲ ದಿವ್ಯ ಮಾತೆಯ ಕೃಪೆ" ಎಂದು ನೀವು ಹೇಳಬೇಕು. ಏಕೆಂದರೆ, ಈ ವಸ್ತುಗಳನ್ನು ನನ್ನ ಅಹಂಕಾರವಂತೂ ಪಡೆದಿಲ್ಲ. ಈ ಎಲ್ಲ ವಸ್ತು ಲಾಭವಾದರೂ ಸಹ, ನೀವು ನಿಮ್ಮ ಅಹಂಕಾರವನ್ನು ಮರುಳುಗೊಳಿಸುವಿಕೆಯ ಬಗೆಗೆ ತುಂಬಾ ಎಚ್ಚರದಿಂದಿರಬೇಕು. ಏಕೆಂದರೆ, ಇಂದ್ರಿಯ, ಮನಗಳೊಂದಿಗೆ, ಪ್ರಾಪಂಚಿಕ ವಸ್ತುಗಳೊಂದಿಗೆ ಸಂಬಂಧಿಸಿದ ನನ್ನ ದೇಹದ ಫಲವೇನಲ್ಲ, ಈ ವಸ್ತುಲಾಭ. ಈ ಪ್ರಕಾರದ ಅಹಂಕಾರದಿಂದ ನಾವು ಇಂಥ ವಸ್ತುಗಳನ್ನು ಪಡೆಯಲಾರೆವು. ಆದರೆ, ಆನಂದದ ಕಾರಣ, ದೈವೀ ಕೃಪೆಯ ಕಾರಣ, ನಾವು ಪಡೆಯುತ್ತೇವಷ್ಟೇ. ಮತ್ತು ಈ ದೈವೀ ಕೃಪೆಯು ಕಾರ್ಯಕಾರಣ ತತ್ತ್ವದ ಎಲ್ಲೆಯಲ್ಲಿ ಇಲ್ಲ. ಇದು ಹೇಗೆ ಪ್ರಾಪ್ತವಾಗುತ್ತದೆ? ಎಂಬುದನ್ನು ನಾವು ಯಾವುದೇ ಕಾರ್ಯಕಾರಣ ತತ್ತ್ವವನ್ನು ಅನ್ವಯಿಸಿ ಹೇಳಲಾರೆವು. ಏಕೆಂದರೆ, "ನಾನು ಈ ಕೃಪೆಯನ್ನು ಹೇಗೆ ಪಡೆದೆ?"ಎಂಬುದು ನಿಮ್ಮ ಬೌದ್ಧಿಕ ಪ್ರಶ್ನೆಯಷ್ಟೇ. ನೀವು ಕೃಪೆಯ ಆಚೆಗೆ ಅರಿಯಲು ಯತ್ನಿಸಿರಿ. ಅಲ್ಲಿ ಕರ್ಮ-ಸಂಸ್ಕಾರಗಳು ಇಲ್ಲವೆಂಬುದನ್ನು ಕಂಡುಕೊಳ್ಳುತ್ತೀರಿ. ಅಲ್ಲಿ ಕಾರ್ಯ ಕಾರಣ ತತ್ತ್ವವು ಅನ್ವಯಿಸುವುದಿಲ್ಲವೆಂಬುದನ್ನೂ ಕಂಡುಕೊಳ್ಳುತ್ತೀರಿ.ಅದೇನು ಆಕಸ್ಮಿಕವೇ? ಇಲ್ಲ. ಹಾಗಾದರೆ, ಅದು ಪೂರ್ವಗ್ರಹೀತವೇ? ಅದನ್ನು ಯಾವ ಭಾಷೆಯೂ ನಿರ್ದೇಶಿಸದು. ಈ ಕೃಪೆಯು ಒಂದು ಗತಿಶೀಲ ವಸ್ತುವಾಗಿದೆ. ಶಕ್ತಿಪಥವು ಯಾವುದೇ ಕಾರಣ ಇತ್ಯಾದಿಗಳೊಂದಿಗೆ ಸಂಬಂಧಿಸಿಲ್ಲ. ಏಕೆಂದರೆ,

ಯಾವಾಗ ನೀವು ಪರಿಶುದ್ಧರಿರುವಿರೋ, ಆಗ ನೀವು ಪಡೆಯುವಿರಿ. ಆದರೆ ಹೀಗೆ ಏಕೆದೆ? ಏಕೆಂದರೆ, ಅದು ದಿವ್ಯ ಮಾತೆಯ ಕೃಪೆಯಾಗಿದೆ. ಮತ್ತು ಕೃಪೆಯು ಕಾರ್ಯ-ಕಾರಣ ತತ್ತ್ವದ ಅನ್ವಯಕ್ಕೊಳಗಾಗದು. ಅದಕ್ಕಾಗಿ ನಿಮ್ಮ ಶುದ್ಧ ಭಾವವಷ್ಟೇ ಬೇಕು. ಆದರೆ, ನೀವು ಅರಿತುಕೊಳ್ಳಲು ಯತ್ನಿಸಿರಿ. ನಿಮ್ಮ ಬುದ್ಧಿಯು, "ಅದು ಬರೀ ಕಲ್ಪನೆಯಷ್ಟೇ" ಎಂದು ಹೇಳಬರುತ್ತದೆ. ನಿಮ್ಮ ಅಹಂಕಾರವೂ, "ಅದು ಕಲ್ಪನೆ" ಎನ್ನುತ್ತದೆ. ಯಾವಾಗ ನೀವು ನಿಮ್ಮ ಅಹಂಕಾರವನ್ನು ಉನ್ನತ ವಸ್ತುಗಳೊಂದಿಗೆ ಶ್ರುತಿಗೂಡಿಸುವಿರೋ, ಯಾವಾಗ ನೀವು ಈ ಎಲ್ಲ ಉಚ್ಚತರ ಸಂಗತಿಗಳನ್ನು ಚೋಡಿಸಬಯಸುವಿರೋ,—ಅಂದರೆ ದಿವ್ಯಮಾತೆಯ ವಾಮ, ಜ್ಯೇಷ್ಠಾ ಮತ್ತು ರೌದ್ರೀ ಶಕ್ತಿಗಳನ್ನು ನಿಮ್ಮ ಅಹಂಕಾರದೊಂದಿಗೆ ಹೊಂದಿಸಬಯಸುವಿರೋ, ಆಗ ನೀವು ಏನಾದರೂ ಸ್ವಲ್ಪು ಒಳಿತು ಮಾಡಲು ಬಯಸುವುದರಿಂದ ಸಂಪೂರ್ಣವಾಗಿ ಸಂಕಟಗ್ರಸ್ತರಾಗುತ್ತೀರಿ, (ನೀವು, ಕೇವಲ ನಿರೀಕ್ಷಕರಾಗಿದ್ದರೂ ಸಹ, ನಿಮ್ಮೊಳಗೆ ಅನೇಕ ಮಾನಸಿಕ ಸಂಸ್ಕಾರಗಳು ಬರುತ್ತವೆ). ನಿಮ್ಮ ಮನವು ತೊಂದರೆಗಳ ಕೇಂದ್ರವಾಗುತ್ತದೆ. ಒಂದೆಡೆಗೆ ನೀವು ಏನನ್ನಾದರೂ ಮಾಡಬಯಸುತ್ತೀರಿ. ಮತ್ತು ಇನ್ನೊಂದೆಡೆಗೆ ನೀವು ತುಂಬಾ ತ್ರಸ್ತರಾಗಿದ್ದೀರಿ. ಈ ಪ್ರಕಾರದ ಪ್ರಜ್ಞೆಯು ನಿಮಗೆಂದೂ ಸಹಾಯ ನೀಡದು. ಇದನ್ನು ಲಕ್ಷಿಸಿರಿ. ಏಕೆಂದರೆ, ನಿಮ್ಮ ಅಹಂಕಾರವು ಇನ್ನೂ ಕ್ರಿಯಾಶೀಲವಾಗಿದೆ. ಅಹಂಕಾರದ ಹೇತುವಾದರೂ ಏನು? "ನೀವು ಅದರ ಬಗೆಗೆ ಸದಾ ಜಾಗರೂಕರಾಗಿರಿ" ಎಂದು ನಾನು ಹೇಳುತ್ತೇನೆ. ಆದ್ದರಿಂದ, ನೀವು ನಿಮ್ಮ ಆಂತರಿಕ ಗುರುವಿಗೆ ಶರಣಾಗಿರಿ; ಎಂದು ಯಾವಾಗಲೂ ಹೇಳುತ್ತಿರುತ್ತೇನೆ. 'ಓ! ನೀವು ನಮ್ಮ ಗುರು. ಅಂದ ಮೇಲೆ, ನೀವು ನಿಮ್ಮ ಪ್ರಜ್ಞೆಯನ್ನೇ ನಮ್ಮಲ್ಲಿಯೂ ಬೆಳೆಸಬೇಕು. ಮತ್ತು ನಮ್ಮನ್ನು ಬಳಸಿಕೊಳ್ಳಲು ನಮ್ಮ ತಲೆಯಲ್ಲಿ ಇರುವ ಹಳೆಯದೆಲ್ಲವನ್ನೂ ತೊಳೆದು ಹೊಸತನ್ನು ತುಂಬಬೇಕು." ಎಂದು ನೀವು ವಿಚಾರಿಸಕೂಡದು. ಹಾದಿ ಅದಲ್ಲ. ನೀವು ಉಪಾಸಿಸಿರಿ ಇಲ್ಲವೆ ಬಿಡಿರಿ. ನೀವು ನನಗೆ ಗೌರವ ಕೊಡಿರಿ ಇಲ್ಲವೆ ಬಿಡಿರಿ. ಅದು ಮಹತ್ವದ ಮಾತಲ್ಲ. ಒಂದು ವೇಳೆ, ನೀವು ಸತ್ಯ-ಸಾಧಕರಾಗಿದ್ದರೆ, ನಿಮಗೇ ಗೊತ್ತಾಗುತ್ತದೆ. ಆಗ, ನೀವು ನಿಮ್ಮ ಆಂತರಿಕ ಗುರುವನ್ನು ಅರಿತುಕೊಳ್ಳುತ್ತೀರಿ. ಮತ್ತು ಹೊರಗಿನ ಗುರುವನ್ನೂ ಅರಿತುಕೊಳ್ಳುತ್ತೀರಿ. ಏಕೆಂದರೆ, ಅವನು ನಮ್ಮ ಪ್ರಜ್ಞೆಯೇ ಹೊರತು ಬೇರೇನಲ್ಲ. ನೀವು ಎಷ್ಟು ಗತಿಶೀಲರೋ, ಅವನೂ

ಸಹ ಅಷ್ಟೇ ಗತಿಶೀಲನು. ನೀವು ಎಷ್ಟು ಸ್ವಾಧೀನರೋ, ಅವನೂ ಸಹ ಅಷ್ಟೇ ಸ್ವಾಧೀನನು. ಆದ್ದರಿಂದ, ನೀವು ಈ ಚಿಕ್ಕ ಚಿಕ್ಕ ವಿಷಯಗಳನ್ನು ಅರಿತು ಕೊಳ್ಳಿರಿ. ಅವು ನಿಮ್ಮೊಳಗೇ ಕ್ರಿಯಾಶೀಲವಾಗಿವೆ. ಉನ್ನತ ಆನಂದವು ನಿಮ್ಮೊಳಗೇ ಇದೆ. ಅದನ್ನು ಸ್ವೀಕರಿಸಲು ಪ್ರಯತ್ನಿಸಿರಿ. ಹೀಗೆ, ಇಂದು ನಾನು ಕೇವಲ ಅಂತರಂಗ ಪೂಜೆಯನ್ನು ಕುರಿತು ಹೇಳಿರುವೆ. ಅದು ಹೇಗೆ ನಡೆಯುತ್ತಿದೆ? ನೀವು ಹೇಗೆ ಸಮರ್ಪಿಸಿಕೊಳ್ಳಬೇಕು? ಮತ್ತು ಈ ಜ್ಞಾನ ಶಕ್ತಿ, ಇಚ್ಛಾ ಶಕ್ತಿ ಮತ್ತು ಕ್ರಿಯಾಶಕ್ತಿಗಳು ನಿಮ್ಮ ವೈಯಕ್ತಿಕ ಭಕ್ತಿಯಲ್ಲಿ ಏನನ್ನು ಪ್ರತಿನಿಧಿಸುತ್ತವೆ? ಎಂಬುದನ್ನೂ ಹೇಳಿದ್ದೇನೆ. ನೀವು ನಿಮ್ಮ ಇಚ್ಛೆಯನ್ನು ಅರ್ಪಿಸಬೇಕು. ಅರ್ಥಾತ್ ನೀವು ಜೀವನವಿಡೀ, ನಿಮ್ಮ ಬಾಹ್ಯ ಆವಿಷ್ಕಾರಗಳನ್ನೆಲ್ಲ ಪೂರ್ಣವಾಗಿ ನಿಲ್ಲಿಸಬೇಕು. ಇವುಗಳನ್ನು ಸದಾ ನಿಲ್ಲಿಸಬೇಕು. ನಾವು ಥಟ್ಟನೆ ತಿಳಿಯಬೇಕು: 'ಏನೇ ಆಗಲಿ; ನನ್ನ ಒಳಿತಿಗೇ ಆಗುತ್ತಿದೆ.ಮತ್ತು ಎಲ್ಲವೂ ನನ್ನ ಮಾತೆಯ ಮೇಲೆ, ಶಕ್ತಿಯ ಮೇಲೆ ಅವಲಂಬಿಸಿದೆ. ಅವಳು ತನ್ನ ಲೀಲೆಯನ್ನು ತೋರಲಿ. ನನ್ನ ಜ್ಞಾನವು ನನ್ನದಲ್ಲ. ಅದು ಅವಳ ಕೊಡುಗೆ. ನನ್ನ ಕ್ರಿಯೆಗಳು ಸಂಪೂರ್ಣವಾಗಿ ಅವಳನ್ನೇ ಅವಲಂಬಿಸಿವೆ." ಹೀಗೆ, ನಾವು ಸಮರ್ಪಿಸಿದ ಬಳಿಕ (ಇದು ಪ್ರಥಮ ಸ್ತರವಾಯಿತು), ಯಾವಾಗ ನನ್ನ ವ್ಯಷ್ಟಿ–ಪ್ರಜ್ಞೆ, ನನ್ನ ವ್ಯಷ್ಟಿ–ಉಪಕರಣಗಳು ದಿವ್ಯ ಮಾತೆಯ ಮೂಲಕ ಪ್ರವಹಿಸುವವೋ, ಆಗ ಜೀವನದ ಎರಡನೆಯ ಸ್ತರವು ಬರುತ್ತದೆ. ಆಗ ನಾನು ಅಂತಃಪ್ರಜ್ಞೆಯನ್ನು ಉಪಾಸಿಸುತ್ತೇನೆ.

೯

ಅದೃಶ್ಯ ಸಿದ್ಧರ ಸಾಮ್ರಾಜ್ಯ

ಬೌದ್ಧ ಪದ್ಧತಿಯಲ್ಲಿಯೂ ಸಹ, ಅನೇಕ ಉನ್ನತ ಸಿದ್ಧರ ಸಾಮ್ರಾಜ್ಯಗಳಿವೆಯೆಂದೂ ಮತ್ತು ಅವರೊಂದಿಗೆ ಸಂಪರ್ಕ ಮಾಧ್ಯಮಗಳೂ ಇರುವವೆಂದೂ ನಂಬುಗೆ ಇದೆ.

ತಂತ್ರದಲ್ಲಿ ಮೂರು ಪ್ರಕಾರದ ಗುರುಗಳುಂಟು. ದಿವ್ಯ ಓಘ, ಸಿದ್ಧ ಓಘ ಮತ್ತು ಮಾನವ ಓಘ ಎಂದು ಮೂರು ಪ್ರಕಾರದ ಸ್ತರಗಳಿವೆ. ಮೂರು ಪ್ರಕಾರದ ಗುರುಗಳು, ಮತ್ತು ಅವರೊಂದಿಗೆ ಯಾವಾಗಲೂ ಹೊಂದಿಕೊಂಡ ಮಾರ್ಗದರ್ಶಿಗಳು ಮತ್ತು ಮಾನವರಂತೆ ರೂಪ ಹೊಂದಿದ ಜೀವಿಗಳು ಇದ್ದಾರೆ. ಅವರಿಗೆ ಕಣ್ಣುಗಳಿವೆ; ಕಿವಿಗಳಿವೆ; ಎಲ್ಲವೂ ಇವೆ. ಆದರೆ, ಅವರ ದೇಹವು ವಿಭಿನ್ನ ವಸ್ತುಗಳಿಂದ ನಿರ್ಮಿಸಲ್ಪಟ್ಟಿದೆ. ನಮ್ಮ ದೇಹವು ಭೌತಿಕ ಮೂಲ ವಸ್ತುಗಳಿಂದ (ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ) ಆಗಿರುವಂತೆ, ಸಿದ್ಧರ ದೇಹಗಳು ಅಮರ ಮೂಲ ವಸ್ತುಗಳಿಂದ ಆಗಿರುತ್ತವೆ. ಅವರ ದೇಹಗಳು ಶೀರ್ಣಗೊಳ್ಳದ ಕಣಗಳಿಂದ ನಿರ್ಮಾಣಗೊಂಡಿರುತ್ತವೆ. ದೇಶ ಮತ್ತು ಕಾಲಗಳು ನಮ್ಮ ಶರೀರವನ್ನು ಜೀರ್ಣಗೊಳಿಸುತ್ತವೆ. ಈ ಮೂಲ ವಸ್ತುಗಳು ಸಂವೇದನ ಶಕ್ತಿಯನ್ನು ಹೊಂದಿವೆ. ಸಂವೇದನೆಗಳಿಗೆ ಹೆಚ್ಚಿನ ಜೀವನವಿಲ್ಲವಾದರೆ, ಸಾವು ಎಂದು ಕರೆಯುತ್ತೇವೆ. ಮತ್ತು ಇಂಥ ದೇಹವು ಇನ್ನಿಲ್ಲವಾಗುತ್ತದೆ. ಆದರೆ, ನಿತ್ಯ ಸಂವೇದನೆಯನ್ನು (Sense) ಹೊಂದಿದ ದೇಹವಿದ್ದರೆ, ಅದು ಅಮರ ದೇಹವಾಗುತ್ತಿತ್ತು. ಇದರ ಸಂವೇದನೆಗೆ ಸಾವೆಂಬುದೇ ಇಲ್ಲ. ಆದರೆ, ಇಂಥ ದೇಹವು ಈ ಜಗತ್ತಿನಲ್ಲಿ ಇನ್ನೂ ಬಂದಿಲ್ಲ. ಹೀಗೆ ಸಿದ್ಧರ ದೇಹಗಳು ಸಾಧಾರಣ ವಸ್ತುಗಳಿಂದ ನಿರ್ಮಾಣಗೊಳ್ಳದೆ, ಲಕ್ಷಾಂತರ ವರ್ಷ ಪರ್ಯಂತ ಜೀರ್ಣವಾಗದೆ

ಉಳಿಯಬಲ್ಲ ವಸ್ತುಗಳಿಂದ ನಿರ್ಮಾಣವಾಗಿವೆ. ಆದರೆ, ಅವುಗಳನ್ನು ಈ ನಿಮ್ನ ಮಟ್ಟದಿಂದ ದರ್ಶಿಸಲಾರೆವಷ್ಟೇ.

ಅವರು ಇಂಥ ಅಮರ ದೇಹಗಳನ್ನು ತಮ್ಮ ಶಕ್ತಿಯಿಂದ ಸಂರಚಿಸಿ ಕೊಂಡಿದ್ದಾರೆ. ಮತ್ತು ಕೆಲವು ದೇಹಗಳು ಶುದ್ಧ ಜ್ಯೋತಿಯಿಂದ ನಿರ್ಮಿಸಲ್ಪಟ್ಟಿವೆ. ಹೀಗೆ ಅವರಿಗೆ ಮರಣವೆಂಬುದೇ ಇಲ್ಲ. ಇಂಥ ಹಲವು ಸಿದ್ಧರುಂಟು. ಮತ್ತು ನಾವು ಸಾಮಾನ್ಯವಾಗಿ ದಿವ್ಯ ದೇಹ ಎಂದು ಕರೆಯುವ ದೇಹವೂ ಉಂಟು. ಅದು ಈ ವಿಶ್ವದಲ್ಲಿ ಇಲ್ಲ. ಆದರೆ, ನಾವು ಈ ವಿಶ್ವವನ್ನು ಅತಿಕ್ರಮಿಸಿದರೆ, ಅದನ್ನೂ ನಾವು ದರ್ಶಿಸಬಹುದು. ಈ ಎಲ್ಲ ದೇಹಗಳೂ ಬೋಧಿಯನ್ನು ಹೊಂದಿವೆ. ಸಿದ್ಧ ದೇಹಗಳಲ್ಲಿಯೂ ಸಹ, ಬೋಧಿ ಇದೆ. ದಿವ್ಯ ದೇಹಗಳಲ್ಲಿಯೂ ಬೋಧಿ ಇದೆ. ಆದರೆ, ಈ ಮಾನವ ದೇಹವು, ಮಾನವ ಓಘದಲ್ಲಿ, ಮೃತ್ಯುವನ್ನು ಜಯಿಸಿಲ್ಲ. ನಮ್ಮ ದೇಹವು ಶೀರ್ಣವಾಗುತ್ತದೆ; ಕೊಳೆಯುತ್ತಿದೆ. ಆದರೆ, ಸಿದ್ಧ ದೇಹದಲ್ಲಾದರೋ ಅವರು ಮೃತ್ಯುವನ್ನು ಜಯಿಸಿದ್ದಾರೆ. ಅವರು ಈ ದೇಹದಲ್ಲಿ ಮೃತ್ಯುಂಜಯರಾಗದಾದರು. ಆದ್ದರಿಂದ, ಅವರು ತಮ್ಮ ಸ್ವಂತ ದೇಹವನ್ನು ಸಂರಚಿಸಿ ಕೊಂಡರು. ಮತ್ತು ಅವರು ಉಚ್ಚತರ ಜೀವನವನ್ನು ಬಾಳುತ್ತಿದ್ದಾರೆ. ಇನ್ನು ಕೆಲವರು ಇನ್ನಷ್ಟು ಸಾಧಿಸಿದ ಮೇಲೆ, ದಿವ್ಯ ದೇಹವನ್ನು ಪಡೆಯಬಲ್ಲರು. ಆದರೆ, ಅವರು ಈ ಭೌತಿಕ ದೇಹವನ್ನೇ ದಿವ್ಯ ಇಲ್ಲವೆ ಅಮರವಾಗಿ ಮಾಡಲಾರರು. ಮತ್ತು ಶ್ರೀ ಅರವಿಂದರ ಅಥವಾ ನಮ್ಮ ಗುರುಗಳ ಗ್ರಹಿಕೆಯು ಈ ದೇಹವನ್ನೇ ದಿವ್ಯವಾಗಿ ಸಂರಚಿಸುವುದಾಗಿದೆ. ಇದನ್ನು ಸಾಧಿಸುವುದು, ಜೀವನದ ಪರಮ ಮತ್ತು ಚರಮ ಧ್ಯೇಯವಾಗಿದೆ. ಅದು ಇಂದು ಸಾಧ್ಯವಾಗದೆ ಹೋಗಬಹುದು. ಆದರೆ, ಈ ದೇಹವೇ ಅಮರವಾಗುವ ದಿನವೊಂದು ಬರಲಿದೆ!

ಸಿದ್ಧರಲ್ಲಿ ಎರಡು ಪ್ರಕಾರಗಳಿವೆ. ನಾವು ಈ ದೇಹದಲ್ಲಿ ಬಂದಿರುವೆವೆಂದು ತಿಳಿಯಿರಿ. ನಾವು ಸಾಧನೆ ಮಾಡಿದಾಗ, ನಮ್ಮೊಳಗೇ ಅವರ ದೇಹವನ್ನು ಪಡೆಯಬಲ್ಲೆವು. ಆ ಬಳಿಕ, ನಾವು ಜೀವನ್ಮುಕ್ತರಾಗಿ ಶಾಶ್ವತವಾಗಿ ಉಳಿಯುವಲ್ಲಿ ಅಭಿರುಚಿ ತಾಳಬಹುದು. ಆದರೆ, ಅದರೊಂದಿಗೆ ನಾವು ಮಾನವತೆಗಾಗಿ ಸಹ, ಏನಾದರೂ ಮಾಡಬೇಕೆಂದು ಇಚ್ಛಿಸುತ್ತೇವೆ. ಹೀಗಾಗಿ, ನಾವು ದಿವ್ಯ ಸಾಮ್ರಾಜ್ಯಕ್ಕೆ ಅರ್ಥಾತ್ ಸಮಷ್ಟಿ ಪ್ರಜ್ಞೆಯೊಂದಿಗೆ ಇರುವ ಲೋಕಕ್ಕೆ ಹೋಗಿ, ಅಲ್ಲಿಯೇ ಇದ್ದು ಬಿಡಲು ಮತ್ತು ಈ ದೇಹವನ್ನು ಮರೆತು

ಬಿಡಲು ಬಯಸುವುದಿಲ್ಲ. ಅದಕ್ಕೆ ಮುಕ್ತಿಯೆನ್ನುತ್ತಾರೆ. ಆದರೆ ಅವರಿಗದು ಬೇಡ. ಇಂಥ ಪ್ರಸಂಗದಲ್ಲಿ ಅವರೇನು ಮಾಡುತ್ತಾರೆ? ಅವರೊಂದು ವಿಶೇಷ ವ್ಯಾಪ್ತಿಯನ್ನು ಪ್ರಸ್ಥಾಪಿಸುತ್ತಾರೆ. ಮತ್ತು ಅಲ್ಲಿ ತಮ್ಮ ಸಾಮ್ರಾಜ್ಯವನ್ನು ನಿರ್ಮಿಸುತ್ತಾರೆ. ನಾವು ಹೊಸ ಜನ ವಸತಿಗಳನ್ನು ರಚಿಸುವಂತೆಯೇ ಇದು. ಬಯಲು ಪ್ರದೇಶವಿದ್ದರೆ, ಅಲ್ಲಿ ನಾವು ವಸತಿ ಸೌಕರ್ಯವನ್ನು ಒದಗಿಸುತ್ತೇವೆ. ಮತ್ತು ಅಲ್ಲಿ ವಾಸಿಸುತ್ತೇವೆ. ಆದರೆ, ಅದು ಉತ್ಸವದಿಂದ ಬಂದುದಲ್ಲ; ನಾವೇ ಸೃಷ್ಟಿ ಮಾಡಿದುದು. ಹಳೆಯ ಕಾಶಿಯನ್ನು ಆಗಲೇ ಕಟ್ಟಿ ಆಗಿದೆ. ಅಲ್ಲಿ ಜನರು ಹೋಗಿ ವಾಸಿಸುತ್ತಾರೆ. ಅದೇ ರೀತಿ, ಕೆಲವು ಸಿದ್ಧರು ಹೋಗಿ, ಹಳೆಯ ಸಿದ್ಧರ ತಾಣಗಳಲ್ಲಿ ಅವರೊಂದಿಗೆ ಸೇರಿಕೊಳ್ಳುತ್ತಾರೆ. ಇನ್ನು ಕೆಲವರು, ನಾವು ಹೊಸ ವಸತಿಗಳನ್ನು ನೆಲೆಗೊಳಿಸುವಂತೆ, ಹೊಸ ಸಾಮ್ರಾಜ್ಯಗಳನ್ನು ನಿರ್ಮಿಸಿಕೊಳ್ಳುತ್ತಾರೆ. ನಮ್ಮಲ್ಲಿ ಅನೇಕ ಜನ ಶಿಲ್ಪಿಗಳೂ, ಗೌಂಡಿಗಳೂ ಇರುತ್ತಾರೆ. ಹೀಗಾಗಿ ನಾವು ಬೇರೆ ಬೇರೆಯಾಗಿ ನಮಗೆ ಪರಿಚಿತವಾಗುವಂತೆ ರಚಿಸಿಕೊಳ್ಳುತ್ತೇವೆ. ಅದೇ ರೀತಿ, ರಚಿತವಾದ ಕೆಲವು ಸಾಂಪ್ರದಾಯಿಕ ಸಿದ್ಧ ಮಂಡಲಗಳಿವೆ. ಅಲ್ಲಿ ಹೋಗಿ ಅವರು ನೆಲೆಸುತ್ತಾರೆ. ಅವುಗಳಿಗೆ ಗುರು ಮಂಡಲಗಳೆಂದೂ ಹೆಸರು. ಬೇರೆ ಬೇರೆ ಗುರುಗಳಿಗೆ ಬೇರೆ ಬೇರೆ ಸ್ವಂತ ಸಾಮ್ರಾಜ್ಯಗಳಿವೆ. ಅಮರ ಗುರುಗಳಾರು? ಕೆಲವರು ಸಿದ್ಧ ಗುರುಗಳೇ ಇದ್ದಾರೆ. ಆದರೆ, ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಈ ಸಿದ್ಧರು ತಮ್ಮ ಸಾಮ್ರಾಜ್ಯಗಳನ್ನು ಎಲ್ಲಿ ನಿರ್ಮಿಸುತ್ತಾರೆ? ಅದು ಅವರ ವಿಕಾಸ-ಮಟ್ಟವನ್ನು ಅವಲಂಬಿಸಿದೆ. ಅವರು ಈ ಭೌತಿಕ ದೇಹದಲ್ಲಿರುವಾಗ ಎಷ್ಟೊಂದು ವಿಕಾಸಗೊಂಡಿದ್ದರೆಂಬುದನ್ನು ಅವಲಂಬಿಸಿದೆ. ಒಟ್ಟು ಐದು ಮೂಲ-ಭೂತಗಳಿವೆ. ಪೃಥ್ವಿ, ಆಪ್, ತೇಜಸ್, ವಾಯು, ಆಕಾಶ. ಪೃಥ್ವಿಯಲ್ಲಿ ಕೇಂದ್ರವಿದೆ; ಆಪ್-ನಲ್ಲಿಯೂ ಕೇಂದ್ರವಿದೆ, ಇದೇ ರೀತಿ ಅಗ್ನಿ, ವಾಯು ಮತ್ತು ಆಕಾಶ. ಪ್ರತಿಯೊಂದು ಮೂಲಭೂತಗಳಿಗೂ ಪರಿಧಿಯೂ ಇದೆ. ಕೇಂದ್ರವೂ ಇದೆ. ಕೇಂದ್ರದಲ್ಲಿ ಶೂನ್ಯವಿದೆ. ಮತ್ತು ಅದು ಅನಂತವಾಗಿದೆ. ಅಲ್ಲಿ ಸರ್ವ ವಸ್ತುಗಳೂ ಅನಂತವಾಗಿವೆ. ಎಲ್ಲಿ ಭೌತಿಕದ ಒತ್ತಾಸೆ ಇಲ್ಲವೋ, ಅದರೂ ಯಾವುದು ಕೇಂದ್ರವಾಗಿಲ್ಲವೋ, ಅಂಥ ಮಧ್ಯವರ್ತಿ ತಾಣಕ್ಕೆ ಶೂನ್ಯವೆನ್ನುತ್ತಾರೆ.

ಉದಾಹರಣೆಗೆ, ಪೃಥ್ವಿಯನ್ನೇ ತೆಗೆದುಕೊಳ್ಳಿರಿ. ಪೃಥ್ವಿಗೊಂದು ಗ್ರಹ ಪಥವಿದೆ. ಮತ್ತು ಕೇಂದ್ರವಿದೆ. ಗ್ರಹ ಪಥದಲ್ಲಿ ಜಡ ಪೃಥ್ವಿಯಿದೆ.

ಆದರೆ, ಅಲ್ಲಿ ಸೂಕ್ಷ್ಮ ಪೃಥ್ವಿಯೂ (ಪಂಚೀಕೃತವಾಗದ) ಇದೆ. ಅದೇ ರೀತಿ, ನಾವು ಉಳಿದ ಮೂಲ ಭೂತಗಳನ್ನು ಕುರಿತು ಗ್ರಹಿಸಿಕೊಳ್ಳಬೇಕು. ಸ್ಥೂಲ ಪೃಥ್ವಿಯಿದೆ; ಸೂಕ್ಷ್ಮ ಪೃಥ್ವಿಯಿದೆ. ಸೂಕ್ಷ್ಮ ಪೃಥ್ವಿಯಲ್ಲಿ ಶೂನ್ಯವಿದೆ. ಅಲ್ಲಿ ಅನೇಕ ಬಯಲು ದೇಶಗಳಿವೆ. ಅಲ್ಲಿ ಅವರು ತಮ್ಮ ಸಾಮ್ರಾಜ್ಯಗಳನ್ನು ನಿರ್ಮಿಸುತ್ತಾರೆ. ಉದಾಹರಣೆಗೆ ಪುನಃ ಪೃಥ್ವಿ ತತ್ತ್ವವನ್ನೇ ತೆಗೆದು ಕೊಳ್ಳಿರಿ. ಪೃಥ್ವಿ ತತ್ತ್ವದಲ್ಲಿ ಸಿದ್ಧ ಮಂಡಲಗಳಿವೆ. ಅಪ್ ತತ್ತ್ವದಲ್ಲಿಯೂ ಸಿದ್ಧ ಮಂಡಲಗಳಿವೆ. ಅದೇ ರೀತಿ ತೇಜಸ್, ವಾಯು ಮತ್ತು ಆಕಾಶ ತತ್ತ್ವಗಳಲ್ಲಿಯೂ ಸಿದ್ಧ ಮಂಡಲಗಳಿವೆ. ಎಲ್ಲಿ ಎಲ್ಲಿ ಭೌಗೋಲಿಕ ಪೃಥ್ವಿಯಲ್ಲಿ ಬಯಲು ಇದೆಯೋ, ಅಲ್ಲಿ ಅಲ್ಲಿ ಸೂಕ್ಷ್ಮ ಪೃಥ್ವಿಗೂ ಇಂಬಿದೆ. ಸೂಕ್ಷ್ಮ ಪೃಥ್ವಿಯು ಅಲ್ಲಿದೆ. ನಾವು ಕುಳಿತಿರುವುದೊಂದು ಭೌಗೋಲಿಕ ಪ್ರದೇಶ. ಆದರೆ ಇದಕ್ಕೂ ಹಿಂದೆ, ಸೂಕ್ಷ್ಮ ಪೃಥ್ವಿಯಿದೆ. ಅದು ಯಾವಾಗಲೂ ಗತಿಶೀಲವಾಗಿರುತ್ತದೆ. ಹಾಗಿದ್ದರೂ ಅಲ್ಲಿ ಶೂನ್ಯವಿರುತ್ತದೆ. ಅರ್ಥಾತ್ ಸೂಕ್ಷ್ಮ ಪೃಥ್ವಿಯು ಎಲ್ಲೆಡೆಗೆ ಸರಿಹೊಂದುತ್ತದೆ. ಒಂದು ವೇಳೆ, ಸೂಕ್ಷ್ಮ ಪೃಥ್ವಿಯ ಕೇಂದ್ರವಿದ್ದರೆ, ಅದು ಇಲ್ಲಿಯೂ ಇದೆ. ಪ್ಯಾರಿಸದಲ್ಲಿಯೂ ಇದೆ. ಸೂಕ್ಷ್ಮ ಪೃಥ್ವಿಯು ಇರುವೆಡೆಗೆ ಎಲ್ಲೆಲ್ಲಿಯೂ ಆ ಕೇಂದ್ರವಿದೆ. ಅದು ಅಮೇರಿಕೆಯಲ್ಲಿಯೂ ಇದೆ. ಆ ಪೃಥ್ವಿಗೆ ಭೌಗೋಲಿಕ ಸೀಮಾ ರೇಖೆಗಳಿಲ್ಲ. ಏಕೆಂದರೆ, ಅದು ಕೇಂದ್ರದಲ್ಲೆ ಇದೆ. ಹೀಗೆ, ನೀವು ಸೂಕ್ಷ್ಮ ಪೃಥ್ವಿಯಲ್ಲಿ ಇದ್ದರೆ, ಭೌತಿಕ ಪೃಥ್ವಿಯ ಮೇಲಿನ ಜನರೆಲ್ಲರನ್ನೂ ಕಾಣಬಹುದು. ಆದರೆ, ಅವರಿಗೆ ಇಂಥ ಜ್ಯೋತಿಯೊಂದಿರಬೇಕು. ಅಥವಾ ನೀವು ಪೃಥ್ವಿಯ ಕೇಂದ್ರದಲ್ಲಿ ಇದ್ದರೆ, ಮತ್ತು ನೀವು ದರ್ಶಿಸಬಯಸಿದರೆ, ಸಮಸ್ತ ಭೌತಿಕ ಜನರನ್ನು ಕಾಣಬಹುದು, ಇದು ತೀರ ಸಾಮಾನ್ಯ ಜ್ಞಾನದ ವಿಷಯ ಅಲ್ಲವೇ?

ಈಗ ಉದಾಹರಣಾರ್ಥ, ಸೂರ್ಯೋದಯವನ್ನೇ ತೆಗೆದುಕೊಳ್ಳಿರಿ. ಸೂರ್ಯನು ಬೆಳಕು ಕಂಡ ಭೂಗೋಲದ ಯಾವುದೇ ಭಾಗದಲ್ಲಿ ರವಿ ಉದಿಸಿದರೂ ಸಹ, ಎಲ್ಲರೂ ಅವನನ್ನು ಕಾಣುತ್ತಾರೆ. ಅಲ್ಲವೇನು? ಏಕೆಂದರೆ, ಆ ಸೂರ್ಯೋದಯವು ವಿಶೇಷ ಕೇಂದ್ರದಲ್ಲಿದೆ. ನಾವು ಅದನ್ನು ಬೆಂಗಳೂರಿನಿಂದಲೂ ನೋಡಬಹುದು; ಬನಾರಸದಿಂದಲೂ ನೋಡಬಹುದು. ಪ್ರತಿಯೊಬ್ಬರೂ ಅದನ್ನು ತುಂಬಾ ವಿಸ್ತೃತ ಜಾಗೆಯಿಂದ ನೋಡಬಹುದು. ಏಕೆಂದರೆ, ಅದು ಎತ್ತರದಲ್ಲಿದೆ; ಮತ್ತು ವಿಸ್ತೃತವಾಗಿದೆ. ಮತ್ತು ಅದು

ನಮ್ಮ ಕೇಂದ್ರದಲ್ಲಿದೆ. ಹೀಗಾಗಿ ನಾವು ಅದನ್ನು ಕಾಣಬಲ್ಲೆವು.

ಅದೇ ರೀತಿ, ಸೂಕ್ಷ್ಮ ಪೃಥ್ವಿಯು, ಸ್ಥೂಲಪೃಥ್ವಿಯ ಕೇಂದ್ರದಲ್ಲಿದೆ. ಸ್ಥೂಲ ಪೃಥ್ವಿಯು ಇಲ್ಲಿ ಇದೆ; ಅಲ್ಲಿಯೂ ಇದೆ; ಎಲ್ಲೆಲ್ಲಿಯೂ ಇದೆ. ಆದರೆ ಸೂಕ್ಷ್ಮ ಪೃಥ್ವಿಯು ಕೇಂದ್ರದಲ್ಲಿದೆ. ಒಂದು ವೇಳೆ, ಈ ದೇಹವನ್ನು ಸೂಕ್ಷ್ಮ ದೇಹದಲ್ಲಿ, ಪರಿವರ್ತಿಸಬಲ್ಲ ಕ್ಷಮತೆಯು ನಿಮ್ಮಲ್ಲಿ ಇದ್ದರೆ, ಮತ್ತು ನೀವು ಬೇರೆ ಯಾರಿಂದಲಾದರೂ ಕಾಣಿಸಿಕೊಳ್ಳಬೇಕೆಂದು ಬಯಸಿದರೆ, ಆಗ ಯಾರು ಬೇಕಾದರೂ ನಿಮ್ಮನ್ನು ಕಾಣಬಹುದು. ನೀವು ಈ ರೀತಿಯ ವಸ್ತುವಾಗಬಲ್ಲಿರಾದರೆ, ಯಾರಾದರೂ ನಿಮ್ಮನ್ನು ದರ್ಶಿಸಬಹುದು. ಒಂದು ವೇಳೆ, ಒಬ್ಬನು ಕೋಣೆಯಲ್ಲಿದ್ದರೆ, ಮತ್ತು ಕಣ್ಣುಮುಚ್ಚಿ ಕುಳಿತರೆ, ಕೂಡಲೇ ಅವನು ಕಾಣುತ್ತಾನೆ. ಆದರೆ, ಆ ನೋಡುವಿಕೆಯು ಸ್ಥೂಲ ಕಣ್ಣುಗಳಿಂದ ದರ್ಶಿಸುವುದಲ್ಲ. ಆದರೆ ಸೂಕ್ಷ್ಮ ಕಣ್ಣುಗಳಿಂದ, ಮತ್ತು ನೋಡುವ ಆ ಸೂಕ್ಷ್ಮ ಇಂದ್ರಿಯವೇ ಮನಸ್ಸು; ಎಂದು ನಾವು ಹೇಳಬಲ್ಲೆವು.

ಇದೇ ರೀತಿ, ಭಾರತದಲ್ಲಿ ಕೆಲವು ಕ್ಷೇತ್ರಗಳಿವೆ. ಅಲ್ಲಿ ಸ್ಥೂಲ ಪೃಥ್ವಿ ಇದೆ. ಮತ್ತು ಅಲ್ಲಿಯ ಸೂಕ್ಷ್ಮ ಪೃಥ್ವಿಯನ್ನು, ಸಿದ್ಧರ ಸಾಮ್ರಾಜ್ಯಗಳನ್ನು ಕಟ್ಟಲು ಬಳಸಲಾಗಿದೆ. ಮತ್ತು ಅತ್ಯಂತ ಮಹತ್ವದ ಕ್ಷೇತ್ರವೆಂದರೆ, ಹಿಮಾಲಯ. ಅಲ್ಲಿ ಮಾನಸರೋವರವೆಂಬ ಕೇಂದ್ರವಿದೆ. ಅಲ್ಲಿ ಯಾವ ಮಾನವ ಜೀವಿಗಳೂ ವಾಸಿಸುವುದಿಲ್ಲ. ಅಲ್ಲಿ ಕೇವಲ ಹಿಮವಿದೆ. ಮತ್ತು ಒಂದು ಸರೋವರವಿದೆ. ಅನೇಕ ಸಿದ್ಧರು, ದೇಹಧಾರಿಗಳಾಗಿದ್ದಾಗ, ಶಕ್ತಿ ಸಂಚಯ ಮಾಡಬಲ್ಲವರಾಗಿದ್ದರು. ಮತ್ತು ಅವರು ಈ ದೇಹ ತೊರೆಯುವ ಸಂಕಲ್ಪ ಮಾಡಿದರು. ಬಳಿಕ, ಅವರು ಸೂಕ್ಷ್ಮ ಭೂತದಲ್ಲಿ, ಸೂಕ್ಷ್ಮ ಪೃಥ್ವಿ ಭೂತದಲ್ಲಿ, ತಮ್ಮ ಸಾಮ್ರಾಜ್ಯಗಳನ್ನು ನಿರ್ಮಿಸಿದರು. ಹೀಗೆ, ಭಾರತದಲ್ಲಿ ಅನೇಕ ಸಿದ್ಧ–ಸಾಮ್ರಾಜ್ಯಗಳಿವೆ. ಕೆಲವು ಬೌದ್ಧೀಯ ಸಾಮ್ರಾಜ್ಯಗಳಿವೆ. ಕೆಲವು ವೈಷ್ಣವ ಸಾಮ್ರಾಜ್ಯಗಳಿವೆ. ಕೆಲವು ಶಾಕ್ತ ಸಾಮ್ರಾಜ್ಯಗಳಿವೆ. ಕೆಲವು ಶೈವ ಸಾಮ್ರಾಜ್ಯಗಳಿವೆ. ಕೆಲವು ತಿಬೇಟೀಯ ಸಿದ್ಧರೂ ಸಹ, ತಮ್ಮ ಸಾಮ್ರಾಜ್ಯಗಳನ್ನು ಹೊಂದಿದ್ದಾರೆ. ಅದೇ ರೀತಿ, ಶಾಕ್ತ ಸಾಮ್ರಾಜ್ಯಗಳೂ ಇವೆ. ಇವುಗಳಲ್ಲಿ ಜ್ಞಾನ ಗಂಜ ಎನ್ನುವುದೊಂದು ಕ್ಷೇತ್ರವಿದೆ. ಜ್ಞಾನ ಎಂದರೆ ಅರಿವು; ಗಂಜ ಎಂದರೆ ಕ್ಷೇತ್ರ; ಜಾಗೆ. ಎಲ್ಲಿ ನೀವು ಜ್ಞಾನ ಸಂಪಾದಿಸಬಹುದೋ, ಎಲ್ಲಿ ಜ್ಞಾನದ ಪಾಠಶಾಲೆ ಇದೆಯೋ, ಅಂಥ ಕ್ಷೇತ್ರವದು. ಅಲ್ಲಿ ಉನ್ನತ ಜೀವಿಗಳು ತಮ್ಮ ಸೂಕ್ಷ್ಮ ಶರೀರಗಳಲ್ಲಿ ಇರುತ್ತಾರೆ. ಅವರಿಗೆ ಜನನ ಮರಣ

ಗಳಿಲ್ಲ. ಅವರು ಸೂಕ್ಷ್ಮದಲ್ಲಿ ಇರುವುದರಿಂದ, ಅವರಿಗೆ ಸಾವು ಇಲ್ಲ. ಅಲ್ಲಿ ವಾತಾವರಣದ ಪ್ರಭಾವವೇ ಇಲ್ಲ. ಏಕೆಂದರೆ, ಅದು ಸೂಕ್ಷ್ಮವಾದುದು. ಎಲ್ಲಿ ಸೂಕ್ಷ್ಮ ಪೃಥ್ವಿ ಇದೆಯೋ, ಅಲ್ಲಿ ಸೂರ್ಯ, ಚಂದ್ರ, ಯಾವುದೇ ಖಗೋಳ ವಸ್ತುವೂ ಇಲ್ಲ. ನಮ್ಮನ್ನು ಪ್ರಭಾವಿತಗೊಳಿಸುವುದು ಯಾವುದು? ಭೂಗೋಳದ ಪ್ರಭಾವ; ಜ್ಯೋತಿಷ್ಕದ ಪ್ರಭಾವ.ಒಂದು ವೇಳೆ, ಭೂಗೋಳದ ಪ್ರಭಾವ, ಜ್ಯೋತಿಷ್ಕಗತಿ, ಗುರುತ್ವಾಕರ್ಷಣೆ, ಪ್ರಜ್ಞೆ, ಮತ್ತು ಜನಾಂಗಗಳ ಪ್ರಭಾವವಿಲ್ಲದಿದ್ದರೆ, ದೇಹದ ಮೇಲೆ ಅವುಗಳ ಪ್ರಭಾವವು ಬಾಧಿಸದಿದ್ದರೆ, ನಮ್ಮ ಶರೀರವು ಶೀರ್ಣವಾಗುವುದೇ ಇಲ್ಲ. ಏಕೆ? ನಮ್ಮ ಪ್ರಾಣ ಮತ್ತು ಸೂರ್ಯ–ಚಂದ್ರ ಮತ್ತು ಈ ಗೋಲದ ತುಂಬ ಹರಡಿರುವ ವಾಯು ಇವುಗಳಲ್ಲೊಂದು ರೀತಿಯ ಸಂಬಂಧವಿದೆ. ಒಂದು ವೇಳೆ, ಬಾಹ್ಯ ವಾಯುವು ನಿಂತರೆ, ಉಸಿರು ಕಟ್ಟಿದರೆ, ಮಾನವನು ಕೂಡಲೇ ಸಾಯುತ್ತಾನೆ. ಅದೇ ರೀತಿ, ನಾನು ಬಾಹ್ಯಕವಾಗಿ, ಸೂರ್ಯನಿಂದ ಶಕ್ತಿಯನ್ನು ಪಡೆಯುತ್ತೇನೆ. ಚಂದ್ರನಿಂದ ಪಡೆಯುತ್ತೇನೆ. ಚಂದ್ರ ಮತ್ತು ಸೂರ್ಯರು, ತಮ್ಮ ರಶ್ಮಿಗಳನ್ನು ನಮ್ಮತ್ತ ನಿರ್ದೇಶಿಸುತ್ತಾರೆ. ಹೀಗೆ, ಅವರು ನಮ್ಮೊಂದಿಗೆ ಸಂಬಂಧಿಸಿದ್ದಾರೆ. ಆದ್ದರಿಂದಲೇ ನನ್ನ ಮನದೊಂದಿಗೆ, ನನ್ನ ಭೌತಿಕ ವಸ್ತುಗಳೊಂದಿಗೆ ಸಂಬಂಧಿಸಿದ್ದಾರೆ. ಏಕೆಂದರೆ, ಅವರು ಔಷಧಿಗಳೊಂದಿಗೆ ಸಂಬಂಧಿಸಿದ್ದಾರೆ. ಅವರು ರಶ್ಮಿಗಳನ್ನು ಬೀರಿದಾಗ, ಔಷಧಿಗಳು ಉದ್ಭವಿಸುತ್ತವೆ. ಸೂರ್ಯ ಚಂದ್ರರೇ ಇಲ್ಲವಾದರೆ, ಔಷಧಿಗಳೇ (ವನಸ್ಪತಿ) ಬೆಳೆಯುತ್ತಿರಲಿಲ್ಲ. ಇದು ತೀರ ಸಾಮಾನ್ಯ ತಿಳಿವಳಿಕೆಯಷ್ಟೇ. ಈ ಸಂಗತಿಗಳನ್ನು ವಿಜ್ಞಾನವೂ ಒಪ್ಪುತ್ತದೆ. ಆದರೆ, ಸೂಕ್ಷ್ಮ ಪೃಥ್ವಿಯಲ್ಲಿ, ಹೀಗಿರುವ ಆವಶ್ಯಕತೆಯಿಲ್ಲ. ಏಕೆಂದರೆ, ಅಲ್ಲಿ ಸಂಜೀವಿನೀ ಶಕ್ತಿ ಇದೆ. ಅದು ಸೂರ್ಯ ಚಂದ್ರರಲ್ಲ. ಆ ಸಂಜೀವಿನೀ ಶಕ್ತಿಯೆಂದರೆ, ನಮ್ಮ ಸ್ವಂತ ಚೈತನ್ಯ ಮಾತ್ರ. ಏಕೆಂದರೆ, ಅದು ಬಾಹ್ಯ ವಸ್ತುಗಳ ಮೇಲೆ ಎಂದೆಂದೂ ಅವಲಂಬಿಸಿಲ್ಲ.

ಜ್ಞಾನ ಗಂಜ ಎಂಬ ಕ್ಷೇತ್ರವಿದೆಯೆಂದು ನಾನು ಹೇಳಿರುವೆನಷ್ಟೇ. ಅಂಥ ಅನೇಕ ಕ್ಷೇತ್ರಗಳಿವೆ. ಅವುಗಳಲ್ಲಿ ಜ್ಞಾನಗಂಜವೂ ಒಂದು. ಇದನ್ನು ಸ್ಫಟಿಕದಿಂದ ನಿರ್ಮಿಸಲಾಗಿದೆ. ಮತ್ತು ಅಲ್ಲಿರುವವರಿಗೆ ಸ್ಫಟಿಕ ದೇಹಗಳಿವೆ. ಸ್ಫಟಿಕವು ಪಾರದರ್ಶಕ ವಸ್ತು. ಅಲ್ಲಿಯವರ ದೇಹದ ಆಕಾರವು ಮಾನವರ ದೇಹದಂತಿದೆ. ಆ ಕ್ಷೇತ್ರವನ್ನು ಇಡಿಯಾಗಿ ಸ್ಫಟಿಕದಿಂದಲೇ ನಿರ್ಮಿಸಲಾಗಿದೆ.

ಅದೊಂದು ಸ್ಫಟಿಕ ಸಾಮ್ರಾಜ್ಯವಾಗಿದೆ. ಅದೊಂದು ಕ್ಷುದ್ರ ಕಲ್ಪನೆಯೇನೋ ಎಂಬಂತೆ ತೋರುವುದು. ಏಕೆಂದರೆ, ಅದು ವಾಸ್ತವವೆಂದು ನಂಬಲಾರದಷ್ಟು ವಿಸ್ಮಯಕಾರಿಯಾಗಿದೆ. ಆದರೆ, ನೀವು ಇಂಥ ಕಲ್ಪನೆಗಳನ್ನು ಮನದಲ್ಲಿ ಇರಿಸಿಕೊಂಡರೆ, ಈ ಕಲ್ಪನೆಯೇನೂ ನಿಮ್ಮನ್ನು ಹುಚ್ಚರನ್ನಾಗಿ ಮಾಡಲಾರದು. ಅಸಾಮಾನ್ಯತೆಗೆ ಒಯ್ಯದು. ಇವುಗಳನ್ನೆಲ್ಲ ನೀವು ಗಮನಿಸಿದರೆ, ಮತ್ತು ಅವು ಶತಃಸಿದ್ಧವೆಂದು ಗ್ರಹಿಸಿದರೆ, ಮತ್ತು ಸಂದೇಹಗಳನ್ನು ನೀವಾಳಿಸಿ ಚೆಲ್ಲಿದರೆ, ಈ ಕಲ್ಪನೆಯು ನಿಮಗೆ ನಿಮ್ಮ ಜೀವನದಲ್ಲಿ ಸಹಾಯಕವಾಗುತ್ತದೆ. ನಿಮ್ಮ ಬೋಧೆಯೊಂದಿಗೆ ಆಂತರ್ಯದಲ್ಲಿ ಶ್ರುತಿಗೂಡಲು ಅನುವು ಮಾಡಿಕೊಡುತ್ತದೆ. ಹೀಗೆ, ಒಂದರೆಕ್ಷಣವಾದರೂ ನಿಮ್ಮ ಆಧುನಿಕ ಬುದ್ಧಿಯನ್ನು ಬದಿಗೆ ಸರಿಸಿರಿ. ಇದು ನಿಮಗೆ ನನ್ನ ಸಲಹೆ.

ಈ ಜ್ಞಾನ ಗಂಜವನ್ನು ಅತಿ ಪ್ರಾಚೀನ ಕಾಲದಲ್ಲಿ ನಿಮಾನಂದ ಸ್ವಾಮಿ ಎಂಬ ಶಾಕ್ತ ಅನುಭಾವಿಯು ನಿರ್ಮಿಸಿದ್ದಾನೆ. ಅವನು ಈ ಭೂಮಿಯ ಮೇಲೆ, ತನ್ನ ದೇಹವನ್ನು ತ್ಯಜಿಸುವಾಗ ಅವನ ವಯಸ್ಸು ಎಂಭತ್ತು ವರ್ಷವಿತ್ತು. ಮತ್ತು ಈಗಲೂ ಸಹ ಅವನು ಎಂಭತ್ತು ವರ್ಷದವನಾಗಿಯೇ ಕಾಣುತ್ತಾನೆ. ಅವನಿಗೆ ತನ್ನ ದೇಹವನ್ನು ಸ್ಥೂಲೀಕರಿಸುವ ಕ್ಷಮತೆ ಉಂಟು ಮತ್ತು ತನಗೆ ಬೇಕೆನಿಸಿದವರೆದುರು ಕಾಣಿಸಿಕೊಳ್ಳುತ್ತಾನೆ. ನೀವು ಕರೆಯಬೇಕು; ಅಂದರೆ ಮಾತ್ರ ಅವನು ಬರುತ್ತಾನೆ; ಎಂದೇನೂ ಇಲ್ಲ. ಅದೆಲ್ಲವೂ ಅವನನ್ನೇ ಅವಲಂಬಿಸಿದೆ. ಅವನು ಕೇವಲ ಶುದ್ಧ ಪ್ರೇಮ–ಸೂತ್ರವನ್ನು ಅವಲಂಬಿಸಿದವನಲ್ಲ. ಆದರೆ, ಆ ಸಿದ್ಧರಿಗೆ ಅವರದೇ ಆದ ನಿಷ್ಠುರ ನಿಯಮಾವಳಿಗಳಿವೆ. ಅವರು ನಿಮ್ಮನ್ನು ಹರಸಬಲ್ಲರು; ಪ್ರೀತಿಸಬಲ್ಲರು. ಆದರೆ, ನೀವು ಅವರಿಗೆ "ನಾನು ನಿನ್ನನ್ನು ಸ್ಮರಿಸುತ್ತಿದ್ದೇನೆ. ಆದ್ದರಿಂದ ದಯವಿಟ್ಟು ಹರಸು" ಎಂದರೆ ನಡೆಯದು. ಒಂದು ವೇಳೆ, ಕಳಕಳಿಯ ಜೀವಿಯಾಗಿದ್ದರೆ, ಮತ್ತು ಪ್ರಪಂಚಕ್ಕೆ ಒಳಿತು ಮಾಡುವದೇ ನಿಮ್ಮ ಜೀವನದ ಗುರಿಯಾಗಿದ್ದರೆ, ಆಗ ಅವರು ತಮ್ಮ ಕಣ್ತೆರೆಯುತ್ತಾರೆ. ಇಲ್ಲವಾದರೆ, ಅವರು ಯಾರೊಂದಿಗೂ ಸಂಪರ್ಕಿಸರು. ಇಂಥ ಒಂದು ಆಶ್ರಮಕ್ಕೆ ನನ್ನ ಪರಮ ಗುರುಗಳಾದ (ಗುರುವಿನ ಗುರು) ಸ್ವಾಮಿ ವಿಶುದ್ಧಾನಂದ ಪರಮಹಂಸರು ಸೇರಿದವರಾಗಿದ್ದರು. ಅವರು ತಮ್ಮ ಬೋಧಿ ವಿದ್ಯೆಯನ್ನು ಆ ಕ್ಷೇತ್ರದಿಂದ ಪಡೆದಿದ್ದರು. ಅಂದರೆ, ಆ ಸಿದ್ಧರು ಕೆಲವೊಮ್ಮೆ ಈ ಭೌತಿಕ ದೇಹಿಗಳನ್ನು ಅಲ್ಲಿ ಬರಲು ಆಮಂತ್ರಿಸುತ್ತಿದ್ದರು. "ನಾನು ತುಂಬಾ ಸಮರ್ಥ. ಆದ್ದರಿಂದ ನೀನು ನಾನು ಹೇಳಿದಂತೆ

ಮಾಡು" ಎನ್ನುವ ಹಾಗಲ್ಲ, ಅದು. ಆದರೆ, ಅವರೇ ಆಮಂತ್ರಿಸುತ್ತಾರೆ. ನನ್ನ ಪರಮ ಗುರುಗಳು ನನ್ನ ಗುರುವಿಗೆ ಈ ಮಾಹಿತಿ ಒದಗಿಸಿದ್ದರು. "ನಾನು ಅಲ್ಲಿಯೇ ವಿದ್ಯೆ ಗಳಿಸಿದೆ. ನಾನು ಪಾಲನೆ–ಪೋಷಣೆ ಪಡೆದ ಆಶ್ರಮವೊಂದು ಅಲ್ಲಿ ಇದೆ. ನಾನು ಹದಿನೈದು ವರ್ಷದ ಚಿಕ್ಕ ಬಾಲಕನಾಗಿದ್ದಾಗ, ಓರ್ವ ಮಹಾ ಗುರುವು ಬಂದನು ಮತ್ತು ನನ್ನನ್ನು ಕರೆದೊಯ್ದನು. ಅಲ್ಲಿ ನಾನು ಹದಿನೈದು ವರ್ಷ ಪರ್ಯಂತ ಇದ್ದೆನು. ಆ ಕಾಲಕ್ಕೆ ನನ್ನ ಮೇಲಾವ ವಾತಾವರಣದ ಪ್ರಭಾವವಾಗಲಿಲ್ಲ. ಆಲ್ಲಿ ನಾನು ಹದಿನೈದು ವರ್ಷದ ಬಾಲಕನಾಗಿಯೇ ಉಳಿದೆನು. ನಾನು ಮರಳಿ ಈ ಸ್ಥೂಲ ಜಗತ್ತಿಗೆ ಬಂದಾಗ, ನಾನು ತಕ್ಷಣವೇ ಮೂವತ್ತು ವರ್ಷದ ತರುಣನಂತೆ ಕಾಣಬಂದೆ. ಆಗ ನನಗೆ ಗಡ್ಡ–ಮೀಸೆಗಳೂ ಬಂದವು." ಎಂದು ನನ್ನ ಪರಮ ಗುರುಗಳು ನನ್ನ ಗುರುವಿಗೆ ಹೇಳುತ್ತಿದ್ದರು. ಅವರು ಅನೇಕ ಸಲ, ಸ್ಥೂಲ ವಸ್ತುಗಳನ್ನು ಸೂಕ್ಷ್ಮಗೊಳಿಸುತ್ತಿದ್ದರು. ಮತ್ತು ಜ್ಞಾನಗಂಜಕ್ಕೆ ಕಳಿಸುತ್ತಿದ್ದರು. ಅವರು ಇದೇ ರೀತಿ, ಅನೇಕ ಪವಾಡಗಳನ್ನೆಸಗುತ್ತಿದ್ದರು. ಮತ್ತು ಅವುಗಳನ್ನೆಲ್ಲ ನನ್ನ ಗುರುಗಳಾದ ಕವಿರಾಜ ಮಹಾರಾಜರು ಕಣ್ಣಾರೆ ಕಾಣುತ್ತಿದ್ದರು. ಇದೆಲ್ಲ ತುಂಬಾ ಗಡುಚಾದುದು. ಪಾಲ ಬ್ರಂಟನ್ ಬರೆದ "ರಹಸ್ಯ ಭಾರತಲ್ಲಿ ಶೋಧ" (Search of Secret India) ಎಂಬ ಆಂಗ್ಲ ಪುಸ್ತಕವನ್ನು ಓದಿರಿ. ಅವನು ನನ್ನ ಪರಮ ಗುರುವಿನ ಬಗೆಗೆ ಸ್ವಲ್ಪು ಬರೆದಿದ್ದಾರೆ. ಆದರೆ ಪಾಪ! ಅವನಿಗೆ ಸರಿಯಾಗಿ ಅರ್ಥವಾದಂತಿಲ್ಲ. ಅವರನ್ನು 'ಭಾರತೀಯ ಜಾದೂಗಾರ' ಎಂದು ಕರೆದು ಬಿಟ್ಟಿದ್ದಾನೆ.

ಏನೇ ಇರಲಿ, ನನ್ನ ಗುರುಗಳು ಸ್ವಾಮಿ ವಿಶುದ್ಧಾನಂದರ ನೆಚ್ಚಿನ ಶಿಷ್ಯರಾಗಿ, ಅವರೊಂದಿಗೆ ಹದಿನೆಂಟು ವರ್ಷ ಕಳೆದಿದ್ದಾರೆ. ಅವರೂ ಸುದೈವಿಗಳೇ. ಹೀಗೆ, ನನ್ನ ಗುರುಗಳು ಸ್ವಾಮಿ ವಿಶುದ್ಧಾನಂದ ಪರಮಹಂಸರನ್ನು ಕುರಿತು ನಾಲ್ಕು ಭಾಗಗಳಲ್ಲಿ, "The conquest of my master" (ನನ್ನ ಗುರುವಿನ ವಿಜಯ) ಎಂಬ ಅದ್ಭುತ ಗ್ರಂಥ ಬರೆದಿದ್ದಾರೆ.

ಒಂದು ವೇಳೆ, ನಮ್ಮ ದೇಹವು ಜ್ಞಾನಗಂಜಕ್ಕೆ ಹೋಗುವಷ್ಟು ಸಕ್ಷಮವಿರದಿದ್ದರೆ, ಹೋಗಲಿ; ನಾವು ಸ್ಮರಿಸಿಕೊಂಡರೆ ಸಾಕು; ನಾವು ಅಧಿಕಾರಿಗಳಾಗಿದ್ದರೆ, ಮಿಣುಕು ನೋಟ ಹೊಂದುವೆವು. ನಾವು ದೇಹ ಸಹಿತ ಜ್ಞಾನಗಂಜಕ್ಕೆ ಹೋಗುವ ಅಗತ್ಯವಿಲ್ಲ. ಅದೇ ಹಾದಿಯಲ್ಲ. ಏಕೆಂದರೆ, ನಮ್ಮ ಸೂಕ್ಷ್ಮ ಶಕ್ತಿ ಇದೆ. ಸೂಕ್ಷ್ಮ ಮೂಲ ಭೂತಗಳಿವೆ. ನೀವು ಅದರಲ್ಲಿ ಆಳಕ್ಕಿಳಿದರೆ,

ಅವರ ಕೃಪೆಗೆ ಪಾತ್ರರಾಗಬಲ್ಲಿರಿ. ಮತ್ತು ಅವರ ಹರಕೆ ಪಡೆಯಬಲ್ಲಿರಿ. ಅವರೊಂದಿಗೆ ಸಂಪರ್ಕಿಸಬಲ್ಲಿರಿ. 'ಸ್ಫಟಿಕ ರಾಜ' ಸಾಮ್ರಾಜ್ಯವೆಂಬ ಆ ಸ್ಫಟಿಕ ಕ್ಷೇತ್ರದಲ್ಲಿ ಭೈರವೀ ಮಾತೆ ಎಂಬ ಮಹಿಳೆ ಇದ್ದಾಳೆ. ಉಮಾ ಮಾತೆ ಎಂಬ ಇನ್ನೋರ್ವ ದಿವ್ಯ ಮಾತೆ ಇದ್ದಾಳೆ. ಶಾಮಾ ಮಾತೆ ಎಂಬ ಮೂರನೆಯವಳೂ ಇದ್ದಾಳೆ. ಅಲ್ಲಿ ಈ ಮೂವರೂ ದಿವ್ಯ ಮಾತೆಯರು ತುಂಬಾ ಪ್ರಭಾವ ಶಾಲಿಗಳಾಗಿದ್ದಾರೆ. ಅದೇ ರೀತಿ, ಗುರು ಮಹಾರಾಜ ಪರಮಹಂಸರೆಂಬ ಮಹಾಯೋಗಿಗಳಿದ್ದಾರೆ. ಅವರದು ತುಂಬಾ ಎತ್ತರದ ನಿಲುವು. ಅವರ ಎತ್ತರ ಆರು ಅಡಿಗಿಂತ ಅಧಿಕ. ಅವರ ಮುಖವು ಸ್ವಲ್ಪು ಕೆಂಪು. ಗಡ್ಡ ಬೆಳೆಸಿದ್ದಾರೆ. ಅವರು ಭೋಧಿ–ಸಂಪನ್ನರು. ಈ ಎಲ್ಲ ಜನರೂ ಅಲ್ಲಿ ಇದ್ದಾರೆ. ಮತ್ತು ಅನೇಕ ಸಲ, ನೀವು ಸಂಪರ್ಕಿಸಬಲ್ಲರಾದರೆ, ಮತ್ತು ನೀವು ಪಡೆಯಲಿಚ್ಛಿಸಿದರೆ, ಅವರು ತಮ್ಮ ಆಂತರಿಕ ಬೋಧಿ ಪ್ರದಾನ ಮಾಡಬಲ್ಲರು. ನೀವು ನಮ್ಮ ಮಾರ್ಗದಲ್ಲಿಯೇ ಇದ್ದರೆ, ಅವರು ಹರಸಬಹುದು. ಅಲ್ಲಿ ಮೂರು ದೇವ ಮಂದಿರಗಳಿವೆ. ಮಹಾಕಾಳಿ ಮಂದಿರವು ಸ್ಫಟಿಕದಲ್ಲಿಯೇ ಇದೆ. ಅದೇ ರೀತಿ, ದುರ್ಗಾ ಮಂದಿರವೂ ಸ್ಫಟಿಕದಲ್ಲಿದೆ. ಭಗವಾನ ಶಿವನ ಮಂದಿರದಲ್ಲಿ ಶಿವ ಲಿಂಗವಷ್ಟೇ ಸ್ಫಟಿಕದ್ದಾಗಿದೆ. ಅದು ತುಂಬಾ ದೊಡ್ಡದಿದೆ. ಅದನ್ನು ಹೇಗೆ ನಿರ್ಮಿಸಿರಬಹುದು? ಅಲ್ಲಿ ಮಹಾ ಸೌಧಕ್ಕಿರುವಂತೆ ನಾಲ್ಕು ದ್ವಾರಗಳಿವೆ. ಮಧ್ಯೆ ಮಂದಿರವಿದೆ. ಸುದೂರದಿಂದ ಅದು, ಕುಳಿತುಕೊಂಡ ಮಾನವನಂತೆ ಕಂಡುಬರುತ್ತದೆ. ನಿಮ್ಮ ಕಲ್ಪನೆಯಲ್ಲಿಯೇ ನೀವು ಅತಿ ದೂರದಿಂದ ನೋಡಿದರೆ, ಅದೊಂದು ಆಸೀನನಾದ ದೊಡ್ಡ ಸ್ಫಟಿಕ-ಮಾನವನಂತೆ ಕಾಣುತ್ತದೆ.ನೀವು ಅವನ ಹೃದಯದೊಳಗೆ ಪ್ರವೇಶಿಸಿದರೆ, ಒಂದು ತಾಣವನ್ನು ತಲುಪುತ್ತೀರಿ. ಕಲ್ಪನೆಯಲ್ಲಿ ಇನ್ನಷ್ಟು ಒಳಗೆ ಪ್ರವೇಶಿಸಿದರೆ, ಕೂಡಲೇ ನಿಮಗೆ ದೇಹ-ವಿಸ್ಮೃತಿಯಾಗುತ್ತದೆ. ನೀವು ಅವರೊಳಗಿನ ಒಬ್ಬರಾಗುತ್ತೀರಿ. ಆಗ ಸಂಪರ್ಕವು ಶುರುವಾಗುತ್ತದೆ.

ಇನ್ನೂ ಅನೇಕ ಸಿದ್ಧರು ತಮ್ಮ ವಿಭಿನ್ನ ಕ್ಷೇತ್ರಗಳನ್ನು ಹೊಂದಿದ್ದಾರೆ. ಅರ್ಥಾತ್ ನಿಮ್ಮ ಪ್ರಜ್ಞೆಯು ಕೇವಲ ನಿಮ್ಮ ಭೌತಿಕ ಪ್ರಜ್ಞೆಯೊಂದಿಗೆ ಮಾತ್ರ ಸಂಬಂಧ ಹೊಂದಿಲ್ಲ. ಆದರೆ, ನಿಮ್ಮ ಸೂಕ್ಷ್ಮ-ಭೌತಿಕ ಪ್ರಜ್ಞೆಯೊಂದಿಗೆ ಸಹ ಸಂಬಂಧ ಹೊಂದಿದೆ. ಮತ್ತು ಕೆಲವೊಂದು ಉನ್ನತ ಜೀವಿಗಳು ನಿಮ್ಮೊಂದಿಗೆ ಸಂಪರ್ಕ ಹೊಂದಿದ್ದಾರೆ. ನಿಮ್ಮೊಂದಿಗೆ ಸಹಕರಿಸುತ್ತಾರೆ. ಆಧ್ಯಾತ್ಮಿಕ ಮಾರ್ಗದಲ್ಲಿ ಸಹಾಯ ನೀಡುತ್ತಾರೆ. ಅರ್ಥಾತ್ ನೀವು ಒಬ್ಬೊಂಟಿ

ಗರೇನಲ್ಲ. ನಿಮ್ಮ ಊರ್ಧ್ವದಲ್ಲಿ ದೊಡ್ಡ ಕಾರ್ಯ–ಸಂಘವೇ ಇದೆ. ಅವರು ನಿಮ್ಮೊಂದಿಗೆ ಕಾರ್ಯ ಮಾಡುತ್ತಾರೆ.

ಅದೇ ರೀತಿ, ಉನ್ನತ ದೇವತೆಗಳೂ ಇದ್ದಾರೆ. ಮತ್ತು ಅವರು ಸಹ ನಿಮ್ಮೊಂದಿಗೆ ಸಹಕರಿಸುತ್ತಾರೆ. ಉನ್ನತ ದೇವತೆಗಳಾರು? ನೀವು ಆಂತರ್ಯದಲ್ಲಿ ಅರಿಯುತ್ತ ಹೋದಂತೆ, ಅಲ್ಲಿರುವ ದೇವತೆಗಳನ್ನು ಕುರಿತು ಅರಿಯುತ್ತೀರಿ. ನಾನು ಆ ಕುರಿತು ಸೂಚನೆ ನೀಡಬೇಕಿಲ್ಲ. ಏಕೆಂದರೆ, ಅವರಾರೆಂಬುದನ್ನು ಕಂಡುಕೊಳ್ಳುವುದು ನಿಮ್ಮ ಕರ್ತವ್ಯವಷ್ಟೇ. ಅವರು ಕ್ರಮೇಣ ಬರುತ್ತಾರೆ.

ಪ್ರಶ್ನೆ : ನಾವು ಅವರನ್ನು ದರ್ಶಿಸಿದಾಗ, ಅವರು ಯಾರೆಂಬುದನ್ನು ಅರಿಯುವುದೆಂತು?

ಉತ್ತರ : ಒಂದು ವೇಳೆ, ಅವರು ಅಲ್ಲಿ ಇರುವುದಾದರೆ, 'ನಾನು ಇಂಥವನು' ಎಂದು ಅವರೇ ಹೇಳುತ್ತಾರೆ. ಅವರು ಸ್ವಯಂ ತಮ್ಮ ಪರಿಚಯ ಹೇಳಿಕೊಳ್ಳುತ್ತಾರೆ. ಅವರು ನಿಮ್ಮನ್ನು ಬರಮಾಡಿಕೊಳ್ಳುತ್ತಾರೆ. ಮತ್ತು ಪ್ರೀತಿಸುತ್ತಾರೆ. ಅವರು ಉನ್ನತ ಜೀವಿಗಳೇ ಆಗಿದ್ದರೆ, "ನಾನು ಇಂಥ ಉಚ್ಚಕೋಟಿಯವನು. ತುಂಬಾ ಸಂತೋಷ. ನಾನು ನಿನ್ನೊಂದಿಗೆ ಮೊದಲು ಇದ್ದೆ" ಎಂದು ಹೇಳುತ್ತಾರೆ. ಮತ್ತು ಅವರು ಸಂಪ್ರದಾಯದ ಪೂರ್ಣ ತಿಳಿವಳಿಕೆ ಮಾಡಿಕೊಡುತ್ತಾರೆ. ಅವರು ಆ ಕುರಿತು ವಿವರಿಸುತ್ತಾರೆ. ಅವರು ತುಂಬಾ ಸ್ನೇಹಿತರಾಗುತ್ತಾರೆ; ಆಶ್ವಾಸನೆ ನೀಡುತ್ತಾರೆ. ಅವರೇ ನಿಮ್ಮ ಉತ್ತರದಾಯಿತ್ವವನ್ನು ನಿರ್ವಹಿಸುತ್ತಾರೆ. ಹೀಗೆ, ಅವರು ಆಂತರ್ಯದಲ್ಲಿ ನಡೆಯುತ್ತಾರೆ.

ಪ್ರಶ್ನೆ : ನೀವು ಅವರನ್ನು ದೇವತೆಗಳೆಂದು ಕರೆಯುವಿರಾ?

ಉತ್ತರ : ನಾವು ಅವರನ್ನು ದೇವತೆಗಳೆಂದೂ, ಸಿದ್ಧರೆಂದೂ ಕರೆಯುತ್ತೇವೆ. ನಿಮಗೆ ಇಷ್ಟ ಬಂದಂತೆ ಕರೆಯಬಹುದು.ಅದು ಶಬ್ದವಷ್ಟೇ, ಎಂಬುದು ನಿಮಗೆ ತಿಳಿದೆದೆಯಲ್ಲವೇ?

ಆದರೆ, ನೀವು ನಿಮ್ಮ ಸಂದೇಹಗಳಿಂದ ಸೀಮಿತರಾದರೆ, ಆಗ ನಿಮ್ಮೊಳಗಿನ ಉನ್ನತ ಶಕ್ತಿಗಳನ್ನು ನೀವು ಸುಖಿಸಲಾರಿರಿ. ಸಂದೇಹಗಳನ್ನು ತೊರೆದು, ಉನ್ನತ ಶಕ್ತಿಗಳಿಗೆ ಇಂಬುಗೊಡುವುದೆಂದರೆ ನಿಮ್ಮ ಶ್ರದ್ಧೆಯನ್ನು ವೃದ್ಧಿಸಿಕೊಂಡಂತೆ. "ಉನ್ನತ ಜೀವಿಗಳಿದ್ದಾರೆ. ಉನ್ನತ ಶಕ್ತಿಗಳಿವೆ. ನಾನು ನನ್ನ ವಿಕಾಸಕ್ಕಾಗಿ ಮತ್ತು ಮಾನವತೆಯ ವಿಕಾಸಕ್ಕಾಗಿ ಅವರನ್ನು ಬರಮಾಡಿಕೊಳ್ಳಬೇಕು. ನಾನು ನನ್ನ ಬುದ್ಧಿಯ ಮೂಲಕ, ಇಂದ್ರಿಯಗಳ ಮೂಲಕ

ಪಡೆದುದಷ್ಟೇ ಮೂಲ್ಯವಾನ ಅಲ್ಲ; ಇಲ್ಲವೆ ಅಭಿಜ್ಞತೆಯಲ್ಲ; ಇಲ್ಲವೆ ತಥ್ಯವಲ್ಲ; ಇಲ್ಲವೆ ಸತ್ಯವಲ್ಲ. ಆದರೆ, ಉನ್ನತ ಜೀವಿಗಳೂ ಇದ್ದಾರೆ, ಅವರು ನನಗೆ ಸಹಾಯ ನೀಡುವರು" ಎಂದು ಸದಾ ಕಾಲ ಭಾವಿಸುತ್ತಿರಬೇಕು. ಇಂಥ ದೃಷ್ಟಿಕೋನವು ಬೇಕು. ಆಗ ಮಾತ್ರ, ನೀವು ಅವುಗಳನ್ನು ಪಡೆಯಬಹುದು. ಇಲ್ಲವಾದರೆ, ನೀವು ನಿಮ್ಮ ಬುದ್ಧಿಯ ಮೂಲಕ ಬರೀ ಹುಡುಗಾಟವಾಡಿದರೆ, ನಿಮಗೆ ಈ ಎಲ್ಲ ವಸ್ತು ಲಾಭ ದೊರೆಯದು. ನೀವು ಅವರೊಂದಿಗೆ ಶ್ರುತಿಗೂಡಿಸಲಾರಿರಿ.

ಆಗ ನಿಮ್ಮ ವ್ಯಕ್ತಿತ್ವವು ಸರ್ವವ್ಯಾಪ್ತವಾಗದು. ನಿಮ್ಮ ಪ್ರಜ್ಞೆಯು ದೈವೀ ಆನಂದವನ್ನು ಅನುಭವಿಸದು. ಇದುವೇ ಬೋಧಿಯ ದ್ವಾರ. ನಾವು ಹೇಗೆ ಬೋಧಿಯಲ್ಲಿ ಸಾಗಬೇಕು? ಇದುವೇ ಮಾರ್ಗ. ಇದನ್ನು ಯುಕ್ತಿ–ತರ್ಕಗಳಿಂದ ವಿಶ್ಲೇಷಿಸಬೇಕಿಲ್ಲ. ಅಂಥ ತರ್ಕವು ಇಲ್ಲಿ ನಡೆಯದು. ಅದು ನಮಗೆ ಸಹಾಯ ನೀಡದು. ಯುಕ್ತಿಯು ಇದನ್ನೆಲ್ಲ ಒಪ್ಪದು. "ಇದೆಂತು ಸಂಭವನೀಯ? ಮಾನವನು ಮಾನವನೊಂದಿಗೆ ಮಾತ್ರ ಸಂಭಾಷಿಸಬಲ್ಲ. ಉನ್ನತ ಜೀವಿಗಳು ಮಾನವನೊಂದಿಗೆ ಸಂಭಾಷಿಸಲಾರರು." ಎಂದು ತರ್ಕದ ವಾದ. ಏಕೆಂದರೆ, ಅದು ಬುದ್ಧಿ ತಾನೆ? ಅನೇಕ ಜನರು ಇಂಥ ಯಾರೊಂದಿಗೂ ಸಂಭಾಷಿಸರು. ಇಂದ ಮೇಲೆ, ನಾನು "ಉನ್ನತ ಜೀವಿಗಳೊಂದಿಗೆ ಸಂಭಾಷಿಸಬಲ್ಲೆನು" ಎಂದು ಹೇಳಿದರೆ, ಬೌದ್ಧಿಕ ಜೀವಿಗಳು, "ಅವನಿಗೇನೋ ಹುಚ್ಚು; ಅವನೇನೋ ಬುರುಡೆ ಹೊಡೆಯುತ್ತಾನೆ" ಎಂದು ಹೇಳುತ್ತಾರೆ. ಏಕೆಂದರೆ, ಅವರಿಗಂಥ ಅನುಭೂತಿ ಲಭಿಸಿಲ್ಲ. ಅವರ ಒಳಗಣ್ಣು ತೆರೆದಿಲ್ಲ. ಒಳಗಣ್ಣು ಬೋಧಿಯ ಮೂಲಕ ಪ್ರಾಪ್ತವಾಗುತ್ತದೆ. ಈ ಮಹಾನ್ ಧಾರ್ಮಿಕ ಅನುಭಾವಿಗಳೂ, ಸಂತರೂ ಸುಳ್ಳು ಹೇಳುವವರೆಂದು ತಿಳಿಯಬೇಡಿರಿ. ಅವರೆಂದೂ ಸುಳ್ಳು ಹೇಳರು. ಏಕೆಂದರೆ, ಅವರು ಸ್ವತಃ ದರ್ಶನಾನುಭವ ಪಡೆದಿದ್ದಾರೆ. ಅನುಭೂತಿ ಹೊಂದಿದ್ದಾರೆ. ನೀವಿಂದು ಆಧುನಿಕ ಯುಗದಲ್ಲಿದ್ದರೂ ಸಹ, ನೀವಿದನ್ನು ಪಡೆಯುವಿರಿ; ಎಂದು ನಾನು ನಿರ್ದಿಷ್ಟವಾಗಿ ಹೇಳಬಲ್ಲೆ.

ಪ್ರಶ್ನೆ: ಈ ಸ್ಥೂಲಿಕ ದೇಹ, ಮತ್ತು ಭಾವದೇಹ ಹಾಗೂ ಮಂತ್ರ ದೇಹಗಳಲ್ಲಿ ಯಾವ ಸಂಬಂಧವಿದೆ?

ಉತ್ತರ: ಆ ದೇಹವನ್ನು ನಾನು ಸ್ಥೂಲಿಕ ದೇಹವೆಂದು ನನ್ನದೇ ಆದ ರೀತಿಯಲ್ಲಿ ಕರೆದಿರುವೆ. ಎಲ್ಲ ಸಿದ್ಧರಿಗೂ ಇಂಥವೇ ದೇಹಗಳೇನೂ ಇರುವುದಿಲ್ಲ

ಅವರಿಗೆ ವಿಭಿನ್ನ ಪ್ರಕಾರದ ದೇಹಗಳಿರುತ್ತವೆ. ಜ್ಞಾನ ದೇಹವು ಸ್ಫಟಿಕದ್ದಾಗಿದೆ. ಸಿದ್ಧರಿಗೆ ಮಂತ್ರದೇಹವಿದೆಯೆಂದು ನಾನು ಹೇಳಿದ್ದೇನೆ. ಅವರು ಶಾಕ್ತ ದೇಹಗಳನ್ನೂ ಹೊಂದಿದ್ದಾರೆ. ಅವರು ಅನೇಕ ಪ್ರಕಾರದ ದೇಹಗಳನ್ನು ಹೊಂದಿರುತ್ತಾರೆ. ಒಟ್ಟಾರೆ, ನಾವು ಅವರನ್ನು ಸಿದ್ಧರೆಂದು ಕರೆಯುತ್ತೇವೆ.

ನಾವು ಯಾವುದೇ ಪ್ರಕಾರದ ದೇಹವನ್ನು ಪಡೆದ ಮಾತ್ರಕ್ಕೆ ಅದು ಸ್ಫಟಿಕವಾಗುವುದೆಂದಲ್ಲ. ವಿಭಿನ್ನ ಕ್ಷೇತ್ರಗಳಲ್ಲಿ ಸಿದ್ಧರ ವಿಭಿನ್ನ ದೇಹಗಳಿರುತ್ತವೆ. ಕೇವಲ ಅಮರ ಮೂಲ ಭೂತಗಳಿಂದ ಅಮರ ದೇಹಗಳನ್ನು ನಿರ್ಮಿಸಬಹುದೆಂಬುದನ್ನಷ್ಟೇ ನೀವು ಗಮನಿಸಿರಿ. ಮತ್ತು ಈ ಕಲ್ಪಿತ ದೇಹವು ಸ್ಥೂಲ ಭೂತಗಳಿಂದಾದುದಲ್ಲ ಮಂತ್ರವೇನೂ ಭೌತಿಕ ವಸ್ತುವಲ್ಲ. ಇನ್ನು ಅವರು ಸೂಕ್ಷ್ಮ ಭೌತಿಕದಲ್ಲಿ ರೂಪಾಂತರಿಕೃತವಾದಾಗ, ಅವರು ಅಲ್ಲಿಯೇ ಉಳಿಯುತ್ತಾರೆ. ಹೀಗೆಯೇ ಸಿದ್ಧರು ಇರುತ್ತಾರೆ.

ಪ್ರಶ್ನೆ: ಇನ್ನು ಕೆಲವರಿಗೆ ಸ್ಫಟಿಕ ದೇಹವಿಲ್ಲದೆಯೂ ಪೂರ್ಣ ಜ್ಞಾನ ಇರಬಹುದಲ್ಲವೇ?

ಉತ್ತರ: ನನಗೆ ಪೂರ್ಣ ಜ್ಞಾನದ ಗ್ರಹಿಕೆ ಇಲ್ಲ. ನಮ್ಮ ಮಾರ್ಗದಲ್ಲಿ ಪೂರ್ಣತೆಯೆಂದರೆ, ಈ ದೇಹವೇ ರೂಪಾಂತರಿಕೃತವಾಗಬೇಕು. ಅದುವೇ ಜೀವನದ ಉಚ್ಚತಮ ಪೂರ್ಣತೆ. ಒಂದು ವೇಳೆ, ನಿಮಗದು ಈ ಜನ್ಮದಲ್ಲಿ ಸಾಧ್ಯವಾಗದಿದ್ದರೂ ಚಿಂತೆಯಿಲ್ಲ. ಆದರೆ, ಇದುವೇ ಜೀವನದ ಅಂತಿಮ ಲಕ್ಷ್ಯವಾಗಬೇಕು. ಒಮ್ಮೆ ನೀವು ಇದನ್ನು ಪಡೆದರೆ, ಅನ್ಯರೂ ಪಡೆಯುತ್ತಾರೆ. ಈ ಗ್ರಹಿಕೆಯು ಶ್ರೀ ಅರವಿಂದರದೂ ಆಹುದು; ನಿನ್ನ ಗುರುಗಳದೂ ಆಹುದು. ಇಬ್ಬರೂ ಒಂದೇ.

ನಾನೀಗ ಸ್ಫಟಿಕ ದೇಹ ಎಂಬೀ ಶಬ್ದವನ್ನು ಬಳಸುವುದಿಲ್ಲ. ಸಿದ್ಧ ದೇಹ, ಮಂತ್ರ ದೇಹ, ಭಾವ ದೇಹ, ಶೂನ್ಯ ದೇಹ, ಚೈತನ್ಯ ತನು ಎಂದು ಹೇಳುತ್ತೇನೆ. ಅವೆಲ್ಲವೂ ಒಂದೇ ಆಗುತ್ತವೆ. ನೀವು ಈ ಎಲ್ಲ ದೇಹಗಳನ್ನು ಒಟ್ಟಾಗಿ ಸೂಕ್ಷ್ಮ ಮೂಲ ಭೂತಗಳಲ್ಲಿ ವಿಶೇಷ ದೇಹದೊಂದಿಗೆ ಕಾಯ್ದುಕೊಂಡು ಬಂದರೆ ಮಾತ್ರ, ಮಾನವತೆಗೆ ಸಹಾಯವಾಗುತ್ತದೆ.

ಇಂಥ ದೇಹವನ್ನು ಪಡೆಯುವುದರ ಗುರಿಯೇನು? ಎಂಬುದನ್ನು ಕುರಿತು ನಾನು ಹೇಳಿದೆ. ದೇಹ ಪ್ರಾಪ್ತಿಗಾಗಿ ಅನೇಕ ಗುರಿಗಳಿವೆ. ಒಂದೆಂದರೆ,

ಅವರು ಉನ್ನತ ದೇಹಗಳನ್ನು ಪಡೆಯಲಿಚ್ಛಿಸುತ್ತಾರೆ ಮತ್ತು ತಮ್ಮ ಆನಂದಕ್ಕಾಗಿ ಅಲ್ಲಿಯೇ ಉಳಿಯುತ್ತಾರೆ. ಮತ್ತು ತಮ್ಮ ಶಕ್ತಿಗಳನ್ನು ವ್ಯಕ್ತ ಪಡಿಸುತ್ತಾರೆ. ಆಮೇಲೆ, ದೇವ–ದೇವತೆಗಳೆನ್ನುವವರೂ ಇದ್ದಾರೆ. ಇನ್ನು ಸೃಷ್ಟಿಯ ಕಾಲದಲ್ಲಿ ಪಿಂಡಾಂಡ, ಬ್ರಹ್ಮಾಂಡ ಮತ್ತ ವಿಶ್ವಗಳೊಂದಿಗೆ ಪರಮಾತ್ಮನೇ ಸೃಷ್ಟಿಸಿದ ಉಚ್ಚತರ ದೇವತೆಗಳೂ ಉಂಟು. ಆದರೆ, ಅವರು ನಮಗೆ ಸಹಾಯ ನೀಡರು. ಅವರು ತಮ್ಮ ಸ್ಥಾನದಲ್ಲಿಯೇ ಆನಂದಿಸುತ್ತಿರುತ್ತಾರೆ. ಆದರೆ, ಮಾನವನ ಅಳಲನ್ನು ಕಳೆಯಬಂದವರಾರು? ಇಂಥ ಸಾಮಾಜ್ಯಗಳನ್ನು ಸ್ಥಾಪಿಸಿದ ಉಚ್ಚತರ ಸಂಪ್ರಾಪ್ತಿಯ ಮಾನವರು ಮಾತ್ರ. ಇವರು ಮಾನವತೆಗೆ ಸಹಾಯ ಸಲ್ಲಿಸುವ ಅಭೀಪ್ಸೆ ಹೊಂದಿದ್ದಾರಲ್ಲದೆ, ಮೊದಲೇ ಆನಂದದಲ್ಲಿ ಮುಳುಗಿದವರಲ್ಲ. ಆನಂದದಲ್ಲಿ ಮೈಮರೆತವರಿಗೆ ಮಾನವತೆಯೆಂದರೇನು? ಎಂಬುದರ ಅರಿವಿಲ್ಲ. ಇಲ್ಲಿ ಎಂಥ ಕಷ್ಟವಿದೆ? ಎಂಬುದು ಅವರಿಗೆ ಗೊತ್ತಾಗಿಲ್ಲ. ಒಬ್ಬ ಬಡವನು ಶ್ರೀಮಂತನಾದಾಗ, ತನ್ನಂತೆ ಎಲ್ಲ ಬಡವರೂ ಶ್ರೀಮಂತರಾಗಲಿ; ಎಂದು ಹಾರೈಸುತ್ತಾನೆ. ಈ ತರದ ಗ್ರಹಿಕೆಯು ಮುಂಚೆ ಬಡವನಾದವನಿಗೆ ಮತ್ತು ಬಡತನದ ಕಷ್ಟ ಸೋಸಿದವನಿಗೆ ಮಾತ್ರ ಬರುತ್ತದೆ. ಅದೇ ರೀತಿ, ಯಾವನು ಮೊದಲು ಮಾನವನೇ ಆಗಿರುವನೋ, ಮತ್ತು ಆ ಮೇಲೆ ಉಚ್ಚ ಪ್ರಜ್ಞೆ ಪಡೆದು ಉಚ್ಚತರ ವಸ್ತುಗಳನ್ನು ಅರಿತುಕೊಳ್ಳುವನೋ, ಅವನು ಮಾತ್ರ ತನ್ನ ಈ ಉಚ್ಚತರ ಸಂಗತಿಗಳನ್ನು ಇತರರಿಗೆ ಬೋಧಿಸುವಲ್ಲಿ ತೃಪ್ತಿ ಪಡೆಯುತ್ತಾನೆ. ಇನ್ನು ಅವನ ಜೀವನದ ಲಕ್ಷ್ಯವೇನು? ಮಾನವತೆಗೆ ಸಹಾಯ ಸಲ್ಲಿಸುವುದೇ ಆಗಿದೆ.

ಹೀಗೆ, ಈ ಗ್ರಹಿಕೆಯು ಶ್ರೀ ಅರವಿಂದರಿಗೆ ಮತ್ತು ಶ್ರೀ ಕವಿರಾಜ ಮಹಾರಾಜರಿಗಷ್ಟೇ ಏಕೆ ಬಂದಿತು? ಏಕೆಂದರೆ, ಅವರು ಇದನ್ನೆಲ್ಲ ಆಂತರ್ಯದಲ್ಲಿ ಅರಿಯಬಲ್ಲವರಾಗಿದ್ದರು. ಅಷ್ಟೇ ಏಕೆ? ತಾವು ಉನ್ನತ ಬೋಧಿಯಲ್ಲಿ ಪ್ರವೇಶಿಸಿದಾಗ, ತಾವು ಈ ದಿವ್ಯ ಮಾತೆಯ ವ್ಯವಸ್ಥೆಯನ್ನು ಕಂಡರಿತೆವು; ಎಂದವರು ಹೇಳಿದ್ದಾರೆ. ತಾಯಿಯು ಅವರಿಗೆ ಹೇಳುತ್ತಾಳೆ: "ನಾನು ನಿನ್ನಲ್ಲಿ ಇಳಿದು ಬರುವೆ. ನೀನು ಒಬ್ಬಂಟಿಗನಿಲ್ಲ. ಸಮಷ್ಟಿ ಪ್ರಜ್ಞೆಯೇ ನೀನಾಗಿರುವೆ. ಮತ್ತು ನಾನೂ ಇಳಿದು ಬರುವೆ". ಅವರು ಅದನ್ನು ದರ್ಶಿಸಬಲ್ಲವರಾಗಿದ್ದರು.

ನಾನು ವ್ಯಷ್ಟಿ ದೇಹ ಮತ್ತು ಸಮಷ್ಟಿ ದೇಹಗಳು ಹೇಗೆ ಸಂಬಂಧಿಸಿವೆ?

ಮತ್ತು ಹೇಗೆ ಕಾರ್ಯ ಮಾಡುತ್ತಿವೆ? ಎಂಬುದನ್ನು ಕುರಿತು ಚಿತ್ರಿಸುವೆ. ನೀವು ನಿಮ್ಮ ವೈಯಕ್ತಿಕ ಅಭ್ಯಾಸವನ್ನು ವೃದ್ಧಿಗೊಳಿಸಿರಿ. ಮತ್ತು ಅದು ಕೊನೆಗೊಂಡ ಬಳಿಕ, ಕೂಡಲೇ ಉನ್ನತ ಗುರುಗಳು ನಿಮ್ಮನ್ನು ಅಪ್ಪಿಕೊಳ್ಳುತ್ತಾರೆ. ಮತ್ತು ನಿಮ್ಮನ್ನು ಈ ಕಾರ್ಯದಲ್ಲಿ (ನನ್ನ ಗುರುವಿನ ಕಾರ್ಯ) ಕರೆದೊಯ್ಯುತ್ತಾರೆ. ಅದಕ್ಕಾಗಿಯೇ ನಮ್ಮ ಆಯ್ಕೆ ಆಗಿದೆ. ಮತ್ತು ಗುರಿಯಾದರೂ ಈ ಕಾರ್ಯದಲ್ಲಿ ಕೈಗೂಡಿಸುವುದೇ ಆಗಿದೆ. ಮತ್ತು ಎಲ್ಲರಿಗಾಗಿ ಕಾರ್ಯ ಮಾಡುವುದಾಗಿದೆ. ಇದು ಸಾಮೂಹಿಕ ಕಾರ್ಯ. ನಾವು ಬರೀ ವ್ಯಕ್ತಿಗಳಲ್ಲ. ಆದರೆ, ನಮ್ಮ ಆತ್ಮಗಳು, ಒಂದೆಡೆಗೆ ಸಮಷ್ಟಿ ಚೈತನ್ಯದೊಂದಿಗೆ ಸಂಬಂಧಿಸಿವೆ. ಇನ್ನೊಂದೆಡೆಗೆ ವಿಶ್ವಾತ್ಮಕ ದಿವ್ಯ ಮಾತೆಯೊಂದಿಗೆ ಸಂಬಂಧಿಸಿವೆ. ಹೀಗೆ ಸಮಾಂತರ ಸಂಪರ್ಕ ಕೊಂಡಿಗಳಿದ್ದು, ನೀವು ಅವುಗಳನ್ನು ಕೂಡಿಸಬೇಕು. ಇಡೀ ಮಾನವತೆಯಲ್ಲಿ ನಾವೆಲ್ಲರೂ ಒಂದೇ ಪ್ರಜ್ಞೆಯನ್ನು ಹೊಂದಿದ್ದೇವೆ. ಹೀಗೆ, ಅ, ಬ, ಕ, ಡ,– ಎಲ್ಲರೂ ಒಂದೇ ಪ್ರಜ್ಞೆಯಲ್ಲಿ ಇದ್ದಾರೆ. ಆದ್ದರಿಂದ ನಾವು, ಸಮಷ್ಟಿ ಪ್ರಜ್ಞೆಯನ್ನು ತಿಳಿಯುತ್ತೇವೆ. ನಮ್ಮ ಕಾರ್ಯವು ಸಮಷ್ಟಿ ಪ್ರಜ್ಞೆಗಾಗಿಯೇ ಇದೆ. ಆದ್ದರಿಂದ, ನಾವು ಒಂದಾಗಬೇಕು. ಒಂದೆಡೆ ಸೇರಬೇಕು. ನನ್ನ ಜೀವನದ ಗುರಿ ಎಂದರೆ, ನಿಮ್ಮನ್ನು ನನ್ನೊಂದಿಗೆ, ನನ್ನ ಗುರುವಿನೊಂದಿಗೆ ಸೇರುವಂತೆ ಮಾಡುವುದು, ಅಷ್ಟೇ. ನನ್ನ ಕಾರ್ಯ ಮುಗಿಯಿತು. ಅನಂತರ, ಈ ಬೋಧಿಯು ನಿಮ್ಮೆಲ್ಲರಿಗೂ ಬರುತ್ತದೆ. ನೀವೂ ಬೋಧಿ ಸಂಪನ್ನ ಜನರಾಗುತ್ತೀರಿ. ಬಳಿಕ ನೀವು ಸಹ, ನನ್ನಂತೆಯೇ ಕಾರ್ಯ ಮಾಡುತ್ತೀರಿ. ನನ್ನ ಆಂತರ್ಯದ ಕಾರ್ಯವು ನನಗಾಗಿ ಅಲ್ಲ. ಆದರೆ, ಅದು ನಿಮಗಾಗಿ; ಇಡೀ ಮಾನವತೆಗಾಗಿ. ಈ ಕಾರ್ಯವು ನನ್ನೊಳಗೆ ನಡೆದೇ ಇದೆ. ಏಕೆಂದರೆ, ನಾನೊಂದು ಉಪಕರಣ ಮಾತ್ರ. ಇದೇ ರೀತಿ, ನೀವು ಸಹ ಉಪಕರಣವಾಗಬೇಕು. ನಿಮ್ಮ ವ್ಯಷ್ಟಿ–ಪ್ರಜ್ಞೆಯು ಉನ್ನತ ವಸ್ತುಗಳನ್ನು ಪಡೆಯಲು, ಉಪಕರಣವಾಗಬೇಕು. ಏತಕ್ಕಾಗಿ? ನಿಮ್ಮೊಳಗೆ ಸಮಷ್ಟಿ–ಪ್ರಜ್ಞೆಯನ್ನು ನಿರ್ಮಿಸಲು. ಇದುವೇ ಜೀವನದ ಗುರಿ.

ಪ್ರಶ್ನೆ: ನೀವು ಮಾನವತೆಗೆ ಸಹಾಯ ಸಲ್ಲಿಸಲು ಹೇಳಿದಿರಿ. ಹಾಗಾದರೆ, ಎಲ್ಲ ದೇಹಗಳನ್ನು ಈ ದೇಹದಲ್ಲಿ ಇರಿಸಿಕೊಳ್ಳಬೇಕೇನು?

ಉತ್ತರ: ಎಲ್ಲರೂ ನಿಮ್ಮೊಂದಿಗೇ ಇದ್ದಾರೆ. ನೀವು ನನ್ನ ಗುರುಗಳೊಂದಿಗೆ ಶ್ರುತಿಗೂಡಿಸಿದರೆ, ಆಗಲೇ ಎಲ್ಲರೂ ನಿಮ್ಮೊಡನೆ ಇದ್ದಾರೆಂಬುದು ತಿಳಿಯುವುದು. ಆ ಎಲ್ಲವುಗಳನ್ನು ನನ್ನ ಪರಮ ಗುರುಗಳು

ಪ್ರತಿಷ್ಠಾಪಿಸಿದ್ದಾರೆ. ಅವೆಲ್ಲವನ್ನೂ ನಿಮಗೆ ವಿಸ್ತರಿಸಿದ್ದಾರೆ. ನೀವು ಅದನ್ನು ಕಂಡುಕೊಳ್ಳಬೇಕಷ್ಟೇ. ಆ ದೇಹಗಳನ್ನು ನಿರ್ಮಿಸುವುದು ನಿಮ್ಮ ಇಲ್ಲವೆ ನನ್ನ ಕರ್ತವ್ಯವೇನಲ್ಲ. ಅವುಗಳನ್ನು ಈಗಾಗಲೇ ನಿರ್ಮಿಸಲಾಗಿದೆ. ಹೀಗೆ ನಾವು ಸುದೈವಿಗಳು! ನಾವು ನಮ್ಮ ಗುರುಗಳಷ್ಟು ದೃಢರಾಗಿಲ್ಲ. ಆದರೆ, ಇಂಥ ಗುರುಗಳು ನಮ್ಮೊಂದಿಗಿರುವರಾದುದರಿಂದ, ನಾವು ತುಂಬಾ ಸುದೈವಿಗಳು! ಅವರು ನಿರ್ಮಿಸಿದ್ದಾರೆ. ಮತ್ತು ನಾವು ಬಳಸುತ್ತಿದ್ದೇವೆ. ಮತ್ತು ಇದರಲ್ಲಿ ಅವರು ನಮಗೆ ಸಹಾಯ ನೀಡುತ್ತಾರೆ. ನೀವು ಮಾಡಿ ಏನನ್ನಾದರೂ ಪಡೆದರೆ, "ಅಬ್ಬಾ! ಮುಂದಿನ ಜನಾಂಗವು ಇದನ್ನು ಸ್ವೀಕರಿಸುತ್ತದೆ. ಅದು ಅವರಿಗೆ ಸಹಾಯ ನೀಡುತ್ತದೆ." ಎಂದು ಭಾವಿಸಿರಿ. ಹೀಗೆ, ಈ ಕಾರ್ಯ ನಡೆಯುತ್ತಿರುವುದು. ನಿಮಗೆ ತಿಳಿಯಿತಲ್ಲವೇ? ಇದು ತುಂಬಾ ದೊಡ್ಡ ವಿಷಯ.

ಆದರೆ, ಇಡಿಯಾಗಿ ಮರಣವನ್ನು ಗೆಲ್ಲುವ ಆ ಸುದಿನವು ಬರಲಿದೆ. ಮತ್ತು ಎಲ್ಲವೂ ಅಮರವಾಗುವುದು. ಅದು ಅನಿವಾರ್ಯ. ಇದಕ್ಕಾಗಿ ಮಿಲಿಯಗಟ್ಟಳೆ ವರ್ಷ ಹಿಡಿಯಬಹುದು. ಅವರಿಂದೇನೂ ಬಾಧೆಯಿಲ್ಲ. ಆದರೆ, ಆ ದಿನವು ಬಂದೇ ಬರುತ್ತದೆ. ಅದಕ್ಕಾಗಿ ಮಿಲಿಯನ್ ವರ್ಷಗಳೂ ಬೇಕಾಗಲಿಕ್ಕಿಲ್ಲ; ಎಂದು ನನ್ನ ಎಣಿಕೆ. ಅದು ಬರಲಿದೆಯೆಂಬುದು ಸುನಿಶ್ಚಿತವಿದೆ. ಅಂದಮೇಲೆ, ಅದು ಕೂಡಲೇ ಏಕೆ ಬರಲಾರದು? ನಾವು ಏನನ್ನೂ ಈ ಕುರಿತು ಹೇಳಲಾರೆವು, ಕಾರ್ಯವು ಸಾಗಿದೆ. ಮತ್ತು ನಾವು ಅದಕ್ಕಾಗಿ ಪ್ರಯತ್ನಮಾಡಬೇಕು. ಇದೊಂದು ಮಹಾನ್ ಉದ್ದಿಷ್ಟ ಕಾರ್ಯ. ಇದನ್ನಾವ ರಾಜನೈತಿಕ ಸಂಘಟನೆಯೂ, ಯಾವ ರಾಷ್ಟ್ರವೂ ಮಾಡದು. ಇದೊಂದು ಅದ್ಭುತ ಕಾರ್ಯ! ಸರ್ವರೂ ಏಕಪ್ರಜ್ಞೆಯಲ್ಲಿ ಇದ್ದಾರೆ. ಅದು ಕೆಳಮಟ್ಟದ ವರೆಗಿದ್ದರೂ ಸಹ, ನಮಗೆ ಪರಿಚಿತವಿಲ್ಲವಷ್ಟೇ. ನಾವೆಲ್ಲರೂ ಒಂದೇ ಇದ್ದೇವೆ. ನೀವು ಅರವಿಂದರ ಗ್ರಂಥಗಳನ್ನು ಓದಿರಿ. ಅವರು ಇದನ್ನೆಲ್ಲ ವಿವರಿಸಿದ್ದಾರೆ.

ನನ್ನ ಗುರುಗಳು ಅನೇಕ ವಸ್ತುಗಳನ್ನು ನಿರ್ಮಿಸಿದ್ದಾರೆ. ಅವರು ಜ್ಞಾನ ಗಂಜದ ಜನರಿಗಿಂತ ತುಂಬಾ ಶ್ರೇಷ್ಠರಾಗಿದ್ದರು. ಆ ಕುರಿತು ನಾನು ನಿಮಗೆ ಹೇಳುವೆ.

ಉದಾಹರಣಾರ್ಥ, ನಿಮಾನಂದರನ್ನೇ ತೆಗೆದುಕೊಳ್ಳಿರಿ. ಅವರು ತಮ್ಮ ಭೌತಿಕ ದೇಹವನ್ನು ತೊರೆಯುವ ಕಾಲಕ್ಕೆ ಅವರಿಗೆ ಎರಡು ದೇಹಗಳಿದ್ದವು. ಒಂದು,ಅವರ ಭೌತಿಕ ರೂಪ;ಇನ್ನೊಂದು, ಅವರ ನಿರ್ಮಿತ ರೂಪ. ಅವೆರಡೂ ರೂಪಗಳು ಸೂಕ್ಷ್ಮ ಭೌತಿಕ ನೆಲೆಯಲ್ಲಿ ಅರ್ಥಾತ್ ಸೂಕ್ಷ್ಮ ಪೃಥ್ವಿಯಲ್ಲಿ ಒಳ

ಸೇರಿದವು. ಆದರೆ, ಯಾವನೊಬ್ಬ ಮಾನವ ಜೀವಿಯು ಅವರನ್ನು ಕಾಣ ಬಯಸಿದರೆ, ಅವರು ತಮ್ಮ ಉಚ್ಚತರ ದೇಹವನ್ನು ಕಾಣಿಸರು. ಅವರು ತಮ್ಮ ಹಳೆಯ ದೇಹವನ್ನೇ, ಅಂದರೆ ಸ್ಥೂಲ ಲೋಕದಲ್ಲಿ ಜೀವಿಸುವಾಗ ಪಡೆದ ದೇಹವನ್ನೇ ತೋರುತ್ತಾರೆ. ಅವರು ಎಂಬತ್ತು ವರ್ಷದ ದೇಹದಲ್ಲಿಯೇ ಕಾಣಬರುತ್ತಾರೆ. ಆದರೆ ಅವರಿಗಿನ್ನೂ ಒಂದು ದೇಹವಿದೆ. ನೀವು ಇನ್ನಷ್ಟು ಸಕ್ಷಮರಿದ್ದರೆ, ಅವರ ಒಳದೇಹವನ್ನೂ ಕಾಣಬಹುದು. ಆದರೆ, ಸಾಮಾನ್ಯವಾಗಿ ನಾವು ಈ ದೇಹವನ್ನು ತೊರೆದಾಗ, ಏನಾಗುತ್ತದೆ? ಈಗ ಉದಾಹರಣಾರ್ಥ, ಪಾಂಡಿಚೇರಿಯ ಮಾತೆಯನ್ನೇ ತೆಗೆದುಕೊಳ್ಳಿರಿ. ಅವಳು ತನ್ನ ದೇಹವನ್ನು ತ್ಯಜಿಸಿದ್ದಾಳೆ. ಅವಳು ಈಗ ಚಿಕ್ಕ ಹುಡುಗಿಯಂತಿದ್ದಾಳೆ. ಅವಳಿಗಿಂಥ ದೇಹವಿದೆ. ಆದರೆ ಇಂದು ಅವಳು ತೋರ್ಪಡಿಸಿಕೊಳ್ಳಬೇಕಾದರೆ, ಮೊದಲು ತನ್ನ ಪರಿಚಿತ ದೇಹದಲ್ಲಿಯೇ ಕಾಣಿಸಬೇಕು. ಆಗ ಮಾತ್ರ ನಾವು, ಅವಳೇ 'ಮಾತೆ' ಎಂದು ಗುರುತಿಸಬಲ್ಲೆವು, "ಓಹೋ! ಇದು ಮಾತೆಯ ಆಂತರಿಕ ದೇಹ!" ಎಂದು ಆಗ ಗುರುತಿಸುತ್ತೇವೆ, ಆ ಇನ್ನೊಂದನ್ನು. ಏಕೆಂದರೆ, ಆಂತರಿಕ ದೇಹಗಳಲ್ಲಿ ವ್ಯತ್ಯಾಸಗಳಿರುವುದಿಲ್ಲ. ಅವು ಸಾದೃಶವಾಗಿರುತ್ತವೆ. ನೀವು ಅವುಗಳನ್ನು ವಿಂಗಡಿಸಲಾರಿರಿ. ನೀವು ಈ ದೇಹದಲ್ಲಿ ಮಾತ್ರ ಪ್ರತ್ಯೇಕಿಸಿ ಗುರುತಿಸಬಲ್ಲಿರಿ. ನೀವು ಈ ದೇಹ ತೊರೆದು, ಇನ್ನೊಂದು ದೇಹ ಧರಿಸಿದರೆ, ಅದನ್ನು ವಿಂಗಡಿಸಿ ಕಾಣಲಾರೆವು. "ಓಹೋ! ಇದು 'ರೋಪರ'ನ ಆಂತರಿಕ ದೇಹ" ಎಂದು ಗ್ರಹಿಸಬೇಕಷ್ಟೇ.

ಪ್ರಶ್ನೆ: ಪಾಂಡಿಚೇರಿ ಮಾತೆಯು ಹಾಗೆ ಕಾಣಬರುವುದೇಕೆ? ಹಾಗಿಲ್ಲವಾದರೆ, ಜನರು ಅವಳನ್ನು ಗುರುತಿಸಲಾರರೆಂದಲ್ಲವೇ?

ಉತ್ತರ: ನಿಜವಾಗಿಯೂ.

ನಿಮ್ಮ ಸಮಸ್ತ ಬುದ್ಧಿ ಮತ್ತು ಮನಗಳನ್ನು ಶ್ರುತಿಗೊಳಿಸಲು ಪ್ರಯತ್ನಿಸಿರಿ. ಅರಿತುಕೊಳ್ಳಲು ಪ್ರಯತ್ನಿಸಿರಿ. ಆ ಕಾರ್ಯವು ಆಂತರ್ಯದಲ್ಲಿ ಸಾಗಿದೆ. ನೀವು ನಿಮ್ಮ ನಿಮ್ಮ ಮನದಲ್ಲಿ ಕಲ್ಪನೆಯೆಂದು ತಿಳಿದಿರುವುದೂ ತಥ್ಯವೇ ಆಗಿದೆ. ಅಷ್ಟೇಕೆ? ನೀವಿಲ್ಲಿಯೇ ವೀಕ್ಷಿಸಬಲ್ಲಿರಾದರೆ, ಅನೇಕಾನೇಕ ಸಿದ್ಧ ಕ್ಷೇತ್ರಗಳಿವೆ. ಅವುಗಳನ್ನು ನೀವು ಕಂಡುಕೊಳ್ಳಬಹುದು. ಅವುಗಳನ್ನು ಪಡೆಯಲು ಇದೂ ಒಂದು ಕ್ಷೇತ್ರ. ನೀವು ಪಾತಂಜಲಿ (III-31) ಯನ್ನು ಓದಿದರೆ, ಅದರಲ್ಲಿ, "ಮೂರ್ಧ ಜ್ಯೋತಿಷಿ ಸಿದ್ಧ ದರ್ಶನಮ್." ಎಂದು ಹೇಳಿರುವುದನ್ನು ಗಮನಿಸಿರಿ. ಮಹಾ ಮಸ್ತಿಷ್ಕದ ಜ್ಯೋತಿಯ ಆಚೆಗೆ ಸಿದ್ಧ

ದರ್ಶನ. ಮಸ್ತಿಷ್ಕದ ಛಿದ್ರದಲ್ಲಿ ಕಾಂತಿಪೂರ್ಣ ಬೆಳಕಿದೆ. ಸಮಯವನ್ನು ಆಚರಿಸುವುದರಿಂದ ಸಿದ್ಧರ ದರ್ಶನವಾಗುತ್ತದೆ. ಅವರು ಆಕಾಶೀಯ ದೇಶದಲ್ಲಿ, ಪೃಥ್ವಿಯಾಗಸಗಳ ಮಧ್ಯೆ ಸಂಚರಿಸುತ್ತಾರೆ.

ನೀವು ಸಿದ್ಧರ ಚಲನೆಗಳನ್ನು ಕಾಣಬಲ್ಲಿರಿ. ಏಕೆಂದರೆ ಅವು ಭುವಿಯಾಗಸಗಳ ಮಧ್ಯೆ ಇವೆ. ಆದ್ದರಿಂದ, ಸಿದ್ಧ ಸಂಪ್ರದಾಯಕ್ಕೆ ಸಂಬಂಧಪಟ್ಟವರು ನಿಜವಾಗಿಯೂ ಸುದೈವಿಗಳು. ಅವರು ಅತ್ಯಂತ ಕಟ್ಟುನಿಟ್ಟಿನವರು. ಇನ್ನು ಕೆಲವು ಸಿದ್ಧರು ತುಂಬಾ ದಯಾಪೂರ್ಣರೂ ಇರುತ್ತಾರೆ. ಕೆಲವರು ತುಂಬಾ ಮೃದುವಾಗಿರುತ್ತಾರೆ. ಆದರೆ, ಅವರು ಕ್ಷೇತ್ರಗತ ಅಧಿಕಾರ ಪ್ರದಾನ ಮಾಡಿದರೆ, ತುಂಬಾ ನಿಷ್ಕೃಷ್ಟರಾಗಿರುತ್ತಾರೆ. ನೀವು ಅವರಿಂದ ಏನನ್ನೂ ಕೇಳದಿದ್ದರೆ, ಇಲ್ಲವೆ ಕೇವಲ ಬೋಧಿಯನ್ನಷ್ಟೇ ಕೇಳಿದರೆ, ಯಾವ ತೊಂದರೆಯೂ ಇರದು. ಸಿದ್ಧರಲ್ಲಿ ಎರಡು ವಿಧ. ಕೆಲವರು ಶಕ್ತಿಸಂಪನ್ನರು. ಕೆಲವರು ಬೋಧಿಸಂಪನ್ನರು. ಶಕ್ತಿಸಂಪನ್ನರಾದವರು ತುಂಬಾ ಕಟ್ಟುನಿಟ್ಟಿನವರು. ಈಗ ಒಬ್ಬ ಸಿದ್ಧನು ನಿಮಗೆ ಶಕ್ತಿಯನ್ನು ದಯಪಾಲಿಸಿದನೆಂದು ತಿಳಿಯಿರಿ. ಮತ್ತು ಅವಗಳನ್ನೆಲ್ಲ ನಿಮ್ಮಲ್ಲಿಯೇ ಇಟ್ಟುಕೊಳ್ಳಲು ಹೇಳುತ್ತಾನೆ. ಒಂದು ವೇಳೆ, ನೀವು ಆ ಶಕ್ತಿಗಳನ್ನು ದುರ್ವಿನಿಯೋಗಿಸಿದರೆ, ಕೂಡಲೇ ಅವನು ಅವುಗಳನ್ನು ಹಿಂತೆಗೆದುಕೊಳ್ಳುತ್ತಾನೆ. ಈಗ ನೀವು ತುಂಬಾ ಸಿರಿವಂತರಿರುವಿರೆಂದು ತಿಳಿಯಿರಿ. ಮತ್ತು ಅವರು ನಿಮ್ಮನ್ನು ದೊಡ್ಡ ಸ್ವಾಮೀಜಿಯನ್ನಾಗಿ ಮಾಡಿದ್ದಾರೆಂದೂ ತಿಳಿಯಿರಿ. ನಿಮ್ಮಲ್ಲಿ ಅನೇಕ ವಸ್ತುಗಳಿವೆ. ಎಲ್ಲರೂ ನಿಮ್ಮ ಬಳಿಗೆ ಬರುತ್ತಾರೆ ಮತ್ತು ನೀವು ಅನೇಕ ಸಿದ್ಧಿಗಳನ್ನು ತೋರುತ್ತೀರಿ. ಒಂದು ವೇಳೆ, ನೀವು ಆ ಸಿದ್ಧಿಗಳ ದುರ್ವಿನಿಯೋಗ ಮಾಡಿದರೆ, ಕೂಡಲೇ ಅವರು ನಿಮ್ಮನ್ನು ಕೆಳಕ್ಕೆ ತಳ್ಳುತ್ತಾರೆ. ನನ್ನ ಪರಮ ಗುರುಗಳಾದ ವಿಶುದ್ಧಾನಂದ ಪರಮಹಂಸರು, ಜ್ಞಾನಗಂಜ ಸಿದ್ಧಗಣಕ್ಕೆ ಸೇರಿದವರು. ಅವರು ತಾವೇನೇ ಮಾಡಲಿ, ಉನ್ನತ ಸಿದ್ಧಗುರುಗಳಿಗೆ ಪ್ರತಿ ರಾತ್ರಿ ವಿವರಣೆ ನೀಡಬೇಕಾಗುತ್ತಿತ್ತು. ಅವರು ಅದೆಷ್ಟೇ ಶಕ್ತಿಯುತರಾಗಿದ್ದರೂ, "ಮಗೂ! ಹಾಗೇಕೆ ನೀಡು ಮಾಡುತ್ತೀ?" ಎಂದು ಅವರ ಸಿದ್ಧ ಗುರುಗಳು ವಿಶುದ್ಧಾನಂದರಿಗೆ ಕೇಳುತ್ತಿದ್ದರು. "ಒಂದು ವೇಳೆ, ನೀನು ನನ್ನ ಇಚ್ಛೆಗೆ ವಿರುದ್ಧ ಆಚರಿಸಿದರೆ, ನಾನು ನಿನ್ನ ಸಿದ್ಧಿಗಳನ್ನೆಲ್ಲ ಸೆಳೆದುಕೊಂಡು, ನಿನ್ನನ್ನು ಸಾಧಾರಣ ಮನುಷ್ಯನನ್ನಾಗಿ ಮಾಡುವೆ" ಎಂದು ಎಚ್ಚರಿಸುತ್ತಿದ್ದರು. ಹೀಗೆ, ನನ್ನ ಪರಮ ಗುರುಗಳು (ಗುರುವಿನ ಗುರು) ಸಿದ್ಧಿ ಸಂಪನ್ನರಾಗಿದ್ದರು.

ಅವರು ಮಾನವತೆಗೆ ಆ ಸಿದ್ಧಿ ಸಂಪದವನ್ನೆಲ್ಲ ನೀಡಬಯಸಿದ್ದರು. ಅವರ ಬಳಿ ಪ್ರಚಂಡ ಸಿದ್ಧಿಗಳಿದ್ದವು. ಆದರೆ, ಆ ಸಿದ್ಧರು ಎಷ್ಟೊಂದು ಪ್ರಬಲರಾಗಿದ್ದರೆಂದರೆ, ಅವರು ಹೇಳಿಯೇ ಬಿಟ್ಟರು: "ಇಲ್ಲ; ಇಲ್ಲ. ನೀನು ಅವುಗಳನ್ನು ನೀಡಕೂಡದು. ಅವು ನಿನಗಾಗಿ ಮಾತ್ರ. ನೀನು ಇವುಗಳೊಂದಿಗೆ ಮರಳಿ ಬಾ." ಹೀಗೆ ಅವರು ತಮ್ಮ ಯಾವುದೇ ಸಿದ್ಧಿಯನ್ನು ಯಾರಿಗೂ ಕೊಡದಾದರು. ಅವರು ಜನರನ್ನು ಕಂಡಾಗ ತುಂಬಾ ದುಃಖಿಸುತ್ತಿದ್ದರು. "ಅಯ್ಯೋ! ಈ ಸಿದ್ಧಿಗಳೆಲ್ಲ ನನ್ನಲ್ಲಿವೆ. ಆದರೆ, ನಾನು ಅವುಗಳನ್ನು ಮಾನವತೆಗೆ ಕೊಡುವಂತಿಲ್ಲವಲ್ಲ? ಆದರೂ ಸಹ, ನಾನು ದಿವ್ಯ ಮಾತೆಯನ್ನು ಪೂಜಿಸುತ್ತಿರುವೆ. ಆ ಪ್ರಯುಕ್ತ, ನನ್ನಲ್ಲಿ ಪ್ರಚಂಡ ಶಕ್ತಿ, ಬಲಗಳುಂಟು. ಅವುಗಳನ್ನು ನಾನು ಮಾನವತೆಗಾಗಿ,– ಸಿದ್ಧರಾರೂ ಇವುಗಳನ್ನು ತಡೆಯದ ಕ್ಷೇತ್ರದಲ್ಲಿ– ನೆಲೆಗೊಳಿಸುವೆ. ಈ ರೀತಿಯಿಂದಲಾದರೂ ನಾವು ಮಾನವತೆಗೆ ಏನಾದರೂ ಕೊಡಬಲ್ಲೆವು; ಎನ್ನುತ್ತಿದ್ದರು.

ಹೀಗೆ, ಸಿದ್ಧರು ನಿಮ್ಮಲ್ಲಿ, ಸಿದ್ಧಿಗಳನ್ನು ಪ್ರತಿಷ್ಠಾಪಿಸಿದರೆ, ಆಗ ನೀವು ಅವರು ಹೇಳಿದಂತೆಯೇ ನಡೆದುಕೊಳ್ಳಬೇಕಾಗುತ್ತದೆ.

ಇನ್ನು, ನಾನು ನಿಮಗೆ ಸಿದ್ಧರ ಸ್ವಭಾವವನ್ನೂ ಮತ್ತು ಅವರ ಕಾರ್ಯ ಪದ್ಧತಿಯನ್ನೂ ಕುರಿತು ಹೇಳುವೆ.

ಪ್ರಶ್ನೆ: ಸಿದ್ಧರು ಬೋಧಿ ಸಂಪನ್ನರೇನು?

ಉತ್ತರ: ಅದನ್ನು ನಾನು ವಿವರಿಸುವೆ. ಜ್ಞಾನಗಂಜದಲ್ಲಿ ಇರುವ ಸಿದ್ಧರು ಬೋಧಿಯನ್ನು ಈಯಬಲ್ಲರು. ಅವರು ಉನ್ನತೋನ್ನತ ಮಟ್ಟದವರಾಗಿದ್ದಾರೆ.

ಪ್ರಶ್ನೆ: ಸಿದ್ಧರು ಜ್ಞಾನ ಮತ್ತು ಸಿದ್ಧಿಗಳೆರಡನ್ನೂ ಹೊಂದಿರಲಾರರೇನು?

ಉತ್ತರ: ಹೊಂದಬಹುದು. ಅಂಥ ಕೆಲವು ಸಿದ್ಧರೂ ಉಂಟು. ಆದರೆ ಸಾಮಾನ್ಯವಾಗಿ, ಆ ಜ್ಞಾನವೂ ಸಹ ಸಿದ್ಧಿಯೊಂದಿಗೆ ಸಂಬಂಧಿಸಿರುತ್ತದೆ. ಆದರೆ, ಮಾನವ–ವಿಕಾಸಕ್ಕಾಗಿ ಅಲ್ಲ. ಅವರಿಗೆ ಅಖಿಂಡ ಮಹಾಯೋಗ, ಪೂರ್ಣಯೋಗಗಳಂಥ ಯಾವುದೂ ತಿಳಿದಿರುವುದಿಲ್ಲ. ಅವರು ಸಹ, ಇಂಥ ವಸ್ತುಗಳನ್ನು ಕುರಿತು ಅರಿಯಲು ಕಾತರಿಸಿ ಹುಚ್ಚರಂತಾಗುತ್ತಾರೆ. ಮಾನವನು ಸಾಧಿಸಬಹುದಾದ ಅತ್ಯುನ್ನತ ಸಾಧ್ಯವನ್ನು ಕುರಿತು ಅವರು ತಿಳಿಯರೆಂದಲ್ಲ. ಅವರಿಗೆ ಇವೆಲ್ಲ ಗೊತ್ತು. ಹೀಗೆ, ಕೇವಲ ಸಿದ್ಧನಾಗುವುದೇ ಮಹಾ ಸಾಧನೆಯಲ್ಲ. ಸಮಷ್ಟಿ– ಮಾನವೀಯ ಪ್ರಜ್ಞಾವಂತ ಮಾನವನಾಗುವುದು ಸಿದ್ಧನಾಗುವುದಕ್ಕಿಂತಲೂ ಮೇಲು.

ನಾವು ಮಾನವ ಜೀವಿಗಳಾಗಿರುವುದು, ನಮ್ಮ ಸೌಭಾಗ್ಯ. ಪ್ರತಿಯೊಬ್ಬರೂ ಈ ದೇಹವನ್ನು ಬಯಸುತ್ತಾರೆ. ಅಷ್ಟೇಕೆ? ದೇವತೆಗಳೂ ಬಯಸುತ್ತಾರೆ. ಅವರು ಅವತರಿಸಬಯಸುತ್ತಾರೆ. ನೀವು ಉನ್ನತ ದೇವ–ದೇವತೆಗಳೆಂದು ಕರೆಯುವವರು ಸಹ, ಈ ದೇಹ ಪ್ರಾಪ್ತಿಗಾಗಿ ಕಾತರರಾಗಿದ್ದಾರೆ. ಅವರು ಈ ದೇಹದಲ್ಲಿ ಇರಬಯಸುತ್ತಾರೆ.

ದೇವರು ಅವತರಿಸುವನೇಕೆ? ಏಕೆಂದರೆ, ಅವನು ಮಾನವತೆಗೆ ಕಲ್ಯಾಣ ಮಾಡಬಯಸುತ್ತಾನೆ. ಅವನು ಹಾಗೆ ಮಾಡಬಲ್ಲನು; ಅವನು ಪರಿಸ್ಥಿತಿಯನ್ನು ಪರಿವರ್ತಿಸಬಲ್ಲನು. ಆದರೆ, ಅವನು ದೇಹಧಾರಿಯಾಗಿ ಬರುವನೇಕೆ? ಏಕೆಂದರೆ, ಅವನೂ ಸಹ ನರನಾಗಲು ಬಯಸುತ್ತಾನೆ. ನಾರಾಯಣನು ನರನಾಗಲು ಬಯಸುತ್ತಾನೆ. ಇತ್ತ ನರನು ನಾರಾಯಣನಾಗಲಿಚ್ಛಿಸುತ್ತಾನೆ. ಆದರೆ, ನರನೇ ನಾರಾಯಣನೆನಿಸಬೇಕೆಂದು ನಾವು ಬಯಸುತ್ತೇವೆ. ಇದೊಂದು ಅದ್ಭುತ ಸಂಗತಿ!

ಒಂದೆಡೆಗೆ ಮಾನವನು ಪಶುವಾಗಿದ್ದಾನೆ. ಇನ್ನೊಂದೆಡೆಗೆ ಅವನು ಮಾನವನಾಗಿದ್ದಾನೆ. ಮತ್ತೊಂದೆಡೆಗೆ ಅವನು ಅರಿಯಬಲ್ಲನಾದರೆ, ತಾನೇ ದೇವತೆಯಾಗಿದ್ದಾನೆ.

ಮಾನವನು, "ಓಹೋ! ನಾನು ಈ ಜಗತ್ತಿನಲ್ಲಿ ಬಂದಿರುವೆ. ನಾನು ಮದುವೆಯಾಗಬೇಕು. ಧನ ಸಂಚಯಿಸಬೇಕು. ಉನ್ನತ ಪದವಿಯನ್ನು ಇಲ್ಲವೆ ಸ್ವಲ್ಪ ಅಧಿಕಾರವನ್ನು ಹೊಂದಬೇಕು." ಎಂದು ಕನವರಿಸುತ್ತಿದ್ದಾನೆ. ಅವನು ಇಂಥ ಚಿಲ್ಲರೆ ವಸ್ತುಗಳಿಗಾಗಿ ತನ್ನ ಮಹತ್ವಾಕಾಂಕ್ಷೆಗಳನ್ನೆಲ್ಲ ಸಂಕುಚಿತಗೊಳಿಸಿದ್ದಾನೆ. ಮಾನವನು ತಾನೇ ದೇವನಾಗಿರುವನೆಂಬುದು ನಿಮಗೆ ತಿಳಿದಿದೆಯಷ್ಟೇ. ನೀವು ಅವನನ್ನು ಸರಿಯಾಗಿ ಅರಿತರೆ, ಅವನು ಶ್ರುತಿಗೊಳಿಸಬಲ್ಲನೆಂಬುದನ್ನು ತಿಳಿಯುವಿರಿ. ಸಕಲ ವಿಶ್ವಗಳು,ಜ್ಯೋತಿಷ್ಕ ಪುಂಜಗಳು ಅವನೊಂದಿಗೆ ಉಂಟು. ನಾವು ಅವುಗಳೊಂದಿಗೆ ಶ್ರುತಿಗೊಳ್ಳಬಲ್ಲೆವು. ನಾವು ಅವುಗಳೊಂದಿಗೆ ಒಂದಾಗಬಲ್ಲೆವು. ನಾವು ಈ ಎಲ್ಲ ಸುಂದರ ವಸ್ತುಗಳೊಂದಿಗೆ ಶ್ರುತಿಗೂಡಬಲ್ಲೆವು. ಈ ಜೀವನವೆಲ್ಲವೂ ಬೆಳಗುತ್ತದೆ. ಇದನ್ನು ನೀವು ಅರಿತರೆ,ಅದೆಷ್ಟು ಅದ್ಭುತವಾಗಿದೆ!

ಹೀಗೆ, ನೀವು ಈ ಸಂಗತಿಗಳನ್ನು ಕೇಳುವ ಸುದೈವಿಗಳಾಗಿದ್ದೀರಿ.

ಏಕೆಂದರೆ ನಾವೂ ಸಹ, ಅವುಗಳೊಂದಿಗೆ ಶ್ರುತಿಗೂಡಬಲ್ಲೆವು. ಮಾನವನು ಹೇಗೆ ಭಾವಿಸುವನೋ, ಹಾಗೆಯೇ ಆಗುವನು. ವಿಚಾರವು ಅತ್ಯಂತ ಪ್ರಬಲ ಕ್ರಮ ಪದ್ಧತಿ. ವಿಚಾರಿಸುವಿಕೆಯು ಸುಲಭತರ ಕ್ರಮವಲ್ಲ. ಇದುವೇ ಜ್ಞಾನ. ಅದು ನಿಮ್ಮಲ್ಲಿ ಬೀಜವನ್ನು ಊರುತ್ತದೆ. ಅದು ಸಂಸ್ಕಾರವಾಗುತ್ತದೆ. ಇವುಗಳೆಲ್ಲ ನಿರುಪಯೋಗಿಯಾಗವು. ಆದರೆ, ಸಂಸ್ಕಾರಗಳು ಕಾರ್ಯ ಮಾಡುತ್ತಿವೆ. ಸಂಸ್ಕಾರಗಳಿಗೆ ಪ್ರಚಂಡ ಶಕ್ತಿಯಿದೆ. ಕೆಲವೊಮ್ಮೆ, ನನ್ನ ಮನವು ಏನೋ ಆಗುತ್ತದೆ. ಸಂಸ್ಕಾರಗಳು ಕಾರ್ಯ ಮಾಡುತ್ತಿವೆ. ಅವು ಇಷ್ಟೊಂದು ಮಹತ್ತ್ವದವಿವೆ.

೧೦
ಸಾಧನೆ ಮತ್ತು ಚೈತನ್ಯ

[ಈ ಪ್ರವಚನವು ಕೇವಲ ನನ್ನ ಶಿಷ್ಯರಿಗಾಗಿ. ಏಕೆಂದರೆ, ಕೇವಲ ಶುದ್ಧ ದರ್ಶನ ಇಲ್ಲವೆ ತತ್ತ್ವಶಾಸ್ತ್ರ ಇಲ್ಲವೆ ತಂತ್ರದ ಮೇಲಿನ ಸಾಧಾರಣ ಮಾಹಿತಿಯಲ್ಲದೆ ಇದೊಂದು ರಹಸ್ಯ ಮಾತೂ ಆಗಿದೆ.]

ನಾವು ದೀಕ್ಷೆ ಪಡೆಯುತ್ತೇವೆ. ಅದರ ಅರ್ಥವೇನು? ಅದು ಕೇವಲ ಔಪಚಾರಿಕತೆಯೇ? ಅಲ್ಲ. ನಮ್ಮ ಮಾರ್ಗದಲ್ಲಿ ಅದೇನೂ ಔಪಚಾರಿಕವಲ್ಲ. ದೀಕ್ಷೆ ಎಂದರೆ–ನಾವು ಇನ್ನೊಂದು ಆತ್ಮನಲ್ಲಿ ಗುರುವಿನ ಪ್ರವಾಹವನ್ನು ಹರಿಬಿಡುತ್ತೇವೆ. ಅಥವಾ ಸಂಪ್ರದಾಯದಿಂದ ಬರುವ ಪ್ರಜ್ಞೆಯನ್ನು ತುಂಬುತ್ತೇವೆ. ಮತ್ತು ಅನಂತರ, ನಾವು ಅದನ್ನೇ ಇತರ ಆತ್ಮಗಳಿಗೆ ವಿಸ್ತರಿಸುತ್ತೇವೆ. ಅದು ನಿಮ್ಮ ವಿದ್ಯುಚ್ಛಕ್ತಿಯ ಸಂಗ್ರಹಾಲಯದಂತೆ,–ಅಂದರೆ ಶಕ್ತಿಯನ್ನು ವಿಭಿನ್ನ ಜಾಗೆಗಳಿಗೆ ವಿತರಿಸುವಂತೆ–ಇದೆ. ಅದೇ ರೀತಿ, ಸಾಂಪ್ರದಾಯಿಕ ಪ್ರಜ್ಞೆ ಇದೆ. ಓರ್ವ ಗುರುವಿನಿಂದ ಇನ್ನೋರ್ವನಿಗೆ ಸಾಗಿ ಬರುತ್ತದೆ. ನಾವು ಏನನ್ನು ಸಂಚಯಿಸುವೆವೋ, ಮತ್ತು ಈ ವಸ್ತುಗಳಿಂದ ಏನನ್ನು ಪಡೆಯುವೆವೋ, ಅದು ಹಾಳಾಗುವುದಿಲ್ಲವೆಂದು ನಾವು ನಂಬುತ್ತೇವೆ. ಅದು ಶಕ್ತಿ ರೂಪದಲ್ಲಿ ಉಳಿಯುತ್ತದೆ. ಹೀಗೆ, ಮರಣ ಬರಲಿ; ದೇಹವು ದೂರ ಹೋಗಲಿ. ಇವುಗಳಿಗೆ ಅದರಿಂದಾವ ಬಾಧೆಯಿಲ್ಲ. ಅವುಗಳಿನ್ನೂ ವಿಶ್ವದ ಕೇಂದ್ರದಲ್ಲಿ ಉಪಸ್ಥಿತವಿರುತ್ತವೆ.

ಹೀಗೆ, ನಮ್ಮ ಮಾರ್ಗವು ಅಮರತೆಯ ಮಾರ್ಗವಾಗಿದೆ. ನಾವು ಅಮರತ್ವದಲ್ಲಿ ವಿಶ್ವಾಸ ಹೊಂದಿದ್ದೇವೆ. ಆತ್ಮವು ಅಮರವೆಂಬುದನ್ನು ಎಲ್ಲರೂ ನಂಬುತ್ತಾರೆ. ಮತ್ತು ನಾವಂತೂ ಅದನ್ನು ವಿಶೇಷವಾಗಿ ನಂಬುತ್ತೇವೆ.

ಅರ್ಥಾತ್, ಎರಡು ವಸ್ತುಗಳಿವೆ. ಒಂದು ಶರೀರ; ಇನ್ನೊಂದು

ಮನಸ್ಸು. ದೇಹ ಮತ್ತು ಮನಗಳು ಬೇರೆ ಬೇರೆಯಾಗಬಹುದು. ದೇಹ, ಮನಸ್ಸುಗಳಿಲ್ಲದೆ ಸಂಪರ್ಕವೇರ್ಪಡಬಹುದು. ನಾವು ಹೀಗೆ ಸಂಪರ್ಕಿಸಬಹುದೆಂಬುದನ್ನು ಕುರಿತು ಆ ಬಳಿಕ ವಿವರಿಸುವೆ.

ಹೀಗೆ, ನಮ್ಮ ದೀಕ್ಷೆಯು ಒಂದು ವಿಶೇಷ ಪ್ರಕಾರದ ದೀಕ್ಷೆಯಾಗಿದೆ. ಆರ್ಥಾತ್, ನಮ್ಮ ಜೀವನದ ಗುರಿಯು ಕೇವಲ ಸ್ವಾಧೀನತೆಯನ್ನಾಗಲಿ ಇಲ್ಲವೆ ವೈಯಕ್ತಿಕ ಸಾಕ್ಷಾತ್ಕಾರವನ್ನಾಗಲಿ ಪಡೆಯುವುದಲ್ಲ. ಆದರೆ, ನಾವು ಮಾನವ ಜನಾಂಗವಿಡೀ ಸಾಕ್ಷಾತ್ಕಾರ ಪಡೆಯಬೇಕೆಂದು ಬಯಸುತ್ತೇವೆ. ಅದಕ್ಕಾಗಿ, ನಾವು ಕಾರ್ಯ ಮಾಡಬಯಸುತ್ತೇವೆ. ನನ್ನ ಗುರುವಿನೊಂದಿಗೆ ಶ್ರುತಿಗೊಂಡ ಆತ್ಮರಿಗೆ, ಇಹದಿಂದ ಮುಕ್ತರಾಗುವುದಿಷ್ಟೇ ಅವರ ಜೀವನದ ಚರಮ ಗುರಿಯಲ್ಲ; ಆದರೆ, "ನಾನೂ ಸಹ ಮಾನವತೆಯ ಒಂದು ಘಟಕ; ಒಂದು ಕಿರಣ; ಮಾನವತೆಯ ಒಂದು ಶಕ್ತಿ ಕಣ." ಎಂದು ಭಾವಿಸಿ ಮುನ್ನಡೆಯುವುದು. ಇನ್ನು ನಾವು ಇಡೀಮಾನವತೆಗಾಗಿ ಜೀವನ–ಸ್ವಾತಂತ್ರ್ಯವನ್ನು ಇಚ್ಛಿಸುತ್ತೇವೆ. ಮಾನವನು ಇಂದು ತೊಂದರೆಯಲ್ಲಿ ಸಿಲುಕಿದ್ದಾನೆ. ಚಿಂತಾಗ್ರಸ್ತನಾಗಿದ್ದಾನೆ. ಸಂಕಟದಲ್ಲಿ ಬಿದ್ದಿದ್ದಾನೆ. ನಾವು ಕೇವಲ ಸ್ವಂತ ಪ್ರಯತ್ನದಿಂದ ಏನನ್ನಾದರೂ ಮಾಡೋಣವೆಂದರೆ, ಅದು ಸಾಧ್ಯವಾಗದು. ಏಕೆಂದರೆ, ನಾವು ಅನೇಕ ವಸ್ತುಗಳನ್ನು ಸಂಘಟಿಸಿದ್ದೇವೆ. ನಾವು ಅನೇಕ ಮತ ಧರ್ಮಗಳನ್ನು ನಿರ್ಮಿಸಿದ್ದೇವೆ. ಆದರೂ ಈ ಕಾರ್ಯವನ್ನು ಸಾಧಿಸಲಾಗಿಲ್ಲ. ಅಂಶತಃ ಮಾಡಿದ್ದೇವೇನೋ ನಿಜ. ಆದರೆ ಪೂರ್ಣವಾಗಿ ಮಾಡಿಲ್ಲ. ಹೀಗೆ, ನಮ್ಮ ಜೀವನ ಮಾರ್ಗವು, ಒಂದೆಡೆಗೆ ಇಡೀ ಮಾನವತೆಯೊಂದಿಗೆ ಶ್ರುತಿಗೂಡಿಸುವುದು, ಮತ್ತು ಇನ್ನೊಂದೆಡೆಗೆ, ದಿವ್ಯ ಪ್ರಜ್ಞೆಯೊಂದಿಗೆ ಶ್ರುತಿಗೂಡಿಸುವುದು. ಇನ್ನು ನಾವು ಸಾಧನೆ ಮಾಡಲೇಬೇಕು. ಮತ್ತು ಈ ಸಾಧನೆಯೆಂದರೆ, ಕೂಡಲೇ ಚರಮ ತಥ್ಯದೊಂದಿಗೆ ಶ್ರುತಿಗೂಡುವುದಷ್ಟೇ ಅಲ್ಲ. ಚರಮ ತಥ್ಯದೊಂದಿಗೆ ಆಗಲೇ ಶ್ರುತಿಗೊಳಿಸಲಾಗಿದೆ. ಅಂದ ಮೇಲೆ, ಸಾಧನೆ ಮಾಡುವುದೇಕೆ? ಸಾಧನೆಯ ಹೇತುವೆಂದರೆ, ಕೇವಲ ಶಾರೀರಿಕ ಮತ್ತು ಮಾನಸಿಕ ಸೀಮಿತಗಳನ್ನು ಅತಿಕ್ರಮಿಸುವುದಷ್ಟೇ ಆಗಿದೆ. ನಾವು ಸಾಧನೆ ಮಾಡಿದಾಗ, ಇವುಗಳನ್ನೂ ಜಯಿಸುತ್ತೇವೆ. ಏಕೆಂದರೆ, ನಮ್ಮಲ್ಲಿ ಎರಡು ಶಕ್ತಿಗಳು ಕ್ರಿಯಾಶೀಲವಿರುತ್ತವೆ. ಒಂದು, ಆಧ್ಯಾತ್ಮಿಕ ಶಕ್ತಿ; ಮತ್ತೊಂದು ಜಡ ಶಕ್ತಿ. ಜಡ ಶಕ್ತಿಯು ನಮ್ಮ ಪ್ರಜ್ಞೆಯನ್ನು, ಮನವನ್ನು, ಇಂದ್ರಿಯಗಳನ್ನು, ನಿಮ್ನ ಸ್ತರಕ್ಕೆ, ವಿಷಯಗತ ಪ್ರಪಂಚಕ್ಕೆ ಒಯ್ಯಬಯಸುತ್ತದೆ. ಮತ್ತು ನಮ್ಮನ್ನು ಸೀಮಿತಗೊಳಿಸ

ಬಯಸುತ್ತದೆ. ಮತ್ತು ನಮ್ಮಲ್ಲಿ ನಾವು ದೀಕ್ಷೆಯ ಮೂಲಕ ಪಡೆದ ಮತ್ತೊಂದು ಪ್ರಜ್ಞೆಯು ಈಗಾಗಲೇ ಕಾರ್ಯಶೀಲವಾಗಿರುತ್ತದೆ. ಅದುವೇ ಆಧ್ಯಾತ್ಮಿಕ ಪ್ರಜ್ಞೆ. ಅದು ನಮ್ಮನ್ನು ಊರ್ಧ್ವಕ್ಕೆ ಒಯ್ಯಬಯಸುತ್ತದೆ. ಈಗ ಯಾವುದು ಎಷ್ಟು ಪ್ರಬಲ? ಎಂಬ ಪ್ರಶ್ನೆ. ಅವೆರಡೂ ಸಮಬಲದ ಶಕ್ತಿಗಳು. ಹೀಗೆ, ನಮ್ಮ ಜೀವನವು ಈ ರೀತಿ ಸಾಗಿದೆ. ಒಂದು ವೇಳೆ, ಎರಡು ಸಮಾನ ಶಕ್ತಿಗಳಿದ್ದರೆ,ಮಾನವನು ಉಭಯ ಶಕ್ತಿಗಳ ಮಧ್ಯೆ ಇದ್ದಾನೆ. ನಾವು ಆ ರೀತಿ ಇದ್ದೇವೆ. ಆದರೆ, ಅನೇಕ ಜನರು ಸಮಾನ ಶಕ್ತಿಗಳನ್ನು ಹೊಂದಿರುವುದಿಲ್ಲ. ಜಡ ಶಕ್ತಿಯು ಅಧಿಕ ಪ್ರಬಲವಿರುತ್ತದೆ. ಆದ್ದರಿಂದ, ಅವರು ಜಡಾಭಿಮುಖಿಗಳಾಗಿ ಸಾಗುತ್ತಾರೆ. ಮತ್ತೆ ಕೆಲವರು ಆತ್ಮಾಭಿಮುಖಿಗಳಾಗಿರುತ್ತಾರೆ. ಅವರು ಅಧ್ಯಾತ್ಮದಲ್ಲಿ ಪ್ರವೇಶಿಸುತ್ತಾರೆ. ಆದರೆ, ಅವರು ಕಾರ್ಯ ಮಾಡಲಾರರು. ನಮ್ಮ ಮಾರ್ಗದಲ್ಲಾದರೋ, ಸಮತೂಕ ಕಾಯ್ದುಕೊಳ್ಳಬೇಕಾಗಿದೆ. ಸಮ–ಸಮಾನ ಹಾದಿ ಹಿಡಿಯಬೇಕಾಗಿದೆ. ನಾವು ಪ್ರಾಪಂಚಿಕ ಜೀವನವನ್ನೂ ನಿರ್ಲಕ್ಷಿಸುವಂತಿಲ್ಲ; ಪಾರಮಾರ್ಥಿಕ ಜೀವನವನ್ನೂ ನಿರ್ಲಕ್ಷಿಸುವಂತಿಲ್ಲ. ನಾವು ಎರಡೂ ಸಮನಾದ ಹಾದಿಯನ್ನು ಹಿಡಿಯಬೇಕು. ಮತ್ತು ಅವುಗಳೆರಡೂ ಸಮಾನವಾಗಿ ನಡೆದಿವೆಯೆಂಬ ಬಗ್ಗೆ ಜಾಗರೂಕರಾಗಿರಬೇಕು. ನಾವು ಯಾವಾಗಲೂ ವಿಚಕ್ಷಣರಾಗಿರಬೇಕು. ಉಭಯ ಗತಿಗಳು ಸಮಾನವಾಗಿರಬೇಕು. ಆದರೆ, ಈ ಕುರಿತು ನಾವು ಜಾಗರೂಕರಾಗಿರಬೇಕು. ಇನ್ನು ಪ್ರಾಪಂಚಿಕ ಜೀವನವೂ ಸಹ, ನನ್ನ ಪ್ರಜ್ಞೆಯ ಆನಂದವೇ ಆಗಿರಬೇಕು.

ನಾವು ಇಂಥ ಗ್ರಹಿಕೆಗಳನ್ನು ಸ್ವೀಕರಿಸಬೇಕು. ಹೀಗೆ, ಇದು ನಮ್ಮ ದೀಕ್ಷೆ. ನಾವೆಂದೂ ಜಗತ್ತನ್ನು ನಿರಾಕರಿಸುವುದಿಲ್ಲ. ನಾವು ಮನೆ ಮಾರು ತೊರೆದು ವನವಾಸಕ್ಕೆ ಹೋಗಬೇಕಾಗಿಲ್ಲ. ನಮ್ಮ ಜೀವನವನ್ನು ಕುರಿತು "ಛೇ! ಇದು ತುಂಬಾ ಹೊಲಸು ಜೀವನ" ಎಂದು ಬೇಜಾರು ಪಡಬಾರದು. ಇಂಥ ಅನಿಸಿಕೆಗೆ ನಾವೆಂದೂ ಅನುವು ಕೊಡಬಾರದು. ಹೀಗೆ, ನಾವು ಜನರ ಮಧ್ಯೆ ಇದ್ದೇವೆ. ಜನರ ಮಧ್ಯೆ ಇರಲೇಬೇಕು. ಜನರನ್ನು ಪ್ರೀತಿಸಬೇಕು. ನಾವು ಅವರೊಂದಿಗೆ ಸಂಪರ್ಕ ಹೊಂದಬೇಕು. ಅವರು ಆಧ್ಯಾತ್ಮಿಕರಾಗಿಲ್ಲದಿರಬಹುದು. ಆದರೂ ನಾವು ಅವರೊಂದಿಗಿರಲು ಭಯ ಪಡಬಾರದು. ಅವರಲ್ಲಿ ಭೇದ ಬುದ್ಧಿಯನ್ನು ಹುಟ್ಟಿಸಿ, ಅವರ ವಿಚಾರ ಸರಣಿಯನ್ನು ಕದಡಬಾರದು. ಮತ್ತು ಅವರಿಂದ ನಾವು ಸಹ ಕದಡಕೂಡದು. ಅವರನ್ನು ಕ್ಷಮಿಸಲು ಪ್ರಯತ್ನಿಸಬೇಕು. "ಓಹೋ! ಅವರು ಅಂಥವರು. ಆಧ್ಯಾತ್ಮಿಕರಲ್ಲ; ಆದ್ದರಿಂದ,

ನಾನು ಅವರನ್ನು ಭೆಟ್ಟಿಯಾಗಲಾರೆ" ಎಂದು ಹೇಳಕೂಡದು. ನಾವು ಆ ರೀತಿ ವ್ಯವಹರಿಸಬಾರದು. ನಾವು ಸಮತೂಕ ಕಾಯ್ದುಕೊಳ್ಳಬೇಕು. ಏಕೆಂದರೆ, ಅವರು ಸಹ, ನಮ್ಮ ಆತ್ಮದ ಅಂಶಗಳೇ ಆಗಿದ್ದಾರೆ. ನೀವು ಅವರನ್ನು ನಿರ್ಲಕ್ಷಿಸಿದರೆ ಏನಾಗುತ್ತದೆ? ಈ ನನ್ನ ಕೈ ಇದೆ. ಅದು ಹಸನಾಗಿಲ್ಲ. ಆಗ ನಾನು ಅದನ್ನು ಕಡಿದು ಹಾಕಬೇಕೇನು? ನಾನೆಂದೂ ಕಡಿದು ಹಾಕಲಾರೆನು. ಅದನ್ನು ತೊಳೆಯಲು ಬಯಸುವೆ. ಒಂದು ವೇಳೆ, ನನ್ನ ಕಣ್ಣುಗಳು ಕೆಟ್ಟಿದ್ದರೆ, ನಾನೆಂದೂ ಅವುಗಳನ್ನು ಕಿತ್ತೆಸೆಯಲಾರೆ. ಹೀಗೆ ಮಾನವರು ಜಡವಾದಿಗಳಾಗಿದ್ದರೂ, ನಾವು ಇಡೀ ಮಾನವತೆಯನ್ನು ಪ್ರೀತಿಸಬೇಕು. ಅವರು ಜಡವಾದದ ಅತಿರೇಕದಲ್ಲಿರಲಿ. ಆದರೂ ಸಹ, ಅಲ್ಲಿ ಏನಿದೆಯೋ, ಅದರೊಂದಿಗೆ ಸಂಪರ್ಕಿಸುವ ಕೊಂಡಿಯಿದೆ.

ನಾನು ಸಾಧನೆಯನ್ನು ಮಾಡುತ್ತಿದ್ದೇನೆ. ಇದು ಒಬ್ಬರಿಗಾಗಿ ಅಲ್ಲ. ಇದು ಇಡೀ ಮಾನವತೆಗಾಗಿ ಇದೆ. ಹೀಗೆ, ನಮ್ಮ ಮಾರ್ಗವು ಅಖಂಡ ಮಹಾಯೋಗವಾಗಿದೆ. ಅಖಂಡ ಎಂದರೆ ಪೂರ್ಣ. ಮಹಾಯೋಗ ಎಂದರೆ ಪ್ರಜ್ಞೆಯ ನಿತ್ಯ ಏಕತೆ, ಮತ್ತು ಮಹಾಶಕ್ತಿ ಇಲ್ಲವೆ ದಿವ್ಯ ಶಕ್ತಿಯೊಂದಿಗೆ ಎಂದೆಂದಿಗೂ ಇರುವ ಐಕ್ಯ. ಆಗ ಅಲ್ಲಿ ಯಾವುದೇ ಅಗಲಿಕೆಯಿಲ್ಲ. ನಾವು ಸಾಧಿಸಬೇಕಾದ ನಮ್ಮ ಜೀವನದ ಚರಮ ಗುರಿಯಿದು. ಮತ್ತು ಇದು ನಮಗಾಗಿ ಉಂಟು. ಹೀಗೆ, ಈ ದೇಹದೊಂದಿಗೆ ಸಂಬಂಧಿಸಿದ ಆತ್ಮಗಳು ಆದೇ ಯಾತ್ರೆಯಲ್ಲಿ ಸಾಗಿವೆ. ಮೂಲವು ಶುರುವಾದಾಗ, ನಾವು ಜಗತ್ತಿನಲ್ಲಿ ಪ್ರಾರಂಭಿಸಿದ್ದೇವೆ. ಹೀಗಿದೆ ನಮ್ಮ ಪ್ರಾರಂಭ! ನಮ್ಮ ಸಂಸ್ಕಾರಗಳಿಂದಿಗೆ ನಾವು ಎಲ್ಲಿಯೋ ಜನ್ಮ ತಾಳುತ್ತೇವೆ. ನೀವು ಫ್ರಾನ್ಸಿನಲ್ಲಿ ಹುಟ್ಟಿದ್ದೀರಿ– ನಾನು ಭಾರತದಲ್ಲಿ ಹುಟ್ಟಿದ್ದೇನೆ. ಆದರೆ, ನಾವು ಪರಸ್ಪರರಿಗೆ ಪರಿಚಿತರಾಗಿದ್ದೇವೆ. ನಾವೆಲ್ಲರೂ ಒಂದೇ ಆಗಿದ್ದೇವೆ. ನಾವು ಒಂದೇ ನಾವಿನಲ್ಲಿ ಸಾಗಿದ ಸಹಪಯಣಿಗರಾಗಿದ್ದೇವೆ, ನೀವೀಗ ಭಾರತಕ್ಕೆ ಬಂದಿದ್ದೀರಿ ಮತ್ತು ನಾವೆಲ್ಲ ಸೇರಿ, ದಕ್ಷಿಣ ಭಾರತದಲ್ಲಿ ಎಲ್ಲಿಗೋ ಹೊರಟಿದ್ದೇವೆ. ನಾವು ನಮ್ಮ ಮೂಲ ಪ್ರಯಾಣವನ್ನು ಒಂದೇ ಸ್ಥಾನದಿಂದ ಪ್ರಾರಂಭಿಸಿದ್ದೇವೆ. ನಮ್ಮ ಆತ್ಮಗಳು ಪ್ರತ್ಯೇಕವಲ್ಲ. ಅವು ಆತ್ಮಗಳ ಐಕ್ಯವಾಗಿವೆ. ನಮ್ಮ ಆತ್ಮಗಳು ಪ್ರತ್ಯೇಕವಲ್ಲ. ನಾವು ಎಲ್ಲರೂ ಏಕೀಭವಿಸಿದ್ದೇವೆ. ಯಾವಾಗಲೂ ನಾವು ಒಂದೇ ಎಂದು ಭಾವಿಸುತ್ತೇವೆ. ಆದರೆ, ಅಜ್ಞಾನ ವಶರಾಗಿ ನಾವು ಬೇರೆ ಬೇರೆಯಾಗಿದ್ದೇವಷ್ಟೇ. ಹೀಗೆ, ನಮ್ಮ ಗುರುಗಳ ಸಂಪ್ರದಾಯದಲ್ಲಿ, ಕೇವಲ ಸಿದ್ಧಿಗಾಗಿ

ಹಂಬಲಿಸುವುದಾಗಲಿ, ಇಲ್ಲವೆ ವೈಯಕ್ತಿಕವಾಗಿ ಉನ್ನತ ಮಟ್ಟಕ್ಕೇರುವುದಾಗಲಿ ಮುಖ್ಯ ಗುರಿಯಲ್ಲ. ಆದರೆ, ಮಾನವತೆಯನ್ನು ಪ್ರೀತಿಸುವುದೇ ನಮ್ಮ ಗುರಿ. ಇದುವೇ ನಮ್ಮ ಜೀವನದ ಲಕ್ಷ್ಯ. ಮಾನವತೆಯನ್ನು ಪ್ರೀತಿಸುವುದೆಂದರೆ ಏನರ್ಥ? ನಾವು ಯಾರಿಗಾದರೂ ಏನಾದರೂ ಬರೆದು ತಿಳಿಸಬೇಕೇ? ಇಲ್ಲವೆ ಬೇರೆ ಏನಾದರೂ ಮಾಡಬೇಕೇ? ಇಲ್ಲ; ಅದೇನಿಲ್ಲ. ಮಾನವತೆಯನ್ನು ಪ್ರೀತಿಸಬೇಕಷ್ಟೇ ಯಾರಿಗೂ ಏನನ್ನೂ ಹೇಳಬೇಕಿಲ್ಲ. ಇದೊಂದು ಶಕ್ತಿ, ಈ ಶಕ್ತಿಯು ನಮ್ಮ ಗುರುಗಳಿಲ್ಲರಿಂದ ಸೇರಿ ಬರುತ್ತದೆ. "ನಾನು ಮಾನವತೆಯನ್ನು ಪ್ರೀತಿಸುತ್ತಿದ್ದೇನೆ;" ಎಂದು ನಾವು ಬಾಯಿಬಿಟ್ಟು ಹೇಳಬೇಕಾಗಿಲ್ಲ. ನಾವು ಯಾರಿಗೂ ಬರೆಯಲೂ ಬೇಕಿಲ್ಲ; ಯಾರಿಗೂ ಹೇಳಬೇಕಿಲ್ಲ. ಆದರೆ, ನಮ್ಮ ಸಾಧನೆಯೇ, ಮಾನವತೆಯನ್ನು ಪ್ರೀತಿಸುವುದಾಗಿದೆ. ಮತ್ತು ಈ ಪ್ರೇಮವನ್ನು ಜನರು ನಿರ್ಲಕ್ಷಿಸಬಹುದು. ಅ, ಬ, ಕ, ಡ-ರು ಅದನ್ನು ನಿರ್ಲಕ್ಷಿಸಬಹುದು. ಆದರೂ ನಾವು ಪ್ರೀತಿಸುತ್ತ ಹೋಗಬೇಕು. 'ನಾನು ನಿನ್ನನ್ನು ಪ್ರೀತಿಸುತ್ತೇನೆ;' ಎಂದೇನೂ ಹೇಳಬೇಕಾಗಿಲ್ಲ. ನಾವು ನಮ್ಮ ಗತಿಶೀಲ ಪ್ರೇಮ ಕುರಿತು ಏನನ್ನೂ ಹೇಳಬಯಸುವುದಿಲ್ಲ. ನಾವು ಮಾನವತೆಯನ್ನು ಪ್ರೀತಿಸುತ್ತಿರುವುದು, ರಹಸ್ಯ ಪ್ರೇಮ. ಈ ಪ್ರೇಮವು ಹೇತು ರಹಿತವಾಗಿದೆ. ನಾನು ನನ್ನನ್ನು ಹೇಗೆ ಪ್ರೀತಿಸುವೆನೋ, ಹಾಗೆಯೇ ಇದೂ ಸಹ. ನಾನು ಇಡಿಯಾಗಿ, ಗತಿಶೀಲವಾಗಿ ಸಮಷ್ಟಿ ಚೈತನ್ಯವನ್ನು ಪ್ರೀತಿಸುವೆ.

ಇದನ್ನಾರೂ ಅರಿತುಕೊಳ್ಳಲಾರರು. ಏಕೆಂದರೆ, ಇದೊಂದು ವಿಶಿಷ್ಟ ವಸ್ತುವಾಗಿದೆ. ಇದು ಏನೆಂಬುದನ್ನು ನಾವು ಗ್ರಂಥ ಬರೆದು ವಿವರಿಸಲಾರೆವು. ಆದರೆ, ನಾವು ಅರಿತುಕೊಳ್ಳಲು ಪ್ರಯತ್ನಿಸುತ್ತೇವೆ. ಹಾಗೇ ಕುಳಿತು, ಪ್ರತಿಯೊಬ್ಬರನ್ನೂ ಅರಿಯಲು ಯತ್ನಿಸುತ್ತೇವೆ. ಇನ್ನೊಬ್ಬನು ನಿನಗೆ ಹಿತ ಗೆಯ್ದಿರುವನೋ, ಕೇಡು ಬಗೆದಿರುವನೋ, ಎಂಬುದನ್ನು ನೋಡಬೇಡ. ಆದರೆ ಸುಮ್ಮನೇ ಕುಳಿತು ಅವನನ್ನು ಪ್ರೀತಿಸುತ್ತ ಹೋಗು. ಆಗ ನಿನ್ನಲ್ಲಿ ಅದ್ಭುತ ಆನಂದವಾಗುವುದನ್ನು ಕಂಡುಕೊಳ್ಳುವೆ. ಅದನ್ನು ಬಾಯಿಯಿಂದ ಹೇಳಬೇಡ. ಒಳಗೇ ಪ್ರೀತಿಸುತ್ತ ಹೋಗು. ಇಡೀ ಮಾನವತೆಯನ್ನು ಪ್ರೀತಿಸುವುದೆಂದರೆ, ನಿಮ್ಮನ್ನೇ ಪ್ರೀತಿಸಿಕೊಂಡಂತೆ. ನಿಮ್ಮನ್ನೇ ಪ್ರೀತಿಸುವುದೆಂದರೆ, ದೇವರನ್ನು ಪ್ರೀತಿಸಿದಂತೆ. ಈ ಮೂರು ಸಂಗತಿಗಳೂ ಪರಸ್ಪರ ಸಂಬಂಧಿಸಿವೆ.

ಇನ್ನು, ನಾನು ಶಾರೀರಿಕ ಸಾಧನೆ ವಿಷಯಕ್ಕೆ ಬರುವೆ. ಅದನ್ನು ಹೇಗೆ

ಮಾಡಬೇಕು? ಸಾಧನೆಗಳಾವವು? ನಾವು ಅವುಗಳನ್ನು ಹೇಗೆ ಪ್ರಾರಂಭಿಸಬೇಕು? ಈ ಕುರಿತು ಸಂಕ್ಷೇಪಿಸಿ ಹೇಳಬಯಸುವೆ.

ನಾನು ದೀಕ್ಷೆ ನೀಡಿದ್ದೇನೆ; ಎಂದು ತಿಳಿಯಿರಿ. ವಾಸ್ತವದಲ್ಲಿ 'ನಾನು' ದೀಕ್ಷೆ ನೀಡಿಲ್ಲ. ಇದರ ಅರ್ಥವೇನು? ನಾನು ದೀಕ್ಷೆ ನೀಡಿಲ್ಲವೆಂದಾಗ, "ಸ್ವಾಮೀಜಿ ಏನು ಹೇಳುತ್ತಿದ್ದಾರೆ?" ಎಂದು ನಿಮಗೆ ಆಶ್ಚರ್ಯವೆನಿಸಬಹುದು. 'ನಾನು' ಎಂಬ ಅಹಂ ಪ್ರಜ್ಞೆಯು ದೇಹದಲ್ಲಿರುವ ವರೆಗೆ, ನಾನು ದೀಕ್ಷೆ ನೀಡಲಾರೆನು. ದೀಕ್ಷೆಯೆಂದರೆ, ಕೊಡು–ಕೊಳ್ಳುವ ಕ್ರಮವಲ್ಲ. ಹಾಗಾದರೆ, ಅದು ಏನು? ಒಂದಾಗುವುದು; ಏಕೀಭವಿಸುವುದು. ಅರ್ಥಾತ್, ದೇಶ ಮತ್ತು ಕಾಲಗಳ ಪ್ರಜ್ಞೆ ಇಲ್ಲದಿರುವುದು. ಯಾವಾಗ ದೇಶ ಮತ್ತು ಕಾಲ ಪ್ರಜ್ಞೆಯು ಇರುವುದಿಲ್ಲವೋ, ಆಗ ಒಂದು ಆತ್ಮದ ಸ್ಪಂದನವು ಇನ್ನೊಂದು ಆತ್ಮದ ಸ್ಪಂದನದೊಂದಿಗೆ ಮೇಳವಿಸುತ್ತದೆ. ಆ ಕಾಲಕ್ಕೆ ನನಗೆ ನನ್ನ ಗುರುವಿನ ಅರಿವು ಇರುತ್ತದೆ. ಮತ್ತು ಆ ದೀಕ್ಷೆಯು ವಾಸ್ತವವಾಗಿ ನನ್ನ ಗುರುವಿನಿಂದ ಆದುದೇ ಹೊರತು ನನ್ನಿಂದ ಅಲ್ಲ. ಇನ್ನು, ನೀವು ನನ್ನ ಗುರುವನ್ನು ಕೇಳಿದರೆ, ಅವನು ಸಹ, ದೀಕ್ಷೆಯು ತನ್ನಿಂದ ಅಲ್ಲ; ಅದು ತನ್ನ ಗುರುವಿನಿಂದ ಆಗಿದೆ; ಎಂದೇ ಹೇಳುತ್ತಾರೆ. ಒಂದು ವೇಳೆ, ನಾನೇ ನನ್ನನ್ನು ಅದರೊಂದಿಗೆ ಗುರುತಿಸಿಕೊಂಡರೆ ಅರ್ಥಾತ್ ನಾನು 'ಅ'ನ ಪ್ರಜ್ಞೆಯನ್ನು ಇಟ್ಟುಕೊಂಡರೆ, ಕೂಡಲೇ ನಾನು ಬರುತ್ತಿರುವ ಆ ಪ್ರವಾಹವನ್ನು ಕಳೆದುಕೊಳ್ಳುತ್ತೇನೆ. ಅದು ಮಲೆಯುತ್ತದೆ. ಆಂತರಿಕ ಪ್ರವಾಹವನ್ನು ನಿಲ್ಲಿಸುತ್ತದೆ. "ಓಹೋ! ಅದು ನನ್ನದಲ್ಲ." ಎಂದು ತಿಳಿದರೆ, ಆ ಕೂಡಲೇ ಇನ್ನೊಂದು ಪ್ರವಾಹವು ಶುರುವಾಗುತ್ತದೆ. ಏಕೆಂದರೆ, ಯಾವನೊಬ್ಬ ಗುರುವು ತನ್ನ ವಿಶೇಷ ಶಕ್ತಿಯ ಸೀಮಿತವನ್ನು ನಿವಾರಿಸಿದರೆ, ಅದು ಇನ್ನೊರ್ವನಿಗೆ ತಲುಪುತ್ತದೆ. ಅವನೂ ಸಹ, ಆ ಸೀಮೆಯನ್ನು ತೆಗೆದರೆ, ಅದು ಮತ್ತೊರ್ವನಿಗೆ ವಿಸ್ತರಿಸುತ್ತದೆ.

ಹೀಗೆ, ನಿಮ್ಮಲ್ಲಿ ಪ್ರವಹಿಸುವ ಆಧ್ಯಾತ್ಮಿಕ ಶ್ರೇಣಿಯು ಅ, ಬ, ಕ ಡ–ರದಲ್ಲ. ಆದರೆ, ಅದು ಆಂತರ್ಯದಲ್ಲಿ ಪ್ರವಹಿಸುವ ಅತಿ ದೊಡ್ಡ ಪ್ರವಾಹವಾಗಿದೆ. ಮತ್ತು ಅದು ಯಾವಾಗಲೂ ನಿಮ್ಮೊಂದಿಗೇ ಇದೆ. ಮತ್ತೀಗ, ಯಾವ ಪ್ರವಾಹವಿದೆಯೆಂಬುದನ್ನು ಸೂಚಿಸಿದ್ದೇನೆ. ಅರ್ಥಾತ್ ಗುರುವು ಕೇವಲ ಅ, ಬ, ಕ, ಡ ಅಷ್ಟೇ ಅಲ್ಲ. ಆದರೆ, ಶುದ್ಧ–ಜ್ಞಾನದಿಂದ ಹೊರಪಂಟ ಮೂಲ ಸ್ಪಂದನಗಳ ಪ್ರವಾಹವಾಗಿದ್ದಾನೆ. ಮತ್ತು ಆ ಪ್ರಜ್ಞೆಯು ಯಾವಾಗಲೂ ನಿಮ್ಮಲ್ಲಿಯೂ ಪ್ರವಹಿಸುತ್ತಿರುತ್ತದೆ. ಹಾಗಾದರೆ, ನಾವೇನು ಮಾಡ

ಬೇಕು? ಆ ಕುರಿತು ಜಾಗರೂಕರಾಗಬೇಕಷ್ಟೇ. ಅದು ನಿಮ್ಮೊಂದಿಗೇ ಇದೆ. ನೀವು ಆ ಕುರಿತು ಜಾಗ್ರತರಾಗಬೇಕು. ಹಾಗೆಂದರೇನು? ನಾವು ಸಾಧನೆ ಮಾಡಬೇಕು. ಆ ಸಾಧನೆ ಎಂದರೆ, ಜಾಗ್ರತರಾಗುವುದು, ಮತ್ತು ನಿಮ್ಮಲ್ಲಿಯೇ ಪ್ರಜ್ಞೆ ಇದೆಯೆಂಬ ಬಗೆಗೆ ದೃಢಪಡಿಸಿಕೊಳ್ಳುವುದಾಗಿದೆ.

ಅದಕ್ಕಾಗಿ, ಮನುಸ್ಸು ಮತ್ತು ಬುದ್ಧಿಗಳ ವಿಷಯದಲ್ಲಿ ದೊಡ್ಡ ತೊಂದರೆ ಇದೆ. ಅವು ಮಹಾ ಸಮಸ್ಯೆಗಳಾಗಿವೆ. ಮನಸ್ಸು ಹಾಗೂ ಬುದ್ಧಿಗಳು ದೊಡ್ಡ ಅಡೆತಡೆಗಳಾಗಿವೆ. ಅಂದ ಮೇಲೆ, ನಾವೇನು ಮಾಡಬೇಕು? ಅದ ಕ್ಕೋಸುಗ ಗುರುವು ಸಾಧನೆ ಕ್ರಮವನ್ನು ಹೇಳಿ ಕೊಡುತ್ತಾನೆ. ಶಾರೀರಿಕ ಸಾಧನೆ ಮಾಡಲು ಹೇಳುತ್ತಾನೆ.

ಈಗ ನೀವು ಸಾಧನೆ ಮಾಡುತ್ತಿದ್ದೀರಿ. ಪ್ರಾರಂಭದಲ್ಲಿ, ನಿಮ್ಮ ಶಾರೀರಿಕ ಗುರು–ಪ್ರಜ್ಞೆಯೊಂದಿಗೆ ಸಾಧನೆಯು ಯಾವಾಗಲೂ ಹೊಂದಿಕೊಂಡಿತ್ತು. ಏಕೆಂದರೆ, ಆಗ ಅದು ಅನಿವಾರ್ಯವಿತ್ತು. ಉದಾಹರಣೆಗಾಗಿ ನೋಡಿರಿ: ಒಬ್ಬ ಚಿಕ್ಕ ಮಗುವಿರುತ್ತದೆ. ಒಂದು ವೇಳೆ, ಅದಕ್ಕೆ ನಡೆದಾಡಲು ಬಾರದಿದ್ದರೆ, ಅದರ ತಾಯಿಯು ಕೈ ಹಿಡಿದು ನಡೆಯಹಚ್ಚುತ್ತಾಳೆ. ಯಾವಾಗ ಆ ಮಗು ಬೆಳೆದು ಹುಡುಗನಾಗುವನೋ, ಆಗ ಅವನ ತಾಯಿಯು, "ನನ್ನ ಮಗನು ಈಗ ಸರಿಯಾಗಿದ್ದಾನೆ. ಶಾಲೆಗೆ ಹೋಗಬಲ್ಲನು. ಅವನು ತನ್ನನ್ನು ತಾನು ನೋಡಿಕೊಳ್ಳಬಲ್ಲನು. ನಾನೇಕೆ ಚಿಂತಿಸಲಿ? ಎನ್ನುತ್ತಾಳೆ. ಅದೇ ರೀತಿ, ದೇಹಧಾರಿ ಗುರುವು, ಪ್ರಾರಂಭದಲ್ಲಿ ತನ್ನ ಶಿಷ್ಯನನ್ನು ನಿರೀಕ್ಷಿಸಬೇಕಾಗುತ್ತದೆ. ಏನಾದರೂ ತಪ್ಪಾಗದಿರಲೆಂದು ಎಚ್ಚರ ವಹಿಸಬೇಕಾಗುತ್ತದೆ. ಆದ್ದರಿಂದ, ನಾನು ಯಾವಾಗಲೂ ಹೀಗೆ ನೋಡಿಕೊಳ್ಳಬೇಕಾಗುತ್ತದೆ. ನೀವು ಬಹು ದೂರದಲ್ಲಿದ್ದರೂ, ನಾನು ನೋಡಿಕೊಳ್ಳಬೇಕಾಗುತ್ತದೆ.

ನೀವೀಗ ಶಾರೀರಿಕ ಸಾಧನೆ ಮಾಡುತ್ತಿದ್ದೀರಿ. ಮತ್ತು ಅದರಿಂದ ನನಗೆ ಸಂತೋಷವಾಗಿದೆ. ನೀವು ಇದನ್ನು ಮುಂದುವರಿಸಿರಿ. ಮೇಲಾಗಿ, ನಿಮಗೆ ಒಂದು ದಿನ ವೇಳೆ ದೊರೆಯದಿದ್ದರೆ, ಪರವಾಯಿಲ್ಲ. ಐದು ನಿಮಿಷವಾದರೂ ಅವಕಾಶ ಸಿಗುತ್ತದಷ್ಟೇ? ಆ ಐದು ನಿಮಿಷಗಳಲ್ಲಿಯೇ ನಾಲ್ಕು ಘಂಟೆ ಮಾಡಿ ಪಡೆಯುವಷ್ಟು ಪಡೆಯಬಲ್ಲಿರಿ. ಸಾಧನೆಯಲ್ಲಿ ಕಾಲದ ಅವಧಿಗಿಂತ ಮನದ ಏಕಾಗ್ರತೆಯು ತುಂಬಾ ಮುಖ್ಯವಾಗಿದೆ. ಅದನ್ನು ನಾನು ವಿವರಿಸುವೆ.

ಈಗ ಓರ್ವ ಶಿಷ್ಯನಿರುವನೆಂದು ತಿಳಿಯಿರಿ. ಅವನು ಸಾಧನೆಗೆ ಒಂಬತ್ತು ಘಂಟೆ ಕುಳಿತುಕೊಳ್ಳುತ್ತಾನೆ. ಮತ್ತೊರ್ವ ಶಿಷ್ಯನು ಕೇವಲ ಎರಡೇ ಮಿನಿಟು

ಕುಳಿತುಕೊಳ್ಳುತ್ತಾನೆ. ಅಂದಮೇಲೆ ಯಾರು ಮೇಲೆಂದು ಹೇಗೆ ನಿರ್ಣಯಿಸುವುದು? ಬಾಹ್ಯಿಕವಾಗಿ, ಯಾವನು ಒಂಬತ್ತು ಘಂಟೆಗಳ ವರೆಗೆ ಕುಳಿತುಕೊಳ್ಳುವನೋ, ಅವನು ಮೇಲು ಎಂದು ತಿಳಿಯಬಹುದು. ಆದರೆ, ಆಂತರಿಕವಾಗಿ, ಯಾವನು ಕೇವಲ ಎರಡೇ ನಿಮಿಷಗಳ ವರೆಗೆ ಕುಳಿತುಕೊಳ್ಳುವನೋ, ಅವನು ಒಂಬತ್ತು ಘಂಟೆಗಳ ವರೆಗೆ ಕುಳಿತುಕೊಳ್ಳುವವನಿಗಿಂತ ಹೆಚ್ಚು ಏಕಾಗ್ರತೆ ಪಡೆಯುತ್ತಿರಬಹುದು. ಉದಾಹರಣಾರ್ಥ ನೋಡಿರಿ: ಒಬ್ಬ ಹುಡುಗನು ಸ್ಪರ್ಧಾತ್ಮಕ ಪರೀಕ್ಷೆಗೆ ಕಟ್ಟಿದ್ದಾನೆ. ಮತ್ತು ಅವನು ೧೦–೧೫ ಘಂಟೆಗಳ ವರೆಗೆ ಓದುತ್ತಾನೆ. ಆದರೆ, ಅವನಿಗೆ ನೆನಪೇ ಇರದು. ಇತ್ತ ಇನ್ನೊಬ್ಬನು ಕಡಿಮೆ ಓದುತ್ತಾನೆ. ಮತ್ತು ತಾನು ಏನು ಓದಿರುವನೋ, ಅದನ್ನು ತಿಳಿದುಕೊಂಡಿರುತ್ತಾನೆ. ಎರಡನೆಯವನು ಪ್ರಥಮ ವರ್ಗದಲ್ಲಿ ಉತ್ತೀರ್ಣನಾಗುತ್ತಾನೆ. ಹೀಗೆ ಆಗುತ್ತಿರುವುದಲ್ಲವೇ? ತಾತ್ಪರ್ಯವಿಷ್ಟೇ: ಬುದ್ಧಿಯ ಗ್ರಹಿಕೆಯು ಕಾಲದ ಅವಧಿಯನ್ನು ಅವಲಂಬಿಸಿರುವುದಿಲ್ಲ. ಆದರೆ, ಸ್ಮರಣ ಶಕ್ತಿಯು ಹೆಚ್ಚು ಪ್ರಬಲವಿದ್ದರೆ, ಕೂಡಲೇ ಅವನು ಈ ವಸ್ತು ಲಾಭ ಪಡೆಯುತ್ತಾನೆ ಮತ್ತು ಅವನ ಸ್ಮರಣ ಶಕ್ತಿಯೇ ಅವುಗಳನ್ನು ಪ್ರತಿನಿಧಿಸುತ್ತದೆ. ಅದೇ ರೀತಿ, ನೀವು ಈ ಆಂತರಿಕ ಸ್ಮರಣೆಯನ್ನು ಆಳವಾಗಿಸಬೇಕು; ಹೆಚ್ಚು ಹೆಚ್ಚು ಆಳವಾಗಿಸಬೇಕು. ಮೊದ ಮೊದಲು ನಿಮ್ಮ ಸಾಧನೆಗೆ ಹೆಚ್ಚು ಕಾಲ ಬೇಕಾಗಬಹುದು. ಆದರೆ, ಕ್ರಮೇಣ ವಸ್ತು ಲಾಭವಾಗುತ್ತದೆ. ಆಗ ಹೆಚ್ಚು ಕಾಲಾವಧಿ ಬೇಕಾಗುವುದಿಲ್ಲ. ಮೊದಲು, ಯಾವುದಕ್ಕೆ ನಿಮಗೆ ನಾಲ್ಕು ಘಂಟೆಗಳ ಅವಧಿ ಬೇಕಾಗುತ್ತಿತ್ತೋ, ಅದಕ್ಕಾಗಿ ಈಗ ಕೇವಲ ಹತ್ತು ಮಿನಿಟುಗಳೇ ಸಾಕು. ಅಷ್ಟೇ ಶಕ್ತಿಯ ಮೊತ್ತವನ್ನು ನೀವು ಹತ್ತು ಮಿನಿಟುಗಳಲ್ಲಿ ಹೊಂದುತ್ತೀರಿ. ಇನ್ನು ನೀವು ಒಂದು ಘಂಟೆ ಮಾಡಿದಾಗ, ಅದಕ್ಕಿಂತ ಹೆಚ್ಚಾಗಿ ಭೋಗಿಸುತ್ತೀರಿ. ಅಂದ ಮೇಲೆ, ಎರಡು ಸಂಗತಿಗಳಿದ್ದಂತಾಯಿತು. ಒಂದು; ಪ್ರಾರಂಭದಲ್ಲಿ, ಈ ದಿನಮಾನದ ಕಾಲವು ಅರ್ಥಾತ್ ಗಡಿಯಾಳದ ಕಾಲವು, ಮಾನಸಿಕ ಶಾಂತಿ ಇಲ್ಲವೆ ಜ್ಞಾನವನ್ನು ಪಡೆಯಲು ಹೆಚ್ಚು ಬೇಕಾಗುತ್ತದೆ. ಅಂದರೆ, ದಿನಮಾನದ ಕಾಲವನ್ನು ಮರೆಯಲು ಹೆಚ್ಚು ವೇಳೆ ಬೇಕಾಗುತ್ತದೆ. ಕ್ರಮೇಣ, ಏನಾಗುತ್ತದೆ? ಯಾವಾಗ ನಿಮ್ಮ ಸಾಧನೆಯು ಆಳಕ್ಕಿಳಿಯುವುದೋ, ಆಗ ಈ ಗಡಿಯಾಳದ ಕಾಲವು ಕಡಿಮೆಯಾಗುತ್ತ ಹೋಗುತ್ತದೆ. ಆದರೆ, ಆಂತರಿಕ ತೀವ್ರತೆಯು ಹೆಚ್ಚು ಹೆಚ್ಚಾಗುತ್ತದೆ.

ಉದಾಹರಣೆಗೆ ಅ, ಬ, ಕ – ಈ ಮೂವರೂ ಸಾಧನೆ ಮಾಡುತ್ತಿರುವರೆಂದು ತಿಳಿಯಿರಿ. ಅ-ನು ಮೂರು ಘಂಟೆ ಸಾಧನೆ ಮಾಡುತ್ತಾನೆ. ಬ–ನಿಗೂ ಮೂರು ಘಂಟೆ ಬೇಕು. ಕ–ನಿಗೂ ಮೂರು ಘಂಟೆ ಬೇಕು. ಗುರುವು ಅ, ಬ, ಕ–ಮೂವರಿಗೂ ಅದೇ ಸಾಧನ ಕ್ರಮಗಳನ್ನು ಬೋಧಿಸಿದ್ದಾನೆ. ಈಗ ಪ್ರಗತಿಯ ಪ್ರಶ್ನೆ ಏಳುತ್ತದೆ. ನಾವು ಪ್ರಗತಿಯನ್ನು ನಿರ್ಣಯಿಸುವುದೆಂತು? ಏಕೆಂದರೆ, ಮೂವರಿಗೂ ನೀಡಿದ ಗಡಿಯಾಳ-ಕಾಲವು ಒಂದೇ ಇದೆ. ಮಂತ್ರದ ವಿಚಾರವನ್ನೇ ತೆಗೆದುಕೊಳ್ಳಿರಿ. ಎಲ್ಲರೂ ಮಂತ್ರ ಜಪ ಮಾಡುತ್ತಿದ್ದಾರೆ. ನೀವೆಲ್ಲರೂ ಚೆನ್ನಾಗಿ ಮಾಡುತ್ತಿದ್ದೀರಿ. ಅದನ್ನು ನಾನ್ನು ಒಪ್ಪುತ್ತೇನೆ. ಆದರೆ, ಇರುವ ಪ್ರಶ್ನೆ ಎಂದರೆ, ಯಾರು ಪ್ರಗತಿ ಹೊಂದುತ್ತಿದ್ದಾರೆ ಮತ್ತು ಎಷ್ಟು? ತಾನು ಪ್ರಗತಿ ಹೊಂದುತ್ತಿರುವನೋ ಇಲ್ಲವೋ? ಎಂಬುದನ್ನು ಹೇಗೆ ಅರಿಯಬೇಕೆಂಬುದನ್ನು ನಾನು ವಿವರಿಸುವೆ. ಅದನ್ನು ಕಾಲದ ದೀರ್ಘ್ಯದಿಂದ ಮಾಡದೆ, ಪ್ರಜ್ಞೆಯ ತೀವ್ರತೆಯ ಮೇಲಿಂದ ಮಾಡಬೇಕು.

ಉದಾಹರಣೆಗೆ, ಅ–ನ ಪ್ರಗತಿಯನ್ನೇ ತೆಗೆದುಕೊಳ್ಳಿರಿ. ಅ–ನು ಸಾಧನೆ ಮಾಡುತ್ತಾನೆ. ಮತ್ತು ಅವನು ಶಾಂತಿಯ ಒಂದು ಘಟಕವನ್ನು ಪಡೆಯಬೇಕಾದರೆ, ಮೊದ-ಮೊದಲು ಮೂರು ಘಂಟೆಗಳಷ್ಟು ವೇಳೆ ತೆಗೆದುಕೊಳ್ಳುತ್ತಾನೆ. ಸ್ವಲ್ಪ ಪ್ರಗತಿ ಸಾಧಿಸಿದ್ದಾನೆ; ಬಹಳವೇನಿಲ್ಲ. ಅವನು ದಿನಾಲು ಅಭ್ಯಾಸ ಮಾಡುತ್ತ ಹೋದಂತೆ. ಅವನು ಹೆಚ್ಚು ಪಡೆಯುತ್ತಾನೆ. ಆ ಬಳಿಕ, ಅವನು ಮೂರು ಘಂಟೆಗಳ ವರೆಗೆ ಕುಳಿತುಕೊಳ್ಳುವುದು ತನಗೆ ಅವಶ್ಯವಿಲ್ಲವೆಂಬುದನ್ನು ಕಂಡುಕೊಳ್ಳುತ್ತಾನೆ. ಏಕೆಂದರೆ. ಅವನಿಗೆ ಶಾಂತಿ ಲಾಭವು ಅಲ್ಪಾವಧಿಯಲ್ಲಿಯೇ ಆಗಿ ಬಿಡುತ್ತದೆ. ಆದರೆ, ಇಷ್ಟನ್ನೂ ಸಹ, ಅವನು ಮೊದಲು ಅರ್ಜಿಸದಾಗಿದ್ದನು. ಅದಾದ ನಂತರ, ಅವನು, "ಓಹೋ! ನಾನೇಕೆ ಮೂರು ಘಂಟೆ ಕಾಲ ಕುಳಿತುಕೊಳ್ಳಬೇಕು? ನಾನು ಸ್ವಲ್ಪ ಕಾಲದಲ್ಲಿಯೇ ಸಾಧ್ಯವನ್ನು ಪಡೆಯಬಲ್ಲೆನಲ್ಲ?" ಎಂದು ಹೇಳತೊಡಗುತ್ತಾನೆ. ಹೀಗಾಗಿ, ಅವನ ಮನವು ಹೆಚ್ಚು ವೇಳೆ ಸಾಧನ–ಕರ್ಮ ಮಾಡಲು ಬಯಸದು. ಕೆಲವೊಮ್ಮೆ, ಸಾಧನೆಗೆ ಕುಳಿತಾಗ, ನಿಮಗೆ ಹೀಗೆ ಆಗುತ್ತಿರಬಹುದು. ಹೀಗೆ,ಇದು ವಸ್ತು ಲಾಭದ ವಿಷಯವಾಗಿದೆ. ಅವನು ಬಯಸಿದ ತೀವ್ರತೆಯನ್ನು ಸಂಪಾದಿಸಿದ್ದಾನೆ. ಆದ್ದರಿಂದ, ಈಗ ಅವನು ಮೂರು ಘಂಟೆಗಳ ವರೆಗೆ ಕುಳಿತುಕೊಳ್ಳಲು ಬಯಸನು. ಏಕೆಂದರೆ ಮೂರು ಘಂಟೆಯಲ್ಲಿ ಅರ್ಜಿಸಬಹುದಾದ ಶಕ್ತಿ–ಘಟಕವನ್ನು ಅವನು ಅಲ್ಪ ಕಾಲದಲ್ಲಿಯೇ ಈಗ ಪಡೆಯುತ್ತಿದ್ದಾನೆ. ಆದ್ದರಿಂದ, ಅವನು ಮೂರು ಘಂಟೆಗಳ ವರೆಗೆ ಕುಳಿತುಕೊಳ್ಳಲು ಇಚ್ಛಿಸುತ್ತಿಲ್ಲ. ಮತ್ತು ಅವನಿಗದು ಈಗ ಅವಶ್ಯವೂ

ಇಲ್ಲ. ಅವನು ಅಷ್ಟನ್ನು ಸಂಪಾದಿಸಿದ್ದಾನೆ. ಅರ್ಥಾತ್ ಮಾನಸಿಕ ವೇಳೆಯು ಹೆಚ್ಚು ವೇಗವನ್ನು ಅರ್ಜಿಸಿದೆ. ಹೀಗಾಗಿ, ಅದೇ ಪ್ರಜ್ಞೆಯನ್ನು ಹೊಂದಲು ಹೆಚ್ಚು ದಿನಮಾನದ ಕಾಲವು ಬೇಕಿಲ್ಲ. ಏಕೆಂದರೆ, ಮಾನಸಿಕ ಕಾಲವು ಗಡಿಯಾಳದ ಕಾಲಕ್ಕಿಂತ ಶ್ರೇಷ್ಠವಾದುದಾಗಿದೆ. ಎರಡೂ ಪರಸ್ಪರ ಹೊಂದಿಕೊಂಡಿವೆ.

ಈಗ, ಅವನು ದಿನಮಾನದ ಕಾಲದೆಣಿಕೆಗೆ ತೊಡಗಬಾರದು. ಎಷ್ಟು ಕಾಲ ತಾನು ಕುಳಿತುಕೊಳ್ಳಬೇಕು? ಇತ್ಯಾದಿ ವಿವರಿಸದೆ, ಅವನು ಮಾನಸಿಕ ಕಾಲ–ಪ್ರಜ್ಞೆಯ ತೀವ್ರತೆಯತ್ತ ಗಮನಿಸಬೇಕು. ಅವನು ಸಾಧನೆಯ ತೀವ್ರತೆ ಇಲ್ಲವೆ ಆಳದತ್ತ ಗಮನಿಸಬೇಕಲ್ಲದೆ, ಈ ಗಡಿಯಾಳದ ವೇಳೆಯನ್ನಲ್ಲ. ಅದು ಎರಡೇ ಮಿನಿಟುಗಳಲ್ಲಿ ಸಾಧ್ಯವಾಗಬಹುದು; ಇಲ್ಲವೆ ಅದಕ್ಕಾಗಿ ನಾಲ್ಕು ಮಿನಿಟು ಹಿಡಿಯಬಹುದು. ಅದೇಕೆ? ಅದಕ್ಕಾಗಿ ಮೂರು ಘಂಟೆ ಸಹ ಹಿಡಿಯಬಹುದು. ಆರು ಘಂಟೆಯಾದರೂ ಹಿಡಿಯಬಹುದು. ಅದೇನೂ ಮಹತ್ವದ್ದಲ್ಲ. ಆದರೆ; ನಾವು ಪ್ರಜ್ಞೆಯ ಮಾನಸಿಕ ತೀವ್ರತೆಯನ್ನು ಗಮನಿಸತಕ್ಕದ್ದು. ನಾನು ಆ ಪ್ರಜ್ಞೆಯನ್ನು–ನಿನ್ನೆ ಪಡೆದ ಶಾಂತಿಯನ್ನು–ಕೂಡಲೇ ಪಡೆಯುವೆನೋ, ಇಲ್ಲವೋ? ಎಂಬುದನ್ನು ಗಮನಿಸಬೇಕು. ಈ ಮಾನಸಿಕ ಕಾಲವನ್ನು ಹೆಚ್ಚು ಬೇಗ, ಹೆಚ್ಚು ಕೂಡಲೇ ಪಡೆಯಲು ಪ್ರಯತ್ನಿಸಬೇಕು.

ಏಕೆಂದರೆ, ನಾನು ಇಂದು ಸಾಧನೆ ಮಾಡಿದರೆ, ನಿನ್ನೆ ಇದ್ದಂತೆಯೇ ಇರಲಾರೆನು. ಅರ್ಥಾತ್ ಅಲ್ಲಿ ಪ್ರಗತಿಯಾಗಿರುತ್ತದೆ. ಅಲ್ಲವೇ ಮತ್ತೆ?

ಇದರ ತಾತ್ಪರ್ಯವೆಂದರೆ, ನಾವು ಸಂವೇದಿಸಬಹುದಾದ ಶಕ್ತಿಯ ಮಟ್ಟವನ್ನು ನಾವು ಮುಂಜಾನೆಯಿಂದ, ಮುಂದಿನ ಮುಂಜಾನೆಯ ವರೆಗೆ, ಯಾವಾಗಲೂ ಇರಿಸಿಕೊಳ್ಳಬೇಕು. ನೀವು ಕಾರ್ಯ ಮಾಡುತ್ತಿರಬಹುದು. ಪರವಾಯಿಲ್ಲ. ಮರುದಿನ ನೀವು ಅದೇ ತೀವ್ರತೆಯನ್ನು ಪಡೆದರೆ, ತೀರಿತು. ನೀವು ಕಡಿಮೆ ಅವಧಿಯ ವರೆಗೆ ಕುಳಿತುಕೊಂಡರೂ ಅದರಿಂದ ನಿಮಗಾವ ಬಾಧೆಯಿಲ್ಲ. ನಾವು ಗಡಿಯಾಳದ ಕಾಲದ ಬಗೆಗೆ ಚಿಂತಿಸಬೇಕಾಗಿಲ್ಲ. ಆದರೆ, ಕಾಲದ ಮಾನಸಿಕ ತೀವ್ರತೆಗೆ ನಾವು ಮಹತ್ವ ನೀಡಬೇಕು. ಮತ್ತು ಇದರ ಪರಿಣಾಮವೇನು? ನಿಮ್ಮ ನಿತ್ಯ ಜೀವನದಲ್ಲಿಯ ಪ್ರತಿಕ್ರಿಯೆಗಳೇ ಆ ಪರಿಣಾಮವಾಗಿವೆ. ಒಂದು ವೇಳೆ, ಸಾಧನೆಯು ಹೆಚ್ಚು ತೀವ್ರಗೊಂಡರೆ, ನೀವು ಒಂದು ಘಂಟೆಯ ಸಾನ್ನಿಧ್ಯಲಾಭ ಹೊಂದಬಹುದು. ಒಂದು ವೇಳೆ, ತೀವ್ರತೆಯು ಇನ್ನಷ್ಟು ಹೆಚ್ಚಾದರೆ, ನೀವು ಎರಡು ಘಂಟೆಗಳಿಗೆ ಸಮನಾದ ಸಾನ್ನಿಧ್ಯ ಲಾಭ ಪಡೆಯಬಹುದು. ಆ ಸ್ಪಂದನವು ನಾಲ್ಕು ಘಂಟೆಗಳ ವರೆಗೂ ಇರಬಹುದು. ಹೀಗೆ,

ಅದು ಹೆಚ್ಚು ಹೆಚ್ಚು ಕಾಲದವರೆಗೆ ಉಳಿಯಬಹುದು. ಇನ್ನು, ನೀವು ಮೂರು ಘಂಟೆಗಳ ಕಾಲ ಸಾಧನೆ ಮಾಡಿದರೂ ಸಹ, ಆ ಸ್ಪಂದನವು ಕೇವಲ ಎರಡೇ ಮಿನಿಟುಗಳ ವರೆಗೆ ಉಳಿಯಬಹುದು. ಅದೂ ಸಹ ಅಸಂಭವವೇನಲ್ಲ. ನಿಮ್ಮ ದಿನಮಾನ ಕಾಲಾನುಸಾರ ನಡೆದ ಸಾಧನೆಯು ಮಾನಸಿಕ ಪ್ರಜ್ಞೆಯ ಮೇಲೆ ಕಡಿಮೆ ಪ್ರಭಾವ ಬೀರಬಹುದು. ಪ್ರತಿಯಾಗಿ, ನೀವು ಕಡಿಮೆ ಕಾಲ ಮಾಡಿದಾಗ, ಅದರ ಪರಿಣಾಮವು ಹೆಚ್ಚಾಗಿರಬಹುದು. ಇಲ್ಲಿ ಮಹತ್ವದ ಸಂಗತಿಯೆಂದರೆ, ಈ ವಸ್ತುಗಳನ್ನು ಕುರಿತು ನಿಮ್ಮ ಪ್ರಜ್ಞೆ ಮತ್ತು ಭಾವಗಳು, ಮಾನಸಿಕ ಆಧಾರವನ್ನು ಅವಲಂಬಿಸಿವೆಯಲ್ಲದೆ, ದಿನಮಾನದ ಆಧಾರವನ್ನಲ್ಲ. ಈ ಚರ್ಚೆಯು ದೀದಿ[1] ಯವರೊಡನೆ ಮೊದಲು ಶುರುವಾಯಿತು. ಏಕೆಂದರೆ ದೀದಿಯವರೂ ಜಪ ಮಾಡುತ್ತಿದ್ದರು. ನಾನೂ ಜಪ ಮಾಡುತ್ತಿದ್ದೆ. ಅವರು ಹೆಚ್ಚು ಕಾಲ ತೆಗೆದುಕೊಳ್ಳುತ್ತಿದ್ದರು. ನಾನು ಕಡಿಮೆ ಕಾಲದಲ್ಲಿ ಮುಗಿಸುತ್ತಿದ್ದೆ. "ನೀವು ಸ್ವಲ್ಪ ಆಲಸಿಯಾಗಿದ್ದೀರಿ. ಆದ್ದರಿಂದ. ಹೆಚ್ಚು ಕಾಲ ಕುಳಿತುಕೊಳ್ಳಲು ಬಯಸುವುದಿಲ್ಲ" ಎಂದು ಅವರು ಹೇಳುತ್ತಿದ್ದರು.

ಹೀಗೆ, ನಾವು ಗಡಿಯಾಳದ ವೇಳೆಗೆ ಹೆಚ್ಚು ಅಂಟಿಕೊಳ್ಳಬೇಕಾಗಿಲ್ಲ. ಮೊದ-ಮೊದಲು ಅದು ಅವಶ್ಯವೆನಿಸುತ್ತದೆ. ಆದರೆ ಅನಂತರ, ಪ್ರಗತಿಯನ್ನು ಕುರಿತು ನಿಮ್ಮಲ್ಲಿ ಉಪರ್ಯುಕ್ತ ಭಾವನೆಯು ಉದಿಸಬೇಕು. ನಿಮ್ಮ ಪ್ರಗತಿಯು ಹೇಗೆ ನಡೆದಿದೆ? ಎಂಬುದನ್ನು ಗಮನಿಸಬೇಕು. ಪ್ರಾರಂಭದಲ್ಲಿ ಸ್ವಲ್ಪ ದೀರ್ಘಕಾಲ ಹತ್ತುತ್ತದೆ. ಮುಂದೆ ಕ್ರಮೇಣ, ಕಾಲಾವಧಿಯು ಹ್ರಸ್ವವಾಗುತ್ತ ಹೋಗುತ್ತದೆ.

ಕಾಲಾವಧಿ ಕಡಿಮೆಯಾದರೇನಂತೆ? ಅಷ್ಟರಲ್ಲಿಯೇ ನಾವು ಹೆಚ್ಚು ಪುಳಕಿತರಾಗಬಹುದು. ನಮಗೆ ದಿನಮಾನದ ಕಾಲವು ಅಷ್ಟೊಂದು ಮಹತ್ವದ್ದಲ್ಲ.


ಅರ್ಥಾತ್, ನೀವು ಸಾಧನೆಗೆ ಕುಳಿತುಕೊಳ್ಳುವಾಗ, ನಿಮ್ಮ ಪ್ರಜ್ಞೆಯ ತೀವ್ರತೆಯನ್ನು ಅರಿಯಬೇಕು. ಅದನ್ನು ನಾವು ಮಾತ್ರಾ ಎನ್ನುತ್ತೇವೆ. (ಅಂದರೆ, ನಿಜವಾಗಿಯೂ ಜಪ ಇಲ್ಲವೆ ಪೂಜೆಗಾಗಿ ಬೇಕಾಗುವ ಕಾಲದ ಘಟಕ). ಆದ್ದರಿಂದ, ಜಪ ಮಾಡುವಾಗ, ನೀವು ವೀಕ್ಷಿಸಬೇಕೆಂದು ನಾನು ಯಾವಾಗಲೂ ಹೇಳುತ್ತಿರುವೆ. ಮತ್ತು ಈ ವೀಕ್ಷಣೆಯು ತುಂಬಾ ಮಹತ್ವದ್ದಾಗಿದೆ. ನೀವು

---

1 ಇಂದು ಬನಾರಸ ಸಂಸ್ಕೃತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಸೌ. ಶಕುಂತಲಾ ಅವರು.

ಎರಡೇ ಕ್ಷಣಗಳ ವರೆಗೆ ಜಪ ಮಾಡಬಹುದು. ಆದರೆ, ಅದು ಆಳವಾಗಿ ಸಾಗಬೇಕು.

ಪ್ರಶ್ನೆ : ನಾವು ಮಣಿ ಎಣಿಸುವುದೇಕೆ?



ಉತ್ತರ : ಪ್ರಾರಂಭದಲ್ಲಿ ನಾವು ಮಣಿ ಎಣಿಸಬೇಕು. ಏಕೆಂದರೆ, ನಮ್ಮಲ್ಲಿ ಆಗ ದಿನಮಾನ ಕಾಲದ ಗ್ರಹಿಕೆ ಇರುತ್ತದೆ. ಆ ಮೇಲೆ, ಅದು ಅಷ್ಟೊಂದು ಮಹತ್ವ ದ್ದಾಗುವುದಿಲ್ಲ. ಮುಂದೆ, ನಿಮ್ಮ ಎಣಿಕೆಯ ಅಭ್ಯಾಸವನ್ನು ಕಡಿಮೆ ಮಾಡಬಹುದು. ಅದರಿಂದಾವ ಬಾಧೆಯಿಲ್ಲ. ಅದು ನಿಂತೇ ಹೋಗಬಹುದು. ಆದರೂ ಚಿಂತೆಯಿಲ್ಲ. ನೀವು ಎಣಿಸುವುದನ್ನು ಮರೆತರೂ ಪರವಾಯಿಲ್ಲ.

ಪ್ರಶ್ನೆ : ನಾವು ಮಾಲೆಯನ್ನೇಕೆ ಉಪಯೋಗಿಸಬೇಕು?

ಉತ್ತರ : ಕೇವರ ಗತಿಗೋಸ್ಕರ ಮಾಲೆಯಲ್ಲಿ ಮೇರು ಇರುತ್ತದೆ. ನೀವು ಮೇರುವಿನ ವರೆಗೆ ಜಪ ಮಾಡುತ್ತೀರಿ. ಅನಂತರ ಮಾಲೆಯನ್ನು ತಿರುಗಿಸಬೇಕು. ನೀವು ಮೇರುವಿನ ವರೆಗೆ ಹೋಗಿ, ತಿರುಗಿಸಿದ ಬಳಿಕ, ನೀವು ದಿನಮಾನದ ಕಾಲವನ್ನು ಹ್ರಸ್ವಗೊಳಿಸುತ್ತೀರಿ. ಮತ್ತು ನೀವು ಮಾನಸಿಕ ತೀವ್ರತೆಯತ್ತ ಗಮನ ಹರಿಸುತ್ತೀರಿ. ಮತ್ತು ಬಿಂದುವನ್ನು ತಲುಪುತ್ತೀರಿ.

ನಾವು ಕುಳಿತುಕೊಳ್ಳುವುದಕ್ಕೆ ಆಸನ ಎನ್ನುತ್ತಾರೆ. ಆದರೆ, ಶಾರೀರಿಕ ಆಸನವು ಕೇವಲ ಕುಳಿತುಕೊಳ್ಳುವುದಕ್ಕಾಗಿ ಮಾತ್ರ. ಆದರೆ, ನಾವು ಯಾವಾಗ ದಿನ-ಮಾನ ಕಾಲವನ್ನು ಮರೆಯುತ್ತೇವೆಯೋ, ಅದು ಮಾನಸಿಕ ಆಸನವಾಗಿದೆ. ಆಗ ನೀವು ನಿಶ್ಚಲವಾಗುತ್ತೀರಿ. ಅದನ್ನು ಮಾನಸಿಕ ಆಸನವೆನ್ನುತ್ತಾರೆ. ಈಗ ನಿಮ್ಮ ಮನವು ಜಾಗರೂಕವಾಗಿರುತ್ತದೆ. ಅದೇ ಆಸನ. ಅರ್ಥಾತ್ ಅದನ್ನೊಂದು ಛಂದದಲ್ಲಿ ಹಿಡಿದಿಡಲಾಗುತ್ತದೆ. ಅದುವೇ ಆಂತರಿಕ ಆಸನವಾಗಿದೆ. ನೀವು ಶಾರೀರಿಕವಾಗಿ ಕುಳಿತುಕೊಂಡ ಕೂಡಲೇ, ನಿಮ್ಮ ಮನದಲ್ಲಿ ಬಹಳಷ್ಟು ವಿಚಾರಗಳೇಳುತ್ತವೆ. ಆದರೆ, ನೀವು ಕೇವಲ ಮಂತ್ರದ ಪ್ರವಾಹವನ್ನಷ್ಟೇ ಹರಿಯಲು ಬಿಡಬೇಕು. ಅಲ್ಲಿ ಕೇವಲ ಮಂತ್ರ ವಿಚಾರವೊಂದೇ ಇರಬೇಕು. ಇದನ್ನು ಮಾನಸಿಕ ಆಸನವೆನ್ನುತ್ತಾರೆ. ಆ ಕಾಲಕ್ಕೆ ದಿನಮಾನದ ಕಾಲಕ್ಕಾವ

ಮಹತ್ತ್ವವಿಲ್ಲ, ಆದರೆ, ಮಾನಸಿಕ ಕಾಲದ ತೀವ್ರತೆಯು ಅಧಿಕಾಧಿಕವಾಗಬೇಕು.

ಮನಸ್ಸು ವಿಚಾರಗಳತ್ತ ಧಾವಿಸುವುದೋ ಇಲ್ಲವೋ? ಎಂಬುದನ್ನು ಕುರಿತು ನಾವು ಚಿಂತಿಸಬೇಕಾಗಿಲ್ಲ. ಅದು ಮನದ ಸ್ವಭಾವ. ಅದು ಹಾಗೆ ಧಾವಿಸುತ್ತದೆ. ಆದ್ದರಿಂದ, ನಾವು ಚಿಂತಿಸಕೂಡದು. ಸಾಮಾನ್ಯವಾಗಿ ಸಾಧಕರು ಏನು ಮಾಡುತ್ತಾರೆ? ಅವರ ಮನವು ಅತ್ತ ಧಾವಿಸಿದಾಗ, "ಅಯ್ಯೋ! ಇದು ಅತಿ ಕೇಡಿ" ಎನ್ನುತ್ತಾರೆ. ನಿಜವಾಗಿ ಯಾವುದೂ ಕೆಟ್ಟದ್ದಲ್ಲ. ಅದು ಅತ್ತು ಹೋದರೆ ಹೋಗಲಿ. ಏಕೆಂದರೆ, ನಿಮ್ಮ ಮನವು ಹಾಗೆ ಹೋಗದಿದ್ದರೂ, ನಿಮ್ಮ ಪ್ರಾಣದ ಗತಿಯೇ ಅದನ್ನು ಹೋಗುವಂತೆ ಮಾಡುತ್ತದೆ. ಹೀಗಾಗಿ, ನೀವು ಅದನ್ನು ತಪ್ಪಿಸಲಾರಿರಿ. ಯಾರೂ ತಪ್ಪಿಸಲಾರರು. ಅದು ಸ್ವಾಭಾವಿಕವಾಗಿ ಅತ್ತ ಧಾವಿಸುತ್ತದೆ. ಆದರೆ, ಇರುವ ಪ್ರಶ್ನೆ ಇದು. ಅದು ತನ್ನ ಪ್ರಕಾರ ತಾನು ಅತ್ತ ಓಡುತ್ತದೆ. ಆದರೆ, ನೀವು ನಿಮ್ಮ ಹಾದಿಗುಂಟ ನಡೆಸಬೇಕಾಗಿದೆ. ನಿಮ್ಮ ಚಿಂತೆ, ನಿಮ್ಮ ಮಾನಸಿಕ ತೊಂದರೆಗಳು, ನಿಮ್ಮ ಆಸಕ್ತಿಗಳಿಂದಾಗಿ ಅದು ಹಾಗೆ ಧಾವಿಸುತ್ತಿದೆಯಷ್ಟೇ. ಆದ್ದರಿಂದ, ನೀವೇನು ಮಾಡಬೇಕು? ನೀವು ಪ್ರಾಣಕ್ಕೆ ಜಪದ ಮೂಲಕ ಕರ್ಮ ನೀಡಬೇಕು. ಜಪದಲ್ಲಿ ಮೂರು ವಸ್ತುಗಳಿವೆ: ವಾಕ್, ಪ್ರಾಣ ಮತ್ತು ಮನಸ್ಸು. ಮಂತ್ರ ಶಬ್ದಗಳು ನಿಮ್ಮ ವಿಚಾರ, ಪ್ರಾಣ ಮತ್ತು ಮನದ ಮೇಲೆ ಪ್ರಭಾವ ಬೀರುತ್ತವೆ. ಅಂದ ಮೇಲೆ, ನಿಮ್ಮ ಮನವನ್ನು ಹೋಗಗೊಡಿ. ಈ ನಿಮ್ಮ ಮನವು 'ಬುಯತ'ಕ್ಕೆ[1] ಹೋಗಲು ಬಯಸುವುದೆಂದು ತಿಳಿಯಿರಿ, ಸರಿ; ಅದನ್ನು ಹೋಗಗೊಡಿ. ಕೇವಲ ವೀಕ್ಷಿಸುತ್ತಿರಿ. ಅದು ಯಾವಾಗ ಮರುಳುವುದೋ, ಆ ಕೂಡಲೇ ಜಪದಲ್ಲಿ ತೊಡಗಿಸಿರಿ. ಮತ್ತೊಮ್ಮೆ ಅದು ಹೋಗುತ್ತದೆ. ಅದನ್ನು ವೀಕ್ಷಿಸಿರಿ. ಮತ್ತು ಪುನಃ ಮರಳಿದಾಗ, ಅದನ್ನು ಹಿಡಿಯಿರಿ ಮತ್ತು ಅದನ್ನು ವಿನಿಯೋಗಿಸಿರಿ. ಒಂದು ವೇಳೆ, ಹಾಗೆಯೇ ಹೋಗುತ್ತಿದ್ದರೆ, ಚಿಂತಿಸಬೇಡಿರಿ. "ಸರಿ ಹೋದರೆ ಹೋಗಲಿ; ಮನವೇ 'ಬುಯತ'ಕ್ಕೆ ಹೋಗುವೆಯಾ? ಸರಿ" ಎಂದುಕೊಳ್ಳಿರಿ. ಪುನಃ ಅದನ್ನು ಹಿಡಿಯಿರಿ. ಮರಳಿ ಜಪಕ್ಕೆ ತನ್ನಿರಿ. ಅದು ಹೋದಾಗಲೆಲ್ಲ ಅದನ್ನು ಕೇಂದ್ರಕ್ಕೆ ತಂದಿರಿಸುವ ಕರ್ತವ್ಯವು ನಿಮ್ಮದು. ಅದು ಹೋದರೆ, ಅದನ್ನು ಕೇಂದ್ರದಲ್ಲಿ ಇರಿಸಿರಿ.

ಈ ಕಾರ್ಯವನ್ನು ನೀವು ಮಾಡಬೇಕೆಂದು ನಾನು ಬಯಸುತ್ತೇನೆ.

1. ಬುಯತ ಫ್ರಾನ್ಸ್ ದೇಶದಲ್ಲಿಯ ಒಂದು ಊರಿನ ಹೆಸರು.

ಮನವು ಅತ್ತಿತ್ತ ಹೋದರೆ ಚಿಂತೆಯಿಲ್ಲ. ಅದು ಎಲ್ಲಿಗೋ ಹೋಗಲಿ; ಆದರೆ ನೀವು ನಿಯಮಿತವಾಗಿ, ಅದನ್ನು ಹಿಡಿಯಬೇಕು; ಮತ್ತು ಜಪದಲ್ಲಿ ತೊಡಗಿಸಬೇಕು. ಆನಂತರ ಏನಾಗುತ್ತದೆ? ಕ್ರಮೇಣ ನಿಮ್ಮ ಇಚ್ಛೆಯು, ಅದನ್ನು ಹಿಂದೆಳೆಯುವ ನಿಮ್ಮ ಕ್ಷಮತೆಯು, ಹೆಚ್ಚು ಹೆಚ್ಚು ಪ್ರಬಲವಾಗುತ್ತದೆ. ಸ್ವಭಾವತಃ ಅದು ಹೋಗುವುದನ್ನು ನೀವು ನೋಡುತ್ತೀರಿ. ನಿಮ್ಮ ಪರಿ ವೀಕ್ಷಣೆಯು ನಿಮಗೆ ಮನವನ್ನು ಜಪದಲ್ಲಿ ಹೇಗೆ ತೊಡಗಿಸಬೇಕೆಂಬುದನ್ನು ಬೋಧಿಸುತ್ತದೆ. ಅದನ್ನು ಹಿಂತೆಗೆದು ಜಪದಲ್ಲಿ ತೊಡಗಿಸುವುದೇ ನಿಮ್ಮ ಆಂತರಿಕ ಶಕ್ತಿ. ಅದನ್ನು ನೀವು ಮರೆತಿರುವಿರಿ. ಅದೆಲ್ಲ ನಿಮ್ಮದೇ ಅಂತಃ ಶಕ್ತಿ. ಇಲ್ಲಿ ಅದನ್ನು ಚುರುಕುಗೊಳಿಸುವುದಷ್ಟೇ ನನ್ನ ಕಾರ್ಯವಾಗಿದೆ. "ಮಿತ್ರರೇ! ನೀವು ಈ ಆಂತಃಶಕ್ತಿಯನ್ನು ಪಡೆದಿರುವಿರಿ. ಅದನ್ನು ಸರಿಯಾಗಿ ಉಪಯೋಗಿಸಲು ಪ್ರಯತ್ನಿಸಿರಿ. ಅದನ್ನು ಪ್ರಬಲವಾಗಿಸಿರಿ. ಇನ್ನು ಯಾವಾಗ ನೀವು ಮನವನ್ನು ಹಿಂತೆಗೆಯುವಿರೋ, ಆ ಬಳಿಕ ನಿಮ್ಮ ಇಚ್ಛೆಗನುಸರಿಸಿ, ಅದನ್ನು ಬೇಕಾದಲ್ಲಿಗೆ ಕಳಿಸಬಲ್ಲಿರಿ. ಮತ್ತು ಮರಳಿ ತೆಗೆದು ಕೊಳ್ಳಬಲ್ಲಿರಿ. ಈಗ, ಅದು ನಿಮ್ಮನ್ನು ಎಲ್ಲಿಗೋ ಕರೆದೊಯ್ಯುತ್ತದೆ. ಮತ್ತು ಮರಳಿ ಕರೆತರುತ್ತದೆ. ಆ ಬಳಿಕ, ನೀವು ಅದನ್ನು ಕರೆದೊಯ್ಯುತ್ತೀರಿ ಆಗ ನೀವು ಯೋಗಿಯಾಗಲು ಪ್ರಾರಂಭಿಸುತ್ತೀರಿ.

ನಿಮಗೆ ಬೇಕಾದಂತೆ ನೀವೇನೇ ಮಾಡುತ್ತಿದ್ದರೂ ಸಹ, ನಿಮ್ಮ ಮನವು ಈಗ ಸ್ವಲ್ಪ ಗತಿಶೀಲವಾಗಿರುತ್ತದೆ. ಏಕೆಂದರೆ, ಅದು ಎಲ್ಲಿ ಓಡುತ್ತಿದೆಯೆಂಬುದನ್ನು ನೀವು ತಿಳಿದಿರುತ್ತೀರಿ. ಅದನ್ನು ಯಾವಾಗ ಹಿಡಿದು ತರಬೇಕೆಂಬುದು ನಿಮಗೆ ತಿಳಿದಿರುತ್ತದೆ. ಇದಲ್ಲದೆ, ಅದನ್ನು ಎಲ್ಲಿಗೆ ಕಳಿಸಬೇಕೆಂಬುದೂ ನಿಮಗೆ ತಿಳಿದಿದೆ. ಮೇಲಾಗಿ, ಅದನ್ನು ಹೇಗೆ ನಿಲ್ಲಿಸಬೇಕೆಂಬುದೂ ಸಹ, ನಿಮಗೆ ಗೊತ್ತಾಗಿದೆ. ಈ ಶಕ್ತಿಯು ಯಾವಾಗ ವೃದ್ಧಿಸುವುದೋ, ಆ ಕಾಲಕ್ಕೆ ಯಾಂತ್ರಿಕ ಜಪವು ನಿಲ್ಲುತ್ತದೆ. ಈಗ ಯಾಂತ್ರಿಕ ಜಪ–ಮಾಡುವ ಅಗತ್ಯವೇನಿಲ್ಲ. ಈಗ ಮಾತ್ರ ನೀವು ಉನ್ನತ ವಿಜ್ಞಾನವನ್ನು ಅರಿಯುತ್ತೀರಿ. ಕ್ರಮೇಣವಾಗಿ ಅಲ್ಲಿ ಅನಂತ ಗತಿಯಿದೆ. ಅದು ನಿಮ್ಮ ಮನದಲ್ಲಿ, ನಿಮ್ಮ ವಿಚಾರವಲ್ಲಿ, ವಿದ್ಯುತ್ ಸಂಚಾರದಂತೆ ಪ್ರವಹಿಸುತ್ತದೆ. ಈ ಗತಿಯು ಎಲ್ಲೆಡೆಗೆ ಸಾಗುತ್ತಿರುವುದು. ಪ್ರಚಂಡ ಗತಿಗಳು ಆಂತರ್ಯದಲ್ಲಿ ಸಾಗುತ್ತಿರುತ್ತಿವೆ. ಇನ್ನು, ನೀವು ಯಾವಾಗ ಮನದ ಮೂಲಕ ನೋಡುವಿರೊ, ಆಗ ನೀವು ಯಾವುದೋ ಒಂದು ವಿಚಾರವು

ನಡೆದಿರುವುದನ್ನು ಕಾಣುತ್ತೀರಿ. ಮತ್ತು ಆ ಕ್ಷಣವೇ ಅದು ಮರೆಯಾಗುತ್ತದೆ. ನಿಮ್ಮನ್ನು ಮರುಳು ಮಾಡುತ್ತವೆ. ಸ್ಪಂದನಗಳು ಹರಿಯುತ್ತಿರುವುದನ್ನು ನೀವು ನೋಡುತ್ತೀರಿ. ಈ ಸ್ಪಂದನಗಳು ಸಾಗಿರುವಾಗ, ನೀವು ನಡುವೆ ಇರುವುದನ್ನು ಕಂಡುಕೊಳ್ಳುತ್ತೀರಿ. ಮತ್ತು ಆ ಸ್ಪಂದನಗಳನ್ನು ಗುರುತಿಸುತ್ತ, "ಓಹೋ! ಇವು ನನ್ನಿಂದಲೇ ಬರುತ್ತವೆ." ಎಂದು ಅರಿತುಕೊಳ್ಳುತ್ತೀರಿ. ಈ 'ನಾನು' ಅಂಟೊಯಿನನೂ ಅಲ್ಲ; ರೋಪರ್ಸನೂ ಅಲ್ಲ. ಅಲೆಥನೂ ಅಲ್ಲ. ಆದರೆ ಈ ನಾನು ಈ ಎಲ್ಲರ, ಉತ್ಸವಾಗಿದೆ. ಸೃಷ್ಟಿಯ ಉತ್ಸವಾಗಿವೆ. ಎಲ್ಲ ವಸ್ತುಗಳ ಉತ್ಸವೂ ಆಗಿದೆ. ಅದು ಆಂತರ್ಯದಲ್ಲಿ ಕಾರ್ಯಮಾಡುತ್ತದೆ.

ನೀವು ನಿಮ್ಮ ಕೇಂದ್ರೀಯ ಪ್ರಜ್ಞೆಯನ್ನು ಆಂತರ್ಯದಲ್ಲಿ ಕಂಡುಕೊಂಡಾಗ ಮಾತ್ರ, "ನಾನು ಮಾಡುತ್ತಿರುವ ಈ ಜಪವು ಇನ್ನಷ್ಟು ಆಳಕ್ಕಿಳಿಯಬೇಕು. ನಾನು ೧, ೨, ೩ ಹೀಗೆ ಒಂದು ಸಾವಿರ ಸಲ ಮಾಡುತ್ತಿದ್ದುದೆಲ್ಲ, ಕೇವಲ ಒಂದು ಕ್ಷಣದಲ್ಲಿಯೇ ಆಗಬೇಕು". ಎಂದು ಅರಿಯುತ್ತೀರಿ. ಆಮೇಲೆ, ಈ ಒಂದು ನೂರಾ ಎಂಟು ಶಕ್ತಿ-ಘಟಕಗಳು, ಒಂದು ನೂರಾ ಎಂಟು ಗತಿಗಳಾಗಿ, ಕಾರ್ಯ ರೂಪಕ್ಕಿಳಿಯಲು ಎಷ್ಟೊಂದು ಗಡಿಯಾಳ ಕಾಲವನ್ನು ತೆಗೆದುಕೊಳ್ಳುತ್ತಿದ್ದವೋ, ಅದನ್ನೆಲ್ಲ ನಿಮ್ಮ ಮಾನಸಿಕ ಕಾಲವು ಒಂದು ಕ್ಷಣದಲ್ಲಿ ಸಾಧಿಸುತ್ತದೆ. ಅರ್ಥಾತ್, ನನ್ನ ಯಾಂತ್ರಿಕ ಪದ್ಧತಿಯ ಮೂಲಕ, ನಾನು ಯಾವ ಶಕ್ತಿಯನ್ನು ಸಂಚಯಿಸುವೆನೋ, ಅದಕ್ಕೆ ಸಾಕಷ್ಟು ಕಾಲ ಹಿಡಿಯುತ್ತದೆ. ಆದರೆ ನೀವು ಮಾನಸಿಕ ಕಾಲವು ಎಷ್ಟೊಂದು ವೇಗವಾಗಿರುವುದೆಂದರೆ, ಅದು, ಪ್ರಜ್ಞೆಯ ಸಮಾನ ತೀವ್ರತೆಯನ್ನು ಸಾಧಿಸಲು ತಗಲುವ ಯಾಂತ್ರಿಕ ಕಾಲಕ್ಕಿಂತ ಬಹಳ ಕಡಿಮೆಯಾಗಿರುತ್ತದೆ.

ಆ ಮೇಲೆ, ನೀವು ಒಂದು ವಿಶೇಷ ಶಬ್ದವನ್ನು ಸ್ಮರಿಸಿದರೆ, ಆ ಶಬ್ದವು ಶಕ್ತಿಯುತವಾಗಿರುವುದನ್ನು ಕಂಡರಿಯುತ್ತೀರಿ. ಅದು ಎಷ್ಟೊಂದು ಶಕ್ತಿಯುತವಾಗಿರುವದೆಂದರೆ, ಒಬ್ಬ ಮನುಷ್ಯನಿಗೆ ಒಂದು ಪರಿಮಾಣದ ತೀವ್ರತೆಯನ್ನು ಸಂಪಾದಿಸಲು ಒಂದು ವರ್ಷ ಹಿಡಿಯುತ್ತಿದ್ದರೆ, ಆ ಶಬ್ದದ ಸ್ಮರಣೆಯಿಂದ ಕ್ಷಣ ಮಾತ್ರದಲ್ಲಿ ಅವನು ಅದನ್ನು ಪಡೆಯುತ್ತಾನೆ.

ತಾತ್ಪರ್ಯವಿಷ್ಟೇ: ದಿನಮಾನ ಕಾಲಕ್ಕೆ ಯಾವಾಗಲೂ ಕಾಲಸರಣಿಯು ಬೇಕಾಗುತ್ತದೆಂಬುದು ತುಂಬಾ ಸ್ಪಷ್ಟವಿದೆ. ಅದು ಬಹಳಷ್ಟು ವೇಳೆ ತೆಗೆದುಕೊಳ್ಳುತ್ತದೆ. ಅದಕ್ಕೆ ಅದರದೇ ಆದ ಸೀಮಿತಗಳಿವೆ. ಆದರೆ, ಉನ್ನತ ಮಾನಸಿಕ ಕಾಲವು ಕಡಿಮೆ ವೇಳೆ ತೆಗೆದುಕೊಳ್ಳುತ್ತದೆ. ಅದೂ ಸಹ,

ಸಾಪೇಕ್ಷಿಕವಿದೆ. ಆದರೆ, ಅದನ್ನು ನಾವು ನಮ್ಮ ವಸ್ತುಗಳಿಗಾಗಿ ಬಳಸುತ್ತೇವೆ. ನಾವು ಬಾಹ್ಯ ಎನೆರ್ಜಿಯನ್ನು ಹೊರಗಿನ ಕಾರ್ಯಗಳಿಗಾಗಿ ಬಳಸುವಂತೆಯೇ, ಮಾನಸಿಕ ಕಾಲ – ಶಕ್ತಿಯನ್ನು ನಮ್ಮ ಸ್ವ–ಪ್ರಜ್ಞೆಯ ಉನ್ನತೋನ್ನತ ವೃದ್ಧಿಗಾಗಿ ಬಳಸುತ್ತೇವೆ. ಮತ್ತು ಮನವನ್ನು ನಿಯಂತ್ರಿಸಲು ಹಾಗೂ ನಮ್ಮ ಹಿಡಿತದಲ್ಲಿಟ್ಟುಕೊಳ್ಳಲು, ಆ ಶಕ್ತಿಯನ್ನು ಬಳಸುತ್ತೇವೆ. ನಾವು ಅದನ್ನೇ ಅತಿಶಯಿಸಲು, ನಮ್ಮ ನಿಯಮ–ನಿಬಂಧನೆಗೆ ಒಳಪಡಿಸಲು, ನಮ್ಮ ಗತಿಶೀಲ ಇಚ್ಛೆಗೊಳಪಡಿಸಲು, ಅದನ್ನೇ ಬಳಸುತ್ತೇವೆ. ಇದು ಆಧ್ಯಾತ್ಮಿಕ ವಿಜ್ಞಾನವಾಗಿದೆ. ಅದಕ್ಕೆ ಅದರದೇ ಆದ ನೀತಿ–ನಿಯಮಗಳಿವೆ. ಅರ್ಥಾತ್ ನೀವು ಮಾನಸಿಕ ಕಾಲಕ್ಕೆ ಹೋಗಬೇಕಾದರೆ, ನೀವು ಉಲ್ಟಿಯಾಗಿ ದಿನಮಾನ ಕಾಲಕ್ಕೆ ಹೋಗಬೇಕಾಗುತ್ತದೆ. ದಿನಮಾನ ಕಾಲವು ಒಂದು ಬಿಂದುವನ್ನು ಇನ್ನೊಂದಕ್ಕೆ ಚಲಿಸಹಚ್ಚುತ್ತದೆ. ಮತ್ತು ನಾನೀಗ ವಿರುದ್ಧ ದಿಶೆಯಲ್ಲಿ ಹೋಗಬೇಕಾಗಿದೆ. ಮಾನಸಿಕ ಕಾಲವು ದೇಶ ಮತ್ತು ಕಾಲವನ್ನು ಸೃಜಿಸುತ್ತದೆ. ನಾನು ಒಂದು ಬಿಂದುವಿನಿಂದ ಇನ್ನೊಂದಕ್ಕೆ ಹೋಗಬೇಕು. ಬಂದು ಮತ್ತೆ ಮರಳಬೇಕು. ಹೀಗೆ, ಈ ಅಂತರವನ್ನು ಹ್ರಸ್ವಗೊಳಿಸಿ ಕೇಂದ್ರವನ್ನು ಕಾಣಬೇಕು. ನಾನು ದಿನಮಾನ ಕಾಲದಲ್ಲಿರುವುದು, ನನ್ನ ಸ್ವಭಾವವೇ. ನನ್ನ ಜೀವನದಲ್ಲಿ ಅನೇಕ ಸಮಸ್ಯೆಗಳಿವೆ. ನನ್ನ ಮನವು ಕಾರ್ಯ ಮಗ್ನವಾಗಿದೆ. ಪ್ರತಿಯೊಂದೂ ಕಾರ್ಯ ಮಗ್ನವಾಗಿದೆ. ಈಗ ನಾನು ಜಪ ಮಾಡುತ್ತೇನೆ. ಹೀಗೆ, ನಾನು ಉಲ್ಟಿ ಹೋಗುತ್ತೇನೆ. ಆ ಬಿಂದುವಿಗೆ ಬರಲು ಮತ್ತು ಹಿಂತಿರುಗಲು ಒಂದು ಗತಿಯನ್ನು ಹಿಡಿಯುತ್ತೇನೆ. ಹೀಗೆ ಏನಾಗುತ್ತದೆ? ಇದು ಮಾನಸಿಕ ಕಾಲದ ತೀವ್ರತೆಯನ್ನು ಉಂಟು ಮಾಡುತ್ತಿದೆ. ದಿನಮಾನ–ಕಾಲ ಮತ್ತು ಮಾನಸಿಕಗಳೆರಡಕ್ಕೂ ಗತಿಗಳಿದ್ದರೂ ಸಹ, ಅವುಗಳ ಸ್ವಭಾವಗಳು ವಿಭಿನ್ನವಾಗಿವೆ. ಹೀಗೆ, ಮಾನಸಿಕ ಕಾಲವು ಅಧಿಕ ವೇಗವುಳ್ಳದ್ದಾಗಿದೆ.

ಒಂದು ವೇಳೆ, ನಾನು ಪ್ಯಾರಿಸಿಗೆ ಹೋಗಬಯಸಿದರೆ ಶಬ್ದಾತಿವೇಗದ ವಿಮಾನದಿಂದ ಹೋಗಬಲ್ಲೆನು. ಆದರೂ ಅದಕ್ಕೆ ಎಷ್ಟಾದರೂ ಕಾಲವು ಹತ್ತುತ್ತದೆ. ಒಂದು ವೇಳೆ, ನಾನು ಮನಸ್ಸಿನ ಮೂಲಕ ಹೋಗುವುದಾದರೆ, ನಾನು 'ಬುಯತ'ಗೆ ಕೂಡಲೇ ಹೋಗಬಲ್ಲೆನು. ನಾನು ಕಣ್ಣು ಮುಚ್ಚಿದೊಡನೆ, ಬುಯತನಲ್ಲಿ ಇರುತ್ತೇನೆ. ಹೀಗೆ, ಅದಕ್ಕಾಗಿ ಎಷ್ಟು ಅಲ್ಪ ಕಾಲ ಹಿಡಿಯುವುದೆಂಬುದನ್ನು ಊಹಿಸಿರಿ. ಮನವು ತುಂಬಾ ವೇಗದ ವಾಹನ

ವಾಗಿದೆಯೆಂಬುದು ನಿಮಗೆ ಗೊತ್ತಿದೆಯಲ್ಲವೆ? ಅದರ ವೇಗವು ಪ್ರಚಂಡವಾಗಿದೆ. ಅಲ್ಲವೇ ಮತ್ತೆ? ಇದನ್ನು ನನ್ನ ನೆನಪಿನಿಂದ ಸಹ ಅನುಭವಿಸಬಹುದಾಗಿದೆ.

ಹೀಗೆ, ನಾವು ಆಂತರಿಕ ಜಪವನ್ನು ಉಪಯೋಗಿಸಿಕೊಳ್ಳಬೇಕು. ನಾವು ದಿನಮಾನ ಕಾಲದ ಅಂಕೆಗೊಳಪಟ್ಟಿದ್ದೇವೆ. ಆದರೆ ನಾವು ಮಾನಸಿಕ ಕಾಲವನ್ನು ಅರಿತುಕೊಳ್ಳಬಯಸುತ್ತೇವೆ. ಮತ್ತು ಮಾನಸಿಕ ಕಾಲದ ಕೇಂದ್ರದಲ್ಲಿ, ಜಪದ ಮೂಲಕ ಹೋಗಬಯಸುತ್ತೇವೆ. ಹೀಗೆ ನಾವು ನಮ್ಮ ಮೇಲೆ ಆಧಿಪತ್ಯ ನಡೆಸುವ, ಮತ್ತು ನಮ್ಮ ಮೇಲೆ ಕಾರ್ಯ ಮಾಡಬಯಸುವ, ದಿನಮಾನ ಕಾಲ ಹಾಗೂ ಮಾನಸಿಕ ಕಾಲಗಳ ಸ್ವಭಾವವನ್ನೂ ಅರಿಯಲಿಚ್ಛಿಸುತ್ತೇವೆ. ನನ್ನ ಸತ್ತೆಯಾದರೋ, ದಿನಮಾನ ಕಾಲ ಮತ್ತು ಮಾನಸಿಕ ಕಾಲಗಳ ನಿಯಂತ್ರಣಕ್ಕೊಳಪಟ್ಟು ಇರುವುದಷ್ಟೇ ಅಲ್ಲದೆ, ಅವುಗಳ ಆಚೆಗೂ ಇದೆ. ಇದನ್ನು ನಾನು ಮೊದಲು ಅರಿಯಬೇಕು. ಇಂಥ ಅರಿವನ್ನೇ ಜಪವು ಹುಟ್ಟಿಸುತ್ತದೆ.

ಹೀಗೆ, ನಿಮ್ಮ ಶಾರೀರಿಕ ಸಾಧನೆಯ ಇಲ್ಲವೆ ಜಪದ ತೀವ್ರತೆಯು ನಿಮ್ಮ ದಿನಮಾನ ಕಾಲವನ್ನಷ್ಟೇ ಅವಲಂಬಿಸಿಲ್ಲ. ಅದು ಮಾನಸಿಕ ಕಾಲವನ್ನೂ ಅವಲಂಬಿಸಿದೆ. ಇನ್ನೂ ಹೆಚ್ಚಾಗಿ ಮಾನಸಿಕ ಕಾಲದ ತೀವ್ರತೆಯನ್ನೂ ಅವಲಂಬಿಸಿದೆ.

ನಾವು ಆಧುನಿಕ ವಿಜ್ಞಾನದ ಗುಂಟ ಸಾಗಿದ್ದೇವೆ. ಇದನ್ನು ನಾವು ಮರೆಯಕೂಡದು. ನಾವು ಆಧುನಿಕ ವಿಜ್ಞಾನಕ್ಕಿಂತ ಕೊಂಚ ತೀವ್ರತರವಾಗಿದ್ದಿವಷ್ಟೇ. ಹೀಗೆ ನಾವು ಈ 'ಓಂ ಮಣಿ ಪದ್ಮ ಓಂ' ಮಾಡಬೇಕಾಗಿಲ್ಲ. ನಾವು ಆಂತರ್ಯದಲ್ಲಿ 'ಓಂ ಮಣಿ ಪದ್ಮ ಓಂ' ಹೊಂದಿದ್ದೇವೆ. ಅದು ಆಂತರ್ಯದಲ್ಲಿ ಅಧಿಕ ಜಾಗ್ರತಗೊಳಿಸುತ್ತದೆ. ಅದನ್ನು ಯಾಂತ್ರಿಕವಾಗಿ ಮಾಡಬೇಕಾಗಿಲ್ಲ.

ಹೀಗೆ, ನಾವು ಈ ಜೀವನಕ್ಕೆ ಬೆದರಬೇಕಾಗಿಲ್ಲ. ನಾವು ಈ ಬಾಳನ್ನು ಪಡೆದಿದ್ದೇವೆ. ಮತ್ತು ಇದರೊಂದಿಗೇ ಉಳಿಯುತ್ತೇವೆ. ಆದರೂ ಅದನ್ನು ಅರಿಯುತ್ತೇವೆ.

ಪ್ರಶ್ನೆ: ಜಪದ ಛಂದವು ಬದಲಾಗಬೇಕೇ ಇಲ್ಲವೆ ಬದಲಾಗಬೇಕಿಲ್ಲವೇ?


ಉತ್ತರ: ಇಲ್ಲಿ ಎರಡು ವಸ್ತುಗಳಿವೆ. ಮೊದಲನೆಯದಾಗಿ, ಪ್ರಾರಂಭ

ದಲ್ಲಿ ನೀವು ಜಪದ ಛಂದವನ್ನೇ ಅರಿಯುವುದಿಲ್ಲ. ಕ್ರಮೇಣ ನಿಮಗೆ ಜಪದ ಛಂದವು ಗೊತ್ತಾಗುತ್ತದೆ. ಇನ್ನು ಇದರ ಲಕ್ಷಣಗಳು ಮೂರು: ಯಾವಾಗ ನಮಗರಿಯದಂತೆ ವಿಚಾರಗಳು ಬಂದಾಗ ಅದು ಬದಲಾಗುತ್ತದೆ. ಈ ಭೇದಗಳು ಮೂರು. ಅನಂತರ, ವ್ಯತ್ಯಾಸಗಳಿಲ್ಲ. ಒಂದೇ ಛಂದವಿರುತ್ತದೆ. ಮತ್ತು ನೀವು ಆ ಛಂದದೊಂದಿಗೆ ಒಂದಾಗುತ್ತೀರಿ.

ಪ್ರಶ್ನೆ: ಆದರೆ, ಮೂರು ತಿಂಗಳ ವರೆಗೆ ನಾವು ಒಂದು ಛಂದವನ್ನಿರಿಸಿಕೊಂಡಿದ್ದೆವು. ಅದು ಕೂಡಲೇ ಬದಲಾಗುವುದೇನು?

ಉತ್ತರ: ಅಹುದು; ಬದಲಾಗುತ್ತದೆ. ಸ್ವಾಭಾವಿಕವಾಗಿಯೇ ಬದಲಾಗುತ್ತದೆ. ಹಾಗಾಗುವುದು ಅನಿವಾರ್ಯ.

ಪ್ರಶ್ನೆ: (ಬದಿಯ ಚಿತ್ರ ನೋಡಿರಿ.) ಈ ವರ್ತುಲಗಳೆಲ್ಲ ಬೇರೆ ಬೇರೆ ಛಂದಗಳನ್ನು ಪ್ರತಿನಿಧಿಸುತ್ತವೆಯೇ?



ಉತ್ತರ: ಅಹುದು. ಮೇಲಾಗಿ ನೀವು ಛಂದಗಳನ್ನು ಕುರಿತು ಅರಿತುಕೊಂಡ ಮೇಲೆ, ಅನೇಕ ಛಂದಗಳಿರಬಹುದೆಂಬುದನ್ನು ತಿಳಿಯುತ್ತೀರಿ. ಇಲ್ಲಿ ಎರಡು ಸಂಗತಿಗಳಿವೆ. ಇವು ವಿಭಿನ್ನ ಛಂದಗಳು. ಆದರೆ, ಛಂದಗಳ ಕೇಂದ್ರವು ಒಂದೇ ಆಗಿದೆ. ಈ ಸ್ವರಮಾಧುರ್ಯವನ್ನೇ ತೆಗೆದುಕೊಳ್ಳಿರಿ. ಅಲ್ಲಿ ಸಾಮಾನ್ಯ ಛಂದಗಳಿರುತ್ತವೆ. ಮತ್ತು ಮಿಶ್ರಛಂದಗಳೂ ಇರುತ್ತವೆ. ಮತ್ತು ಛಂದಗಳ ಕೇಂದ್ರವೂ ಇರುತ್ತದೆ. ಅದೇ ರೀತಿ, ಮಂತ್ರದಲ್ಲಿಯೂ ಸಹ, ವಿಶೇಷತೆಗಳಿವೆ. ವಿಭಿನ್ನ ಛಂದಗಳಿವೆ ಮತ್ತು ಸಾಮಾನ್ಯ ಛಂದವೂ ಇದೆ. ಮೇಲಾಗಿ, ಅಲ್ಲಿ ವಿಶೇಷ ಪ್ರಕಾರದ ಛಂದವೂ ಇದೆ. ಹಾಗೂ ಛಂದದ ಕೇಂದ್ರವೂ ಇದೆ.

೧೧
ದಿವ್ಯ ಮಾತೆಯ ಮಾತು

ನಾನು ನಿಮಗೆ ತಿಳಿಸಿ ಹೇಳಲು ಬಯಸುವೆ. ಅಥವಾ ನಾವು ಎಲ್ಲರೂ ಪ್ರೇಮಾದರಗಳ ಜನರೇ ಆಗಿರುವುದರಿಂದ, ನಮ್ಮೊಳಗೇ ಶ್ರುತಿಗೊಳಿಸಿಕೊಳ್ಳಬೇಕಾಗಿದೆ. ವಾಸ್ತವವಾಗಿ, ನಮ್ಮ ಉತ್ಸವು ಗತಿಶೀಲ ಪ್ರೇಮ ಅಥವಾ ದಿವ್ಯ ಪ್ರೇಮವಾಗಿದೆ. ಇದನ್ನು ನಾವು ಮರಳಿ ಹುಡುಕಬೇಕಾಗಿದೆ. ಬಾಹ್ಯಿಕ ಪರಿವರ್ತನೆಗಳ ಕಾರಣ ಇಲ್ಲವೆ ಪ್ರಾಣ,ಅಪಾನಗಳ ಪರಂಪರಾ ಕ್ರಮದ ಕಾರಣ, ನಮ್ಮ ಪ್ರಜ್ಞೆಯು, ತನ್ನ ಸಂಕೋಚ-ವಿಕಾಸಗಳಿಂದ, ಸೀಮಿತಗೊಂಡಿದೆ ಮತ್ತು ಅದು ತನ್ನ ಗತಿಶೀಲ ಪ್ರೇಮವನ್ನು ಕಳೆದುಕೊಂಡಿದೆ. ಉದಾಹರಣಾರ್ಥ ನೋಡಿರಿ. ನಾವು ಓರ್ವ ವಿಶೇಷ ತಾಯಿಯ ಸಂತಾನವೆಂದು ತಿಳಿಯಿರಿ. ನಾವು ಬಾಲ್ಯದಲ್ಲಿ ಇನ್ನೂ ಮಗುವಾಗಿದ್ದಾಗ, ನಮ್ಮ ತಾಯಿಯನ್ನು ಕುರಿತು ನಮ್ಮಲ್ಲಿ ಅದ್ಭುತ ಪ್ರೇಮ ಹೊಂದಿದ್ದೆವು. ನಮ್ಮ ಜ್ಞಾನ ಸಂಪಾದನೆ ಮತ್ತು ನಮ್ಮ ಪ್ರಾಪಂಚಿಕ ಅನುಭವಗಳು ನಮ್ಮನ್ನು ವಿಚಾರಬದ್ಧರನ್ನಾಗಿ ಮಾಡುತ್ತವೆ. ಹೀಗಾಗಿ, ನಾವು ನಮ್ಮ ತಾಯಿಯ ಪ್ರೇಮವನ್ನು ಕಳೆದುಕೊಂಡೆವು ಮತ್ತು ಹೇತು ಪೂರಿತರಾದೆವು. ಇನ್ನು, ನಮ್ಮ ಎಲ್ಲ ಆಸಕ್ತಿಯಿಂದ, ನಾವು ಹೇತು ಪೂರಿತ ಜೀವನಕ್ಕೇ ಅಧಿಕ ಮಹತ್ವ ನೀಡುತ್ತೇವೆ. ಮತ್ತು ಇದರಿಂದ ನಾವು ನಮಗೆ ಜನ್ಮವಿತ್ತ ತಾಯಿಯನ್ನೇ ಕಳೆದುಕೊಂಡೆವು. ಅದೇ ರೀತಿ, ಇತ್ತ ನಮ್ಮ ಬುದ್ಧಿಯು ಎಷ್ಟೊಂದು ವೃದ್ಧಿಸಿತೆಂದರೆ, ನಮ್ಮ ಶುದ್ಧ ಭಾವಗಳನ್ನು ಶ್ರುತಿಗೊಳಿಸುವಲ್ಲಿ ನಮಗೆ ಅಭಿರುಚಿಯೇ ಉಳಿಯಲಿಲ್ಲ. ನಮ್ಮ ಶುದ್ಧ ಭಾವಗಳೊಂದಿಗೆ ಶ್ರುತಿಗೂಡದಿದ್ದರೆ, ನಾವು ನಮ್ಮೊಳಗೆ, ನೈಜ, ಆಂತರಿಕ, ಶುದ್ಧ ಆನಂದವನ್ನು ಪಡೆಯಲಾರೆವು. ಮೇಲಾಗಿ, ಆಧುನಿಕ ಶಿಕ್ಷಣ, ಆಧುನಿಕ ವಿಚಾರ ಪದ್ಧತಿ, ಆಧುನಿಕ ಜೀವನ ರೀತಿಗಳು ನಮ್ಮ ಭಾವಗಳಲ್ಲಿ ಎಷ್ಟೊಂದು

ಗೊಂದಲವನ್ನೆಬ್ಬಿಸಿವೆಯೆಂದರೆ, ದುರ್ಘಟನೆಗಳು ಸಂಭವಿಸಬಹುದಾದ ಹಾದಿಯಲ್ಲಿ ನಮ್ಮ ಜೀವನವು ಸಾಗಿದೆ. ನಮ್ಮ ಭಾವಗಳೆಲ್ಲ ನಷ್ಟವಾಗುವಂತೆ, ಮತ್ತು ನಮ್ಮ ಜೀವನವು ಯಾಂತ್ರಿಕವಾಗುವಂತೆ ಪ್ರಚಂಡ ದುರ್ಘಟನೆಯು ಸಂಭವಿಸಬಹುದು.

ಮಿತ್ರರೇ! ಆನಂದ-ಭರಿತವಾದ ನಿಮ್ಮ ಸಮಸ್ತ ಗತಿಶೀಲ ಪ್ರೇಮದೊಂದಿಗಿನ ಆಂತರಿಕ ವಿಕಾಸವನ್ನು ಅರಿತುಕೊಳ್ಳಲು ಪ್ರಯತ್ನಿಸಿರಿ. ನೀವು ನಿಮ್ಮ ಮನಸ್ಸಿನ ಮೂಲಕ ನಿಮ್ಮ ಬುದ್ಧಿಯ ಮೂಲಕ–ಅದೂ ಬಾಹ್ಯಿಕವಾಗಿ–ಪ್ರೀತಿಸಲು ಬಯಸುತ್ತೀರಿ. ಇದು ಅಸಾಧ್ಯ. ಯಾವನೊಬ್ಬನು ನಿಮ್ಮ ಸೋದರನೆಂದೋ, ಗೆಳೆಯನೆಂದೋ, ಇಲ್ಲವೆ ಯಾವಳೊಬ್ಬಳು ನಿಮ್ಮ ಹೆಂಡತಿಯೆಂದೋ, ಬಾಹ್ಯಿಕವಾಗಿ ನೀವು ಸಂಬಂಧವನ್ನು ಸ್ಥಾಪಿಸುತ್ತೀರಿ. ಆದರೆ ಇವೆಲ್ಲ ಬರೀ ಬುದ್ಧಿವಂತಿಕೆಯ ಹಾದಿಗಳಷ್ಟೇ. ನೀವು ಸಾಮಾಜಿಕ ದೃಷ್ಟಿಕೋನದಿಂದ ಸಂಪರ್ಕಿಸಬಯಸುತ್ತೀರಿ. ನೀವು ನಿಮ್ಮ ತಥಾಕಥಿತ ಭಾವಗಳನ್ನು ಹರಿಬಿಡುತ್ತೀರಿ. ಆದರೆ, ವಾಸ್ತವದಲ್ಲಿ ಅವು ಭಾವಗಳೇ ಅಲ್ಲ. ಅವು ಹೇತುಪೂರಿತವಾಗಿವೆ. ನೀವು ನಿಮ್ಮ ಪ್ರೇಮದಲ್ಲಿ ಶ್ರದ್ಧೆ ಹೊಂದಬಯಸುತ್ತೀರಿ. ಆದರೆ, ಪದೇ ಪದೇ ಉಕ್ತ ರೀತಿಯಲ್ಲಿಯೇ ವ್ಯವಹರಿಸುತ್ತೀರಿ. ನೀವು ಪ್ರೀತಿಸುತ್ತೇವೆಂದು ಬಡಾಯಿ ಕೊಚ್ಚುತ್ತೀರಿ. ಆದರೆ, ನೀವು ಯಾರನ್ನೂ ಎಂದೂ ಪ್ರೀತಿಸುತ್ತಿರುವುದಿಲ್ಲ. ನೀವು ಎಷ್ಟೊಂದು ಸ್ವಾರ್ಥಿಗಳಾಗಿರುವಿರೆಂದರೆ, ನೀವು ನಿಮ್ಮಷ್ಟಕ್ಕೇ ಇರಬಯಸುತ್ತೀರಿ. ಮತ್ತು ಅಂಥ ಜಗತ್ತನ್ನೇ ನಿರ್ಮಿಸಬಯಸುತ್ತೀರಿ. ಹೀಗೆ, ಅನೇಕ ಆಂತರಿಕ ಶೋಧಕರು ತಮ್ಮ ಬುದ್ಧಿಯನ್ನೇ ಅಸ್ತ್ರವನ್ನಾಗಿ ಮಾಡಿಕೊಂಡವರಿರುತ್ತಾರೆ. ಮತ್ತು ಅವರು ವಿಶ್ಲೇಷಣೆಯ ಮೇಲೆ ವಿಶ್ಲೇಷಣೆ ಮಾಡುತ್ತ ಹೋಗುತ್ತಾರೆ. ಏಕೆ? ಬೌದ್ಧಿಕ ವೀಕ್ಷಣೆ ಮತ್ತು ಚರ್ಚೆಯ ನಿತ್ಯ ರೂಢಿಯಿಂದ, ಆಂತರ್ಯದಲ್ಲಿ ಸಾಗಿರುವ ಯಾಂತ್ರಿಕತೆಯು, ನಮ್ಮ ವೀಕ್ಷಣೆಯನ್ನು ಎಷ್ಟೊಂದು ಪರಿತಗೊಳಿಸುವುದೆಂದರೆ, ನಾವು ಏನನ್ನೋ ಹೇಳಲು ಬಯಸುತ್ತೇವೆ ಮತ್ತು ಅದು ಆ ಕೂಡಲೇ ವಂಚಿಸುತ್ತದೆ. ಹೀಗೆ ಅದು ವಂಚಿಸುವುದರಿಂದ, ನಾವು ಅಲ್ಲಿ ಏನೂ ಇಲ್ಲ; ಎಂದು ಹೇಳುತ್ತೇವೆ. ಆದರೆ, ನಿಜವಾಗಿ ಅಲ್ಲಿ ಪ್ರಚಂಡ ಶಕ್ತಿ ಇದೆ. ಮತ್ತು ಏನಿದೆ, ಎಂಬುದನ್ನು ನೀವು ಅರಿಯಲು ಪ್ರಯತ್ನಿಸಿರಿ. ಅದು ಗ್ರಹಿಕೆಗೆ ಅತೀತವಾಗಿದೆ. ಈ ಸಂಗತಿಯನ್ನು ನಾನು ವಿರೋಧಿಸುವುದಿಲ್ಲ. ಅದರಲ್ಲಿ ಸತ್ಯವು ಇದೆ. ಆದರೆ, ನಾನು ಹೇಳಬಯಸುವುದೇನೆಂದರೆ, ಒಂದು ವೇಳೆ,

ನಿಮ್ಮ ಬಾಹ್ಯ ಜೀವನದಲ್ಲಿ, ನೀವು ಪಡೆಯುವ ಪರಿಮಳವನ್ನು ನೀವು ನಿಷೇಧಾತ್ಮಕವಾಗಿ ಕಂಡರೆ, ನೀವೆಂದೂ ಮಾನವತೆಗಾಗಿ ಕಾರ್ಯ ಮಾಡಲಾರಿರಿ. ನೀವು ಯಾವಾಗಲೂ ನಿಷೇಧಾತ್ಮಕವಾಗಿಯೇ ಕಾರ್ಯ ಮಾಡುತ್ತಿರುವಿರಿ. ಮತ್ತು ನಿಷೇಧಾತ್ಮಕ ಹಾದಿಯಲ್ಲಿಯೇ ಸಾಗಿಸುತ್ತಿರುವಿರಿ. ಅದೇನೇ ಇರಲಿ. ಹಾಗೆ ನೋಡಿದರೆ, ಎಲ್ಲರೂ ನಿಷೇಧಾತ್ಮಕ ಹಾದಿಯಲ್ಲಿಯೇ ಸಾಗಿದ್ದಾರೆ. ಅದರಿಂದ, ನಿಮ್ಮ ಜೀವನದಿಂದ ಆದುದೇನು? ನಾನು ಪ್ರಾಪಂಚಿಕ ಅಮಿಷಗಳನ್ನು ಕುರಿತು ಮಾತನಾಡುತ್ತಿಲ್ಲ. ನಾನು ಪ್ರಾಪಂಚಿಕ ವಿಷಯಗಳ ಬಗೆಗೆ ಹೇಳುತ್ತಿಲ್ಲ. ಯಾವಾಗ ನೀವು ಏನನ್ನಾದರೂ ಪ್ರತಿಫಲವಾಗಿ ನಿರೀಕ್ಷಿಸುವಿರೋ, ಆಗ ನೀವು ಸೀಮಿತರಾಗುತ್ತೀರಿ. ಮತ್ತು ಅದರಿಂದ ಕಷ್ಟಕ್ಕೊಳಗಾಗುತ್ತೀರಿ. ನಾನು ಈ ಕುರಿತು ಎಂದೂ ಏನನ್ನೂ ಹೇಳುವುದಿಲ್ಲ. ನನಗೆ ಬಾಹ್ಯ ವೃತ್ತವೆಲ್ಲ ಗೊತ್ತಿದೆ. ಅಲ್ಲಿ ಒಂದು ಬಿಂದುವು ಇನ್ನೊಂದಕ್ಕೆ ಬೌದ್ಧಿಕ ರೀತಿಯಲ್ಲಿ ಹೋಗುತ್ತದೆ. ಯಾವಾಗ ನೀವು ಏನನ್ನಾದರೂ ಮಾಡಲು ಬಯಸಿದರೆ, ಅದು ಆಕಾಂಕ್ಷೆಯಾಗುತ್ತದೆ. ಅದೇ ಸಮಸ್ಯೆಯಾಗುತ್ತದೆ. ನಾನೆಂದೂ ಇದನ್ನು ಅಲ್ಲಗಳೆಯುವುದಿಲ್ಲ. ಆದರೆ, ನಡುಮಧ್ಯೆ ನೀವು ಯಾವಾಗ ನಿಷೇಧಾತ್ಮಕವಾಗಿ ಹೋಗುವಿರೋ, ಆಗ ನೀವೇಕೆ ನಿಷೇಧಿಸತೊಡಗುತ್ತೀರಿ? ಏಕೆಂದರೆ, ಅದು ನೋವು ನಲಿವುಗಳನ್ನು ಉಂಟು ಮಾಡುತ್ತದೆಯೆಂದಲ್ಲವೇ? ನಾವೇಕೆ ನಿಷೇಧಿಸುತ್ತೇವೆ? ಇಲ್ಲವಾದರೆ, ಸಮಸ್ಯೆಗಳು ಉದ್ಭೂತವಾಗುತ್ತವೆಯೆಂಬ ಹೆದರಿಕೆಯಿರುತ್ತದೆ. ಈಗ, ನಮ್ಮಲ್ಲಿ ಇಂಥ ಹೇತು ಪೂರ್ಣ ಗತಿಯು ಇಲ್ಲವೆಂದು ತಿಳಿಯಿರಿ. ಇಂಥ ಹೇತುಪೂರ್ಣ ಬುದ್ಧಿ ಇಲ್ಲವೆಂದು ತಿಳಿಯಿರಿ. ಆಗ ಅಲ್ಲಿ ಆನಂದವಿರುತ್ತದೆ. ಕೇವಲ ಗತಿಶೀಲ ಆನಂದವಿರುತ್ತದೆ. ಇದನ್ನು ನಾವು ಅರಿತುಕೊಂಡರೂ ಸಹ, ನಾವು ನಿಷೇಧಾತ್ಮಕ ಹಾದಿಯಲ್ಲಿ ಹೋಗುತ್ತೇವೆ. ಆದರೆ ಅಲ್ಲಿ ಆನಂದ ಮತ್ತು ಕೃಪೆ ಗಳಿರುತ್ತವೆ. ಅಲ್ಲಿ ಆನಂದ ಮತ್ತು ಕೃಪೆಗಳಿರುತ್ತವೆಂದು ತಿಳಿದರೆ ಸಾಲದು. ನಾವು ಆನಂದ ಮತ್ತು ಕೃಪೆಗಳನ್ನು ತಲುಪುವೆವೆಂಬುದನ್ನು ನಾವು ಒಪ್ಪುತ್ತೇವೆ. ಆದರೆ, ಆ ಆನಂದ ಮತ್ತು ಕೃಪೆಗಳನ್ನು ನಾವು ಬೆಳೆಸಿಕೊಳ್ಳದಿದ್ದರೆ, ಅವು ಹೇತುಗತವಾಗುವುದಿಲ್ಲ. ಮತ್ತು ಸ್ವಂತ ಸ್ವಭಾವವಾಗುತ್ತದೆ. ಯಾವಾಗ ಅದು ನಿಮ್ಮ ಸ್ವಂತ ಸ್ವಭಾವವಾಗುವುದೋ, ಆಗ ಬುದ್ಧಿಯಲ್ಲಿ ಸಂವೇದಿಸುವಂಥ ದ್ವಂದ್ವಗಳು ಇರುವುದಿಲ್ಲ. ಹೀಗೆ ಅದು ನಿಮ್ಮ ಸ್ವಂತ ಗತಿಶೀಲ ಸ್ವಭಾವವಾಗುತ್ತದೆ. ಮತ್ತು ಒಂದು ವೇಳೆ, ನೀವು ನಿಮ್ಮ ಎಲ್ಲ ಭಾವಗಳನ್ನು ಬೋಧಿಯಲ್ಲಿ ರೂಪಾಂತರಿಸಿದರೆ, ಆಗ ಮಾತ್ರ ನೀವು ನಿಮ್ಮಲ್ಲಿ ಸೃಜನಾತ್ಮಕ

ಜೀವನವನ್ನು ಕಂಡುಕೊಳ್ಳುವಿರಿ. ಮತ್ತು ಕೇವಲ ಆ ಸೃಜನಾತ್ಮಕ ಜೀವನವನ್ನು ನೀವು ಮಾನವತೆಯೊಂದಿಗೆ ಶ್ರುತಿಗೊಳಿಸಬಲ್ಲಿರಿ. ನೀವು ಕೇವಲ ನಿಮ್ಮ ಮಾತಿನಿಂದಾಗಲಿ, ಇಲ್ಲವೆ ನಿಮ್ಮ ಪ್ರೇಮದಿಂದಾಗಲಿ ಹೀಗೆ ಮಾಡಬಲ್ಲಿರಿ. ಆದರೆ, ನೀವು ಕೇವಲ ನಿಮ್ಮ ಬುದ್ಧಿಯ ಆಧಾರದಿಂದ ಹೀಗೆ ಮಾಡಲಿಚ್ಛಿಸಿದರೆ, ಆ ದ್ವಂದ್ವಗಳು ನಿಮ್ಮನ್ನು ನಿಷೇಧಿಸುತ್ತವೆ. ಆದ್ದರಿಂದ, ಸಮಷ್ಟಿ–ಪ್ರಜ್ಞೆಯನ್ನು ಮಾನವತೆಯೊಂದಿಗೆ ಆನಂದ ಮತ್ತು ಕೃಪೆಗಳಿಂದೊಡಗೂಡಿದ ನಿಮ್ಮ ಬೋಧಿಯ ಮೂಲಕ, ಪ್ರತಿಷ್ಠಾಪಿಸಲು ಯತ್ನಿಸಿರಿ. ಮೇಲಾಗಿ, ಆ ಆನಂದ ಮತ್ತು ಕೃಪೆಗಳೇ ಅತ್ಯಂತ ಮಹತ್ವದ ವಸ್ತುಗಳಾಗಿವೆ. ಬೋಧಿ ಮತ್ತು ಶಕ್ತಿಗಳ ಪ್ರಥಮ ಸಂಬಂಧವು ಕೇವಲ ಹೃದಯದಲ್ಲಿಯೇ ಆಗುತ್ತದೆ. ನಾನು ಬುದ್ಧಿಯನ್ನೂ ಮತ್ತು ಎಲ್ಲವನ್ನೂ ತ್ಯಜಿಸಿದ ಬಳಿಕ, ಕೇವಲ ಏಕಭಾವವು ಉಳಿಯುವುದು. ಅವಳೇ 'ತಾಯಿ' ಎಂದು ನಾನರಿಯುವೆ.

ನೀವು ಉಪವನಕ್ಕೆ ಹೋದಾಗ, ಪಕ್ಷಿಗಳು ತಮ್ಮ ಮರಿಗಳಿಗೆ ಹೇಗೆ ಗುಟುಕು ಕೊಡುತ್ತವೆಯೆಂಬುದನ್ನು ಕಂಡಿರಬಹುದು. ಅದೇ ರೀತಿ, ಪ್ರಾಣಿಗಳು, ಕ್ರೂರ ಪ್ರಾಣಿಗಳೂ ಸಹ, ಹೇಗೆ ತಮ್ಮ ಮರಿಗಳಿರುವಲ್ಲಿಗೆ ಬಂದು ಆಹಾರ ನೀಡುತ್ತಿವೆಯೆಂಬುದನ್ನೂ ನೀವು ನೋಡಿರಬಹುದು. ಮತ್ತು .ಅವುಗಳು ತಮ್ಮ ಮರಿಗಳನ್ನು ರಕ್ಷಿಸಲು ಆತ್ಮ ಬಲಿದಾನ ಮಾಡಲೂ ಸಹ ಸಿದ್ಧವಾಗಿರುತ್ತವೆ. ಅದರ ಅರ್ಥವೇನು? ಅರ್ಥವಿಷ್ಟೇ. ಜೀವ ವಿಕಾಸ ಕ್ರಮದಲ್ಲಿಯೂ ಸಹ, ಪ್ರಾಣಿಯು ತನ್ನ ಜೀವನದ ಸುರಕ್ಷಿತತೆಯನ್ನು ಬಯಸುತ್ತದೆ; ಎಂಬುದು ಸ್ಪಷ್ಟವಿದೆ. ಆದರೂ ಸಹ, ಪ್ರಾಣಿಗೆ ತನ್ನ ಸಂತಾನ ಕುರಿತು ಎಷ್ಟೊಂದು ಆಸಕ್ತಿಯಿದೆಯೆಂದರೆ, ಅದು ಸರ್ವತ್ಯಾಗಕ್ಕೂ ಸಿದ್ಧವಾಗುತ್ತದೆ. ಅಂದ ಮೇಲೆ, ನಿಮ್ಮಲ್ಲಿಯೂ ಇಂಥ ಸಹಜಾತ ವೃತ್ತಿಯಿದೆ. ಅದಕ್ಕೆ ಭಾವವೆನ್ನುತ್ತಾರೆ. ಮಾನವನು ತನ್ನ ಸಂವೇದನೆಗಳನ್ನು ವಿಕಾಸಪಡಿಸಿಕೊಂಡಿದ್ದಾನೆ. ವಿಕಾಸವಾಗಿಲ್ಲವೇನು ಮತ್ತೆ? ನಾವು ಬರೀ ಬುದ್ಧಿಯ ವಿಕಾಸ ಕುರಿತು ಒತ್ತು ನೀಡುತ್ತೇವೆ. ಮನದ ಬೆಳವಣಿಗೆ, ವಿಚಾರದ ಬೆಳವಣಿಗೆ ಕುರಿತು ಒತ್ತು ನೀಡುತ್ತೇವೆ. ಅಲ್ಲವೇನು? ಆದರೆ, ನೀವೇಕೆ ನಿಮ್ಮ ಭಾವಗಳ ಬೆಳವಣಿಗೆ ಕುರಿತ್ತು ಒತ್ತು ನೀಡುವುದಿಲ್ಲ? ಈಗ ನೀವು ನಿಮ್ಮೊಳಗೇ ಸ್ವತಃ ಶ್ರುತಿಗೂಡಿಸಿ ಅವುಗಳನ್ನು ದಿವ್ಯವಾಗಿಸಬೇಕು. ಆಗ ಮಾತ್ರ ಭಾವಗಳು ಪೂರ್ಣ ವಿಕಾಸಗೊಳ್ಳುತ್ತವೆ. ಯಾವಾಗ ನೀವು ದಿವ್ಯದೊಂದಿಗೆ ಸಂಪೂರ್ಣವಾಗಿ ಶ್ರುತಿಗೊಳಿಸುವಿರೋ, ಆಗ ನೀವು ಪೂರ್ಣರಾದಿರೆಂದು ನಿಮಗನಿಸುತ್ತದೆ. ಏಕೆಂದರೆ

ನಾವೀ ವರ್ತಲವನ್ನು ಪೂರ್ಣಗೊಳಿಸಬೇಕಾಗಿದೆ. ನಿಸರ್ಗವನ್ನು ನಿಂದಿಸಬೇಡಿರಿ. ಇದು ನೈಸರ್ಗಿಕ ವಿಕಾಸವೇನಲ್ಲ. ಏಕೆಂದರೆ, ಇದನ್ನು ನೀವೇ ಮಾಡಿ ಮುಗಿಸಬೇಕಾಗಿದೆ. ನಾನು ಮಾಡಬೇಕಾಗಿದೆ. ಆದ್ದರಿಂದ, ಸಮಸ್ತ ವಿಚಾರಗಳನ್ನು ಕೊಡವಿ ಹಾಕಲು ನಾವು ನಮ್ಮ ಆನಂದ, ಕೃಪೆಗಳನ್ನು ಪ್ರಚಂಡ ಇಚ್ಛೆಯೊಂದಿಗೆ ಸೇರಿಸಬೇಕಾಗಿದೆ. ಮತಧರ್ಮ, ರಾಜನೈತಿಕ, ವರ್ಣ, ಜಾತಿ, ಕೋಮುಗಳಿಗೆ ಸಂಬಂಧಿಸಿದ ಆರಿಮೆ (complex) ಗಳನ್ನು ನಿವಾರಿಸಲು ನಾವು ಸಂಪೂರ್ಣವಾಗಿ ಶ್ರುತಿಗೊಳಿಸಬೇಕು. ಈ ಎಲ್ಲವುಗಳನ್ನೂ ನಾವು ಅಲುಗಾಡಿಸಿ ಹೊರಹಾಕಬೇಕು. ಮತ್ತು ಅಂತಃ ಪ್ರಜ್ಞೆಯೊಂದಿಗೆ ಸಂಪರ್ಕಿಸಬೇಕು. ನಾವು ಹೀಗೆ ಸಂಪರ್ಕಿಸಿದಾಗ ಅಂತಃಪ್ರಜ್ಞೆಯು ಸ್ಫುರಿಸುತ್ತದೆ. ಆಗ ಮಾತ್ರ ನಾವು ಜೀವನವನ್ನು ಆನಂದಿಸಬಹುದು.ಅದುವೇ ನೈಜಸಂಪತ್ತು. ನನಗೆ ಇದುವರೆಗೆ ಪರಿಚಿತವಲ್ಲದ ಈ ಜೀವನವು ನಿಜವಾಗಿಯೂ ಅದ್ಭುತವಾಗಿದೆ. ಈಗ ಈ ಸಂಗತಿಗಳನ್ನು ತಿಳಿಯಲು ನಮಗೆ ಅಭಿರುಚಿಯಿಲ್ಲ.ಏಕೆಂದರೆ, ನಾವು ಬಹಳಷ್ಟು ಹೇತುಪೂರಿತರಾಗಿದ್ದೇವೆ. ಮತ್ತು ನಮಗಿಂದು ಪ್ರಥಮ ಪ್ರಾಶಸ್ತ್ಯದ ವಸ್ತುವೆಂದರೆ, ಹಣ, ಹಣ. ದಿನದ ಇಪ್ಪತ್ತುನಾಲ್ಕು ಘಂಟೆಯೂ ಹಣವೇ ಬೇಕು. ನಾವು ಇಂಥ ಪ್ರಾಪಂಚಿಕ ವಸ್ತುಗಳೊಂದಿಗೆ ಅಂಟಿಕೊಂಡಿದ್ದೇವೆ.

ನಾವು ಸ್ವಾಭಾವಿಕ ಭಾವವನ್ನು ಸಹ ಕಳೆದುಕೊಂಡಿದ್ದೇವೆ. ಹೀಗೆ ನಾವು ನಮ್ಮ ಕುಟುಂಬ–ಜೀವನವನ್ನೂ ಕಳೆದುಕೊಂಡಿದ್ದೇವೆ. ಏಕೆಂದರೆ, ನನಗೆ ಇನ್ನಷ್ಟು ಸೌಕರ್ಯ ಬೇಕಾಗಿದೆ. ನನಗೆ ಒಂದು ಸಾವಿರ ರೂಪಾಯಿ ಸಿಕ್ಕವೆಂದು ತಿಳಿಯಿರಿ. ಅದರಲ್ಲಿಯ ಒಂದಂಶವನ್ನೂ ಸಹ, ನಾನು ನನ್ನ ಅಣ್ಣ–ತಮ್ಮಂದಿರಿಗಾಗಿ ನೆರೆಹೊರೆಯ ಬಡವರಿಗಾಗಿ, ಬಳಸಲು ಸಿದ್ಧನಿಲ್ಲ. ನನಗೇ ಒಂದು ದೊಡ್ಡ ಕಾರು ಬೇಕು; ಒಂದು ದೊಡ್ಡ ಸೌಧ ಬೇಕು. ಹೀಗಾಗಿ ನನ್ನ ತಥಾಕಥಿತ ಬಂಧುಗಳಿಗೆ ಸಹಾಯ ಸಲ್ಲಿಸಲು ನಾನು ಬಯಸುವುದಿಲ್ಲ. ಆದರೆ ನಾನು ನನ್ನ ಸ್ವಂತ ಜೀವನವನ್ನು ಉನ್ನತವಾಗಿಸಲು ಬಯಸುವೆ. ನಮ್ಮಲ್ಲಿ ಎಂಥ ಕನಿಕರದ ಸ್ಥಿತಿ ಉಂಟಾಗಿದೆಯೆಂಬುದನ್ನು ನೋಡಿರಿ. ನಾವು ಎಂಥ ಅಧಃಪತನಕ್ಕಿಳಿದಿದ್ದೇವೆ! ಏನೇ ಆಗಲಿ; ನಾವು ಪಶುಗಳನ್ನು ನೋಡಿ, ಅವುಗಳಿಂದ ಕಲಿಯಬೇಕಾಗಿದೆ. ಪಶುಗಳ ಹಿಂಡುಗಳನ್ನು ನೋಡಿರಿ. ಅವು ಒಟ್ಟಾಗಿ ಹೇಗೆ ಉಪಜೀವಿಸುತ್ತಿವೆ? ಆದರೆ, ನಾವು ಒಟ್ಟಾಗಿ ಉಪಜೀವಿಸಬಯಸುವುದಿಲ್ಲ. ವೈಯಕ್ತಿಕವಾಗಿ, ನಾವು ಜೀವಿಸಬಯಸುತ್ತೇವೆ. ಎಂಥ

ಕನಿಕರದ ಸ್ಥಿತಿಯಿದು? ನಾವು ನಿಜವಾಗಿ ಮಾನವ ಜೀವಿಗಳೇ? ಇಲ್ಲ;ನಾವೆಂದೂ ಅಲ್ಲ. ಪ್ರತಿಯಾಗಿ, ನಾವು ಬುದ್ಧಿವಂತ ಪಾತಕಿಗಳು! ಏಕೆಂದರೆ, ನಾವು ಕೇವಲ ಬುದ್ಧಿ–ಜೀವಿಗಳಾಗುತ್ತಿದ್ದೇವೆ. ಮತ್ತು ನಾವು ನಮ್ಮ ಶುದ್ಧ ಭಾವಗಳನ್ನು ಅಂದರೆ, ಪ್ರೇಮ–ಮಮತೆಗಳನ್ನು ಪೂರ್ಣವಾಗಿ ತೊರೆದು ಬಿಟ್ಟಿದ್ದೇವೆ. ನಮ್ಮಲ್ಲಿ ಮಾನವೀಯ ಸಂಬಂಧಗಳು ಉಳಿದಿಲ್ಲ. ಅಂದ ಮೇಲೆ, ನಾವು ಬೋಧಿಯತ್ತ ಸಾಗುವುದು ಹೇಗೆ? ಯಾವಾಗ ನಾವು ನಮ್ಮ ಬುದ್ಧಿ–ಮನಗಳು ಪೂರ್ಣ ಕದಡುವಂತೆ ಅಲುಗಿಸಲಿಕ್ಕಾಗಿ, ಮತ್ತು ಆಂತರ್ಯದ 'ತಾಯಿ' ಯೊಂದಿಗೆ ಶ್ರುತಿಗೂಡಿಸಲಿಕ್ಕಾಗಿ, ನಮ್ಮ ಭಾವಾತ್ಮಕ ವಿವೇಕವನ್ನು ಪ್ರಸ್ಥಾಪಿಸುವೆವೋ, ಆಗ ಮಾತ್ರ ಇದು ಸಾಧ್ಯವಾಗಬಹುದು. ಜೀವನದ ಪ್ರಪ್ರಥಮ ಗ್ರಹಿಕೆಯೆಂದರೆ, ತಾಯಿಯನ್ನು ಕರೆಯುವುದು. ಯಾವಾಗ ನಾವು ತಥ್ಯವನ್ನು ತಾಯಿಯೆಂದು ಕರೆಯುವೆವೋ, ಆಗ ನಮ್ಮ ಇಡೀ ಉಪಕರಣವೇ ಬದಲಾಗುತ್ತದೆ. ನಮ್ಮ ಭಾವಗಳು–ನಾನು ಅಶುದ್ಧ ಭಾವಗಳಿಂದ ಕರೆಯುವವುಗಳು– ಸುಂದರ ಭಾವಗಳಾಗಿ ಪರಿವರ್ತಿತವಾಗುತ್ತವೆ. ಮತ್ತು ಈ ಭಾವಗಳನ್ನು ನಾವು ನಮ್ಮೊಳಗೇ ಪ್ರತಿಷ್ಠಾಪಿಸಬೇಕು. ಅರ್ಥಾತ್, ತಾಂತ್ರಿಕ ರೀತಿಯಲ್ಲಿ ಹೇಳುವುದಾದರೆ, ಸ್ವಾಂದನಿಕ ಭಾಷೆಯಲ್ಲಿ ಇಲ್ಲವೆ ವೈಜ್ಞಾನಿಕ ರೀತಿಯಲ್ಲಿ ಹೇಳುವುದಾದರೆ, ಹೀಗೆ ವಿವರಿಸಬಹುದು: ಒಂದು ಬಿಂದುವು ಇನ್ನೊಂದಕ್ಕೆ ಹೋಗುವಾಗ, ಅದು ಥಟ್ಟನೆ ಸೆಳೆಯುತ್ತದೆ. ಇನ್ನು ಒಂದು ಬಿಂದುವು ಇನ್ನೊಂದಕ್ಕೆ ಚಲಿಸುತ್ತದೆ. ಮತ್ತು ಈ ಗತಿಯು ವರ್ತುಲವಾಗುತ್ತದೆ. ನೀವೀಗ ಅಂತರ್ಮುಖಿಯಾಗಿದ್ದೀರಿ. ಮತ್ತು ನಿಮ್ಮ ಭಾವಗಳು ಶುದ್ಧವಾಗಿವೆ. ನಿಮ್ಮ ಭಾವ ಮತ್ತು ಬುದ್ಧಿಗಳು ಪರಿಶುದ್ಧವಿರುವಾಗ ನಾನದನ್ನು ಪ್ರಥಮ ಭಾವ ಅಥವಾ ತಾಯಿ ಎನ್ನುತ್ತೇನೆ. ನಾವು ಶಿಶುವಾಗಬೇಕು. ಸಮಷ್ಟಿ ಪ್ರಜ್ಞೆಯಲ್ಲಿ ಶಿಶುವಾಗಿ ತಾಯಿಯನ್ನು ಕರೆಯುತ್ತ ಕ್ರಂದಿಸುತ್ತ ಹೋಗಬೇಕು. ಸೂಚನೆಗಳನ್ನು ನೀಡುತ್ತ, ತಾಯಿಯೊಂದಿಗೆ ಸಂಭಾಷಿಸುತ್ತ ಹೋಗಬೇಕು. ಆದರೆ ಏತಕ್ಕಾಗಿ? ನಿಮ್ಮ ವೈಯಕ್ತಿಕ ಮೋಕ್ಷಕ್ಕಾಗಿ ಅಲ್ಲ. ಆದರೆ, ಇಡೀ ಮಾನವತೆಯ ಆನಂದಕ್ಕಾಗಿ ಬೇಡಬೇಕು. ನೀವು ಅತ್ತುಕರೆದಾಗ, ತಾಯಿಯು ನಿಮ್ಮಲ್ಲಿ ಇಳಿದುಬರುತ್ತಾಳೆ. ಮತ್ತು ನಿಮ್ಮನ್ನು ಸ್ಪರ್ಶಿಸುತ್ತಾಳೆ. ಅವಳು ಸ್ಪರ್ಶಿಸಿದಾಗ, ನಿಮ್ಮೊಳಗೇ ಅದ್ಭುತ ಶ್ರುತಿಯಿರುತ್ತದೆ. ನೀವು ಜ್ಞಾನವನ್ನು ಅರ್ಜಿಸುತ್ತೀರಿ. ನೀವು ಆ ಜ್ಞಾನವನ್ನು ಪಡೆದಾಗ, ನೀವು ಕೇವಲ ಬುದ್ಧಿಯಲ್ಲಿ ರೂಪುಗೊಳ್ಳುತ್ತಿದ್ದೀರಿ. ಆದರೆ, ಅದು ಸಂಪೂರ್ಣವಾಗಿ ನಿರುಪಯೋಗಿಯಾಗಿತ್ತು. ಅದು ನಿಮಗೂ ಉಪಯೋಗವಿಲ್ಲ; ಇತರರಿಗೂ ಉಪಯೋಗಕಾರಿಯಾಗದು. ಈಗಲಾದರೋ, ನಿಮ್ಮ ಬುದ್ಧಿ ಬದಲಾಗಿದೆ. ನೀವು ತಾಯಿಯೆದುರು ಬುದ್ಧಿವಂತರಾಗಿದ್ದೀರಿ. ಆದರೆ ತನ್ನೊಂದಿಗೆ ಬಾಳಬೇಕಾದ ಮಗುವು, ತನ್ನನ್ನು ಪ್ರೀತಿಸಬೇಕಾದ ಮಗುವು, ಹೆಚ್ಚು ಬುದ್ಧಿಪೂರ್ವಕ ವರ್ತಿಸುವುದು ತಾಯಿಗೆ ಹಿಡಿಸದು. ಅವಳು ಯಾವಾಗಲೂ ಮುಗ್ಧ ಮಗುವನ್ನೇ ಪ್ರೀತಿಸುತ್ತಾಳೆ. ಮತ್ತು ಬೋಧಿಯು ನಮಗೆ ಮುಗ್ಧರಾಗಿರಲು ಬೋಧಿಸುತ್ತದೆ. ಇದುವೇ ಅಂದರೆ ಮುಗ್ಧನಾಗಿರುವುದೇ ಬೋಧಿಯ ಪ್ರಥಮ ಪ್ರಮಾಣವಾಗಿದೆ. ಅನಂತರ ನಿಮ್ಮೊಳಗೇ ಇರಲು ತಾಯಿಯು ಹೆಚ್ಚು ಉತ್ತರದಾಯಿಯಾಗುತ್ತಾಳೆ. ಈಗ ದಿವ್ಯ ಮಾತೆಯು, ಪರಿಶುದ್ಧ ಭಾವದಿಂದ, ಶುದ್ಧ ಪ್ರೇಮದಿಂದ, ಸುಂದರ ಪ್ರೀತಿಯಿಂದ, ನಿಮ್ಮನ್ನು ಉತ್ಕರ್ಷವಾಗಿಸಲು ಬಯಸುತ್ತಾಳೆ. ಅವಳು ನಿಮ್ಮ ಕಾಳಜಿ ವಹಿಸುತ್ತಾಳೆ. ನಿಮ್ಮ ಇಡೀ ಜೀವನವು ಅವಳ ಆರೈಕೆಯಲ್ಲಿದೆ. ಮತ್ತು ಇದುವೇ ಬೋಧಿಯ ತರಬೇತಿಯಾಗಿದೆ. ಯಾವಾಗ ನೀವು ನಿಮ್ಮ ಆಂತರ್ಯದಲ್ಲಿ ತರಬೇತಿ ನೀಡುವಿರೋ, ಆಗ ನೀವು ನಿಮ್ಮ ಬುದ್ಧಿಮನಗಳನ್ನು ನಿಮ್ಮೊಳಗಿಂದ ಒದೆದು ಹೊರದೂಡುತ್ತೀರಿ. ಆ ಬಳಿಕ ನೀವು ಆನಂದಪಡೆಯಹತ್ತುವಿರಿ. ಮತ್ತು ಆನಂದ ಹೊಂದಿದ ಮೇಲೆ, ಏನಾಗುತ್ತದೆ? ನೀವು ಕಾರ್ಯಮಾಡಲು ಬಳಸುತ್ತಿದ್ದ, ಇಡೀ ಬಾಹ್ಯ ಉಪಕರಣವನ್ನು ತಾಯಿಯೊಂದಿಗೆ ಬಳಸಬೇಕು. ನೀವು ತಾಯಿಗೆ ಏನನ್ನಾದರೂ ಕೇಳಿದರೆ, ಅವಳು ಅದನ್ನು ಒದಗಿಸುತ್ತಾಳೆ. ಈಗ ವಿಷಯಗತ ಜೀವನದಲ್ಲಿ ನೀವು ಮಹತ್ವದವೆಂದು ಭಾವಿಸಿದ, ಸ್ಥೂಲ ಮೂಲ ಭೂತಗಳು, ನಿಮಗೆ ಇನ್ನೇನೂ ಮಹತ್ವದವೆನಿಸುವುದಿಲ್ಲ.

ರೂಪಾಂತ್ಯಕರಣಕ್ಕಿಂತ ಮುನ್ನ, ಮನಸ್ಸು ಮತ್ತು ಇಂದ್ರಿಯಗಳು ಚೆಲ್ಲಾಪಿಲ್ಲಿಯಾಗಿರುತ್ತಿದ್ದವು. ಮತ್ತು ಏನನ್ನು ಪಡೆಯಬೇಕೆಂಬುದು ಅವುಗಳಿಗೆ ತಿಳಿದಿರಲಿಲ್ಲ. ಈಗ ನೀವು ತಾಯಿಯೊಂದಿಗೆ ಶ್ರುತಿಗೂಡಿಸಿಕೊಂಡಾಗ, ನೀವು ಏನೊಂದನ್ನು ಬೇಡಿದಾಗ, ನಿಮ್ಮ ಭಾವಗಳು ಪೂರ್ತಿಗೊಳ್ಳುತ್ತವೆ. ನೀವು ಒಂದು ಸಲ ನಿಮ್ಮ ಮಾತೆಯನ್ನು ಸ್ಪರ್ಶಿಸಿದರೆ ತೀರಿತು. ನೀವು ಎಂದೆಂದಿಗೂ ಅವಳ ಸ್ಪರ್ಶ ಪಡೆಯುತ್ತೀರಿ. ನೀವು ನಿಮ್ಮ ತಾಯಿಯನ್ನೊಮ್ಮೆ ನೋಡಿದರೆ, ಆ ನೋಟವು ನಿತ್ಯವಾಗಿ ಉಳಿಯುತ್ತದೆ. ನೀವು ತಾಯಿಯೊಂದಿಗೆ ಸಂಭಾಷಿಸಿದರೆ, ಅದು ಕಾಲ, ದೇಶಗಳಿಗೆ ಅತೀತವಾಗಿರುತ್ತದೆ. ಸಂತತವಾಗಿ ಗತಿಗಳೂ ಮತ್ತು ಸಂಭಾಷಣೆಗಳೂ ನಡೆದಿರುತ್ತವೆ.

ಹೀಗಾಗಿ, ನಾನು ನನ್ನ ತಾಯಿಯನ್ನು ತೊರೆಯುವ ಪ್ರಶ್ನೆಯೇ ಇಲ್ಲ. ಏಕೆಂದರೆ ಅವಳು ನಿತ್ಯಾನಂದವಾಗಿದ್ದಾಳೆ. ಅವಳು ನಮ್ಮ ಪ್ರಜ್ಞೆಯೇ ಆಗಿದ್ದಾಳೆ. ಅವಳೇ ನಾವು.

ಕೇವಲ, ಅಮೂರ್ತ ತಾಯಿಯನ್ನು ಪಡೆಯುವುದಷ್ಟೇ ಅಲ್ಲ. ಆದರೆ, ಅವಳನ್ನು ಮೂರ್ತ ರೂಪದಲ್ಲಿ, ಸಾಕಾರ ರೂಪದಲ್ಲಿ, ಕಾಣಲು ಯತ್ನಿಸಬೇಕು. ಇದರಿಂದ ಅಧಿಕ ಸಹಾಯವಾಗುತ್ತದೆ. ಆಗ ನಿಮ್ಮ ಇಂದ್ರಿಯ ಸಂವೇದನೆಗಳು ವಿಕರ್ಷಿಸುವುದಿಲ್ಲ. ಏಕೆಂದರೆ, ಅವುಗಳೂ ಅವಳನ್ನು ಕಾಣಬಲ್ಲವು. ನಿಮ್ಮ ಮನವು ಸಹ ಗ್ರಹಿಸುತ್ತದೆ. ಆಂದಮೇಲೆ ನಿಮ್ಮ ಮನವು ಎಂದೂ ವಿಕರ್ಷಿಸದು. ದಿವ್ಯ ಮಾತೆಯೊಂದಿಗೆ ಸಂಬಂಧವನ್ನು ಪ್ರತಿಷ್ಠಾಪಿಸಲು ಇದೆಷ್ಟು ಸುಲಭ ಮಾರ್ಗವಾಗಿದೆ! ಯಾವಾಗ ನೀವು ಬಾಹ್ಯಕವಾಗಿ ತಾಯಿಯನ್ನು ಸ್ಪರ್ಶಿಸುವಿರೋ, ತಾಯಿಯು ನಮಗೆ ಆಹಾರ ನೀಡುತ್ತಾಳೆ. ಅವಳು ಅರಿವೆ ಅಂಚಡಿ ಕೊಡುತ್ತಾಳೆ. ಅವಳು ಎಲ್ಲವನ್ನೂ ಕೊಡುತ್ತಾಳೆ. ಅದೇ ರೀತಿ, ಅಂತರ್ಮುಖವಾಗಿ ಸಾಗಿ ಹೋದರೆ, ತಾಯಿ ಕೇಳುತ್ತಾಳೆ; "ನೀನು ಏನು ಪಡೆಯಬಯಸುವೆ? ನೀನು ಗ್ರಂಥಗಳಿಂದ ಏನನ್ನು ನೋಡಬಯಸುವೆ? ನೀನು ಏನನ್ನು ಅರಿಯಬಯಸುವೆ?" ತಾಯಿಯು ಸರ್ವವನ್ನೂ ಅನಾಯಾಸವಾಗಿ ದಯಪಾಲಿಸುವಳು. ನಾವು ಇಂಥ ವಸ್ತುಲಾಭ ಪಡೆಯುವಲ್ಲಿ ಎಂಥ ಸುದೈವಿಗಳು! ಆನಂತರ, ತಾಯಿ–ಮಗುವಿನ ದಿವ್ಯ ಸಂಬಂಧವು ಶುರುವಾಗುತ್ತದೆ. ಮತ್ತು ಆ ಬಳಿಕ ನಾವು ನಿಜವಾದ ಜ್ಞಾನವನ್ನು ಪಡೆಯುತ್ತೇವೆ. ಮತ್ತು ಮಾನವನ ಊಹೆಗೂ ನಿಲುಕದ, ಪ್ರಚಂಡ ಅಂತಃಶಕ್ತಿಯನ್ನು ಪಡೆಯುತ್ತೇವೆ. ಮಾನವನು ಪಡೆಯುವ ಇಂಥ ವಸ್ತುವನ್ನು ಅಳತೆ ಮಾಡುವುದಕ್ಕೆ ಅವನಲ್ಲಿ ಯಾವ ಅಳತೆಗೋಲೂ ಇಲ್ಲ.

ತಾಯಿಗಿರುವ ರೂಪಗಳನೇಕ. ನೀವು ಒಂದು ರೂಪಕ್ಕೆ ಸೀಮಿತವಾಗಿ ಅಂಟಿದ್ದೀರಿ. ಮತ್ತು ಅದನ್ನೇ ತಾಯಿಯ ರೂಪವೆನ್ನುತ್ತೀರಿ. ಆದರೆ, ದಿವ್ಯ ಮಾತೆಯನ್ನು ನೋಡಿರಿ. ಅವಳು ಅನೇಕ ವಸ್ತುಗಳೊಂದಿಗೆ ಇರುವ ಪ್ರಚಂಡ ಶಕ್ತಿಯಾಗಿದ್ದಾಳೆ. ಅವಳು ಲೀಲೆಯಾಡುತ್ತಾಳೆ. ಮತ್ತು ನೀನು ಒಂದು ವಿಶೇಷ ರೂಪ ಹೊತ್ತ ಎಳೆಯ ಮಗುವಷ್ಟೇ. ಆದರೆ, ಯಾವಾಗ ನೀನು ದಿವ್ಯ–ಮಗುವಾಗುವಿಯೋ, ಆಗ ಅವಳು ಅನಂತ ರೂಪಧಾರಿಯೂ ವಿಶಾಲ-ವ್ಯಾಪ್ತಳೂ ಆಗುವುದರಿಂದ, ನೀನು ಸಹ ವ್ಯಾಪ್ತನೂ, ಅನಂತ ರೂಪನೂ ಆಗುವೆ. ಅಲ್ಲಿ ಅನಂತ ಆಧ್ಯಾತ್ಮಿಕ ದೇಹಗಳಿರುತ್ತವೆ. ಆ ಎಲ್ಲ ದೇಹ

ಗಳೊಂದಿಗೆ ಸಂಪರ್ಕ ಬೆಳೆಸು. ಅಂದರೆ, ನೀನು ಪ್ರತಿಯೊಂದು ಪ್ರಕಾರದ ಪರಿಮಳವನ್ನು ಸವಿಯುವೆ. ಅನಂತರ, ನಿಮ್ಮ ಬುದ್ಧಿಯು ಅಲ್ಲಿ ಏನೂ ಆಡದು. ಇಲ್ಲವೆ ಏನನ್ನೂ ಪ್ರಶ್ನಿಸದು. ಏಕೆಂದರೆ, ನೀವು ಈಗಾಗಲೇ ಅದನು ಒದ್ದೋಡಿಸಿರುವಿರಿ. ನೀವು ಏತನ್ಮಧ್ಯೆ, ಕೆಲವು ಬೌದ್ಧಿಕ ವಿಷಯಗಳನ್ನು ಸೇರಿಸಿದರೆ, ಆಗ ನಿಮ್ಮ ಬೋಧಿಯನ್ನೇ ಕಳೆದುಕೊಳ್ಳುವಿರಿ. ಏಕೆಂದರೆ, ನೀವು ಈಗಾಗಲೇ ನಿಮ್ಮ ಬುದ್ಧಿ, ತರ್ಕಬದ್ಧತೆ, ತಿಳಿಯುವ ರೀತಿ, ಸ್ವಂತದ ಸಮಸ್ಯೆ, ಮನಸ್ಸು ಮತ್ತು ನೋವು–ನಲಿವುಗಳನ್ನು ಒದ್ದೋಡಿಸಿದ್ದೀರಿ. ನಮ್ಮ ಬೋಧಿಯಲ್ಲಿ ಸ್ವಾಭಾವಿಕವಾಗಿ ಲಯಿಸುವ ಇವುಗಳನ್ನು ನಾವು ಮೂರ್ತಗೊಳಿಸುತ್ತ ಹೋಗ ಬಾರದು.

ಇಷ್ಟಾದ ಮೇಲೆ, ಮುಂದೆ ಸಮಸ್ಯೆಗಳಿಲ್ಲ. ಬುದ್ಧಿಯ ಸಮಸ್ಯೆಯೂ ಇಲ್ಲ. ಈ ವಿಷಯಗಳನ್ನು ಕುರಿತು ಬಹಳಷ್ಟು ವಿಶ್ಲೇಷಣೆಯು ಬೇಕಾಗಿಲ್ಲ. ನೀವು ಈ ರೀತಿ ಮುನ್ನಡೆದರೆ, ಅಲ್ಲಿ ಆನಂದ ಕೃಪೆಗಳ ತ್ರಿಕೋಣವೇರ್ಪಡುತ್ತದೆ. ಸತ್–ಚಿತ್–ಆನಂದವು ಅಲ್ಲಿ ಇದೆ. ಯಾವಾಗ ನಾವು ಈ ತ್ರಿಕೋಣವನ್ನು ಸ್ಪರ್ಶಿಸುವೆವೋ, ಆಗ ಅಂತರ್ಯದಲ್ಲಿ ಪ್ರಚಂಡ ಅತಿಮಾನಸವು ನೆಲೆಸುತ್ತದೆ. ಆಗ ನಿಮ್ಮ ಪ್ರಜ್ಞೆಯು ಬರೀ ಪ್ರಜ್ಞೆಯಾಗಿ ಉಳಿಯುವುದಿಲ್ಲ. ನಿಮ್ಮ ದೇಹವನ್ನು ಜಡವೆಂದು ಗ್ರಹಿಸಲಾರೆವು. ನಿಮ್ಮ ಆಂತರಿಕ ಬೋಧಿಯೂ ಸಹ, ಆನಂದದ ಮೂಲಕ ಚೈತನ್ಯದ ಮೂಲಕ ಸಾಗುತ್ತದೆ. ನಿಮ್ಮ ದೇಹವು ಚೈತನ್ಯವಾಗುತ್ತದೆ. ದಿವ್ಯ ಮಾತೆಯ ದೇಹವೂ ಚೈತನ್ಯವೇ ಆಗಿದೆ. ನಿಮ್ಮ ದೇಹವು ಆನಂದದಿಂದ ಆಗಿದೆ. ಅವಳ ದೇಹವೂ ಸಹ ಆನಂದದಿಂದಾಗಿದೆ. ನೀವೂ ಆನಂದವೇ; ಅವಳೂ ಆನಂದ. ಹೀಗಾಗಿ ಸಂಪರ್ಕವು ಸಮಾನ ಸ್ತರದಲ್ಲಿ ನಡೆಯುತ್ತದೆ. ಮತ್ತು ಸಮಾನ ಮಟ್ಟದ ಸಂಪರ್ಕವೇ ಅತ್ಯಂತ ಶ್ರೇಷ್ಠ ಸಂಪರ್ಕವಾಗಿದೆ. ಅಲ್ಲಿ ವಿರೋಧಾಭಾಸಗಳಿಲ್ಲ. ಅಲ್ಲಿ ವಿಭಿನ್ನ ಶ್ರೇಣಿಗಳಿಲ್ಲ; ಭಿನ್ನ–ಭೇದಗಳಿಲ್ಲ. ನೀವು, ದುಂಬಿಯು ಪುಷ್ಪವನ್ನು ಒಳಸೇರುವಂತೆ, ಇಂಥ ಪುಷ್ಪವನ್ನು ಸೇರುತ್ತೀರಿ. ಅಲ್ಲಿ ನೀವು ಕೃಪೆಯನ್ನು ಸವಿಯುತ್ತೀರಿ. ಸರ್ವವನ್ನು ಸವಿಯುತ್ತೀರಿ.

ಯಾವಾಗ ನೀವು ಸಮಷ್ಟಿ ಪ್ರಜ್ಞೆಯಲ್ಲಿ ಇರುವಿರೋ, ಆಗ. ನಿಮ್ಮೊಳಗೆ ಭಿನ್ನ–ಭೇದಗಳಿರುವುದಿಲ್ಲ. ನೀವು ಆಂತರ್ಯಕ್ಕಿಳಿದಾಗಲೆಲ್ಲ ನಿಮ್ಮ ತಾಯಿಯನ್ನು ದರ್ಶಿಸುತ್ತೀರಿ. ಮತ್ತು ನೀವು ಅಲ್ಲಿ ಇರುತ್ತೀರಿ ಮತ್ತು ಕ್ರಮೇಣ

ನೀವೇ ಬೋಧಿಯುತರಾಗಿ ಎಂಥ ದೇಹಿಗಳಾಗುವಿರೆಂದರೇ ನೀವೆ, ಸ್ವಯಂ ತಾಯಿಯಾಗುತ್ತೀರಿ. ಮತ್ತು ದಿವ್ಯ ಪ್ರಜ್ಞೆಯು ಮಗುವಾಗುತ್ತದೆ. ದಿವ್ಯ ಪ್ರಜ್ಞೆಯು ಮಗುವಾದ ಮೇಲೆ, ನೀವು ಸಮಷ್ಟಿ ವಿಶ್ವದೊಂದಿಗೆ ಇರುತ್ತೀರಿ ಮತ್ತು ನೀವು ಆನಂದ ಪಡೆಯುತ್ತೀರಿ. ಒಂದೆಡೆಗೆ, ನೀವು ಉಪಕರಣವಾಗುತ್ತೀರಿ. ಸರ್ವವನ್ನೂ ಸ್ವೀಕರಿಸುತ್ತೀರಿ. ಇನ್ನೊಂದೆಡೆಗೆ ನೀವು ಪ್ರಜ್ಞೆಯಾಗುತ್ತೀರಿ. ದಿವ್ಯ ಮಾತೆಯು ನಿಮ್ಮ ಹೃದಯದಲ್ಲಿ ನೆಲೆಸುತ್ತಾಳೆ. ನೀವು ದಿವ್ಯ ಮಾತೆಯಾಗುತ್ತೀರಿ. ಯಾರಾದರೂ ಅವಳನ್ನು ನೋಡಬಯಸಿದರೆ, ಅವಳು ನಿನ್ನತ್ತ ನೋಡುತ್ತಾಳೆ. ಏಕೆಂದರೆ, ನೀನು ಪ್ರತಿಯೋರ್ವನಿಗಾಗಿ ನಿನ್ನನ್ನು ಮುಡಿಪಾಗಿಟ್ಟಿರುವೆ. ನನ್ನ ಗುರುಗಳು ಹೀಗೆ ಹೇಳುತ್ತಿದ್ದರು: "ಪ್ರತಿಯೊಬ್ಬರೂ ನನ್ನನ್ನು ಗೋಪಿನಾಥ ಎಂದು ಕರೆಯುತ್ತಾರೆ. ಆದರೆ ನಾನು ಯಾರೆಂಬುದನ್ನು ಕಾಣಲು ಯಾರೂ ಸಿದ್ಧರಿಲ್ಲ." ಅವರು ಪೂರ್ಣವಾಗಿ ದಿವ್ಯ ಮಾತೆಯೇ ಆಗಿದ್ದಾರೆ.

ನೀವು ತಾಯಿಯೊಂದಿಗೆ ಸಂಪರ್ಕ ಹೊಂದಿದಾಗ, ಮಗುವಾಗುತ್ತೀರಿ. ಆ ಬಳಿಕ, ನೀವೇ ತಾಯಿಯಾಗುತ್ತೀರಿ. ಮತ್ತು ಕೊನೆಗೆ ತಾಯಿ, ಮಗು ಒಂದಾಗುತ್ತಾರೆ. ಇದನ್ನೇ, ಚರಮ ಅಪ್ಪುಗೆ ಎನ್ನುತ್ತಾರೆ. ಆಗ ಕೇವಲ ಗತಿಶೀಲ ಪ್ರಜ್ಞೆಯೊಂದೇ ಉಳಿಯುತ್ತದೆ. ಅದು ಆಗ ಮಗುವೂ ಅಲ್ಲ; ತಾಯಿಯೂ ಅಲ್ಲ. ಇಲ್ಲವೆ ಬೇರೇನೂ ಅಲ್ಲ. ಈಗಲೂ ಸಹ, ಒಂದೆಡೆಗೆ ಗತಿಶೀಲ ಪ್ರಜ್ವಲತೆಯು ಸಮಷ್ಟಿ ಪ್ರಜ್ಞೆಯೊಂದಿಗೆ ಒಂದಾಗಿದೆ ಮತ್ತು ಇನ್ನೊಂದೆಡೆಗೆ, ಮಾನವೀಯ ಪ್ರಜ್ಞೆಯೊಡನೆ ಒಂದಾಗಿದೆ. ಮತ್ತು ಎರಡೂ ಕ್ರಿಯಾಶೀಲವಾಗಿವೆ.

ಹೀಗೆ ದಿವ್ಯ ಮಾತೆಯು ನಮ್ಮೆಡೆಗೆ ಬಂದಿದ್ದಾಳೆ. ಅವಳು ನಮ್ಮಲ್ಲಿಗೆ ಐತಂದಿದ್ದಾಳೆ. ಅವಳು ತನ್ನ ಸ್ಥಾನವನ್ನು ತ್ಯಜಿಸಿದ್ದಾಳೆ. ಏಕೆಂದರೆ, ಅವಳು ಒಂದೆಡೆಗೆ ತಾನು, ಇನ್ನೊಂದೆಡೆಗೆ ಮಗುವಾಗಿ ನೀವು ಇರುವುದನ್ನು ಬಯಸಳು. ಆದ್ದರಿಂದ, ಅವಳು ನಮ್ಮನ್ನು ಘಟ್ಟಿಯಾಗಿ, ಅಪ್ಪಿಕೊಂಡು, ನಮಗೆ ನಿತ್ಯ ಚುಂಬನ ಕೊಡಬಯಸುತ್ತಾಳೆ. ಮತ್ತು ಈ ನಿತ್ಯ ಚುಂಬನವನ್ನೇ ದಿವ್ಯ ಕೃಪೆ ಎನ್ನುತ್ತಾರೆ.

ಇನ್ನು ಆ ಮಗು, ಆ ಸಮಷ್ಟಿ ಪ್ರಜ್ಞೆಯು, ಎಂಥ ಉಢಾಳ ಮಗನಾಗಿರುವನೆಂದರೆ, ತಾನು ಶ್ರುತಿಗೊಳ್ಳಬೇಕೆಂಬುದನ್ನು ಅರಿತುಕೊಳ್ಳಲು ಬಯಸನು. ಅವನು ಹೀಗೆ ಹೇಳುತ್ತಾನೆ: ನಾನು ಒಬ್ಬನೇ ಇಲ್ಲ. ಆದರೆ ನನ್ನ ಇಡೀ

ಪ್ರಜ್ಞೆಯು ಸಮಷ್ಟಿಯಾಗಿ ಗ್ರಹೀತವಾಗಿದೆ. ಅಥವಾ ಸಂಪೂರ್ಣವಾಗಿ ಒಂದಾಗಿದೆ. ಆದ್ದರಿಂದ, ನಾನು ಎಲ್ಲರಿಗೂ ಅನ್ನ ಒದಗಿಸಬೇಕು.ಆದ್ದರಿಂದ, ಇನ್ನಷ್ಟು ಬೇಕಾಗುತ್ತದೆ. ಒಂದು ವೇಳೆ, ತಾಯಿಯು ಈ ಬೇಡಿಕೆಯನ್ನು ಪೂರೈಸದಿದ್ದರೆ, ನನ್ನ ತಾಯಿಯು ತನ್ನ ಮಕ್ಕಳನ್ನು ಉಣಿಸದಿದ್ದರೆ, ನಾನು ಅವಳನ್ನು ಬಿಡಲೊಲ್ಲೆ; ಅವಳೊಂದಿಗೆ ಜಗಳ ಕಾಯುತ್ತೇನೆ. ಅವಳು ಎಲ್ಲವನ್ನೂ ಕೊಡುವಂತೆ ಮಾಡುತ್ತೇನೆ. ಇದುವೇ ಪೂರ್ಣಯೋಗ ಇಲ್ಲವೆ ಅಖಂಡ ಮಹಾಯೋಗದ ಚರಮ–ವಸ್ತುವಾಗಿದೆ.

೧೨
ಉಪಾಸನೆಯ ತತ್ತ್ವಗಳು

ವಿಶೇಷವಾಗಿ ತಂತ್ರ ಸಂಪ್ರದಾಯವು ತುಂಬಾ ವೈಜ್ಞಾನಿಕವಾಗಿದೆ. ನಾವು ಏಕೆ ಉಪಾಸಿಸ ಬೇಕು? ಹೇಗೆ ಉಪಾಸಿಸಬೇಕು? ಏನನ್ನು ಉಪಾಸಿಸಬೇಕು? ಎಂಬದನ್ನೆಲ್ಲ ಸ್ಪಷ್ಟ ಪಡಿಸುತ್ತದೆ. ತಂತ್ರ ಮತವನ್ನು ಹೊರತು ಪಡಿಸಿ ಬೇರಾವ ಮತಧರ್ಮವೂ ಇವೆಲ್ಲವುಗಳನ್ನು ಸ್ಪಷ್ಟಪಡಿಸಲಾರದು. ಕೇವಲ ಬುರುಗಿನಂಥ ಮತ ಧಾರ್ಮಿಕ ಜ್ಞಾನದೊಂದಿಗೆ ನಾವು ಬಹುದೂರ ಹೋಗ ಲಾರೆವು. ಇವೆಲ್ಲ ವಿಷಯಗಳನ್ನು ಕೇವಲ ವೈಜ್ಞಾನಿಕ ಧರ್ಮಮತವು ಮಾತ್ರ ಸ್ಪಷ್ಟಗೊಳಿಸಬಲ್ಲದೆ ಭಾವ ಜಡಾತ್ಮಿಕ ಧರ್ಮಮತಗಳಿಂದ ಅದು ಸಾಧ್ಯ ವಾಗದು. ಇನ್ನು ಕೇವಲ ತಾಂತ್ರಿಕ ವಿಜ್ಞಾನವೊಂದೇ ಈ ವಿಷಯಗಳನ್ನು ಸ್ಪಷ್ಟಗೊಳಿಸಬಲ್ಲದು.

ಮೊದಲು ನಮ್ಮ ಆತ್ಮವು ಗತಿಶೀಲ ಶಕ್ತಿಯನ್ನು ಹೊಂದಿದೆಯೆಂಬು ದನ್ನು ಅರಿತುಕೊಳ್ಳಬೇಕು. ಅದು ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾ ಶಕ್ತಿಗಳನ್ನು ತನ್ನ ಲಕ್ಷಣಗಳನ್ನಾಗಿ ಹೊಂದಿದೆ. ಹೀಗೆ, ಇದು ನಮ್ಮ ಆತ್ಮದ ಸ್ವಭಾವ.

ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳನ್ನು, ಸಾಂಕೇತಿಕವಾಗಿ ಪ್ರಜ್ಞೆಯು ಕೇಂದ್ರವಾಗಿರುವ ತ್ರಿಕೋಣದ ತ್ರಿಭುಜಗಳನ್ನು ಪ್ರತಿನಿಧಿಸುತ್ತವೆ. ಪ್ರಜ್ಞೆಯೇ ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳಾಗಿ ಅಭಿವ್ಯಕ್ತವಾಗುತ್ತದೆ. ಅಜ್ಞಾನ ನಿಮಿತ್ತ, ನಾವು ಇದು ನಮ್ಮ ತಿಳಿವಳಿಕೆ, ಇಚ್ಛೆ ಮತ್ತು ಕ್ರಿಯೆಗಳೆಂದು ಭಾವಿಸುತ್ತೇವೆ.

ಸಾಧಾರಣವಾಗಿ ಜನರು, "ಏನೋಪ್ಪ! ನಾನು ಪೂಜಿಸುತ್ತೇನೆ. ಅಷ್ಟೇ." ಎನ್ನುತ್ತಾರೆ. ಅವರು ತಮ್ಮ ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳಿಂದ ಪೂಜಿಸು

ತ್ತಾರೆ. ಇಂಥ ಪೂಜೆಯಿಂದೂ ಫಲಪ್ರದವಾಗದು. ಈ ದಿಶೆಯಲ್ಲಿ ಯಾರಾ ದರೂ ತಿಳಿಸಿ ಹೇಳಬೇಕಾಗುತ್ತದೆ. ಆದ್ದರಿಂದ, ನಮ್ಮ ಭಾರತೀಯ ಸಂಪ್ರ ದಾಯದಲ್ಲಿ ಗುರುವಿನ ಪಾತ್ರವನ್ನು ಒತ್ತಿ ಹೇಳಲಾಗಿದೆ. ಏಕೆಂದರೆ, ಅವನು ಈ ತ್ರಿಕೋಣವನ್ನು ತಿಳಿದಿದ್ದಾನೆ. ಮತ್ತು ನಿಮಗೆ ಆ ಕುರಿತು ಪರಿಚಯಿಸು ತ್ತಾನೆ. ಹೀಗೆ ಗುರುವು ತುಂಬಾ ಅನಿವಾರ್ಯ.

ಯಾವಾಗಲೂ ಉಪಾಸಕ ಮತ್ತು ಉಪಾಸ್ಯ, ಪೂಜಕ ಮತ್ತು ಪೂಜ್ಯ ರಿಬ್ಬರೂ ಒಂದೇ ಮಟ್ಟದವರಿರಲೇಬೇಕು. ಅರ್ಥಾತ್ ನೀವು ಉಪಾಸಿಸಿದರೆ, (ನೀವು ದೇವರೆನ್ನುವಿರಷ್ಟೇ) ನಿಮ್ಮ ಪ್ರಜ್ಞೆ ಮತ್ತು ಉಪಾಸ್ಯಗಳಿರಡೂ ಒಂದೇ ಮಟ್ಟದಲ್ಲಿರಬೇಕು. ಆಗ ಮಾತ್ರ ಉಪಾಸನೆಯು ಸಾಧ್ಯವಾಗುತ್ತದೆ. ಈಗ, ನೀವು ನಿಮ್ಮ ಗುರುವನ್ನು ಉಪಾಸಿಸುವಿರೆಂದು ತಿಳಿಯಿರಿ. ನೀವು ನಿಮ್ಮ ಗುರುವನ್ನು ಕಾಣಬೇಕು. ಆಗ ಮಾತ್ರ ಉಪಾಸಿಸಬಲ್ಲಿರಿ. ಈಗ ಅವನು ಆಕಾಶದಲ್ಲಿ ಇರುವನೆಂದೂ ನೀವು ಇಲ್ಲಿಯೇ ಇರುವಿರೆಂದೂ ತಿಳಿಯಿರಿ. ನೀವು ಅವನ ಚರಣ–ಸ್ಪರ್ಶ ಮಾಡಬಲ್ಲಿರಾ? ಆಗದು. ಏಕೆಂದರೆ ಅವನು ಗಗನದಲ್ಲಿ ಇದ್ದಾನೆ. ನೀವಾದರೋ ನಿಮ್ಮ ಸ್ತರದಲ್ಲಿ ಇದ್ದೀರಿ. ನೀವೆಂತು ನಿಮ್ಮ ಗುರುವಿನ ಪಾದವನ್ನು ಸ್ಪರ್ಶಿಸಬಲ್ಲಿರಿ? ಅದು ಅಸಾಧ್ಯ ಕೋಟಿಯ ಮಾತು. ಅಂದ ಮೇಲೆ,ಉಪಾಸನೆಯು ಸಮಾನ ಮಟ್ಟದಲ್ಲಿ ಮಾತ್ರ ಸಾಧ್ಯ.

ಉಪಾಸನೆಯ ಮೂಲ ತತ್ತ್ವವೆಂದರೆ, ಉಪಾಸಕನು ಅಂದರೆ ನೀವು, ಉಪಾಸ್ಯ ಅಂದರೆ ದೇವತೆಯೆಂದು ಕರೆಯುವುದು, ಸಮಾನ ಮಟ್ಟದಲ್ಲಿ ಇರಬೇಕು. ಆಗ ಮಾತ್ರ ಉಪಾಸನೆ ಇಲ್ಲವೆ ಪೂಜೆಯು ನಡೆಯುತ್ತದೆ.

ಇನ್ನೂ ಒಂದು ವಿಷಯವಿದೆ. ನೀವು ಯಾರನ್ನಾದರೂ ಉಪಾಸಿಸ ಬೇಕಾದರೆ, ನೀವೂ ಅವರಲ್ಲಿ ಕೆಲವಾದರೂ ಗುಣಗಳನ್ನು ಹೊಂದಿರಬೇಕಾಗು ತ್ತದೆ. ಶ್ವಾನವೊಂದು ಮಾನವನನ್ನು ಉಪಾಸಿಸದೆಂಬುದಂತೂ ಸುಸ್ಪಷ್ಟವಾಗು ತ್ತದೆ. ಏಕೆಂದರೆ, ನಾಯಿಯು ಅತಿ ಹೆಚ್ಚೆಂದರೆ ಸೇವಕನಾಗಬಹುದೇ ಹೊರತು ಸರಿಸಮಾನನಾಗದು. ಏಕೆಂದರೆ, ಅದರ ವಿಕಾಸವು ಮಾನವನಿಗೆ ಸರಿಸಮ ವಾಗಿ ಆಗಿಲ್ಲ. ಅದೇ ಮೇರೆಗೆ, ನೀವು ಒಂದು ವೇಳೆ, ಅತ್ಯಂತ ಗತಿ ಶೀಲ ವಸ್ತುವನ್ನು ಉಪಾಸಿಸಲು ಬಯಸಿದರೆ, ನಿಮ್ಮಲ್ಲಿ ಕೊಂಚವಾದರೂ ಗತಿಶೀಲ ಸತ್ತೆ ಇರಲೇಬೇಕಾಗುತ್ತದೆ. ಆಗ ಮಾತ್ರ ನೀವು ಉಪಾಸಿಸಬಲ್ಲಿರಿ. ನಿಮ್ಮಲ್ಲಿ ಗತಿಶೀಲತೆಯ ಅಂಶವೇ ಇರದಿದ್ದರೆ, ನೀವೆಂತು ಗತಿಶೀಲರಾಗ ಬಲ್ಲಿರಿ? ಹೀಗೆ ಇದು ಎರಡನೆಯ ತತ್ವ. ಒಂದುವೇಳೆ, ನೀವು ದೇವತೆಯನ್ನು

ಉಪಾಸಿಸುವುದಿದ್ದರೆ, ನಿಮ್ಮಲ್ಲಿ ಆ ದೇವತೆಯ ಕೆಲವಾದರೂ ಗುಣಗಳಿರಬೇಕು. ಆಗ ಮಾತ್ರ ನೀವು ಉಪಾಸಿಸಬಲ್ಲಿರಿ.

ನಾವೇಕೆ ಉಪಾಸಿಸಬೇಕು? ಉಪಾಸ್ಯ ದೇವತೆಯೊಂದಿಗೆ ಏಕೀಭವಿಸಲು ಮಾತ್ರ. ಉಪಾಸ್ಯ ದೇವತೆಯು ಎಂದೆಂದಿಗೂ ಉಚ್ಚವಾಗಿಯೇ ಇರಬೇಕು; ಮತ್ತು ನೀವು ಎಂದೆಂದಿಗೂ ನೀಚವಾಗಿರಬೇಕು; ಎಂಬುದಲ್ಲ. ತಾತ್ಪರ್ಯವೇನೆಂದರೆ,ನೀವು ಉಪಾಸ್ಯ ದೇವತೆಯ ಸಮಸ್ತ ಗುಣಗಳನ್ನೂ ಪಡೆಯಬೇಕು. ಆಗ ಮಾತ್ರ ಅದು ಉಪಾಸನೆ ಎನಿಸೀತು. ಇದುವೇ ತಾಂತ್ರಿಕ ಉಪಾಸನೆಯ ರಹಸ್ಯ.

ದೇವತೆಯೊಂದಿಗೆ ಸಂಪರ್ಕಿಸಲು ಒಂದು ಮಾಧ್ಯಮವಿದೆ. ಅದುವೇ ಮಂತ್ರ. ಮಂತ್ರವು ನಿಮ್ಮೊಡನೇ ಇರುವ, ಸಂಪರ್ಕಿಸುವ ಮಾಧ್ಯಮವಾಗಿದೆ. ಇದರ ಮೂಲಕ ನೀವು ಸಂಪರ್ಕಿಸುತ್ತೀರಿ. ಅರ್ಥಾತ್ ಯಾವಾಗ ನೀವು ಮಂತ್ರ ದೀಕ್ಷೆ ಪಡೆಯುವಿರೋ, ಆಗಲೇ ನೀವು ದೇವತೆಯ ಗುಣಗಳನ್ನು ಪಡೆಯುತ್ತೀರಿ. ಮಂತ್ರವಿಲ್ಲದೆ ನೀವು ಉಪಾಸಿಸಲಾರಿರಿ. ಮಂತ್ರವಿಲ್ಲದೆ ನೀವು ಏನನ್ನು ಉಪಾಸಿಸಬಲ್ಲಿರಿ? ಏನನ್ನೂ ಇಲ್ಲ. ಮಂತ್ರವೆಂದರೆ, ನಿಮ್ಮೊಡನೆ ಈಗಾಗಲೇ ಇರುವ ದೇವತೆಯ ಒಂದು ಗುಣ. ಈ ಗುಣದ ಮೂಲಕ, ಅದನ್ನು ನೀವು ಯಾವಾಗ ವಿಸ್ತರಿಸಿ, ವೃದ್ಧಿಸುವಿರೋ, ಆಗ ಆಂತರ್ಯದಲ್ಲಿ ದೇವತೆಯ ರೂಪವನ್ನು ದರ್ಶಿಸುವಿರಿ. ದೇವತೆಯೊಂದಿಗೆ ಸಂಪರ್ಕಿಸಲು ಉಪಯೋಗಿಸಬಹುದಾದ ಏಕಮೇವ ಅಂಶವೇ ಮಂತ್ರವಾಗಿದೆ. ಹೀಗೆ, ನೀವು ನಿಮ್ಮೊಳಗೇ ಯಾವಾಗ ಮಂತ್ರ ಚೈತನ್ಯವನ್ನು ಹೊಂದುವಿರೋ, ಆಗ ಮಾತ್ರ ನೀವು ಸಾಧಕರಾಗುತ್ತೀರೆಂಬುದೇ ಜೀವನದ ಪ್ರಥಮ ತತ್ತ್ವವಾಗಿದೆ. ಆದರಿಂದ ಏನಾಗುತ್ತದೆ? ಆ ಮಂತ್ರವು ನಿಮ್ಮಲ್ಲಿ ಒಂದು ದೇಹವನ್ನು ಸೃಷ್ಟಿಸುತ್ತದೆ. ಅದನ್ನು ಮಂತ್ರ ಶರೀರವೆನ್ನುತ್ತಾರೆ. ನೀವು ಪುನಃ ಪುನಃ ಮಂತ್ರವನ್ನು ಪುರಶ್ಚರಣ ಮಾಡಿದರೆ, ಅದು ನಿಮ್ಮಲ್ಲಿ ಒಂದು ವಿಶೇಷ ಶರೀರವನ್ನು ಸೃಜಿಸುತ್ತದೆ. ಅದನ್ನೇ ಮಂತ್ರ ಶರೀರವೆನ್ನುತ್ತಾರೆ.

ಶರೀರವೆಂದರೇನು? ಶರೀರದ ಗ್ರಹಿಕೆ ಯಾವುದು? ಯಾವುದರೊಂದಿಗೆ ನಿಮ್ಮ ಪ್ರಜ್ಞೆಯು ಒಂದಾಗುವುದೋ ಅದನ್ನೇ ಶರೀರವೆನ್ನುತ್ತಾರೆ. ನೀವು ಇದನ್ನು ಸ್ಥೂಲಶರೀರವೆನ್ನುತ್ತೀರಿ. ಏಕೆಂದರೆ,ನಿಮ್ಮ ಪ್ರಜ್ಞೆಯು ಇದರೊಂದಿಗೆ ಒಂದಾಗಿದೆ. "ಈ ಶರೀರವೇ ನಾನು." ಎಂದು ನೀವು ಹೇಳುತ್ತೀರಿ. ಹೀಗೆ ಅದು ನಿಮ್ಮ ಗ್ರಹಿಕೆಯ ಮೇರೆಗೆ ಶರೀರವಾಗಿದೆ. ಇದೇ ರೀತಿ, ಅನೇಕ ಶರೀರಗಳಿವೆ.

ಆದರೆ ನಿಮ್ಮ ಅಜ್ಞಾನದಿಂದ, ನೀವು ಈ ಸ್ಥೂಲ ದೇಹವನ್ನಷ್ಟೇ ಏಕಮೇವ ದೇಹವೆಂದು ಕಂಡಿದ್ದೀರಿ. ಆದರೆ ನಿಜವಾಗಿ ಇನ್ನೂ ಅನೇಕ ಶರೀರಗಳಿವೆ. ಈ ಸ್ಥೂಲ ದೇಹವಿರುವಂತೆಯೇ, ಸೂಕ್ಷ್ಮ ದೇಹವಿದೆ. ಕಾರಣ ದೇಹವೂ ಇದೆ. ಮಾನಸಿಕ ದೇಹಗಳೂ ಇವೆ. ನೀವು ಸ್ವಪ್ನದಲ್ಲಿ ಎಲ್ಲಿಗಾದರೂ ಹೋದರೆ, ಅಲ್ಲಿ ಯಾರನ್ನಾದರೂ ಭೆಟ್ಟಿಯಾಗುವಿರಿ. ಆ ಸ್ವಪ್ನದಲ್ಲಿ ಮಾನಸ ದೇಹವು ಚಲಿಸುತ್ತದೆ.

ನಿಮ್ಮ ಅಜ್ಞಾನದ ನಿಮಿತ್ತ, "ನನಗೆ ಇದೊಂದೇ ದೇಹವಿದೆ," ಎಂದು ನೀವು ತಿಳಿಯುತ್ತೀರಿ. ಆದರೆ ನೀವು ಅನೇಕ ಶರೀರಗಳನ್ನು ಪಡೆದಿದ್ದೀರಿ. ಒಂದು ವೇಳೆ, ನೀವು ಪ್ರಬಲ ದೇಹ ಹೊಂದಿದ್ದರೆ, ನೀವು ಬೇಕಾದಾಗ ಬ್ರಹ್ಮಾನಂದನ ಕಡೆಗೆ ಹೋಗಬಹುದು. ಮತ್ತು ಬ್ರಹ್ಮಾನಂದನು ಏನು ಮಾಡುತ್ತಿದ್ದಾನೆ? ಎಂಬುದನ್ನು ಕೂಡಲೇ ಅನುಭವಿಸಬಹುದು. ಏಕೆಂದರೆ, ನೀವು ಯಾವಾಗ ಶುದ್ಧ ಪ್ರಜ್ಞೆಯನ್ನು ಪಡೆದಿರುವಿರೋ, ಮತ್ತು ನಿಮ್ಮ ಸ್ಥೂಲ ದೇಹವನ್ನು ಮರೆಯುವ ಕಲೆಯನ್ನು ಅರಿತಿರುವಿರೋ, ಆ ಹಂತದಲ್ಲಿ ಒಂದು ವೇಳೆ, ಪ್ರಜ್ಞೆಯ ಚಲನೆಯಿದ್ದರೆ, ಆಗ ನೀವು ಆಕಾಶ ತತ್ತ್ವದಲ್ಲಿ ನೆಗೆಯುವಿರಿ. ಅದು ಆಕಾಶ ತತ್ತ್ವದಲ್ಲಿ ಚಲಿಸುತ್ತದೆ. ಆ ಅವಸ್ಥೆಯಲ್ಲಿ ನೀವು ಮಾಡಬೇಕಾದುದೇನೆಂದರೆ–ಪರಿಹಾರಕ್ಕಾಗಿ ಕೇಳಬೇಕಷ್ಟೇ. ಆಗ ಅದೆಲ್ಲ ಕಾಂಪ್ಯೂಟರದಲ್ಲಿಂದ (computer) ತಿಳಿಯುವಂತೆ ತಿಳಿದು ಬರುತ್ತದೆ. ಮಹಾಯೋಗಿಯು ಮಾಡುವುದೇನು? ಅವನ ಸೂಕ್ಷ್ಮ ದೇಹವು ಅಲುಗುತ್ತದೆ. ಮತ್ತು ಅವನು, "ಓಹೋ! ನೀನು ಪ್ಯಾರಿಸಿಗೆ ಹೋಗ. ಅಲ್ಲಿ ಅಲೆಥನು ಏನು ಮಾಡುತ್ತಿದ್ದಾನೆ?" ಎಂದು ಆದೇಶಿಸುತ್ತಾನೆ. ಕೂಡಲೇ ಅದು ಹೋಗುತ್ತದೆ. ಆ ಯೋಗಿಯು ಹೀಗೆ ಮಲಗಿರುತ್ತಾನೆ. (ಶ್ವೇತ್ಯುಗಳೆದುರು ಶಯನ ಸ್ಥಿತಿಯನ್ನು ಪ್ರದರ್ಶಿಸುತ್ತಾರೆ.) ಆದರೆ ಸೂಕ್ಷ್ಮ ಶರೀರವು ಚಲಿಸತೊಡಗುತ್ತದೆ. ಅದು ಕೊಠಡಿಯೊಳಗೆ ಹೋಗಿ ಅಲೆಥನು ಏನು ಮಾಡುವನೆಂಬುದನ್ನು ನೋಡುತ್ತದೆ. ಮತ್ತು ಕೂಡಲೇ ಅದು ಮರಳುತ್ತದೆ. ಇದನ್ನೇ ಸೂಕ್ಷ್ಮ (astral) ಶರೀರದ ಮೂಲಕ ಸಂಚಾರವೆನ್ನುತ್ತಾರೆ. ನೀವು ಅನೇಕ ಗ್ರಂಥಗಳಲ್ಲಿ ಈ ರಹಸ್ಯ ಕುರಿತು ಓದಿ ನೋಡಿರಬಹುದು. ಥಿಯಾಸೊಫಿಸ್ಟರು ಸೂಕ್ಷ್ಮದೇಹದ ಸಂಚಾರ ಕುರಿತು ಬರೆದಿದ್ದಾರೆ. ಆದರೆ, ಸೂಕ್ಷ್ಮ ಶರೀರ (astral body) ದಲ್ಲಿ ಸಂಚರಿಸುವುದು, ಅಷ್ಟು ಒಳ್ಳೆಯದಲ್ಲ. ಏಕೆಂದರೆ. ಅಲ್ಲಿ ಮಾನಸಿಕ ಸಂಸ್ಕಾರಗಳನ್ನು ಮರಳಿ ಸಂಚಯಿಸುತ್ತಾನೆ. ಅದು ಒರಟು

ವಿಜ್ಞಾನವಾಗಿದೆ. ಅದು ಶುದ್ಧ ವಿಜ್ಞಾನವಲ್ಲ. ಜನರೇನೋ ಅದು ಶುದ್ಧ ವಿಜ್ಞಾನವೆಂದು ತಿಳಿದಿದ್ದಾರೆ. ಆದರೆ ಅದು ಹಾಗಿಲ್ಲ. ಮಂತ್ರ ಶರೀರವೇ ತುಂಬಾ ಪ್ರಬಲವಾದುದೆಂಬುದನ್ನು ನಾನು ಚೆನ್ನಾಗಿ ವಿವರಿಸುವೆ. ಈ ಸೂಕ್ಷ್ಮ (astral) ಶರೀರ ಮತ್ತು ಮಂತ್ರ ಶರೀರಗಳಲ್ಲಿ ಸಾಕಷ್ಟು ಅಂತರವಿದೆ. ನಾನು ಮಂತ್ರ ಶರೀರ ಮತ್ತು ಸೂಕ್ಷ್ಮ (astral) ಶರೀರಗಳನ್ನು ಪ್ರಸ್ತಾಪಿಸುವಾಗ ಅನೇಕ ಕುತೂಹಲಕಾರಿ ವಿಷಯಗಳನ್ನು ಕುರಿತು, ಸ್ಪಷ್ಟೀಕರಿಸುವೆ. ಗತಿಶೀಲ ಮಂತ್ರ ಶರೀರವನ್ನು ಯಾರು ಪಡೆದಿದ್ದಾರೆಯೋ, ಅವರ ಸೂಕ್ಷ್ಮ (astral) ಶರೀರವನ್ನಾರೂ ಕಸಿದು ಸೆಳೆಯಲಾರರು. ಈಗ ನೀವು ಮಂತ್ರವನ್ನು ಜಪಿಸುತ್ತಿರುವಿರೆಂದೂ ಮತ್ತು ಯಾವನೋ ಒಬ್ಬ ಪ್ರಬಲ ಭೈರವನು ನಿಮ್ಮ ಸೂಕ್ಷ್ಮ (astral) ಶರೀರವನ್ನು ಹಿಡಿದು, ನಿಮ್ಮನ್ನು ಇಲ್ಲಿಗೆ ತರಬಯಸಿದನೆಂದೂ ತಿಳಿಯಿರಿ. ನೀವು ಮಂತ್ರವನ್ನು ಪಠಿಸುತ್ತಿದ್ದೀರಿ. ಅಂದಮೇಲೆ, ಅವನು ನಿಮ್ಮನ್ನು ಮರಳಿ ತರಲಾರನು. ಇನ್ನು ನಿಮಗೆ ಮಂತ್ರದೇಹದ ಪರಿಚಯವಿಲ್ಲದಿದ್ದರೆ, ಅವನು ನಿಮ್ಮ ಸೂಕ್ಷ್ಮ (astral) ಶರೀರವನ್ನು ತರಬಲ್ಲನು. ಮತ್ತು ಅವನು ಅದನ್ನು ಯಾವಾಗಲೂ ಒಳಗೇ ಇರಿಸಬಲ್ಲನು. ಅದನ್ನೇ ಸೂಕ್ಷ್ಮ (astral) ದೇಹವನ್ನು ಸೆಳೆದೊಯ್ಯುವುದು, ಎನ್ನುತ್ತಾರೆ. ಈ ಸೂಕ್ಷ್ಮ ಶರೀರ (astral body) ವನ್ನು ಸೆಳೆದೊಯ್ಯುವ ಹಲವರು ಇರುತ್ತಾರೆ. ಮತ್ತು ಅವರು ಅವುಗಳನ್ನು ದುರ್ವಿನಿಯೋಗಿಸುವುದೂ ಉಂಟು.

ತಂತ್ರವು ಅತ್ಯಂತ ಅದ್ಭುತ ವಿಜ್ಞಾನವಾಗಿದೆ. ತಂತ್ರವು ವಿಜ್ಞಾನದ ಶಿಖರ ಪ್ರಾಯವಾಗಿದೆಯೆಂದು ನಾನು ಹೇಳುವೆ. ತಂತ್ರದಂಥ ವಿಜ್ಞಾನವೇ ಜಗತ್ತಿನಲ್ಲಿ ಇನ್ನೊಂದಿಲ್ಲ. ಇದು ಹೇಗೆ? ಎಂಬುದನ್ನು ನಾನು ವಿವರಿಸುವೆ. ಮಾನಸಿಕ ತಿಳಿವಳಿಕೆಯ ಮೂಲಕ ಸೃಷ್ಟಿಸಿದ ಶರೀರವು ಸೂಕ್ಷ್ಮ (astral) ಶರೀರವಾಗಿದೆ. ಆದರೆ, ಕೇವಲ ಗತಿಶೀಲ ಪ್ರಜ್ಞೆಯಿಂದ ಸೃಜಿಸಲಾದ ಮಂತ್ರ ಶರೀರವೂ ಇದೆಯೆಂದು ನಾನು ಹೇಳುವೆ. ಸೂಕ್ಷ್ಮ (astrai) ಶರೀರವನ್ನು ನಿಮ್ಮ ಸ್ವಭಾವದಿಂದ ನಿರ್ಮಿಸಲಾಗಿದೆ. ಅಲ್ಲಿ ಬರೀ ಸಂಸ್ಕಾರಗಳೇ ಇವೆ. ನೀವು ನಿಮ್ಮ ಸೂಕ್ಷ್ಮ ಶರೀರದ ಮೂಲಕ ಸಂಚಾರ ಮಾಡಲು ಪ್ರಯತ್ನಿಸುತ್ತೀರಿ. ಆದರೆ ನಿಮ್ಮ ಸೂಕ್ಷ್ಮ (astral) ಶರೀರವು ಶುದ್ಧವಾಗಿಲ್ಲ. ಯಾವಾಗ ನೀವು ಸೂಕ್ಷ್ಮ (astral) ಶರೀರದ ಮೂಲಕ ಸಂಚರಿಸುವಿರೋ, ಆಗ, ಒಂದು ವೇಳೆ, ಬೇರೊಬ್ಬ ಪ್ರಬಲ ಸೂಕ್ಷ್ಮ ಶರೀರಿಯು ನಿಮ್ಮ ಸಂಚಾರವನ್ನು ಅರಿತರೆ, ಅವನು ನಿಮ್ಮನ್ನು ಸೆಳೆದೊಯ್ಯುವನು. ಆಗ ನೀವು ಇನ್ನೋರ್ವನಿಗೆ

ಶರಣಾಗುತ್ತೀರಿ. ಹೀಗೆ ಬಹು ದೊಡ್ಡ ಆಸ್ಟ್ರಲ್ ವಲಯವಿದೆ. ಕೆಲವು ಸಲ, ಒಬ್ಬನು ಸೂಕ್ಷ್ಮ ದೇಹದಲ್ಲಿ, ಎಲ್ಲಿಗೋ ಹೊರಟಿರುತ್ತಾನೆ. ಮಾರ್ಗ ಮಧ್ಯದಲ್ಲಿ ಇನ್ನಾವನೋ ಬಂದು ಇವನನ್ನು ಹಿಡಿದು ಬಿಡುತ್ತಾನೆ. ಹೀಗೆ ಆಗುತ್ತಿರುವುದು ನಿಮಗೆ ಗೊತ್ತಿದೆಯೇ? ಆದ್ದರಿಂದ ಸೂಕ್ಷ್ಮ (astral) ಶರೀರದಲ್ಲಿ ಸಂಚರಿಸುವುದು ಒಳ್ಳೆಯದಲ್ಲ. ಅದೊಂದು ವಿಕ್ಷಿಪ್ತ ಸಂಗತಿ. ಮೂರು ಇಲ್ಲವೆ ನಾಲ್ಕು ತಿಂಗಳ ಅವಧಿಯಲ್ಲಿ ನಾವು ಒಬ್ಬನಿಗೆ ಸೂಕ್ಷ್ಮ (astral) ಶರೀರದಲ್ಲಿ ಸಂಚರಿಸುವ ತರಬೇತಿ ನೀಡಬಲ್ಲೆವು. ಮತ್ತು ಅವನೂ ಸಹ ತುಂಬಾ ಸಂತೋಷ ಭರಿತನಾಗುತ್ತಾನೆ. ಆದರೆ, ಅದನ್ನೆಂದೂ ಆಧ್ಯಾತ್ಮಿಕತೆಯೆಂದು ಕರೆಯಲಾಗೆವು. ಅದೊಂದು ಮಾನಸಿಕ ಚಳಕವಷ್ಟೇ. ಆದ್ದರಿಂದ, ಅದೇನೂ ಒಳ್ಳೆಯದಲ್ಲ. ಅನೇಕ ಜನರು ನಿಮ್ಮ ಮಾನಸ ದೇಹವನ್ನು ತೆಗೆದುಕೊಳ್ಳುತ್ತಾರೆ. ಮತ್ತು ಭವಿಷ್ಯವನ್ನು ಅರಿಯಲು ಪ್ರಯತ್ನಿಸುತ್ತಾರೆ. ಮತ್ತು ಬೇರೆಯವರು ಏನು ಮಾಡುತ್ತಿದ್ದಾರೆಂಬುದನ್ನು ತಿಳಿಯಲು ಉಪಯೋಗಿಸುತ್ತಾರೆ. ಅವರು ಅದನ್ನು ಎಲ್ಲಿಯೋ ಪ್ರಕ್ಷೇಪಿಸುತ್ತಾರೆ. ಜಗತ್ತಿನಲ್ಲಿ ಅನೆಷ್ಟೊ ಮಾನಸ-ಶರೀರಗಳು ತಿರುಗುತ್ತಿರುತ್ತವೆ. ಅವುಗಳಲ್ಲಿ ಅನೇಕ ಸತ್ತವರೂ ಸಹ ಇವೆ. ಅವುಗಳನ್ನು ಮಾನಸಿಕ ಶರೀರ, ಕಲ್ಪನಾ (Thought) ಶರೀರಗಳೆನ್ನುತ್ತಾರೆ. ನೀವು ಗುಂಪು-ಪಟ್ಟಿ ಇಲ್ಲವೆ ಪ್ಲಾಂಚೆಟ (planchet) ಟೇಪ ಎನ್ನುವುದರಲ್ಲಿ ಅವರು ಪ್ಲಾಂಚೆಟ ವಿಜ್ಞಾನವನ್ನು ಬಳಸುತ್ತಾರೆ. ಅವರು ಒಂದು ವರ್ತುಲ ರೇಖಿಸುತ್ತಾರೆ. ಅದರಲ್ಲಿ, ಅ, ಬ, ಕ, ಡ-ಬರೆಯುತ್ತಾರೆ. ಆ ಮೇಲೆ, "ಎಲೈ ಹಿಟ್ಲರ! ಹಿಟ್ಲರನ ಆತ್ಮವೆಲ್ಲಿ? ಬಾ. ಹ್ಞಾ ಅದು ಇಲ್ಲಿದೆ." ಎಂದವರು ಕರೆದು ತೋರಿಸುತ್ತಾರೆ. ಇದೆಲ್ಲವನ್ನೂ ಅವರು ಮಾಡುತ್ತಾರೆ. ಆದರೆ ನಾನು ನಿಶ್ಚಿತವಾಗಿ ಸಾರುತ್ತೇನೆ: ಇದಾವುದೂ ಆಧ್ಯಾತ್ಮವಲ್ಲ. ಇದು ಜನರನ್ನು ತಪ್ಪು ಮಾರ್ಗಕ್ಕೆ ನೂಕುವ ವಿಧಾನ. ನಾವು ನಮ್ಮ ಪ್ರಚಲಿತ ಸಂಸ್ಕಾರಗಳಿಂದಲೇ ಸಾಕಷ್ಟು ಚಿಂತಾಕುಲರಾಗಿದ್ದೇವೆ. ಇನ್ನೊಂದು ವಿರೋಧಿ ಶಕ್ತಿಯು ಸೂಕ್ಷ್ಮ (astral) ಶರೀರದಂಥ ಇನ್ನು ಕೆಲವು ವಿರೋಧಿ ಶಕ್ತಿಗಳನ್ನು ತರುತ್ತದೆ. ಅದರಿಂದೇನು ಪ್ರಯೋಜನವಿದೆ?

ಹೀಗೆ ಯಾವುದು ಶರೀರ? ನಿಮ್ಮ ಪ್ರಜ್ಞೆಯು ಯಾವುದರೊಂದಿಗೆ ಒಂದುಗೂಡಿದೆಯೋ ಅದು. ಹೀಗೆ, ಒಂದಾಗುವಿಕೆಯಲ್ಲಿ ಎರಡು ಪ್ರಕಾರಗಳಿವೆ: ಒಂದು ಸ್ವಭಾವದಿಂದ; ಎರಡನೆಯದು ಸ್ವಇಚ್ಛೆಂ ನಿಮ್ಮಿಂದ. ನೀವು ಒಂದಾಗಬೇಕು. ತನ್ನೊಂದಿಗೇ ತಾನು ಒಂದಾಗುವಿಕೆಗೆ ಸಾಧನೆ ಎನ್ನುತ್ತಾರೆ. ಸಾಧನೆಯಲ್ಲಿ

ಯಾವುದು ಮಹತ್ತ್ವಪೂರ್ಣವಾಗಿದೆ? ನಮ್ಮಲ್ಲಿ ಇನ್ನೊಂದು ಶರೀರವು ನಿರ್ಮಾಣವಾದರೆ ಮಾತ್ರ ಸಾಧನೆಯನ್ನು ಮಾಡಬಲ್ಲೆವು. ಆ ಶರೀರದಿಂದಲೇ ನಾವು ಸಾಧನೆ ಮಾಡಬೇಕು. ಈ ಭೌತಿಕ ಶರೀರವು ಸಾಧನೆ ಮಾಡಲಾರದು. ಇದು ಸಂಸ್ಕಾರಗಳಿಂದ, ಕಲೆಗಳಿಂದ ತುಂಬಿದೆ. ಅದೇನು ಮಾಡಬಲ್ಲದು ಪಾಪ? ಅದಕ್ಕೆ ಅನೇಕ ನ್ಯೂನತೆಗಳಿವೆಯೆಂಬುದು ನಿಮಗೆ ಗೊತ್ತಿದೆ. ಆದ್ದರಿಂದ, ಸಾಧನೆಗಾಗಿ ಒಂದು ಆಧ್ಯಾತ್ಮಿಕ ಶರೀರವು ಬೇಕು; ಯಾವುದನ್ನು ನಾವು ಮಂತ್ರ ತನು ಎನ್ನುವೆವೋ, ಮಂತ್ರ ಶರೀರವೆನ್ನುವೆವೋ, ಅದು ಬೇಕು. ಅದರ ಮೂಲಕವೇ ನಾವು ಸಾಧನೆ ಮಾಡಬೇಕಾಗಿದೆ.

ಈ ಭೌತಿಕ ದೇಹದ ಸೃಷ್ಟಿ ಹೇಗೆ ಆಗಿದೆಯೆಂಬುದು ನಿಮಗೆ ಗೊತ್ತಿದೆಯೇ? ಈ ದೇಹವು ಪಂಚ ಮಹಾಭೂತಗಳಿಂದಾಗಿದೆ. ಇದು ಪ್ರಕೃತಿಯಿಂದ ಸ್ಪಷ್ಟವಾಗಿದೆ. ಈ ಸ್ಥೂಲ ದೇಹವು ನಮಗೆ ಪ್ರಕೃತಿಯ ಕೊಡುಗೆಯಾಗಿದೆ. ಪ್ರಾಕೃತಿಕ ಬೆಳವಣಿಗೆಯಿಂದಾಗಿ ನಾನು ತಾಯಿಯ ಗರ್ಭದಲ್ಲಿರುವಾಗ, ಭ್ರೂಣಾವಸ್ಥೆಯಲ್ಲಿದ್ದೆ. ಅಲ್ಲಿ ರಸ (jelly) ವಾಗಿದ್ದು, ಮುಂದೆ (chromosome) ಗಳ ಸಂಪರ್ಕವಾಯಿತು. ಕ್ರಮೇಣ ನಾನು ನನ್ನ ಕೈಗಳನ್ನೂ, ಅವಯವಗಳನ್ನೂ, ಮೂಗನ್ನೂ ಪ್ರತಿಯೊಂದನ್ನೂ ವಿಕಾಸಪಡಿಸಿಕೊಂಡೆ. ಕೊನೆಗೆ ಈ ಪ್ರಕಾರ ಆದೆನು. ಇದು ಪ್ರಾಣ ಸತ್ತೆಯಲ್ಲಿಯ ಸಂಸ್ಕಾರಗಳಿಂದಲೇ ಆಗಿದೆ. ಬಳಿಕ ಈ ದೇಹವಾಯಿತು. ಮತ್ತು ಈ ದೇಹದೊಂದಿಗೆ ನಾನು ಚಲಿಸುತ್ತಿರುವೆ. ವಾಸ್ತವವಾಗಿ ಈ ಶರೀರವು ನನ್ನ ಅಂಕೆಯಲ್ಲಿಲ್ಲ. ಏಕೆಂದರೆ, ಅದು ತನ್ನನ್ನು ನಿರ್ಮಿಸಿದ ಪ್ರಕೃತಿಗೆ ಅಧೀನವಾಗಿದೆ. ಆ ಮೇಲೆ ಮನ, ಬುದ್ಧಿ, ಇಂದ್ರಿಯಗಳೆಲ್ಲವನ್ನೂ ಈ ದೇಹಕ್ಕೆ ಹೊಂದಿಸಲಾಯಿತು. ಅಂದಮೇಲೆ, ಇದರಿಂದ ನಾನೇನು ಮಾಡಬಲ್ಲೆ? ಏನು ಮಾಡುವುದೂ ಅಸಂಭವ. ಆದ್ದರಿಂದ ನಾನು ಪುನರ್ಜನ್ಮ ಹೊಂದಬೇಕು. ಅರ್ಥಾತ್ ದೀಕ್ಷೆ ಪಡೆಯಬೇಕು. ನೀವು ನಿಮ್ಮ ಗುರುವಿನ ಮೂಲಕ ಪಡೆಯುವ ದೀಕ್ಷೆಗೇ ಎರಡನೆಯ ಜನ್ಮ ಎನ್ನುತ್ತಾರೆ. ಆಗ ನೀವು ದ್ವಿಜರಾಗುತ್ತೀರಿ.

ಅರ್ಥಾತ್ ನಾನು ಉಪಾಸನೆಯನ್ನು ಪ್ರಾರಂಭಿಸಿದಾಗ, ಮೊದಲು ಈ ಶರೀರವು ನಾನಲ್ಲವೆಂದು ತಿಳಿಯಬೇಕು. ಮತ್ತು ನಾನು ಮಂತ್ರ ಶರೀರವನ್ನು ಪಡೆದಿದ್ದೇನೆ. ಮತ್ತು ಅದರ ಮೂಲಕ ನಾನು ಸಾಧನೆಯನ್ನು ಮಾಡಬೇಕು. ಒಂದು ವೇಳೆ, ನೀವು ಸಾಧನೆಯನ್ನು ಪ್ರಾರಂಭಿಸಿದರೆ, ನೀವೇನು ಮಾಡಬೇಕು? ನೀವು ಮಂತ್ರವನ್ನು ಪುನರಪಿ ಜಪಿಸಬೇಕು. ಮಂತ್ರ ಪುರಶ್ಚರಣೆ

ಮಾಡುತ್ತ ಹೋಗಿರಿ ನೀವು ಮಂತ್ರವನ್ನು ಪುರಶ್ಚರಣೆ ಮಾಡಿದಂತೆಲ್ಲ ಅದು ಮಂತ್ರ ದೇಹವನ್ನು ನಿರ್ಮಿಸುತ್ತದೆ. ಹೇಗೆ ಕೆಲವು ವಸ್ತುಗಳ ಯಾಂತ್ರಿಕ ಮರುಕಳಿಸುವಿಕೆಯಿಂದ ಈ ಸ್ಥೂಲ ದೇಹವು ನಿರ್ಮಾಣವಾಗಿದೆಯೋ, ಅದೇ ರೀತಿ, ಮಂತ್ರಗಳ ಪುನರಪಿ ಪಠಣದಿಂದ ಮಂತ್ರ ದೇಹವು ನಿರ್ಮಾಣವಾಗುತ್ತದೆ. ತಾಯಿ-ತಂದೆಗಳ ಯಾಂತ್ರಿಕ ಪುನರಪಿ ಬಳಕೆಯಿಂದ ಈ ಭೌತಿಕ ದೇಹವು ಹುಟ್ಟಿದೆ. ಅದೇ ರೀತಿ, ಯಾವಾಗ ನೀವು ಮಂತ್ರವನ್ನು ಪಠಿಸುವಿರೋ, ಮಂತ್ರದ ಗತಿಯು ಆಕಾಶ ತತ್ತ್ವದಲ್ಲಿ ದೊಡ್ಡ ಸುತ್ತುಗಳನ್ನು ಉಂಟು ಮಾಡುತ್ತದೆ. ಅರ್ಥಾತ್ ಮಂತ್ರ ಶಕ್ತಿಯನ್ನು ಉಂಟು ಮಾಡುತ್ತದೆ. ಅದು ಆಂತರ್ಯದಲ್ಲಿ ನಡೆದರೆ, ಅದಕ್ಕೆ ಬೀಜ ಮಂತ್ರವೆನ್ನುತ್ತಾರೆ. ಆ ಗತಿಯು ತಾನೇ ಸೃಜನಕಾರಕವಾಗುತ್ತದೆ. ಮತ್ತು ನೀವು ನಿಮ್ಮ ಮಂತ್ರ ದೇಹವನ್ನು ಕಾಣುತ್ತೀರಿ. ಆ ಮಂತ್ರ ಶರೀರವಾವುದು? ನೀನು ಚಿಕ್ಕ ಮಗುವಿರುವೆ. ಪ್ರತಿಯೋರ್ವನಿಗೂ ವಿಭಿನ್ನ ಪ್ರಕಾರದ ಶರೀರಗಳಿರುತ್ತವೆ. ಕೂಡಲೇ ನೀವು ಮನದಲ್ಲಿ, "ಓಹೋ! ಇದು ನನ್ನ ಮಂತ್ರ ಶರೀರವಾಗಿದೆ" ಎಂದು ಸ್ವೀಕರಿಸುತ್ತೀರಿ. ಅದು ದಿವ್ಯ ಮಾತೆಯ ಆಕೃತಿಯಾಗಿರಬಹುದು. ಅದು ಏನೇ ಆಗಿರಬಹುದು. ಆದು ಹೀಗೆಯೇ ಇರಬೇಕೆಂದು ನೀವು ಏನನ್ನೂ ಮಾಡಬೇಕಾದ ಅವಶ್ಯಕತೆಯಿಲ್ಲ. ಆಲ್ಲಿ ಬೇರೆಯೇ ನಿಯಮಗಳಿವೆ. ಇದು ನನ್ನ ಮಂತ್ರ ಶರೀರವೆಂಬ ತಿಳಿವಳಿಕೆಯಷ್ಟೇ ನಿಮಗಿದೆ. ಒಂದು ವೇಳೆ, ನೀವು ಅರಿಯದಿದ್ದರೂ ಸಹ, ಮಂತ್ರ, ಶರೀರವು ಇದ್ದೇ ಇದೆ. ಹೇಗೆಂದರೆ, ಕೆಲವು ಚಿಕ್ಕ ಮಕ್ಕಳಿರುತ್ತಾರೆ. ಆದರೆ, ಅವರಿಗೆ ತಮ್ಮ ದೇಹದ ವೈಜ್ಞಾನಿಕ ವಿಶ್ಲೇಷಣೆಯು ತಿಳಿದಿರುವುದಿಲ್ಲ. ಆದರೆ ಅವರಿಗೆ ಶರೀರವಿದೆಯೆಂಬ ಸಮಾಚಾರ ತಿಳಿದಿದೆ. ಅದೇ ರೀತಿ, ನೀವು ಮಂತ್ರವನ್ನು ಜಪಿಸಿದಾಗ, ಆ ಪುನರಾವೃತ್ತಿಯು, ಆ ಅ-ಸಂವೇದನಿಕ ಪುನರಾವೃತ್ತಿಯು, ಪ್ರಬಲ ಪುನರಾವೃತ್ತಿಯು, ಛಂದವನ್ನು ಉಂಟು ಮಾಡುತ್ತದೆ. ಮತ್ತು ಈ ಛಂದವು ತೀವ್ರವಾದಾಗ, ಕೂಡಲೇ ನೀವು ಮಂತ್ರದೇಹವನ್ನು ಪಡೆಯುತ್ತೀರಿ. ಈ ದೇಹವು ನಿಮ್ಮೊಳಗೇ ಇದೆಯೆಂಬುದನ್ನು ನೀವು ಅರಿಯುತ್ತೀರಿ. ಇವು ಸಾಧನೆಗೆ ಅವಶ್ಯವಿರುವ ಅಂಶಗಳು. ಮೊದಲು ನೀವು ಮಂತ್ರವನ್ನು ತೆಗೆದುಕೊಂಡಿರಿ. ಅನಂತರ ಅದನ್ನು ಜಪಿಸುತ್ತ ಹೋಗುತ್ತೀರಿ. ಆ ಮಂತ್ರ ಜಪದ ಪುನರಾವೃತ್ತಿಯೆಂದರೆ, ನೀವು ನಿಮ್ಮ ಪ್ರಜ್ಞೆಯನ್ನು ಮಂತ್ರದೊಂದಿಗೆ ಒಂದಾಗಿಸುತ್ತೀರಿ. "ಓಹೋ! ಇದು ನಾನೇ"; ಎನ್ನುತ್ತೀರಿ. ಅರ್ಥಾತ್ ಆ ಮಂತ್ರವು ಶರೀರವಾಗುತ್ತದೆ. ನಾನು

ಈ ಮೊದಲೇ ದೇಹದ ವ್ಯಾಖ್ಯೆಯನ್ನು ನೀಡಿದ್ದೇನೆ. ನೀವು ಯಾವುದರೊಂದಿಗೆ ನಿಮ್ಮನ್ನು ಒಂದಾಗಿಸಿಕೊಳ್ಳುವಿರೋ, ಅದುವೇ ಆ ದುಂತ್ರ ಶರೀರವಾಗಿದೆ. ನೀವು ಯಾವುದರೊಂದಿಗೆ ಒಂದಾದಿರೋ, ಅದುವೇ ನಿಮ್ಮ ಶರೀರವಾಯಿತು. ಪ್ರಜ್ಞೆಯನ್ನು ಯಾವುದರೊಂದಿಗಾದರೂ ಒಂದಾಗಿಸಿಕೊಳ್ಳುವುದೇ ಒಂದು ಗತಿಶೀಲ ಹಾದಿಯಾಗಿದೆ. ನಾನು ಇದರೊಂದಿಗೆ ಒಂದಾಗುವೆನೆಂದು ತಿಳಿಯಿರಿ. ನನ್ನ ಗತಿಶೀಲ ಪ್ರಜ್ಞೆಯು ಇದರೊಂದಿಗೆ ಏಕೀಭವಿಸಿದರೆ, ಇದು ಚಲಿಸುತ್ತದೆ. ಏಕೆಂದರೆ, ಪ್ರಜ್ಞೆಯು ಕ್ರಿಯೆ ಮಾಡಿದಾಗ ಇದರಲ್ಲಿಯೂ ಮಾಡುತ್ತದೆ. ಹೀಗೆ, ಸಾಧಾರಣ ಪ್ರಕಾರದ ಮೂರ್ತಿಯನ್ನು–ದುರ್ಗಾ ಇರಲಿ, ಬೇರೊಂದಿರಲಿ–ನೀವು ನೋಡಿ ಅದರೊಂದಿಗೆ ಏಕೀಭವಿಸಿದರೆ, 'ಇದು ನನ್ನ ಪ್ರಜ್ಞೆ' ಎಂದು ಗುರುತಿಸಿಕೊಂಡರೆ, ನೀವು ಅಲ್ಲಿಂದಲೇ ಎಲ್ಲ ಶಕ್ತಿಗೆಳನ್ನು ಪಡೆಯುವಿರಿ. ಶಿಲೆಯಿಂದಲ್ಲ; ನಿಮ್ಮ ಪ್ರಜ್ಞೆಯಿಂದ.

ನಾನಿಂದು ಬೇರೆ ಸ್ವರದಲ್ಲಿಯೇ ಮಾತನಾಡುತ್ತಿದ್ದೇನೆ. ವಾಸ್ತವವಾಗಿ 'ನಾನು' ಮಾತನಾಡುತ್ತಿಲ್ಲ; ಎಂಬುದು ನಿಮಗ ತಿಳಿದಿರಬೇಕು. ಅಲ್ಲಿ ಯಾವುದೋ, ಉನ್ನತ ಶಕ್ತಿ ಇದೆ. ನಾನೂ ಸಹ ಸ್ವೀಕರಿಸುವ ಪಾತ್ರಿಯಷ್ಟೇ. ಒಳಗೆ ಯಾವುದೋ ಶಕ್ತಿ ಕ್ರಿಯಾನ್ವಿತವಾಗಿದೆ. ಕೆಲವೊಮ್ಮೆ ಹೀಗಾಗುತ್ತದೆ. ಇಲ್ಲಿ ನಾನು ಸಹ ಶ್ರೋತೃವಿನಂತೆ ಕೇಳುತ್ತಿದ್ದೇನೆ.

ಹೀಗೆ ನೀವು ಆಂತರ್ಯದಲ್ಲಿ ಮಂತ್ರ ಪುರಶ್ಚರಣೆ ಮಾಡಲು ಪ್ರಾರಂಭಿಸಿದಾಗ, ಅದು ಸಜೀವವಾಗುತ್ತದೆ. ಅದು ಸಜೀವವಾದಾಗ ನಿಮ್ಮಲ್ಲಿ ಉಪಾಸಕನಿಗಿರಬೇಕಾದ ಗುಣವು ಪ್ರಾಪ್ತವಾಗುತ್ತದೆ. ಕೂಡಲೇ ಮಂತ್ರದ ಪುನರಾವೃತ್ತಿಯು ಏಕೋಭಾವವನ್ನೊಳಗೊಂಡಾಗ, ಉಪಾಸನೆಯು ಪ್ರಾರಂಭವಾಗುತ್ತದೆ. ಉಪಾಸನೆ ಎಂದರೇನು? ನಿಮ್ಮ ಅಹಂಕಾರದ ಸಂಪೂರ್ಣ ಶರಣಾಗತಿಯೇ ಉಪಾಸನೆ. ಈ ಅಹಂಕಾರವು ನಾನು–ವಿನೊಡನೆ ಪ್ರಾಪಂಚಿಕ ಜೀವನದಲ್ಲಿ ನಿಮ್ಮೊಂದಿಗೇ ಇತ್ತು. ಅದನ್ನೇ ಈಗ ಸಮರ್ಪಿಸಬೇಕು. ಒಂದು ವೇಳೆ, ಅದನ್ನು ತೊರೆಯುವ ಕ್ಷಮತೆ ನಮ್ಮಲ್ಲಿ ಇಲ್ಲವಾದರೆ, ಆಗ ನಾವು ಬಾಹ್ಯ ಪೂಜೆಗೆ ಇಳಿಯಬೇಕಾಗುತ್ತದೆ. ಯಾವಾಗ ಆ ಅಹಂಕಾರವನ್ನು ತೊರೆಯುವ ಕ್ಷಮತೆಯುಂಟಾಗುವುದೋ, ಆಗ ಮಾತ್ರ ನಿಜವಾಗಿಯೂ ಉಪಾಸನೆಯು ಪ್ರಾರಂಭಿಸುತ್ತದೆ. ಮತ್ತು ಈ ಉಪಾಸನೆಯು ನಮ್ಮ ಭಾವಗಳನ್ನವಲಂಬಿಸಿದೆ. ನಮ್ಮಲ್ಲಿ ಎಂಥ ಭಾವಗಳಿವೆಯೆಂಬುದೂ ಸಹ, ಸಾಧನೆಯ ಕ್ರಮದಲ್ಲಿ ತುಂಬಾ ಮಹತ್ವದ್ದಾಗಿದೆ.

ಈಗ ನನ್ನ ಮಂತ್ರವು ಸ್ತ್ರೀ ದೇವತೆಗೆ ಸಂಬಂಧಿಸಿದೆ. ಒಂದು ವೇಳೆ ಉಪಾಸ್ಯ ದೇವತೆಯೂ ಸ್ತ್ರೀಯೇ ಆಗಿದ್ದರೆ, ನಾನು ಅವಳನ್ನು ಮಗುವಾಗಿ ಉಪಾಸಿಸುತ್ತೇನೆ. ಆಗ ನಾನು ಎಂಥ ಭಾವಾತ್ಮಕ ಸಂಬಂಧವನ್ನು ಪ್ರತಿಷ್ಠಾಪಿಸಬೇಕಾಗುತ್ತದೆ? ಆ ಸಂಬಂಧವು ತಾಯಿ–ಮಗುವಿನ ವಾತ್ಸಲ್ಯಮಯ ಸಂಬಂಧವಾಗುತ್ತದೆ. ಏಕೆಂದರೆ, ನಾನು ಕೇವಲ ಅದೇ ಭಾವಮಯ ಆತ್ಮೀಯತೆಯನ್ನು ಹೊಂದಿದ್ದೇನೆ. ನಾನು ಮೊದಲ ಸ್ತ್ರೀಯನ್ನು ಮಗುವಾಗಿ ಕಂಡಾಗ, ನಾನವಳನ್ನು ತಾಯಿಯಿಂದೇ ಕಂಡಿರುವೆ. ನಾನು ಮಗುವಾಗಿದ್ದಾಗ ನನ್ನ ತಾಯಿಯನ್ನು ಗುರುತಿಸಬಲ್ಲವನಾಗಿದ್ದೆ. ಮಗು ಮೊದಲು ತಾಯಿಯನ್ನೇ ಗುರುತಿಸುತ್ತದೆ. ಆ ಮೇಲೆ ತಂದೆಯನ್ನು ಗುರುತಿಸುತ್ತದೆ. ಇದೊಂದು ಅತಿ ಮಹತ್ವದ ಮನಸ್ತತ್ವದ ತಥ್ಯವಾಗಿದೆ. ಏಕೆಂದರೆ, ಮಗುವಾಗಿರುವಾಗ ತಂದೆಯು ಬಳಿಯಲ್ಲಿರುವುದಿಲ್ಲವೆಂಬುದನ್ನು ನೀವು ಬಲ್ಲಿರಿ. ಯಾವಾಗ ಕೂಸು ಅಳುವುದೋ ಮತ್ತು ಎಚ್ಚರಾಗುವುದೋ, ಆಗ ಅದು ತಾಯಿಯ ಮುಖವನ್ನೇ ಕಾಣುತ್ತಾನೆ. ಮತ್ತು ಅವನಿಗರಿಯದಂತೆ ಅದೇ ಮುಖವೇ ಅವನ ಮನದಲ್ಲಿ ಛಾಯಾಚಿತ್ರದಂತೆ ಪಡಿಮೂಡುತ್ತದೆ. ಅವನು ಈ ಮುದ್ರೆಯನ್ನು ತನ್ನ ಮನದಲ್ಲಿ ಇರಿಸಿಕೊಳ್ಳುತ್ತಾನೆ. ಅದೇ ರೀತಿ; ನೀವು ಮಂತ್ರವನ್ನು ಜಪಿಸಿದಾಗ, ನೀವು ಜಾಗ್ರತ ಮಗುವಾಗುತ್ತೀರಿ. ಮತ್ತು ಮಗುವಿನ ಪ್ರತಿಮೆಯು ನಿಮ್ಮೆದುರು ಬರುತ್ತದೆ. ಅದು ಉಪಾಸನೆಯ ಪ್ರಥಮ ಭಾವವಾಗಿದೆ. ಕೂಡಲೇ ನೀವು ನಿಮ್ಮ ಭಾವಗಳನ್ನು, ಮಗು ತನ್ನ ತಾಯಿ-ತಂದೆಯಂದಿರನ್ನು ಕಂಡಾಗಿನಂತೆ, ಸಂವೇದಿಸುತ್ತೀರಿ.

ಈಗ ನೀನು ಬ್ರಹ್ಮಾನಂದನಲ್ಲ. ಚಂದ್ರಶೇಖಿರನಲ್ಲ. ಮಾಮಾಜಿ ಅಲ್ಲ; ಅಲ್ಲಿ ಯಾರೂ ಇಲ್ಲ. ನೀನು ಪೂರ್ಣ ಬೇರೆ ಮನುಷ್ಯನೇ ಆಗಿರುವೆ. ಅಲ್ಲಿ ನಿನಗಾವ ನಾಮವೂ ಇಲ್ಲ. ಏಕೆಂದರೆ, ಈ ಹೆಸರು ನಿನ್ನಲ್ಲಿ ಅಹಂಕಾರವನ್ನು ಉಂಟು ಮಾಡಿದೆ. "ಓಹೋ! ನಾನು ಇಂಥ ಮನುಷ್ಯ..." ಎಂದುಕೊಳ್ಳುವೆ. ಅಲ್ಲಿ ನಾಮವಿಲ್ಲ. ಹೀಗಾಗಿ ಅಲ್ಲಿ ಅಹಂಕಾರವಿಲ್ಲ. "ಓಹೋ! ನಾನು ಸ್ವಾಮೀಜಿ..." ಎಂಬ ಅಹಂಕಾರವಿಲ್ಲ. ಹೆಸರೇ ದೊಡ್ಡ ಅಹಂಕಾರ-ಮೂಲವಾಗಿದೆ. "ಓಹೋ! ನನಗೆ ದೊಡ್ಡ ಪಠವಿದೆ! ಅಪಾರ ಶಿಷ್ಯಕೋಟಿಯಿದೆ." ಎಂದುಕೊಳ್ಳುತ್ತೇವೆ. ಪ್ರತಿಯೊಬ್ಬರೂ ಸರಿಯಾದ ರೀತಿಯಲ್ಲಿ ಜಾಗ್ರತೆಯಿಂದ ಇರಬೇಕು. ಎಲ್ಲವೂ ನಾಮದೊಂದಿಗೆ ಇದೆಯಲ್ಲವೇ? ನಾಮವಿಲ್ಲದಿದ್ದರೆ, ಕೀರ್ತಿಯಿರದು. ಏನೊಂದೂ ಇರದು. ಅರ್ಥಾತ್ ನಾನು ತೀರ ಸರಳನಿರುವೆ.

ಈ ಪ್ರಕ್ಷೇಪಣೆಯಲ್ಲಿ ನಾನಿರುವಾಗ, ಉಪಾಸನೆಯು ಪ್ರಾರಂಭವಾಗುತ್ತದೆ. ಇನ್ನು ಮೇಲೆ, ನಾನು ಸ್ತ್ರೀ-ಪೂಜೆ ಅಥವಾ ಶಕ್ತಿ-ಪೂಜೆಯನ್ನು ಕುರಿತು ಪ್ರಸ್ತಾಪಿಸುವೆ.

ನನ್ನ ಶುದ್ಧ-ಪ್ರಜ್ಞೆಯು ಅಲ್ಲಿ ಇದೆಯೆಂದು ನಾನು ಹೇಳಿದ್ದೇನಷ್ಟೇ. ನಾನಿದನ್ನು, ಸಾಂಕೇತಿಕವಾಗಿ ತ್ರಿಕೋಣವೆಂದು ಕರೆಯುವೆ. ಅದು ನನ್ನೊಂದಿಗೇ ಇದೆಯೆಂಬುದನ್ನು ನಾನು ಅರಿಯಬೇಕಾಗಿದೆ. ಅಲ್ಲಿ ಇಚ್ಛಾ ಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾ ಶಕ್ತಿಗಳೂ ಇವೆ. ಅದನ್ನು ನಾನೀಗ ಅರಿಯಬೇಕಾಗಿದೆ. ಹಾಗಾದರೆ, ಅರಿತುಕೊಳ್ಳುವುದೆಂತು? ನಾನು ಯಾವಾಗ ಮಗುವಾಗುವೆನೋ, ಆಗ ನನ್ನನ್ನೇ ನಾನು ಅರಿಯುವೆ. ಒಂದು ವೇಳೆ, ನಾನು ಹೆಚ್ಚು ಬುದ್ಧಿವಂತನಾದರೆ, ಆಗ ಅರಿಯಲಾರೆನು. ಯಾವಾಗ ನಾನು ನನ್ನ ಶುದ್ಧ ಅಹಂಕಾರವನ್ನು ದಿವ್ಯ ಮಾತೆಯೆದುರು ಮಗುವಿನಂತೆ ಅರ್ಪಿಸುವೆನೋ, ಆಗ ಮಾತ್ರ ಅರಿಯಬಲ್ಲೆನು. ನಾನು ಅರುವತ್ತು ವರ್ಷ ವಯಸ್ಸಿನವನಿರಬಹುದು. ಆದರೆ ಆ ಒಳಮನದ ಅವಸ್ಥೆಯಲ್ಲಿ ನಾನು ಅರುವತ್ತು ವರ್ಷ ವಯಸ್ಸಿನವನಲ್ಲ. ಆಗ ನಾನು ಹೊಸದಾಗಿ ಹುಟ್ಟಿದ ಹಸುಳೆಯಷ್ಟೇ. ಮತ್ತು 'ಓ' ಎಂದು ನಾನು ಕ್ರಂದಿಸುವೆ. ಮತ್ತು ಮಂತ್ರವನ್ನು ಜಪಿಸಿದಂತೆಲ್ಲ, ಕ್ರಂದಿಸುತ್ತ ನಡೆದಂತೆ, ತಾಯಿಯೂ ಅಲ್ಲಿಯೇ ಇರುತ್ತಾಳೆ. ಅವಳೂ ಭಾವುಕ ರೂಪವೇ. ಆಗ ಉಪಾಸನೆಯು ಪ್ರಾರಂಭಿಸುತ್ತದೆ.

ಅತ್ಯಂತ ಮಹತ್ತ್ವವದ್ದೆಂದರೆ—

"ಪ್ರಥಮಂ ಶೈಲ ಪುತ್ರೀ ಚ ದ್ವಿತೀಯಂ ಬ್ರಹ್ಮಚಾರಿಣೀ
ತೃತೀಯಂ ಚಂದ್ರ ಗಂಧೇತಿ, ಕುಷ್ಮಾಂಡೇತಿ ಚತುರ್ಥಕಮ್
ಪಂಚಮಂ ಸ್ಕಂದ ಮಾತೇತಿ, ಷಷ್ಠಂ ಕಾತ್ಯಾಯಿನೀ ಚ
ಸಪ್ತಮಂ ಕಾಲ ರಾತ್ರೀತಿ, ಮಹಾ ಗೌರೀತಿ ಚಾಷ್ಟಮಮ್
ನವಮಂ ಸಿದ್ಧಿ ದಾತ್ರೀ ಚ ನವ ದುರ್ಗಃ ಪ್ರಕೀರ್ತಿತಃ"

ಈಗ ನಾನು, ನೀವು ಪ್ರಾರಂಭಿಸಬೇಕಾದ ಗತಿಶೀಲ ಉಪಾಸನೆಯನ್ನು ಕುರಿತು ಪ್ರಸ್ತಾಪಿಸುವೆ. ಇದೊಂದು ಮಂತ್ರ. ಇದರೊಳಗೆ ಸಜೀವ ಶಕ್ತಿಯಿದೆ. ನೀವಿದನ್ನು ಜೀವಿಸಿದಾಗ, ಅಲ್ಲಿ ಕೇವಲ ಮಹಾದುರ್ಗೆ ಇರುತ್ತಾಳೆ. ಕೇವಲ ಒಂದೇ ಪ್ರಜ್ಞೆ ಇರುತ್ತದೆ. ಅವಳನ್ನೇ ಮಹಾದುರ್ಗೆ ಎನ್ನುತ್ತಾರೆ. ಅವಳಿಗೆ ನವ-ವಿಧ ಶಕ್ತಿಗಳಿವೆ. ಮತ್ತು ಒಂಬತ್ತು ಗತಿಶೀಲ ಪ್ರಜ್ಞೆಗಳಿವೆ.

ನಾನವುಗಳನ್ನು ಒಮ್ಮೆಲೇ ದರ್ಶಿಸಲಾರೆ; ಅರಿಯಲಾರೆ. ಕಾರಣ, ನಾನು ಒಂದೊಂದನ್ನೇ ಆಂಶಿಕವಾಗಿ ಅರಿಯುತ್ತ ಹೋಗುವೆ. ಅನಂತರ ಇಡಿಯಾಗಿ ಅರಿತುಕೊಳ್ಳುವೆ. ಇಡಿಯಾಗಿ ಅರಿಯುವುದಕ್ಕಾಗಿಯೇ ಮೊದಲು ಆಂಶಿಕವಾಗಿ ಅರಿಯುವೆ. ವಾಸ್ತವವಾಗಿ ಈ ಒಂಬತ್ತೂ ಶಕ್ತಿಗಳು ಒಂದೇ ಶಕ್ತಿಯ ಒಂಬತ್ತು ಕಿರಣಗಳಾಗಿವೆ. ಅವಕ್ಕೆ ನವ-ರೂಪಗಳೂ ಉಂಟು. ಒಂದೇ ರೂಪವು ಒಂಬತ್ತು ರೂಪಗಳಾಗಿದೆ. ಅದೇ ಮಹಾದುರ್ಗೆಯ ರೂಪವೇ ಒಂಬತ್ತು ರೂಪಗಳಾಗಿವೆ. ಈಗ ನೀವು ಒಂದು ತ್ರಿಕೋಣವನ್ನು ಸಂಕೇತವಾಗಿ ತೆಗೆದುಕೊಂಡಿರೆಂದು ತಿಳಿಯಿರಿ. ಆ ಬಳಿಕ ನೀವು ಅದರ ಸುತ್ತ, ಒಂಬತ್ತು ರೇಖೆಗಳನ್ನು ಅದೇ ವರ್ತುಲಕ್ಕೆ ಸೇರುವಂತೆ ಎಳೆಯಿರಿ. ಮತ್ತು ಆ ಗತಿಯನ್ನು ವೀಕ್ಷಿಸಿರಿ. ಒಂದು ವೇಳೆ, ನಿಮ್ಮ ಪ್ರಜ್ಞೆಯು ಆಂಶಿಕವಾಗಿದ್ದರೆ, ನೀವು ಒಂದೇ ಗತಿಯನ್ನು ಪಡೆಯುತ್ತೀರಿ. ನೀವು ಕೇಂದ್ರದಲ್ಲಿದ್ದರೆ ಒಂಬತ್ತು ಗತಿಗಳು ಸಾಗಿರುತ್ತವೆ.

ಈಗ ನಾನು ದಿವ್ಯ ಮಾತೆಯ ಒಂಬತ್ತು ಅಂಶಗಳತ್ತ ಹೊರಳುವೆ. ಅವು ಹೇಗೆ ಕಾರ್ಯ ಮಾಡುತ್ತವೆ? ಅವಳ ನೈಜ ಕಾರ್ಯವಾದರೂ ಯಾವುದು? ಮತ್ತು ಅವು ಹೇಗೆ ಸಂಯೋಜಿಸಲ್ಪಡುತ್ತವೆ? ಆ ಕಾರ್ಯಗಳೇನೋ ವಿಭಿನ್ನವಾಗಿವೆ. ಆದರೆ ಅವುಗಳ ಸಂಯೋಜನೆಯೆಂತು?

ಮೊದಲನೆಯವಳೆಂದರೆ, ಪ್ರಥಮಂ ಶೈಲ ಪುತ್ರೀ—ಶೈಲ ಪುತ್ರಿಯೂ ಸಹ ದೇವತೆಗಳಲ್ಲೊಬ್ಬಳು. ಇವಳೂ ಮಹಾದುರ್ಗೆಯೇ. ಅವಳ ರೂಪವೂ ಬದಲಾಗುತ್ತದೆ. ನೀವು ಅವಳನ್ನು ಅರಿತುಕೊಳ್ಳುವಿರಿ. ಸಾಂಕೇತಿಕವಾಗಿ ಪ್ರತಿಯೋರ್ವ ದೇವಿಗೆ ಅವಳ ಆಸನವಿದೆ. ಅದರ ಮೇಲೆ ಅವಳು ಆಸೀನಳಾಗುತ್ತಾಳೆ. ಅವಳು ಚತುರ್ಭುಜೆಯಾಗಿದ್ದಾಳೆ. ಅವಳ ತಲೆಯ ಮೇಲೆ ಕಿರೀಟವಿದೆ. ಅವಳ ಎರಡು ಹಸ್ತಗಳಲ್ಲಿ ಒಂದೊಂದಂತೆ ಅವಳ ಆಯುಧಗಳಿರಡು. ಮೂರನೆಯ ಹಸ್ತ ಆಯುಧರಹಿತವಿದೆ; ಭಕ್ತರನ್ನು ಹರಸಿ ಆಶೀರ್ವದಿಸಲೆಂದು. ನಾಲ್ಕನೆಯ ಹಸ್ತದಲ್ಲಿ ಕಮಲವಿದೆ. ಇವಳೇ ಶೈಲಪುತ್ರಿ.

ದ್ವಿತೀಯಂ ಬ್ರಾಹ್ಮಚಾರಿಣೀ—ಅವಳು ಕಮಲದ ಮೇಲೆ ಆಸೀನಳಾಗುತ್ತಾಳೆ. ಅವಳಿಗೆ ಸಿಂಹವಿದೆ. ಆದರೆ ಅವಳು ಅದರ ಮೇಲೆ ಕುಳಿತುಕೊಳ್ಳುವುದಿಲ್ಲ.

ತೃತೀಯಂ ಚಂದ್ರಗಂಧೇತಿ; ಅವಳ ಒಂದು ಕೈಯಲ್ಲಿ ಘಂಟೆಯಿದೆ. ಇನ್ನೊಂದರಲ್ಲಿ ಕಮಲವಿದೆ. ಉಳಿದೆರಡರಲ್ಲಿ ಒಂದರಲ್ಲಿ ಮಾಲೆಯಿದೆ.

ಇನ್ನೊಂದರಲ್ಲಿ ಖಡ್ಗವಿದೆ.

ಕುಷ್ಮಾಂಡೇತಿ ಚತುರ್ಥಕಮ್: ಒಂದು ಹಸ್ತದಲ್ಲಿ ಖಡ್ಗವಿದೆ. ಇನ್ನೊಂದರಲ್ಲಿ ತ್ರಾಟಕವಿದೆ. ಮತ್ತೊಂದರಲ್ಲಿ ಮಾಲೆ ಮತ್ತು ನಾಲ್ಕನೆಯದು ಕೃಪಾಶೀರ್ವಾದ ಮಾಡುವ ಹಸ್ತವಾಗಿದೆ.

ಪಂಚಮಂ ಸ್ಕಂದಮಾತೇತಿ: ಇವಳು ತುಂಬ ಚಿಕ್ಕವಳು. ಇವಳು ಸಹ ಕಮಲಾಸನಳು. ಆ ಕಮಲದ ವರ್ಣವು ಕೆಂಪು. ಈ ಎಲ್ಲ ದೇವತೆಗಳೂ ತ್ರಿನೇತ್ರಿಯರು. ಮತ್ತು ಹಸ್ತದಲ್ಲಿ ಒಂದು ತ್ರಿಶೂಲವಿದೆ.

ಷಷ್ಟಂ ಕಾತ್ಯಾಯಿನಿ: ಅವಳು ಶುಭ್ರ ಉಡುಪಿನಲ್ಲಿರುತ್ತಾಳೆ. ಬಳಿ ಕಮಲದ ಮೇಲೆ ಆಸೀನಳಾಗಿರುತ್ತಾಳೆ. ಚಂದ್ರಗಂಧೇತಿಗಿರುವ ಎಲ್ಲ ವಸ್ತುಗಳೂ ಇವಳಿಗಿವೆ. ಆದರೆ ಇವಳ ಹಸ್ತದಲ್ಲಿ ಘಂಟೆಯಿಲ್ಲ. ಅವಳು ಎರಡು ಮುಕ್ತ ಹಸ್ತಗಳನ್ನು ಹೊಂದಿದ್ದಾಳೆ.

ಸಪ್ತಮಂ: ಕಾಲರಾತ್ರೀತಿ; ಅವಳು ಕಾಲರಾತ್ರೀತಿ. ಅವಳು ನಿಂತಿರುತ್ತಾಳೆ. ಅವಳ ತಲೆಯಲ್ಲಿ ಐವತ್ತು ಕಪಾಲಗಳಿವೆ, ಅವಳು ತೆರೆದ ಬಾಯಿಯವಳು, ತುಂಬಾ ಭೀಷಣಳು. ಒಂದು ಹಸ್ತದಲ್ಲಿ ಉರಿಯಿದೆ. ಇನ್ನೊಂದರಲ್ಲಿ ಅರ್ಧಮುಂಡವಿದೆ. ಮತ್ತವಳು ನೋಡಲು ತುಂಬಾ ಭಯಂಕರಳಾಗಿದ್ದಾಳೆ.

ಅಷ್ಟಮಂ ಮಹಾ ಗೌರೀತಿ: ಇವಳ ಉಡುಪು ಶುಭ್ರ. ಇವಳು ಬಿಳಿಯ ವೃಷಭನ ಮೇಲೆ ಆಸೀನಳಾಗಿದ್ದಾಳೆ. ಇವಳು ಅತಿ ಸುಂದರಿ. ಇವಳು ಸ್ಫಟಿಕ ಮಾಲೆ ಧರಿಸಿದ್ದಾಳೆ. ಸರ್ವಾಂಗಗಳಲ್ಲಿ ಶುಭ್ರ ಕಳಿ ತುಂಬಿದೆ.

ನವಮಂ ಸಿದ್ಧಿದಾತ್ರಿ: ಇವಳು ಸಿಂಹದ ಮೇಲೆ ಆಸೀನಳಾಗಿದ್ದಾಳೆ. ಆದರೆ,ತುಂಬಾ ನಗುಮುಖಿ, ಶಕ್ತಿಪೂರ್ಣೆ. ಅವಳು ನಿಮ್ಮತ್ತ ನೋಡುತ್ತಾಳೆ. ಮತ್ತು ನಗುತ್ತಾಳೆ.

ಇವು ನವ ದುರ್ಗೆಯರ ನವ ಆಕೃತಿಗಳು. ಆದರೆ, ನೀವು ಯಾವಾಗ ಆಂತರಿಕವಾಗಿ ಸಾಧನೆ ಮಾಡುವಿರೋ, ಆಗ ನೀವು ಅವಳ ರೂಪಗಳೊಂದಿಗೆ ಒಂದಾಗುತ್ತೀರಿ. ಬಳಿಕ ಒಂಬತ್ತನೆಯ ದಿನ ನೀವು ಕೇಂದ್ರಕ್ಕೆ ಬಂದಾಗ, ಅಲ್ಲಿ ನಿಮ್ಮ ಪ್ರಜ್ಞೆ ಇರುವುದನ್ನು ಕಂಡುಕೊಳ್ಳುತ್ತೀರಿ. ಮತ್ತು ಆ ಒಂಬತ್ತು ರೂಪಗಳೂ ನಿಮ್ಮವೇ ಆಗಿರುತ್ತವೆ. ಇದುವೇ ಮಹಾದುರ್ಗೆಯ ರಹಸ್ಯ ಉಪಾಸನೆ. ದುರ್ಗೆಯ ಒಂಬತ್ತು ಶಕ್ತಿಗಳನ್ನು ಗುರುತಿಸಲಾಗಿದೆ. ದುರ್ಗೆ ಎಂದರೇನು? ದುರ್ಗಾ ಎಂದರೆ, ನಿಮ್ಮ ದುಃಖಿವನ್ನು, ನಿಮ್ಮ ಎಲ್ಲ ಸೀಮಿತಗಳನ್ನು, ನಿಮ್ಮ

ನೋವು, ಕಷ್ಟಗಳನ್ನು ಯಾರು ಕೊಲ್ಲುವರೋ, ಅವಳು. ಅವಳು ದುಃಖ ದುಮ್ಮಾನಗಳನ್ನೂ ದೂರ ಮಾಡುವಳು. ಅವಳು ಅವುಗಳನ್ನೆಲ್ಲ ಒದ್ದೋಡಿಸುತ್ತಾಳೆ. 'ದುಃಖಿಮ್ ನಿರ್ಗಮಹೇತೀತಿ ದುರ್ಗಾ'. ಅವಳು ಸಂಪೂರ್ಣವಾಗಿ ಎಲ್ಲ ಪ್ರಕಾರದ ನೋವುಗಳನ್ನು ನಿವಾರಿಸುತ್ತಾಳೆ. ಅವಳು ನಿಮ್ಮನ್ನು ಪೂರ್ಣವಾಗಿ ಮುಕ್ತಗೊಳಿಸುತ್ತಾಳೆ. ನೀವು ಮುಕ್ತರಾದ ಮೇಲೆ ದೇವರಾಗುತ್ತೀರಿ.

ಒಟ್ಟು ಒಂಬತ್ತು ಕಲೆಗಳಿವೆ. ಆಮೇಲೆ ನಿಮ್ಮ ಪ್ರಜ್ಞೆಯು ಇವೆಲ್ಲವುಗಳಿಂದ ಮುಕ್ತವಾಗುತ್ತದೆ. ಆಗ ನಿಮ್ಮ ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳು ಕಾರ್ಯಾನ್ವಿತವಾಗುತ್ತವೆ. ಆಗ ನೀವು ನಿಮ್ಮೊಳಗಿನ ಗತಿಶೀಲ ನಿರ್ಗುಣಾತ್ಮನನ್ನು ಅರಿಯುತ್ತೀರಿ. ನೀವು ಸರ್ವಮುಕ್ತರಾಗುತ್ತೀರಿ. ನೀವು ಈ ದೇಹದಲ್ಲಿಯೇ ಇದ್ದರೂ, ವಿಭಿನ್ನ ರೂಪ ತಾಳುತ್ತೀರಿ. ನೀವು ಉಪಾಸಕರಾಗಿದ್ದರೆ, ನೀವು ಯಾವುದನ್ನಾದರೂ ಕುರಿತು ಪರಿಚಯಿಸಿಕೊಳ್ಳಬೇಕಾಗಿದ್ದರೆ, ನೀವು ತತ್‌ಕ್ಷಣವೇ ಸಾಕ್ಷಾತ್ಕರಿಸಿಕೊಳ್ಳಬಲ್ಲಿರಿ. ನಿಮಗೆ ಆಂತರಿಕ ಪಾತ್ರತೆ ಇದ್ದರೆ, ನೀವು ಆಂತರ್ಯದಲ್ಲಿ ಸಾಕ್ಷಾತ್ಕರಿಸಿಕೊಳ್ಳಬಲ್ಲಿರಿ. "ನಾನು ಹೇಳುತ್ತೇನೆ. ಅದನ್ನು ಕೂಡಲೇ ಸಾಕ್ಷಾತ್ಕರಿಸಿಕೊಳ್ಳುತ್ತೇನೆ." ನಿಮ್ಮಲ್ಲಿ ಯಾವಾಗ ಅರಿವು ಮಾಡುವುದೋ, ಆಗ ನೀವು ಈ ಭೌತಿಕ ಪ್ರಪಂಚದಲ್ಲಿದ್ದರೂ, ಬೇರೆ ಲೋಕದಲ್ಲಿ ಈಗಿನಂತೆ ಇರುತ್ತೀರಿ. ನಿಮ್ಮೊಳಗೆ ಬೇರೊಂದು ಶ್ರುತಿಗೊಂಡ ಲೋಕವಿದೆ. ಈಗ, ಈ ನಿಮ್ಮ ಜೀವನವು ಆ ನವ ಶಕ್ತಿಗಳಿಂದ ನಿರ್ದೇಶನ ಪಡೆಯುತ್ತದೆ. ಮತ್ತು ನಿಮ್ಮಲ್ಲಿ ಮುಂತ್ರ ಶರೀರವಿದೆ. ಹೀಗೆ ಈ ನಿಮ್ಮ ದುಷ್ಟ ಶಕ್ತಿಗಳು ನಿಮ್ಮ ಮೇಲೆ ಪ್ರಭಾವ ಬೀರಲಾರವು. ನಿಮ್ಮನ್ನು ಯಾರೂ ಸಮ್ಮೋಹಿತಗೊಳಿಸಲಾರರು. ನಿಮ್ಮ ವಿರುದ್ಧ ಯಾರೂ ದುಷ್ಟ ಶಕ್ತಿಗಳನ್ನು ಬಳಸಲಾರರು. ನಿಮ್ಮನ್ನು ಯಾರೂ ಹಾದಿ ತಪ್ಪಿಸರು. ಏಕೆಂದರೆ, ಯಾರಾದರೂ ಹಾಗೆ ಮಾಡುವಲ್ಲಿ ಆಸಕ್ತಿ ಹೊಂದಿದರೆ, ನಿಮ್ಮ ಪ್ರಜ್ಞೆಯ ವಿದ್ಯುಚ್ಛಕ್ತಿಯು ಕಾರ್ಯ ಮಾಡುತ್ತದೆ. ಹೀಗಾಗಿ, ಆ ದುಷ್ಟನು ಅಚೆಗೆ ತಳ್ಳಲ್ಪಡುವನು.